
ನ್ಯಾಯದಾನ ಒಂದು ಚಿಂತನೆ

ಟಿ. ನಾಗಪ್ಪ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ನ್ಯಾಯದಾನ : ಒಂದು ಚಿಂತನೆ

ಟಿ. ನಾಗಪ್ಪ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

NYAYADANA : ONDU CHINTANE
by : **Sri T. Nagappa**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : viii + 130 Price : Rs.**45=00** : **2006**

ಪ್ರಥಮ ಮುದ್ರಣ : ೨೦೦೬
ಪ್ರತಿಗಳು : ೧೫೦೦
ಬೆಲೆ : ನಲವತ್ತೈದು ರೂಪಾಯಿಗಳು

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೀದರ
ಸ್ವಾಗತ ಸಮಿತಿ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, ಅಧ್ಯಕ್ಷರು
ಶ್ರೀ ಮೆರಾಜುದ್ದೀನ ಪಟೇಲ, ಹಿರಿಯ ಉಪಾಧ್ಯಕ್ಷರು.
ಶ್ರೀ ನರಸಿಂಗರಾವ ಸೂರ್ಯವಂಶಿ, ಲೋಕ ಸಭಾ ಸದಸ್ಯರು
ಶ್ರೀ ಬಂಡೆಪ್ಪ ಖಾಶೆಂಪೂರ, ಶಾಸಕರು
ಶ್ರೀ ಮುನೀಶ ಮೌದ್ಗೀಲ್, ಪ್ರಧಾನ ಸಂಚಾಲಕರು
ಶ್ರೀ ಕೆ.ಎಲ್. ಸುಧೀರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು
ಶ್ರೀ ಆ್ಯಂಟನಿ ಮೆಂಡೋನ್ಸಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಚೆನ್ನಬಸಪ್ಪ ಹಾಲಹಳ್ಳಿ, ಕೋಶಾಧ್ಯಕ್ಷರು
ಶ್ರೀ ಡಾ. ಜಗನ್ನಾಥ ಹೆಬ್ಬಾಳೆ, ಪ್ರಧಾನ ಕಾರ್ಯದರ್ಶಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ), ಬೆಂಗಳೂರು
ಶ್ರೀ ಜರಗನಹಳ್ಳಿ ಶಿವಶಂಕರ್, ಬೆಂಗಳೂರು
ಡಾ. ಎಚ್. ಜಯಮ್ಮ ಕರಿಯಣ್ಣ, ಬೆಂಗಳೂರು
ಶ್ರೀ ಪುಂಡಲೀಕ ಹಾಲಂಬಿ, ಬೆಂಗಳೂರು
ಶ್ರೀ ಶ್ರ.ದೇ ಪಾರ್ಶ್ವನಾಥ, ಬೆಂಗಳೂರು-೫೦.
ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ), ಬೆಂಗಳೂರು ಗ್ರಾಮಾಂತರ
ಶ್ರೀ ಎನ್.ಎಸ್. ರಾಮಪ್ರಸಾದ್, ಕೋಲಾರ
ಶ್ರೀ ಆರ್.ಎಸ್. ಸದಾನಂದ, ತುಮಕೂರು
ಶ್ರೀ ಕೆ.ಎಂ. ವೀರೇಶ್, ಚಿತ್ರದುರ್ಗ
ಶ್ರೀ ಎಸ್.ಎಚ್. ಹೂಗಾರ್, ದಾವಣಗೆರೆ
ಶ್ರೀ ಡಿ. ಮಂಜುನಾಥ, ಶಿವಮೊಗ್ಗ
ಶ್ರೀ ಮಾನಸ, ಮೈಸೂರು
ಶ್ರೀ ಮಲೆಯೂರು ಗುರುಸ್ವಾಮಿ, ಮೈಸೂರು
ಶ್ರೀ ಹೆಚ್.ವಿ. ಜಯರಾಂ, ಮಂಡ್ಯ
ಶ್ರೀ ಟಿ.ಪಿ. ರಮೇಶ್, ಕೊಡಗು
ಶ್ರೀ ಎಚ್.ಬಿ. ರಮೇಶ್, ಹಾಸನ

ಶ್ರೀ ಎಚ್. ವಿ. ಶ್ರೀವತ್ಸ ಹುಲಸೆ, ಚಿಕ್ಕಮಗಳೂರು
ಶ್ರೀ ಎಸ್. ಪ್ರದೀಪ ಕಲ್ಲೂರ, ದಕ್ಷಿಣ ಕನ್ನಡ
ಶ್ರೀ ಯು. ಚಂದ್ರಶೇಖರ ಹೊಳ್ಳ, ಉಡುಪಿ
ಶ್ರೀ ಮೋಹನ ಬಸವನಗೌಡ ಪಾಟೀಲ, ಬೆಳಗಾವಿ
ಶ್ರೀ ಬಿ.ಎಂ. ಪಾಟೀಲ, ಬಿಜಾಪುರ
ಶ್ರೀ ವಿಶ್ವನಾಥ ಕಾ. ವಂಶಾಕೃತಮಠ, ಬಾಗಲಕೋಟೆ
ಶ್ರೀ ಮಧು ವೆಂಕಾರೆಡ್ಡಿ, ಧಾರವಾಡ
ಶ್ರೀ ಅ.ಸಿ. ಹಿರೇಮಠ, ಹಾವೇರಿ
ಪ್ರೊ. ಕೆ.ಬಿ. ತಳಗೇರಿ, ಗದಗ
ಶ್ರೀ ರೋಹಿದಾಸ ನಾಯಕ, ಉತ್ತರಕನ್ನಡ
ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ
ಡಾ. ಜಗನ್ನಾಥ ಹೆಬ್ಬಾಳೆ, ಬೀದರ
ಶ್ರೀ ಕ.ಮ. ಪುರದ, ರಾಯಚೂರು
ಶ್ರೀ ಶೇಖರಗೌಡ ಮಾಲಿಪಾಟೀಲ, ಕೊಪ್ಪಳ
ಶ್ರೀ ನಿಷ್ಠಿ ರುದ್ರಪ್ಪ, ಬಳ್ಳಾರಿ
Sri H.B.L. Rao, Navi Mumbai
Sri I.V. Bhatta, Kasaragod
Sri C. Ramaswamy, Chennai
Sri H. Ramachandrappa, Ananthpura
ಧರ್ಮದರ್ಶಿ ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ
ಡಾ. ಕಮಲಾ ಹಂಪನಾ, ಬೆಂಗಳೂರು
ನಿರ್ದೇಶಕರು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು
ಶ್ರೀಮತಿ ಭಾನು ಮುಷ್ತಾಕ್, ಹಾಸನ
ಶ್ರೀ ರಫಾಯಲ್ ರಾಜ್, ಬೆಂಗಳೂರು
ಡಾ. ಎಲ್. ಹನುಮಂತಯ್ಯ, ಬೆಂಗಳೂರು
ಡಾ. ಕರೀಗೌಡ ಬೀಚನಹಳ್ಳಿ, ಬಳ್ಳಾರಿ
ಡಾ. ಸಿದ್ಧಲಿಂಗಯ್ಯ, ಬೆಂಗಳೂರು

ಅಧ್ಯಕ್ಷರ ನುಡಿ

ಕಳೆದ ತೊಂಬತ್ತು ವರ್ಷಗಳಿಂದ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ- ಅಕ್ಷರ- ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ- (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಜನವರಿ ೨೦೦೬ ರಲ್ಲಿ ಬೀದರಿನಲ್ಲಿ ನಡೆಯಲಿರುವ ೭೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ, ಸೃಜನೇತರ ಕ್ಷೇತ್ರಗಳಿಗೆ ಸಂಬಂಧಿಸಿದ ೭೨ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ನಮ್ಮ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿಗೆ, ಮುಖಪುಟ ವಿನ್ಯಾಸದ ಕಲಾವಿದರಿಗೆ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಎರಡು ಮಾತು

"Life without aim is a crime" ಅಂದರೆ ಗುರಿಯಿಲ್ಲದ ಜೀವನವೇ ಒಂದು ಅಪರಾಧ - ಇದು ನಮ್ಮ ದೇಶದ ಸರ್ವಮಾನ್ಯ ರಾಷ್ಟ್ರಪತಿಗಳಾದ ಶ್ರೀ ಅಬ್ದುಲ್ ಕಲಾಂ ರವರು ನುಡಿದ ಮುತ್ತಿನಂಥ ಮಾತು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್ ಪಾಟೀಲ್‌ರವರು ತಮ್ಮ ಕ್ರಿಯಾತ್ಮಕ ಗುಣಕ್ಕೆ ಹೆಸರು ಆದವರು. ಪರಿಷತ್ತಿನ ೭೨ನೇ ಸಮ್ಮೇಳನದಲ್ಲಿ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ೭೨ ಪುಸ್ತಕಗಳನ್ನು ಹೊರತರುವ ಗುರಿಯನ್ನು ಇಟ್ಟುಕೊಂಡಿರುವುದು, ಅಪೂರ್ವ, ಅದ್ವಿತೀಯ ಮತ್ತು ಏಕಮಾತ್ರ ಕಾರ್ಯ. ಇದು ನಿಜಕ್ಕೂ ಶ್ಲಾಘನೀಯ. ''ಭಾರತ ದೇಶ ಸಾವಿರಾರು ವರುಷಗಳ ಸಾಂಸ್ಕೃತಿಕ ಪರಂಪರೆ ಹಾಗೂ ವೇದಾಂತ ಕಾವ್ಯಗಳನ್ನು ಹೊಂದಿದ್ದರೂ ಸಹಾ ಪ್ರತಿಯೊಬ್ಬ ಪ್ರಜೆಗಳಿಗೆ ಭಾರತದ ಸಂವಿಧಾನದ ಪ್ರಧಾನವಾದ ಪ್ರಸ್ತಾವನೆಯಲ್ಲಿ ಕೊಡಮಾಡಿದ ವಾಗ್ದಾನಗಳಾದ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಇವುಗಳನ್ನು ತೋರ್ಪಡಿಕೆಗಾದರೂ ಪೂರೈಸಲು ಆಗುತ್ತಿಲ್ಲ'' - ಎಂದು ಹೇಳಿದ ಸರ್ವೋಚ್ಚ ನ್ಯಾಯಾಲಯದ ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ವಿ. ಆರ್. ಕೃಷ್ಣ ಅಯ್ಯರ್‌ರವರ ವಿಚಾರಗಳ ಬಗ್ಗೆ ಗಮನಹರಿಸಿದ ಶ್ರೀ ಚಂಪಾರವರು, ಒಬ್ಬ ನಾಗರಿಕನನ್ನು ಒಂದು ನಾಗರಿಕ ರಾಷ್ಟ್ರವನ್ನು ಕಟ್ಟಿ ಹಾಕುವುದು (Justice) ನ್ಯಾಯದಾನ ಎಂದು ಅರಿತ ಅವರು - ''ಸೂರ್ಯನ ಪ್ರಖರತೆಯೊಂದಿಗೆ ಸದಾ ಮಾನವನ ಚಿಂತನೆಗಳು ವಿಸ್ತಾರವಾಗುತ್ತವೆ'' - ಎನ್ನುವ ಕವಿ ಟೆನ್ನಿಷನ್‌ರವರ ಮಾತಿನಂತೆ - ನನಗೆ ''ನ್ಯಾಯದಾನ ಒಂದು ಚಿಂತನೆ'' ಈ ಪುಸ್ತಕವನ್ನು ಬರೆಯಲು ಕೇಳಿಕೊಂಡಿರುವುದು ನನ್ನ ಸೌಭಾಗ್ಯ. ಈ ಪುಸ್ತಕಕ್ಕೆ ಮುತ್ತಿನಂಥ ಮೌಲ್ಯಯುತ ಮುನ್ನುಡಿಯನ್ನು ಬರೆದ ಅವರಿಗೆ ನನ್ನ ಕೃತಜ್ಞತೆಗಳು.

೧೨ನೇ ಶತಮಾನದ ವಚನ ಸಾಹಿತ್ಯವನ್ನು ಬಿಟ್ಟರೆ - ಆ ಎತ್ತರಕ್ಕೆ ನಿಲ್ಲಬಲ್ಲ ಹಿರಿಯ ಸಾಹಿತಿಗಳಾದ ಶ್ರೀ ಜರಗನಹಳ್ಳಿ ಶಿವಶಂಕರ, ಗೌರವ ಕಾರ್ಯದರ್ಶಿ, ಕ.ಸಾ.ಪ., ಇವರ ''ಕಣ್ಮರೆ'' ಹನಿಗವನದ ಸಾಲುಗಳು ಹೀಗಿವೆ.

ಹಲ್ಲಿ
ಹೆಕ್ಕಿ ಹೆಕ್ಕಿ
ನುಂಗುತ್ತಿತ್ತು ಇರುವೆಗಳ
ಮತ್ತೆ

ಸತ್ತ ಹಲ್ಲಿಯ

ಹೊತ್ತು ಸಾಗಿತ್ತು

ಇರುವೆಗಳ ಮೆರವಣಿಗೆ

ದೇಹವೆಲ್ಲ ಬಗೆದು

ಹುಡುಕುತ್ತಿದ್ದವು ಇರುವೆಗಳು

ಕಾಣಲಿಲ್ಲ ಕೊನೆಗೂ

ಒಳಹೊಕ್ಕ ಒಡನಾಡಿಗಳು.

ಈ ರೀತಿ ಇಂದಿನ ಸಮಾಜದಲ್ಲಿ ನಾವು ಹಾಗೂ ನಮ್ಮ ಹಕ್ಕುಗಳು ನಮ್ಮಿಂದ (ನಷ್ಟ) ಕಣ್ಮರೆಯಾಗಬಾರದೆಂದು ಈ ಪುಸ್ತಕವನ್ನು ರಚಿಸಲು ಒಪ್ಪಿಕೊಂಡೆ. ಈ ಪುಸ್ತಕವನ್ನು ಬರೆಯಲು ಕಾರಣಕರ್ತರು ಪ್ರೇರಣೆ ಹಾಗೂ ಸ್ಪೂರ್ತಿಯನ್ನು ನೀಡಿದ ಅವರಿಗೆ ನನ್ನ ಅನಂತ ಅನಂತ ಧನ್ಯವಾದಗಳು.

ಅದೇ ರೀತಿ ಸಾಹಿತ್ಯ ಪ್ರಪಂಚದ ಆರಾಧ್ಯದೈವವಾದ ಹಾಗೂ ನನ್ನ ಜ್ಞಾನದ ಸ್ಪೂರ್ತಿ-ಶ್ರೀ ಶೃಂಗೇರಿಯ ಶಾರದೆಯ ಪಾದಕಮಲಗಳಲ್ಲಿ ಈ ಗ್ರಂಥವನ್ನು ಭಕ್ತಿಪೂರ್ವಕವಾಗಿ ಅರ್ಪಿಸಿದ್ದೇನೆ.

ಈ ಪುಸ್ತಕವನ್ನು ಪ್ರಕಟಿಸಿರುವ ಕ.ಸಾ.ಪ.ಗೆ ನಾನು ಆಭಾರಿಯಾಗಿದ್ದೇನೆ.

ಕನ್ನಡ ಸಾಹಿತ್ಯ ಪರಿಷತ್ತಿನ ಮುಖ್ಯ ಪ್ರವಾಹಕ್ಕೆ ಈ ಹೊಸ ಧಾರೆಯು ಸೇರಿಕೊಳ್ಳಲಿ ಎನ್ನುವುದೇ ನನ್ನ ಆಶಯ.

ಈ ಪುಸ್ತಕದ ಓದಿನಿಂದ ಜನಸಾಮಾನ್ಯರಲ್ಲಿ ಹಾಗೂ ವಕೀಲರಲ್ಲಿ ''ನ್ಯಾಯದಾನ'' ಪ್ರಜ್ಞೆ ಕಿಂಚಿತ್ತಾದರೂ ಜಾಗೃತವಾಗಿ, ಸರಿಯಾದ ನ್ಯಾಯದಾನಕ್ಕೆ ಪ್ರೇರಣೆ ಮೂಡಿ ಕಕ್ಷಿಗಾರರ ಕಣ್ಣೀರು ಒರೆಸುವಲ್ಲಿ ಸಾಧ್ಯವಾದರೆ ಈ ನನ್ನ ಪ್ರಯತ್ನ ಸಾರ್ಥಕವೆಂದು ಭಾವಿಸುತ್ತೇನೆ.

ಈ ಗ್ರಂಥಕ್ಕೆ ಚಿರಕಾಲ ಕನ್ನಡ ಜನದ ಮಮತೆ, ಆಶಯ ದೊರೆತಿರಲಿ.

ಟಿ. ನಾಗಪ್ಪ

ಜಿಲ್ಲಾ ನ್ಯಾಯಾಧೀಶರು

ಚಿಕ್ಕಮಗಳೂರು

ದಿ : ೭-೪-೨೦೦೫

ಫೋನ್ : ೯೪೪೮೦ ೦೦೦೦೭

ಪರಿವಿಡಿ

ಪ್ರಾಚೀನ ಭಾರತದಲ್ಲಿ ದೇವಾಲಯಗಳೇ ನ್ಯಾಯಾಲಯಗಳು ಆಗಿದ್ದವು

ಪ್ರಾಚೀನತೆಯ ಜ್ಞಾನವಿಲ್ಲದವನಿಗೆ ವರ್ತಮಾನವೂ ಇಲ್ಲ ಭವಿಷ್ಯವೂ ಇಲ್ಲ ಎನ್ನುವ ಮಾತೊಂದು ಇದೆ. ಕಾರಣ ಪ್ರಾಚೀನದ ದಿನಗಳಲ್ಲಿಯ ನ್ಯಾಯದಾನದ ಬಗ್ಗೆ ತಿಳಿಯೋಣ.

ಭರತಖಂಡದಲ್ಲಿ ದೇವಾಲಯಗಳನ್ನು ಮೊದಲು ಯಾರು, ಯಾವಾಗ ಮತ್ತು ಹೇಗೆ ಕಟ್ಟಿದರು ಎಂಬುದು ತಿಳಿದುಬಂದಿಲ್ಲ. ವೇದಗಳ ಕಾಲದ ಪ್ರಾರಂಭದಲ್ಲಿ ಬಹುಶಃ ದೇವಾಲಯಗಳು ಇರಲಿಲ್ಲ. ವಿಗ್ರಹಾರಾಧನಾಪದ್ಧತಿ ಮತ್ತು ದೇವಾಲಯ ನಿರ್ಮಾಣ ವೇದಗಳ ಕಾಲದ ಕೊನೆಯ ಭಾಗದಲ್ಲಿ ಪ್ರಾರಂಭವಾಗಿರಬಹುದು. ವೈದಿಕ ಕಾಲದಲ್ಲಿ ಯಜ್ಞಗಳನ್ನು ಮಾಡುತ್ತಿದ್ದ ಯಾಗಶಾಲೆಯೇ ಕ್ರಮೇಣವಾಗಿ ಭಕ್ತಿಪಂಥಗಳ ಪ್ರಭಾವದಿಂದ ದೇವಾಲಯವಾಗಿ ರೂಪಾಂತರ ಹೊಂದಿರಬಹುದು.

ಹಿಂದೂಸಮಾಜದಲ್ಲಿ ದೇವಾಲಯಗಳು ನಿರ್ವಹಿಸುವ ಪಾತ್ರ ತುಂಬಾ ಹಿರಿದು. ನಮ್ಮ ಧರ್ಮ, ಸಂಸ್ಕೃತಿಗಳೆಂಬ ದೀಪವನ್ನು ಜ್ವಲಂತವಾಗಿ ಕಾಪಾಡಿಕೊಂಡು ಬಂದುದಲ್ಲದೆ ಸಮಾಜದ ಐಕ್ಯಕ್ಕೂ ಅವು ಶ್ರಮಿಸಿವೆ ; ನೂರಾರು ಜನರಿಗೆ ಜೀವನೋಪಾಯ ಒದಗಿಸಿವೆ. ಯುದ್ಧಕಾಲದಲ್ಲಿ ಹಾಗೂ ಕ್ಷಾಮ ಕಾಲದಲ್ಲಿ ಪರಿಹಾರ ಕಾರ್ಯವನ್ನು ಕೈಗೊಂಡಿವೆ.

ದೇವಾಲಯಗಳು ವಿದ್ಯಾಕೇಂದ್ರಗಳಾಗಿ, ಸಾಮಾಜಿಕಸಂಸ್ಥೆಯಾಗಿ ನ್ಯಾಯ ಕೇಂದ್ರಗಳಾಗಿ ಮತ್ತು ಆರ್ಥಿಕಕೇಂದ್ರಗಳಾಗಿ ಕಾರ್ಯ ನಿರ್ವಹಿಸಿರುವುದನ್ನು ಪ್ರಾಚೀನಕಾಲದಿಂದಲೂ ಕಾಣಬಹುದಾಗಿದೆ. ಪ್ರಾಚೀನ ಕರ್ನಾಟಕದಲ್ಲಿ ದೇವಾಲಯಗಳು ಜೀವಂತ ಕೇಂದ್ರಗಳು. ಇಡೀ ನಾಡಿನ ನಾಡಿಯನ್ನು ಹಿಡಿದು ನಡೆಯಿಸುತ್ತಿದ್ದ ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಒಂದೊಂದು ದೇವಾಲಯಗಳು ಸುವ್ಯವಸ್ಥಿತವಾದ, ನಿಯಮಬದ್ಧವಾದ ಒಂದು ಸಂಸ್ಥೆಯಾಗಿದ್ದಿತು. ದೇವಸ್ಥಾನವನ್ನು ಒಂದು ಸಾಮಾಜಿಕ, ಸಾಂಸ್ಕೃತಿಕ ಕೇಂದ್ರವಾಗಿ ಭಾವಿಸಿ ಅದರ ವ್ಯವಸ್ಥೆ, ಅದು ಜನತೆಯ ಮೇಲೆ ಬೀರಿದ ಪ್ರಭಾವ, ಜನತೆಯು ದೇವಸ್ಥಾನವನ್ನು ಕಂಡ ರೀತಿ ಇವುಗಳನ್ನು ಕುರಿತು ಸಾಕಷ್ಟು ಅಧ್ಯಯನ ನಡೆದಿಲ್ಲವೆಂದು ಹೇಳಬೇಕಾಗಿದೆ. ಭಾರತದ

ಉಳಿದ ಕಡೆ ಹೇಗಾದರೂ ಇರಲಿ, ಪ್ರಾಚೀನ ಕರ್ನಾಟಕ ಜನಜೀವನದ ಅವಿಭಾಜ್ಯ ಅಂಗವಾಗಿ ದೇವಸ್ಥಾನಗಳು ಕಾಣಿಸಿಕೊಳ್ಳುತ್ತವೆ.

ದೇವಾಲಯವು ಒಂದು ರೀತಿಯಲ್ಲಿ ನ್ಯಾಯಾಲಯವಾಗಿ ಕೆಲಸ ಮಾಡಿರುವುದನ್ನು ಕಾಣಬಹುದು - ಕಾಣುತ್ತಲಿದ್ದೇವೆ. ದೇವಾಲಯದಲ್ಲಿ ಒಮ್ಮೆ ವಚನ ಕೊಟ್ಟರೆ ಮುಗಿಯಿತು. ಅದನ್ನು ಪರಿಪಾಲಿಸಿಯೇ ತೀರಬೇಕು ಎಂಬ ನಿರ್ಬಂಧವಿರುತ್ತಿತ್ತು. ಯಾವುದೋ ಸಂದರ್ಭ ಅಪರಾಧಿಯೆಂದು ಜನರು ಭಾವಿಸಿರುವ ವ್ಯಕ್ತಿಯ ಅಪರಾಧವು ಬಾಹ್ಯಕಾರಣಗಳಿಂದ ನಿರ್ಣಯವಾಗದಿದ್ದರೆ ಆತನು ಅಪರಾಧಿಯೇ, ನಿರಪರಾಧಿಯೇ ಎಂಬ ತೀರ್ಮಾನವು ಕೆಲವೊಮ್ಮೆ ದೇವಾಲಯಗಳಲ್ಲಿ ನಡೆಯುತ್ತಿದ್ದಿತು. ಉದಾಹರಣೆಗೆ ಬೊಪ್ಪಯ್ಯ ಎಂಬುವನು ದುಷ್ಟನಾಗಿ ಹೊಳಲು ಎಂಬ ಊರನ್ನು ಸೂರೆಗೊಂಡು ಅನೇಕ ಬ್ರಾಹ್ಮಣರನ್ನು ಕೊಲ್ಲುತ್ತಾನೆ. ಅಲ್ಲಿಯ ಮಹಾಜನಗಳು ಚಕ್ರವರ್ತಿಯ ತನಕ ದೂರನ್ನು ಒಯ್ಯುತ್ತಾರೆ. ಚಕ್ರವರ್ತಿಯು ಅವರ ಮಾತುಗಳನ್ನು ಸಾವಧಾನವಾಗಿ ಕೇಳಿ, ಆ ಅಗ್ರಹಾರಕ್ಕೆ ಯಾರೂ ಮಾನ್ಯರಿರಕೂಡದೆಂದು ನಿಯಮಿಸುತ್ತಾನೆ. ಆತನು ತಪ್ಪೊಪ್ಪಿಕೊಂಡು ಆಣೆ ಪತ್ರವನ್ನು ಕೊಟ್ಟು ತಾನು ನುಡಿದಂತೆ ನಡೆಯುವೆನೆಂಬುದನ್ನು ಸ್ಥಿರಪಡಿಸಲು ತ್ರಿಪುರಾಂತಕ ದೇವರ ಬಳಿ ನೀರನ್ನು ಕುಡಿಯುತ್ತಾನೆ (SII IX 169, 1104 A.D).

ದಿವ್ಯ: ವ್ಯಕ್ತಿಯು ಮಾಡಿದ ಅಪರಾಧವನ್ನು ನಿರ್ಣಯಿಸುವ ಪ್ರಾಚೀನ ವಿಧಾನಗಳಲ್ಲಿ 'ದಿವ್ಯ' ಎಂಬುದು ಒಂದು. ಅಪರಾಧ ನಿರ್ಣಯಕ್ಕೆ ಮಾನುಷವಾದ ಸಾಕ್ಷಿ ಯಾವುದೂ ಇಲ್ಲದಿರುವಾಗ ದೈವವನ್ನು ಆಶ್ರಯಿಸುತ್ತಿದ್ದರು. ಆದುದರಿಂದಲೇ ಅದನ್ನು ದಿವ್ಯವೆಂದು ಕರೆಯಲಾಗಿದೆ. ದಿವ್ಯ ಎಂದರೆ ಭಗವಂತನ ತೀರ್ಪು ಎಂಬ ಅರ್ಥವಿದೆ.

ಅಪರಾಧ ನಿರ್ಣಯದಲ್ಲಿ ಇದು ಮೊದಲ ಹೆಜ್ಜೆಯಲ್ಲ, ಕೊನೆಯ ಪ್ರಯತ್ನ. ಈ ಪದ್ಧತಿಯು ಪ್ರಪಂಚದಾದ್ಯಂತ ಬೆಳೆದು ಬಂದಿದೆ. ಭಾರತ ಮತ್ತು ಆಫ್ರಿಕನ್ ಜನಾಂಗಗಳಲ್ಲಿ ಪ್ರಚಾರದಲ್ಲಿತ್ತು.

ಭಾರತದಲ್ಲಿ 'ದಿವ್ಯ'ವನ್ನು ಸ್ಮೃತಿಗಳು, ನ್ಯಾಯಗ್ರಂಥಗಳು, ಮಾನ್ಯ ಮಾಡಿವೆ. ದಿವ್ಯವನ್ನು ನಡೆಸಲು ಬೇಕಾದಷ್ಟು ನಿಯಮಗಳನ್ನು ಹಾಕಿದ್ದಾರೆ. ಯಾರಿಗೆ ಯಾವ ರೀತಿಯ ದಿವ್ಯ, ಯಾವಕಾಲದಲ್ಲಿ ನಡೆಯಬೇಕು, ದಿವ್ಯವನ್ನು ನಡೆಸುವಾಗ ವಹಿಸಬೇಕಾದ ಮುನ್ನೆಚ್ಚರಿಕೆಗಳು - ಈ ವಿಷಯದಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ದಿವ್ಯವನ್ನು ನಡೆಸುವ ನ್ಯಾಯಾಧಿಪತಿ ಮತ್ತು ದಿವ್ಯಕ್ಕೆ ಗುರಿಯಾಗಿರುವ 'ಶೋಧ್ಯನು' ಇಬ್ಬರೂ ಹಿಂದಿನ ದಿನ ಉಪವಾಸವಿದ್ದು ಮಾರನೆಯ ದಿನ ಪ್ರಾತಃಕಾಲ ಸ್ನಾನ ಮಾಡಬೇಕು. ಶೋಧ್ಯನು ಒದ್ದೆ ಬಟ್ಟೆಯಲ್ಲಿರಬೇಕು. ದೇವತಾಪೂಜೆಯ ನಂತರ ನ್ಯಾಯಾಧಿಪತಿಯು ದೈವದ ಆವಾಹನೆ ಮಾಡಬೇಕು. ಪೂಜೆಯ ವಿಧಾನಗಳು ಮತ್ತು

ಆವಾಹನೆಗಳಲ್ಲಿಯೂ ಬೇಕಾದಷ್ಟು ವಿವರಗಳಿವೆ. ಇವೆಲ್ಲವೂ ಮುಗಿದ ಬಳಿಕ ದಿವ್ಯವು ನಡೆಯುತ್ತದೆ.

ಮನು, ಯಾಜ್ಞವಲ್ಕ್ಯ, ನಾರದ, ಬೃಹಸ್ಪತಿ ಮೊದಲಾದವರು ದಿವ್ಯಗಳ ಸಂಖ್ಯೆಯ ವಿಷಯದಲ್ಲಿ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದರು. ಮನುವು ಎರಡು ದಿವ್ಯಗಳನ್ನೂ (ಅಗ್ನಿದಿವ್ಯ ಮತ್ತು ಜಲದಿವ್ಯ), ಯಾಜ್ಞವಲ್ಕ್ಯನು ಐದನ್ನೂ, ನಾರದ ಏಳನ್ನೂ, ಬೃಹಸ್ಪತಿ ಮೊದಲಾದವರು ಒಂಬತ್ತನ್ನೂ ಹೇಳಿದ್ದಾರೆ. ಕನ್ನಡ ಶಾಸನಗಳಲ್ಲಿ ಕೋಶ, ರವಿ, ತಂಡುಲ, ಅಗ್ನಿ, ತಪ್ತಮಾಷ, ಜಲ, ವಿಷ ಎಂಬ ಏಳು ದಿವ್ಯಗಳನ್ನು ಹೇಳಿದೆ. ನಾರದನು ಹೇಳುವ ದಿವ್ಯದಲ್ಲಿ ರವಿ ಬದಲು ತುಲಾ ಎಂಬ ದಿವ್ಯವಿದೆ. ಪ್ರಾಚೀನ ಗ್ರಂಥಗಳಲ್ಲಿ ರವಿದಿವ್ಯವನ್ನು ಹೆಸರಿಸಿಲ್ಲ.

ಡಾ || ಕಾಣೆಯವರು HISTORY OF DHARMASASTRA, III.P.P. 361-78 ಈ ಗ್ರಂಥದಲ್ಲಿ ದಿವ್ಯವನ್ನು ನಡೆಸುವುದರ ಬಗ್ಗೆ ವಿವರಿಸಿದ್ದಾರೆ. ಈ ವಿವರಗಳನ್ನು ಚಿದಾನಂದ ಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'ದಲ್ಲಿ ನೋಡಬಹುದಾಗಿದೆ.

೧. ಕೋಶ ದಿವ್ಯ : ಶೋಧ್ಯನು ರುದ್ರ, ದುರ್ಗೆ ಮೊದಲಾದ ದೇವತೆಗಳನ್ನು ಪೂಜಿಸಿದ ನಂತರ ವಿಗ್ರಹಗಳನ್ನು ನೀರಿನಲ್ಲಿ ತೊಳೆಯಬೇಕು. ನಂತರ ನ್ಯಾಯಾಧಿಪತಿಯ ಸೂಚನೆಯ ಪ್ರಕಾರ ಶೋಧ್ಯನು ''ಸತ್ಯೇನಮಾಭಿರಕ್ಷ'' ಎಂಬ ಮಂತ್ರವನ್ನು ಉಚ್ಚರಿಸಿ ಆ ನೀರಿನಲ್ಲಿ ಮೂರು ಬೊಗಸೆ ನೀರು ಕುಡಿಯಬೇಕು. ಇದಾದನಂತರ ಹದಿನಾಲ್ಕು ದಿನಗಳಲ್ಲಿ ಅಪರಾಧಿಗೆ ಯಾವುದೇ ರೀತಿಯ ಅನಾಹುತವಾಗದಿದ್ದರೆ ಅವನು ನಿರಪರಾಧಿ ಎಂದೂ, ಅನಾಹುತವಾದರೆ ಅಪರಾಧಿ ಎಂದೂ, ಶಿಕ್ಷಾರ್ಹನೆಂದೂ ತೀರ್ಮಾನಿಸಬೇಕು. ಇದು ಅತ್ಯಂತ ಸಾತ್ವಿಕವಾದ ದಿವ್ಯಪದ್ಧತಿಯಾಗಿದೆ.

೨. ತಂಡುಲ : ಹಿಂದಿನ ದಿನ ಭತ್ತದಿಂದ ಅಕ್ಕಿಯನ್ನು ಬೇರ್ಪಡಿಸಬೇಕು. ಆ ಅಕ್ಕಿಯನ್ನು ಮಡಕೆಯಲ್ಲಿ ತುಂಬಿ ಸೂರ್ಯನ ವಿಗ್ರಹವನ್ನು ತೊಳೆದ ನೀರನ್ನು ಹಾಕಿ ಬಿಸಿಲಿನಲ್ಲಿಡಬೇಕು. ಮಾರನೆಯ ದಿವಸ ಬೆಳಿಗ್ಗೆ ಶೋಧ್ಯನು ಆ ಅಕ್ಕಿಯನ್ನು ನುಂಗಿ ಎಲೆಯ ಮೇಲೆ ಉಗುಳಬೇಕು. ಅದರ ಜೊತೆಯಲ್ಲಿ ರಕ್ತವು ಬಿದ್ದರೆ ಅಪರಾಧಿಯೆಂದು, ಇಲ್ಲದಿದ್ದರೆ ನಿರ್ಅಪರಾಧಿಯೆಂದು ತೀರ್ಮಾನಿಸಬೇಕು.

೩. ಅಗ್ನಿ : ಸಗಣಿಯಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಒಂಬತ್ತು ವರ್ತುಲಗಳನ್ನು ಮಾಡಬೇಕು. ಪೂರ್ವಕ್ಕೆ ತಿರುಗಿಕೊಂಡು ಮೊದಲನೆಯ ವರ್ತುಲದಲ್ಲಿ ಶೋಧ್ಯನು ನಿಂತುಕೊಳ್ಳಬೇಕು. ಅವನ ಅಂಗೈಗಳ ಮೇಲೆ ಅರವೀಮರದ ಏಳು ಎಲೆಗಳನ್ನು ಇಡಬೇಕು. ಈ ಎಲೆಗಳ ಮೇಲೆ ಚೆನ್ನಾಗಿ ಕಾಯಿಸಿರುವ ಕಬ್ಬಿಣದ ಗುಂಡನ್ನು ಇಡಬೇಕು. ನಂತರ ನಿಧಾನವಾಗಿ ಅವನು ಒಂದೊಂದೇ ವರ್ತುಲವನ್ನು

2

ದಾಟಿಕೊಂಡು ಎಂಟನೇ ವರ್ತುಲಕ್ಕೆ ಬಂದು ಒಂಬತ್ತನೆಯ ವರ್ತುಲದಲ್ಲಿ ಗುಂಡನ್ನು ಹಾಕಬೇಕು. ಕೈಯಲ್ಲಿ ಸುಟ್ಟಿರುವ ಚಿಹ್ನೆಗಳು ಕಾಣಿಸದಿದ್ದರೆ ಮಾತ್ರ ಅವನು ನಿರಪರಾಧಿ. ಕಾಯಿಸಿದ ಕುಳವನ್ನು ನಾಲಿಗೆಯನ್ನು ಮುಟ್ಟುವಂತೆ ಮಾಡಿದರೆ ಆ ದಿವ್ಯವನ್ನು 'ಫಾಲದಿವ್ಯ' ಎಂದು ಕರೆಯುತ್ತಾರೆ.

೪. ತಪ್ತಮಾಷ : ಕುದಿಯುವ ತುಪ್ಪದಲ್ಲಿ, ಚೆನ್ನಾಗಿ ತೊಳೆದ ಚಿನ್ನದ ಉಂಗುರವನ್ನು ಹಾಕಬೇಕು. ಶೋಧ್ಯನು ತುಪ್ಪವನ್ನು ಮಂತ್ರವೊಂದರಿಂದ ಪ್ರಾರ್ಥಿಸಿ ಆ ಉಂಗುರವನ್ನು ತೆಗೆಯಬೇಕು. ಸುಟ್ಟ ಚಿಹ್ನೆಗಳಿಲ್ಲದಿದ್ದರೆ ಅವನು ನಿರಪರಾಧಿ.

೫. ವಿಷ : ಶಾರ್ಙ್ಗ, ವತ್ಸನಾಭ, ಹೈಮವತ ಎಂಬ ಹೆಸರಿನ ವಿಷಗಳಲ್ಲಿ ಯಾವುದಾದರೂ ವಿಷಕ್ಕೆ ಅದರ ಮುವತ್ತರಷ್ಟು ಪ್ರಮಾಣದ ತುಪ್ಪವನ್ನು ಬೆರೆಸಿ ರಾತ್ರಿಯ ಕೊನೆಯ ಜಾವದಲ್ಲಿ ಶೋಧ್ಯನಿಗೆ ಕುಡಿಸಬೇಕು. ಮಾರನೆಯ ದಿನ ಅವನಲ್ಲಿ ವಿಷದ ಪರಿಣಾಮವು ಕಾಣಿಸಿಕೊಂಡರೆ ಅವನು ಅಪರಾಧಿ.

ದಿವ್ಯಗಳು ಇನ್ನೂ ಹಲವಾರಿವೆ. ಉದಾಹರಣೆಗೆ, ಉಂಗುರ ಸರ್ಪಗಳನ್ನು ಒಂದು ಮಡಕೆಯಲ್ಲಿ ಹಾಕಿಸಿ ಶೋಧ್ಯರ ಕೈಯಿಂದ ಉಂಗುರವನ್ನು ತೆಗೆಸುವುದು. ಹತ್ತನೆಯ ಶತಮಾನದಲ್ಲಿದ್ದ ಕುಲಶೇಖರಾಳ್ವಾರ್ ಎಂಬುವರು ತಮಗೆ ಪ್ರಿಯರಾದ ವೈಷ್ಣವರ ಮೇಲೆ ಬಂದ ಕಳ್ಳತನದ ಆಪಾದನೆಯನ್ನು ನಿವಾರಿಸಲು ವಿಷಸರ್ಪವಿದ್ದ ಮಡಕೆಯೊಳಕ್ಕೆ ಕೈಹಾಕಿ ಗೆದ್ದಂತೆ ತಿಳಿದುಬರುತ್ತದೆ.

ಪ್ರಾಚೀನ ಕರ್ನಾಟಕದಲ್ಲಿ ದಿವ್ಯಗಳನ್ನು ಸ್ಮೃತಿಗಳಲ್ಲಿ ಉಕ್ತವಾಗಿರುವಂತೆ ನಡೆಸುತ್ತಿದ್ದರೆಂದು ಹೇಳುವುದು ಕಷ್ಟ. ಅನುಕೂಲಕ್ಕೆ ತಕ್ಕಂತೆ ಮಾಪಾರ್ಟುಗಳನ್ನು ಮಾಡಿಕೊಂಡು ಸರಳಗೊಳಿಸಿಕೊಂಡಿದ್ದಿರಬಹುದು. ಈ ದಿವ್ಯಗಳು ಪ್ರಾಚೀನ ಕರ್ನಾಟಕದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ನಡೆಯುತ್ತಿತ್ತು ಎಂಬುದಕ್ಕೆ ಸಾಕಷ್ಟು ಗ್ರಂಥಾಧಾರಗಳು, ಶಾಸನಾಧಾರಗಳು ಕಂಡುಬರುತ್ತವೆ. ಪಂಪಭಾರತ, ಶಾಂತಿ ಪುರಾಣ, ಬಸವಣ್ಣನವರ ವಚನಗಳು, ಸಿದ್ಧರಾಮಚರಿತೆ ಮೊದಲಾದ ಸಾಹಿತ್ಯ ಕೃತಿಗಳಲ್ಲಿ ಹಲವು ತೆರನಾದ ದಿವ್ಯ ಪದ್ಧತಿಗಳು ಕಂಡುಬರುತ್ತವೆ.

ದಿವ್ಯಗಳ ವಿಷಯದಲ್ಲಿ ಕಾವ್ಯಾಧಾರಗಳಿಗಿಂತ ಶಾಸನಾಧಾರಗಳು ಹೆಚ್ಚು ನಂಬಲರ್ಹವಾದವು. ಕಲಿದೇವರ ದೇವಸ್ಥಾನದಲ್ಲಿ ಸಪ್ತದಿವ್ಯಗಳು ವರ್ತಿಸುವುವೆಂದು ಹೇಳಿ, ಆ ದಿವ್ಯಗಳಿಂದ ಬರುವ ಹಣವನ್ನು ಧರ್ಮಕಾರ್ಯಗಳಿಗೆ ಬಳಸಬೇಕೆಂದು ಶಾಸನವೊಂದು ತಿಳಿಸುತ್ತದೆ. ತಾಳಗುಂದದ ಪ್ರಣವೇಶ್ವರ ದೇವಸ್ಥಾನದಲ್ಲಿ ಸಪ್ತದಿವ್ಯಗಳು ನಡೆಯುತ್ತಿದ್ದವೆಂದು, ಅದರಿಂದ ಬಂದ ಹಣವನ್ನು ಪೂಜಾದಿಗಳಿಗೆ ಬಳಸಬೇಕೆಂದು ಶಾಸನವೊಂದು ಹೇಳುತ್ತದೆ.

ಇಂದಿಗೂ ಹಳ್ಳಿಗಳಲ್ಲಿ ಜಗಳ ಬಂದಾಗ ಕುದಿಯುವ ತುಪ್ಪದಲ್ಲಿ ಕೈಯನ್ನು ಅದ್ದುವ, ದೇವರ ಘಂಟೆಯನ್ನು ಬಾರಿಸುವ, ಪೂಜಾರಿಯಿಂದ ಹೂವಿನ ಮಾಲೆಯನ್ನು

ಹಾಕಿಸಿಕೊಳ್ಳುವ, ದೇವರ ದೀಪವನ್ನು ಆರಿಸುವ ಅಥವಾ ಸೆರಗಿನಲ್ಲಿ ಕೆಂಡವನ್ನು ಹಾಕಿಸುವ ಮಾತುಗಳು ಬರುತ್ತವೆ. ಇವೆಲ್ಲವುಗಳೂ ಒಂದಾನೊಂದು ಕಾಲದಲ್ಲಿದ್ದ ದಿವ್ಯದ ಅವಶೇಷಗಳು.

ಕರ್ನಾಟಕದಲ್ಲಿ ದಿವ್ಯಗಳು ನಡೆಯುತ್ತಿದ್ದುದು ಸಾಮಾನ್ಯವಾಗಿ ದೇವಸ್ಥಾನಗಳಲ್ಲಿ, ಬ್ರಾಹ್ಮಣರ ಸಮಕ್ಷಮದಲ್ಲಿ. ದಿವ್ಯಗಳಿಗೆ ಪ್ರಸಿದ್ಧವಾಗಿದ್ದ ದೇವಸ್ಥಾನಗಳು ಇದ್ದವು. ತಾಳಗುಂದದ ಪ್ರಣವೇಶ್ವರ ದೇವಾಲಯ, ಹರದನಹಳ್ಳಿಯ ದಿವ್ಯಲಿಂಗೇಶ್ವರ ಆಲಯಗಳನ್ನು ಉದಾಹರಿಸಬಹುದಾಗಿದೆ. ಇಂದಿಗೂ ಧರ್ಮಸ್ಥಳದಲ್ಲಿ ಈ ಪದ್ಧತಿಯು ನಡೆಯುತ್ತಿದೆ ಎಂಬುದಾಗಿ ತಿಳಿದುಬಂದಿದೆ. ದಿವ್ಯಗಳನ್ನು ನಡೆಸುತ್ತಿದ್ದ ದೇವಸ್ಥಾನದ ಅಧಿಕಾರಿಗಳು ದಿವ್ಯಗಳಿಗೆ ಕಾರಣರಾದ ವ್ಯಕ್ತಿಗಳಿಂದ ಹಣವನ್ನು ವಸೂಲಿ ಮಾಡಿ ಅದನ್ನು ದೇವಸ್ಥಾನದ ಆಸ್ತಿಗೆ ಸೇರಿಸುತ್ತಿದ್ದರು. ದಿವ್ಯಗಳು ದೇವಾಲಯದ ಆದಾಯವನ್ನು ಹೆಚ್ಚಿಸಲು ಕಾರಣವಾಗಿದ್ದವು.

ದೇವಾಲಯವು ಜನರ ದೈವಭಕ್ತಿಯ ಕೇಂದ್ರವಾಗಿದ್ದಂತೆ ವಿದ್ಯಾಕೇಂದ್ರವೂ ಆಗಿದ್ದಿತು. ಶಿಲ್ಪಚಿತ್ರ, ಸಂಗೀತ, ನರ್ತನಾದಿ ಕುಶಲ ಕಲೆಗಳು ದೇವಸ್ಥಾನದ ಆಶ್ರಯದಲ್ಲಿ ಬೆಳೆದುಬಂದವು. ದುಃಖ ಬಂದಾಗ ಜನರು ದೇವಸ್ಥಾನಕ್ಕೆ ಬಂದು ತಮ್ಮ ಕಷ್ಟಗಳನ್ನು ಹೇಳಿಕೊಳ್ಳುತ್ತಿದ್ದರು. ಹಬ್ಬಗಳಲ್ಲಿ ದೇವಾಲಯವನ್ನು ಅಲಂಕರಿಸಿ ಪೂಜೋತ್ಸವಗಳನ್ನು ನಡೆಸಿ ಸುಖ ಸಂತೋಷ ಪಡುತ್ತಿದ್ದರು. ದೇವಾಲಯಗಳು ಬಡವರಿಗೆ ಸತ್ರವಾಗಿದ್ದಿತು ಮತ್ತು ಶ್ರೀಮಂತರಿಗೆ ಐಶ್ವರ್ಯ ಹೊರಗೆ ಹರಿದು ಬರಲು ಒಂದು ಕಾರಣವಾಗಿದ್ದಿತು.

ಆದರೆ ಇಂದಿನ ಕಾಲದ ದೇವಾಲಯಗಳಲ್ಲಿ ಈ ಪದ್ಧತಿಯು ಹೆಚ್ಚಾಗಿ ಕಂಡು ಬರುತ್ತಿಲ್ಲ. ಬಹುಶಃ ನ್ಯಾಯಾಲಯಗಳು ಸ್ಥಾಪನೆಗೊಂಡ ನಂತರ ದೇವಾಲಯಗಳಲ್ಲಿ ನಡೆಯುತ್ತಿದ್ದ ನ್ಯಾಯದಾನ ಪದ್ಧತಿಗೆ ಮಹತ್ವ ಕಡಿಮೆಯಾಯಿತು. ಯಾವುದೇ ಸಂಸ್ಥೆಯಾಗಲಿ ಅದು ಉಳಿಯಬೇಕಾದರೆ ಕಾಲದಿಂದ ಕಾಲಕ್ಕೆ ಬೇರೆ ಬೇರೆ ಪರಿಸರಗಳಿಗೆ ಹೊಂದಿಕೊಳ್ಳಬೇಕಾಗುತ್ತದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಪ್ರಾಚೀನ ಕಾಲದಲ್ಲಿ ದೇವಾಲಯಗಳ ಪಾತ್ರ ಹಿರಿದಾಗಿದ್ದಿತು. ಅನೇಕ ರೀತಿಯ ಪರಿವರ್ತನೆ ಇದ್ದರೂ ಜನರಲ್ಲಿ ಉಳಿದಿರುವ ಅಲ್ಪಸ್ವಲ್ಪ ಭಕ್ತಿಯಿಂದಾಗಿ ದೇವಸ್ಥಾನವು ಇಂದಿಗೂ ಉಳಿದುಕೊಂಡು ಬಂದಿದೆ. ಆಧುನಿಕ ಕಾಲದಲ್ಲಿ ಕೆಲವನ್ನು ಬಿಟ್ಟರೆ ಜನಜೀವನದ ಕೇಂದ್ರವಾಗಿ ಸಮಾಜದ ಮೇಲೆ ಪ್ರಭಾವವನ್ನು ಬೀರಬಲ್ಲ, ಜನಜೀವನವನ್ನು ರೂಪಿಸಬಲ್ಲ ಶಕ್ತಿಯಾಗಿರುವ ದೇವಸ್ಥಾನಗಳು ಬಹಳ ಕಡಿಮೆ ಎಂದು ಹೇಳಬಹುದಾಗಿದೆ.

★★★★

ನಂತರದ ದಿನಗಳಲ್ಲಿ - ನಿಯಮಗಳು (ಕಾನೂನುಗಳು)

ದಿವ್ಯಗಳ ಬಗ್ಗೆ ಚಿಂತನೆಗೈದ ಮೇಲೆ ನಂತರದ ದಿನಗಳಲ್ಲಿಯ ನಿಯಮಗಳ ಬಗ್ಗೆ ತಿಳಿಯೋಣ.

ಧರ್ಮ ಎಂದರೆ ವಿಶಾಲವಾದ ಅರ್ಥದಲ್ಲಿ ನಿಯಮಗಳು, ಕಾನೂನುಗಳೆಂತಲೂ ಹೇಳಬಹುದು.

ಯಾವುದು ಎಲ್ಲರ ಪೋಷಣೆ ಮತ್ತು ಅಭ್ಯುದಯ ಹಾಗೂ ಕಲ್ಯಾಣಕ್ಕಾಗಿ ಇದೆಯೋ ಅದನ್ನೇ ಧರ್ಮವೆಂದು ಅರ್ಥೈಸಬಹುದು.

ಮಾನವನ ನೈಸರ್ಗಿಕ (ಸಹಜ) ಪ್ರವೃತ್ತಿಗಳಾದ ಆಶೆ, ಕ್ರೋಧ, ಮೋಹ, ಲೋಭ, ಮದ, ಮಾತ್ಸರ್ಯ ಎಂಬ ಅರಿಷಡ್ವರ್ಗಗಳನ್ನು ನಿಯಂತ್ರಣದಲ್ಲಿಡಲು ಸಾಧ್ಯವಾಗುವುದು ಧರ್ಮದಿಂದ ಮಾತ್ರ ಸಾಧ್ಯ.

ಲೌಕಿಕ ಪ್ರಪಂಚದಲ್ಲಿ ಸಂಪತ್ತು ಗಳಿಸುವ ಮತ್ತು ವಿಷಯಸುಖಗಳ ಆಸೆ ಇವುಗಳು ಧರ್ಮಕ್ಕೆ ಒಳಪಡಬೇಕಾಗುವುದು.

ಎಲ್ಲ ವರ್ಣದವರಿಗೆ ಅನ್ವಯಿಸುವ ಧರ್ಮದ ಪ್ರಮುಖ ಒಂಬತ್ತು ಅಂಶಗಳು ಎಂದರೆ -

೧. ಸತ್ಯ ಆಚರಣೆ

೨. ಶಾಂತಚಿತ್ತದಿಂದ ಇರುವುದು

೩. ದಾಸೋಹ ತತ್ವ (ನಮ್ಮ ಸಂಪತ್ತನ್ನು ಪರರೊಡನೆ ಹಂಚಿಕೊಂಡು ತಿನ್ನುವುದು)

೪. ಕ್ಷಮೆ

೫. ನಮ್ಮ ಸ್ವಂತ ಹೆಂಡಂದಿರಿಂದ ಮಕ್ಕಳನ್ನು ಹೆರುವುದು

೬. ಅಂತರಂಗ ಬಹಿರಂಗ ಶುದ್ಧಿ

೭. ಎಲ್ಲರೊಡನೆ ಸ್ನೇಹದಿಂದ ಇರುವುದು (ವೈರವಿಲ್ಲದೇ ಇರುವುದು)

೮. ಪ್ರಾಮಾಣಿಕ (ನೇರ) ನಡೆ

೯. ನಮ್ಮನ್ನು ಆಶ್ರಯಿಸಿದವರನ್ನು ಸಲಹುವುದು

ಅದೇ ರೀತಿ ಸಾಮಾನ್ಯ ಧರ್ಮದ ಅಂಶಗಳಾದ -

೧. ಅಹಿಂಸೆ

೨. ಸತ್ಯ ನಡತೆ

೩. ಆಸ್ಥೇಯ (ಇನ್ನೊಬ್ಬರ ಸ್ವತ್ತನ್ನು ಕಬಳಿಸದೇ ಇರುವುದು)

೪. ಶೌಚ (ಪರಿಶುದ್ಧತೆ)

೫. ಇಂದ್ರಿಯ ನಿಗ್ರಹ

ಇವುಗಳು ಸಹಾ ಎಲ್ಲ ವರ್ಣದವರಿಗೆ ಸಂಬಂಧಿಸಿದವುಗಳು.

ಶ್ರೀ ಮನುರವರು ಹೇಳಿದ ಮಾತೆಂದರೆ -

''ಧರ್ಮೋ ರಕ್ಷತಿ ರಕ್ಷಿತಃ''

ಅಂದರೆ ಧರ್ಮವನ್ನು ಯಾರು ರಕ್ಷಿಸುತ್ತಾರೋ ಅವರನ್ನು ಧರ್ಮ ರಕ್ಷಿಸುತ್ತದೆ. ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕಾದರೆ ಧರ್ಮವನ್ನು ರಕ್ಷಿಸುವುದು ನಮ್ಮೆಲ್ಲರ ಹೊಣೆಯಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ವ್ಯವಹಾರಧರ್ಮ ಹಾಗೂ ರಾಜಧರ್ಮಗಳು ಎನ್ನುವ ಪದಗಳು ಬಳಕೆಯಲ್ಲಿ ಬಂದವು.

ರಾಜಧರ್ಮವೆಂದರೆ -

ರಾಜರ ಅಧಿಕಾರ, ಕರ್ತವ್ಯ, ಮತ್ತು ಹೊಣೆಗಳನ್ನು ಒಳಗೊಂಡ ವಿಷಯಗಳ ನಿರೂಪಣೆ.

ನ್ಯಾಯಾಲಯಗಳ ಸ್ಥಾಪನೆಯು ಅವರ ಕರ್ತವ್ಯವಾಗಿತ್ತು. ಆದರೆ ರಾಜನಿಗೆ ಕಾನೂನುಗಳನ್ನು ರಚಿಸುವ ಅಧಿಕಾರವಿರಲಿಲ್ಲ. ಧರ್ಮಶಾಸ್ತ್ರಜ್ಞರು ರಚಿಸಿದ ಧರ್ಮಗಳನ್ವಯ ಅವುಗಳನ್ನು ಆಚರಣೆಯಲ್ಲಿ ತರುವುದು ಮಾತ್ರ ರಾಜರುಗಳ ಕರ್ತವ್ಯವಾಗಿತ್ತು.

ನ್ಯಾಯಾಲಯಗಳಲ್ಲಿ ಸಿವಿಲ್ ಹಕ್ಕುಗಳನ್ನು ಕಾರ್ಯಾಚರಣೆಯಲ್ಲಿ ತರುವುದು ಹಾಗೂ ಕ್ರಿಮಿನಲ್ ಅಪರಾಧಗಳಿಗೆ ಕರ್ತವ್ಯಚ್ಯುತಿಗೆ ಶಿಕ್ಷಿಸುವುದು ಆಗಿನ ರಾಜರುಗಳ ಹಾಗೂ ಇಂದಿನ ರಾಜ್ಯದ ಹೊಣೆಯಾಗಿರುತ್ತದೆ. ಅದನ್ನೇ ವ್ಯವಹಾರಧರ್ಮವೆಂದು ಕರೆದರು.

ಕಾನೂನು ಎಂದರೆ ರಾಜರುಗಳ ರಾಜ

ಕಾನೂನೇ ಎಲ್ಲರಿಗಿಂತಲೂ ಶ್ರೇಷ್ಠ

ರಾಜನ ಅಧಿಕಾರದ ಸಹಾಯದಿಂದ
ತಮ್ಮನ್ನು ತಾವು ರಕ್ಷಿಸಿಕೊಳ್ಳಲಾರದವರ
ಹಕ್ಕುಗಳನ್ನು
ಶಕ್ತಿಯುತರ ವಿರುದ್ಧ
ಚಲಾಯಿಸುವಂತೆ ಮಾಡುವ ಸಾಧನ.

ಧರ್ಮಶಾಸ್ತ್ರಗಳ ನಿಯಮಗಳನ್ವಯ ಹಾಗೂ ಒಂದು ವೇಳೆ ಅಂತಹ ನಿಯಮಗಳು ಇಲ್ಲದೇ ಇದ್ದರೆ ಸತ್‌ಸಂಪ್ರದಾಯ ಹಾಗೂ ಪದ್ಧತಿಯ ಪ್ರಕಾರ ನ್ಯಾಯದಾನವನ್ನು ಮಾಡುವುದು ರಾಜರುಗಳ ಕರ್ತವ್ಯವಾಗಿತ್ತು. ಒಟ್ಟಿನಲ್ಲಿ ಯಾವುದು ರಾಜ ಆಜ್ಞೆ, ಧರ್ಮ ಮತ್ತು ಸತ್ ಸಂಪ್ರದಾಯಗಳಿಗೆ ವಿರುದ್ಧವಾಗಿ ಇದ್ದರೆ - ಅದು ಕಾನೂನು ಪ್ರಕಾರ ಆದೇಶಿಸಿದ ಆಜ್ಞೆ ಎನಿಸಿಕೊಳ್ಳುತ್ತಾ ಇತ್ತು.

ಕಾಯ, ವಾಚ, ಮನಸ್ಸು ಶುದ್ಧವಿರದೇ ಮಾಡಿದ ತಪ್ಪುಗಳನ್ನು ೧೮ ವಿಷಯಗಳನ್ನಾಗಿ ಪ್ರಪ್ರಥಮವಾಗಿ ವಿಂಗಡಿಸಿದಾತ ಶ್ರೀ ಮನುರವರು. ಅವುಗಳೆಂದರೆ -

೧. ಋಣದಾನ - ಸಾಲ ಕೊಡುವುದು
೨. ನಿಕ್ಷೇಪ - ಹಣ ಠೇವಣಿ
೩. ಅಸ್ವಾಮ್ಯ ವಿಕ್ರಯ - ಮಾಲಿಕತ್ವವಿಲ್ಲದ ಮಾರಾಟ
೪. ಸಂಭೂಯ ಸಮುಥನ - ಸಾಮೂಹಿಕ ಸಹಭಾಗಿತ್ವ
೫. ದತ್ತಸ್ಯನಾಪಕರ್ಮ - ಭಕ್ಷೀಸನ್ನು ಮರಳಿ ಪಡೆಯುವುದು
೬. ವೇತನ ದಾನ - ಕೂಲಿ ಕೊಡದಿರುವುದು
೭. ಸಮ ವಿದ್ವತಿ ಕರ್ಮ - ಕರಾರನ್ನು ಮುರಿಯುವುದು, ಕರಾರಿನಂತೆ ನಡೆಯದೇ ಇರುವುದು
೮. ಕ್ರಯ ವಿಕ್ರಯ ನುಸ್ಯ - ಮಾರಾಟ ಮತ್ತು ಖರೀದಿ ರದ್ದುಪಡಿಸುವುದು
೯. ಸ್ವಃಪಿಲ ವಿವಾದ - ಮಾಲೀಕ ಮತ್ತು ಸೇವಕರ ವಿವಾದ
೧೦. ಸೀಮಾ ವಿವಾದ - ಭೂಮಿ ಮೇರೆಗಳ ವಿವಾದಗಳು
೧೧. ವಾಕ್ ಪರುಷ್ಯ - ಅಪಮಾನ, ಅವಮಾನ
೧೨. ದಂಡ ಪರುಷ್ಯ - ಹಲ್ಲೆ ಮಾಡುವುದು, ಗಾಯಗೊಳಿಸುವುದು
೧೩. ಸ್ಥೇಯ - ಕಳವು ಮಾಡುವುದು

೧೪. ಸಹಸ - ಹಿಂಸಾಪರಾಧ (ಕೊಲೆ, ಸುಲಿಗೆ)

೧೫. ಸ್ತ್ರೀ ಸಂಗ್ರಹಣ - ವ್ಯಭಿಚಾರ ಮತ್ತು ಅತ್ಯಾಚಾರ

೧೬. ಸ್ತ್ರೀ ಪುಮ್ ಧರ್ಮ - ಗಂಡ ಹೆಂಡತಿಯರ ಹಕ್ಕು ಮತ್ತು ಕರ್ತವ್ಯಗಳು


೧೭. ವಿಭಾಗ - ಪಾಲು ಪಾರಿಖತ್

೧೮. ಧುತ್ಯ ಸಂಪು ಅವ್ಯ - ಜೂಜಾಟ ಮತ್ತು ಅಂದರ್ ಬಾಹರ್ ಎಲೆಗಳ ಇಸ್ಪೀಟಿನ ಆಟ.

ಈ ಮೇಲಿನ ವಿಷಯಗಳಲ್ಲಿ ಆದ ಅನ್ಯಾಯವನ್ನು ಆಧರಿಸಿ ೧೧, ೧೨, ೧೪, ೧೫ ಇವುಗಳನ್ನು ಕ್ರಿಮಿನಲ್ ಅಪರಾಧಗಳು ಎಂದು ಮತ್ತು ಸಂಪತ್ತುಗಳನ್ನು ಆಧರಿಸಿ ಉಳಿದವುಗಳನ್ನು ಸಿವಿಲ್ ವ್ಯವಹಾರಗಳೆಂದು ಪ್ರಪ್ರಥಮವಾಗಿ ವಿಂಗಡಿಸಿದಾತ ಬೃಹಸ್ಪತಿಯವರು.

ಸಿವಿಲ್ ವ್ಯಾಜ್ಯಗಳಲ್ಲಿ ಹಣವನ್ನು ಪರಿಹಾರವಾಗಿ ಕೊಡಿಸುವುದು ಹಾಗೂ ಕ್ರಿಮಿನಲ್ ವ್ಯಾಜ್ಯಗಳಲ್ಲಿ ಅಪರಾಧಕ್ಕೆ ಶಿಕ್ಷಿಸುವ ಪದ್ಧತಿ - ಸಿವಿಲ್ ವ್ಯಾಜ್ಯಗಳಲ್ಲಿ ವ್ಯವಹಾರ ಕರಾರು, ಒಪ್ಪಂದಗಳು ಹಾಗೂ ಅಪಕೃತ್ಯಗಳು ವೈಯಕ್ತಿಕ ಕೃತ್ಯಗಳೆಂದು ಪರಿಹಾರವನ್ನು ಕೊಡಿಸುವ ಹಾಗೂ ಅಪರಾಧಗಳನ್ನು ಸಮಾಜಕ್ಕೆ ಒಪ್ಪಿದ ಕಾನೂನುಗಳಿಗೆ ವಿರುದ್ಧವಾದವುಗಳೆಂದು ತಿಳಿದು ಶಿಕ್ಷಿಸುವ ಪದ್ಧತಿ ಆಗಿನ ನಿಯಮಗಳಲ್ಲಿ ಇತ್ತು ಹಾಗೂ ಇಂದಿನ ಕಾನೂನುಗಳಲ್ಲಿಯೂ ಇದೆ.

ಆಚಾರ ವ್ಯವಹಾರಗಳಿಗೆ ಧರ್ಮಶಾಸ್ತ್ರಗಳೇ ಆಧಾರವಾಗಿದ್ದವು.



ಸಾತ್ವಿಕ, ರಾಜಸಿಕ, ತಾಮಸ ಗುಣಗಳಲ್ಲಿ ಒಂದಾದ ತಾಮಸ ಗುಣವೇ ಪಾತಕಗಳಿಗೆ ಕಾರಣವೆಂದು ಬಗೆದಿದ್ದರು. ಮನುಷ್ಯರು ಕೃತ್ಯವನ್ನೆಸಗುವಾಗ,

ವೆಸಗಿದಾಗ, ವೆಸಗಿದ ಮೇಲೆ ತನ್ನ ಅಂತಃಪ್ರಜ್ಞೆಯಲ್ಲಿ ತನಗೆ ನಾಚಿಕೆ ಭಾವ ಬಂದರೆ (ಪಾಪದ ಪ್ರಜ್ಞೆ) ಅಂತಹ ಕೃತ್ಯಗಳನ್ನು ಕಾನೂನು ತಾಮಸ ಗುಣದ ಪಾತಕಗಳು ಎಂದು ನಿರ್ಧರಿಸುತ್ತಿದ್ದರು. ಅಂತಹ ಪಾತಕಗಳ ಬಗ್ಗೆ ಯಾರ ದೂರನ್ನು ಇಲ್ಲದೆಯೂ ಸಹಾ ರಾಜರುಗಳು ಅವುಗಳ ಬಗ್ಗೆ ಸಂಜ್ಞೆಯವನ್ನು ತೆಗೆದುಕೊಳ್ಳುವ ಅಧಿಕಾರ ಹೊಂದಿದ್ದರು.

ಮೊಗಲರ ಆಳ್ವಿಕೆಯ ನಂತರ ಬ್ರಿಟಿಷರ ಆಳ್ವಿಕೆಯ ನಂತರ ಸ್ವತಂತ್ರ್ಯ ಭಾರತದಲ್ಲಿ ಅಂಗೀಕರಿಸಿದ ಸಂವಿಧಾನದ ಪೀಠಿಕೆಯಲ್ಲಿ -

ಭಾರತೀಯರು ಎಲ್ಲರೂ ನ್ಯಾಯದಾನ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಪ್ರತಿಯೊಬ್ಬ ಪ್ರಜೆಗಳಿಗೂ ಕಲಿಸುತ್ತೇವೆ ಅಥವಾ ಕೊಡಾ ಮಾಡುತ್ತೇವೆಂದು ವಚನವನ್ನು ತೆಗೆದುಕೊಂಡಿದ್ದೇನೋ ನಿಜ. ಆದರೆ ಆ ವಚನವನ್ನು ಪೂರೈಸಿದ್ದೇವೆಯೇ ? ಇದು ಈ ಪುಸ್ತಕದ ಚಿಂತನೆಯ ವಿಷಯ.

ಕಾನೂನು ಎಂದರೆ ನಿಂತ ನೀರು ಅಲ್ಲ ಎನ್ನುವ ಮಾತು ಏನೋ ನಿಜ. ನಮ್ಮ ದೇಶದ ಸಂಸ್ಕೃತಿ, ಪರಿಸ್ಥಿತಿಗಳಿಗೆ ಅನ್ವಯವಾಗುವಂತಹ ಕಾನೂನುಗಳನ್ನು ರಚಿಸಲು ನಾವು ಸ್ವತಂತ್ರವಾದ ಮೇಲೆ ಯಾವ ಅಡೆತಡೆಗಳು ಇಲ್ಲ. ಈ ಕಾರ್ಯದ ಬಗ್ಗೆ ಹೆಚ್ಚು ಗಮನ ಕೊಡುವುದು ಇಂದಿನ ಅಗತ್ಯ. ಅದನ್ನು ಬಿಟ್ಟು ನಮ್ಮ ಕಾನೂನುಗಳೆಲ್ಲವೂ ಇಂಗ್ಲಿಷ್ ದೇಶದ ಸಂಸ್ಕೃತಿಗೆ ಹೊಂದಿಕೊಳ್ಳುವ ಕಾನೂನುಗಳೆಂದು ದೂಷಿಸುವುದು ನಮ್ಮ ಸಂಸ್ಕೃತಿಯಾಗಿಬಿಟ್ಟಿದೆ. ಕನಿಷ್ಟ ಪಕ್ಷ ಇದ್ದ ಕಾನೂನುಗಳಿಗೆ - ತಿದ್ದುಪಡಿ ಯಾದರೂ ತರಬಹುದಲ್ಲವೆ. ಈ ಕೆಲಸ ಯಾಕೆ ನಡೆಯುತ್ತಿಲ್ಲವೋ ಆ ಭಗವಂತನೇ ಬಲ್ಲ.

ಇಂತಹ ಪವಿತ್ರ ಕಾರ್ಯವನ್ನು ಮಾಡುವುದಕ್ಕಿಂತ ಅಕ್ರಮ-ಸಕ್ರಮದಂತಹ ಕಾರ್ಯಗಳೇ ಎಲ್ಲೆಡೆ ನಡೆಯುತ್ತಿವೆ. ಇದರಿಂದಾಗಿ ಅಕ್ರಮ-ಸಕ್ರಮ ಸಂಸ್ಕೃತಿ ಇಂದು ಬರೀ ಭೂಮಿ ಕಟ್ಟಡಗಳಿಗೆ ನಿಲ್ಲದೇ - ಒಬ್ಬ ವ್ಯಕ್ತಿ ಒಬ್ಬ ಸ್ತ್ರೀಗೆ ಅತ್ಯಾಚಾರ ಮಾಡಿದ ಮೇಲೂ - ಅದು ಏನು ಅಪರಾಧ - ನಾನು ಅವಳನ್ನು ವಿವಾಹವಾದರೆ ತೀರಿತು - ಸಕ್ರಮವಾಗುವುದಿಲ್ಲವೇ ? ಎಂದು ಕೇಳುವಂತಹ ಸಂಸ್ಕೃತಿಯಾಗಿ ಪರಿಣಮಿಸುತ್ತಿದೆ.

ಅಕ್ರಮಗಳು ಜರುಗಿದ ನಂತರ ಕಣ್ಣೊರೆಸುವ ಕೆಲಸಗಳಿಗಿಂತಲೂ, ಅಕ್ರಮಗಳು ಆಗದ ರೀತಿ ತಡೆಯುವುದೇ ಸೂಕ್ತವಲ್ಲವೇ ? ಇಂತಹ ಸೂಕ್ಷ್ಮ ವಿಚಾರ ಗಳನ್ನು ಇಂದು ಶಾಸಕಾಂಗ ಮತ್ತು ಕಾರ್ಯಾಂಗಗಳು ಅರಿತುಕೊಳ್ಳಬೇಕಾಗಿದೆ.

★★★★

ಭಾರತದ ಸಂವಿಧಾನ - ಒಂದು ಚಿಂತನೆ

ಭಾರತದ ಸಂವಿಧಾನವನ್ನೆ ಒಂದು ಚಿಂತನೆಯ ವಿಷಯವನ್ನಾಗಿ ತೆಗೆದುಕೊಂಡರೆ -

''ಕಾನೂನಿನ ಅಜ್ಞಾನ ಅಕ್ಷಮ್ಯ''

- ಜಾನ್ ನೆಲೆಡಾನ್ (೧೬ನೇ ಶತಮಾನ)

ಗೊತ್ತಿರದೇ ಇದ್ದವರನ್ನು ಗೊತ್ತಿದ್ದವರಂತೆ ? ಕಾನೂನು ಏಕೆ ಬಗೆಯುತ್ತದೆಂದರೆ ಜೀವನ ಒಂದು ನಾಟಕರಂಗ. ನಾವುಗಳು ಎಲ್ಲ ಪಾತ್ರಧಾರಿಗಳು, ಕಾನೂನು ಗೊತ್ತಿಲ್ಲವೆಂದು ನಾಟಕ ಮಾಡುವವರಲ್ಲಿ ಪ್ರವೀಣರು - ಎನ್ನುವ ಕಾರಣದಿಂದ.

ಆದರೆ ವಿಪರ್ಯಾಸದ ಸಂಗತಿಯೆಂದರೆ -

''ಕಾನೂನಿನ ಅಜ್ಞಾನಕ್ಕೆ ಇದುವರೆಗೆ ಶಿಕ್ಷೆಯಾಗದೇ ಇರುವವರು ಎಂದರೆ - ವಕೀಲರು ಮಾತ್ರ !'' - ಡಬ್ಲ್ಯೂ. ಡಿ. ಗುಡ್‌ಮೆನ್

ಆ ಮಾತು ಬೇರೆ, (ಹಾಸ್ಯಕ್ಕಾಗಿ) ಇಂದು ಕಾನೂನಿನ ಪ್ರಜ್ಞೆ ಹೆಚ್ಚು ಆದಂತೆ - ಕೊಲೆಯ ಆರೋಪದ - ವ್ಯಾಜ್ಯವೊಂದರಲ್ಲಿ ಗಲ್ಲು ಶಿಕ್ಷೆಯಾಗಿದ್ದ ವ್ಯಕ್ತಿಯ ಕೊನೆಯ ಆಸೆ ಏನು ? ಎಂದು ಕೇಳಿದಾಗ ಅವನೆಂದನಂತೆ - ''ನನ್ನ ವ್ಯಾಜ್ಯ ನಡೆಸಿದ ವಕೀಲರನ್ನು ನನ್ನ ಜೊತೆ ಗಲ್ಲಿಗೇರಿಸಿ'' ಎಂದು.

ಕಾನೂನಿನ ಅಜ್ಞಾನಕ್ಕೆ ವಕೀಲರಿಗೆ ಹೇಗೆ ಶಿಕ್ಷೆಯಾಗಿಲ್ಲವೋ ಅದೇ ರೀತಿ ನಮ್ಮ ಭಾರತದ ಸಂವಿಧಾನದಲ್ಲಿ ೩೬ ರಿಂದ ೫೧ ವಿಧಿಗಳವರೆಗೆ ಉಲ್ಲೇಖಿಸಲ್ಪಟ್ಟ (Directive Principles of State Policy) ನಿರ್ದೇಶನತತ್ವಗಳನ್ನು ಉಲ್ಲಂಘಿಸಿದ್ದಕ್ಕೆ ಇದುವರೆಗೂ ಶಾಸಕರಿಗೂ ಶಿಕ್ಷೆಯಾಗಿಲ್ಲ!

ಆ ಮಾತು ಬೇರೆ, ''ಕಾನೂನಿನ ಉಸಿರನ್ನೇ ಕೊಂದುದಕ್ಕೆ ನಮಗಾರಿಗೂ ಶಿಕ್ಷೆಯಾಗಿಲ್ಲ!'' ಎಂದು ಗ್ರೋವ ಚಾರ್ಲಸ್ ಲ್ಯಾಂಡ್ ಹೇಳಿದ್ದಾರೆ.

ಇರಲಿ, ಅದು ನಮ್ಮ ಸುದೈವ.

ಮಾತೆತ್ತಿದರೆ ಮೂಲಭೂತ ಹಕ್ಕುಗಳು ಎಂದು ಹೇಳಿಕೊಳ್ಳುವ ನಾವುಗಳು ಪ್ರಪ್ರಥಮವಾಗಿ ಕಾನೂನು ಎಂದರೇನು ಎನ್ನುವುದನ್ನು ತಿಳಿದುಕೊಳ್ಳುವುದು

ಒಳ್ಳೆಯದು. ನಂತರ ಸಂವಿಧಾನ ಎನ್ನುವ ಕಾನೂನನ್ನು ಏನು ಎಂದು ತಿಳಿಯಲು ಪ್ರಯತ್ನಿಸೋಣ.

ಕಾನೂನು ಎಂದರೇನು ?

ಸ್ಕಾಟ್ ದೇಶದ ಒಂದು ಗಾದೆ -

''ನನಗೆ ಮನುಷ್ಯನನ್ನು ತೋರಿಸು ನಾನು ಕಾನೂನು ಎಂದರೇನು

ಎಂದು ಹೇಳುವೆ'' - ಎಂದಿದೆ.

ಹಾಗಾದರೆ ಮನುಷ್ಯನೇ ಕಾನೂನುಗಳೇ ? ಎನ್ನುವುದಕ್ಕೆ

ಲಾರ್ಡ್ ಕೋಕ್ (೧೬ನೇ ಶತಮಾನ) ಹೇಳುತ್ತಾರೆ -

''ಈ ವಿಶ್ವದಲ್ಲಿ ಕಾನೂನು ಎನ್ನುವ ಶಬ್ದವನ್ನು ಬಳಸಿದ ಪ್ರಪ್ರಥಮ ವ್ಯಕ್ತಿ - 'ಮೊಸೆಸ್' ಎಂದು ಹೇಳುತ್ತಾರೆ, ಆದರೆ ಅವನಿಗಿಂತಲೂ ಆದಿಯಲ್ಲಿ ಭಗವಂತ ಮಾನವರನ್ನು ಸೃಷ್ಟಿಸುವಾಗ ಅವರ ಹೃದಯದಲ್ಲಿ ತನ್ನ ಕೈ ಬೆರಳಿನ ರಕ್ತದಿಂದ ಬರೆದಿದ್ದೇ ನೈತಿಕ ಕಾನೂನು ಎಂದು ಹೇಳುತ್ತಾರೆ'' ಎಂದು ನುಡಿದಿದ್ದಾರೆ. ಆದರೆ - 'ಅವನು' ಎನ್ನುವಲ್ಲಿ 'ಅವಳ' ಪದ ಪ್ರಯೋಗವಾಗಿಲ್ಲ. ಕಾರಣ ಶೇಕಡ ೫೦% ಕೂಗು ಕೇಳಿಬರುತ್ತದೆ.

ಇರಲಿ, ಹೆರಾಲ್ಡ್ ಜೆ. ಲಾಸ್ಕಿ - ಅವರು ಹೇಳುತ್ತಾರೆ -

''ನ್ಯಾಯಸಮ್ಮತವಾದ ಕಾನೂನಿನ ಆಳವಾದ ಬೇರುಗಳು ಇರುವುದು

ಹಾಗೂ ಇರಲೇಬೇಕಾಗಿರುವುದು ಸದಾ ಮಾನವನ ಅಂತಃಪ್ರಜ್ಞೆಯಲ್ಲಿ''

ಸಾಮ್ಯುಯಲ್ ಡ್ಯಾನಿಯಲ್ - (ಇಂಗ್ಲಿಷ್ ಕವಿಯ) - ಕಾವ್ಯದ ಸಾಲುಗಳು ಹೀಗಿವೆ -

''ಕಲೆಗಿಂತ ಮೊದಲು ಪ್ರಕೃತಿ,

ಕಾನೂನಿಗಿಂತ ಮೊದಲು ಸಂಪ್ರದಾಯ''

ಉದಾಹರಣೆಗೆ ಸನಾತನ ಕಾಲದಿಂದ ನಡೆದುಕೊಂಡು ಬಂದ ಪದ್ಧತಿ ಒಬ್ಬರಿಗೊಬ್ಬರು ಕೈ ಮುಗಿಯುವುದು - ಇದು ಸಹಾ ಸತ್‌ಸಂಪ್ರದಾಯವಲ್ಲವೆ ? ಇಡಿ ಮಾನವ ಜನಾಂಗದ ಸ್ವಾತಂತ್ರ್ಯಕ್ಕೆ ನಿರ್ಬಂಧಗಳು ಎರಡು -

ಕಾರೆ ಚಂಪಾನ್ ಕ್ಯಾಟ್ ಹೇಳುವಂತೆ -

''ಒಂದು ಕಾನೂನಿನ ನಿರ್ಬಂಧವಾದರೆ,

ಇನ್ನೊಂದು ಸಂಪ್ರದಾಯದ ನಿರ್ಬಂಧ''

''ಛಲ ಬೇಕು ಶರಣನಿಗೆ, ಪರಸತಿ ಒಲ್ಲೆನೆಂಬ'' - ಎಂದು ನುಡಿದ ಬಸವಣ್ಣನವರ ವಚನದ ನುಡಿಗಳು ಸಹಾ, ಸತ್‌ಸಂಪ್ರದಾಯವಲ್ಲದೇ ಮತ್ತಿನ್ನೇನು? ಇಂತಹ ಉದಾತ್ತ ವಿಚಾರ ಎಲ್ಲಿಂದ ಹೊರಬಂತು ? ಎಂದರೆ, ಅದು ಮಾನವನ ಅಂತಃಪ್ರಜ್ಞೆಯಿಂದ ಎಂದು ಹೇಳಬಹುದು. ಆ ಕಾರಣಕ್ಕಾಗಿಯೇ ಆಳವಾದ ಬೇರುಗಳು ಬೇರೂರಿರುವುದು ಮಾನವನ ಅಂತಃಪ್ರಜ್ಞೆಯಲ್ಲಿ ಎಂದು ಹೇಳಿರುವುದು.

ಕಾನೂನು ಎಂದರೇನು ? ಎನ್ನುವುದಕ್ಕೆ ರಾಜ್ಯಶಾಸ್ತ್ರದ ಪಿತಾಮಹರಾದ ಅರಿಸ್ಟಾಟಲ್ ಅವರು ಹೀಗೆ ಅರ್ಥೈಸಿದ್ದಾರೆ-

''ಕಾನೂನು ಎಂದರೆ ದೇಶದ ಪ್ರಜೆಗಳು ಒಬ್ಬರಿಗೊಬ್ಬರು ನ್ಯಾಯದಾನವನ್ನು ಮಾಡುವೆವು ಎಂದು ತೆಗೆದುಕೊಂಡ ಪ್ರತಿಜ್ಞೆ'' ಎಂದು.

ಮಾನವನ ಪ್ರಜ್ಞೆಯಲ್ಲಿ ಏನೆಲ್ಲಾ ಅಡಗಿದೆ ಆ ಕಾರಣದಿಂದ ಮಾನವನಿಂದ ಪ್ರಪಂಚಕ್ಕೆ ಅಂದರೆ ದೇಶಕ್ಕೆ ಕೊಡ ಮಾಡಿದ ಪ್ರಪ್ರಥಮ ಕೊಡುಗೆಯೇ 'ಸಂವಿಧಾನ' ಎಂದು ಹೇಳಬಹುದು.

ಇದನ್ನು ನಾವು ಸಂವಿಧಾನದ ಪೀಠಿಕೆಯಲ್ಲಿ ಕಾಣಬಹುದು. ಸಂವಿಧಾನದ ಪೀಠಿಕೆಯ ಸಾಲುಗಳು ಹೀಗಿವೆ - (We the people of India solemnly resolved to)-''ಭಾರತೀಯರಾದ ನಾವು ಪ್ರತಿಜ್ಞಾಪೂರ್ವಕವಾಗಿ.................''

ದೇವರಿದ್ದಾನೆ ಎಂದು ಕಲ್ಪಿಸುವ ಆಸ್ತಿಕರು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ - ದೇವರಿಲ್ಲ ಎಂದು ಕಲ್ಪನೆಯಲ್ಲಿರುವ ನಾಸ್ತಿಕರು - ಬರೀ ಸತ್ಯ ಪ್ರತಿಜ್ಞೆಯನ್ನು ಮಾಡುವ, ಅವಕಾಶ, ಭಾರತದ ಪ್ರತಿಜ್ಞಾ ಕಾನೂನಿನಲ್ಲಿ ಕೊಡಮಾಡಲಾಗಿದೆ. ದೇವರಿದ್ದಾನೆ ಎಂದು ನಂಬಿರುವ ಆಸ್ತಿಕರಿಗೇನೆ ಕಾಣದ ದೇವರು, ದೇವರಿಲ್ಲ ಎಂದು ಪ್ರತಿಪಾದಿಸುವ ನಾಸ್ತಿಕರು - ದೇವರರಿರುವಲ್ಲಿಗೆ ಹೋಗಿ ನೋಡಿ ಬಂದಿದ್ದಾರೆಯೆ ? ಎಂದು ಕುವೆಂಪುರವರು ಬಹು ಮಾರ್ಮಿಕವಾಗಿ ಪ್ರಶ್ನಿಸುತ್ತಾರೆ.

ಇರಲಿ, ಆದರೆ ಇಂದು ನಮ್ಮ ಮುಂದಿರುವ ಪ್ರಶ್ನೆ - ಅಂದು ಸಂವಿಧಾನವನ್ನು ರಚಿಸಿದವರು ಸತ್ಯ ಪ್ರತಿಜ್ಞೆಯನ್ನು ಮಾಡಿರಬಹುದು - ನಾವು ಅಲ್ಲವಲ್ಲ ? ಎಂದು ಕೇಳುವವರ ಸಂಖ್ಯೆಗೆ ನಮ್ಮಲ್ಲಿ ಕೊರತೆಯಿಲ್ಲ.

ಹಾರಗಳನ್ನು ಬದಲಾಯಿಸಿಕೊಂಡು ವಿವಾಹವಾದರೆ ಅವರ ಜೀವನದಲ್ಲಿ ಎಲ್ಲಾ ಪ್ರತಿಜ್ಞೆಯನ್ನು ಮಾಡುವ ಪ್ರಮೇಯವೇ ಬಂದಿರಲಿಕ್ಕಿಲ್ಲ. ಕಾರಣ ನಾವು ಪ್ರಬುದ್ಧರಾದೊಡನೆ ಸಂವಿಧಾನದಲ್ಲಿ ಹೇಳಿರುವ ಪ್ರತಿಜ್ಞೆಯನ್ನು ಪುನರುಚ್ಚರಿಸುವ ಶಾಸನವೊಂದು ಜಾರಿಯಲ್ಲಿ ಬಂದರೆ ಒಳಿತೇನೋ ?

ಇರಲಿ, ನಾವು ಎಲ್ಲರಿಗೂ ನ್ಯಾಯದಾನವನ್ನು ಮಾಡುವೆವು ಅಂದರೆ

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ. ಅಷ್ಟು ಅಲ್ಲದೆ ಸ್ವಾತಂತ್ರ್ಯವನ್ನು, ಸಮಾನತೆಯನ್ನು ದೊರಕಿಸಿಕೊಡುವಲ್ಲಿ ಮತ್ತು ಭ್ರಾತೃತ್ವವನ್ನು ಬೆಳೆಸುವಲ್ಲಿ ನಾವು ಪ್ರಯತ್ನಶೀಲರಾಗುತ್ತೇವೆಂದು ಕೊಡಮಾಡಿದ ವಚನಕ್ಕೆ ನಾವು ಬದ್ಧರಾಗಿದ್ದೇವೆಯೇ ? ಈ ಬಗ್ಗೆ ಆತ್ಮಾವಲೋಕನವಾಗಬೇಕಾಗಿದೆ.

ಜಾನ್‌ಗ್ರೀನ್ ಲೀಫ್ ವಿಡ್ಡಿಯರ್ ಹೇಳಿರುವಂತೆ - ನ್ಯಾಯದಾನವೆಂದರೆ - ''ಕಷ್ಟದಲ್ಲಿ ಇದ್ದವರ ಆಶಾಕಿರಣ ತಪ್ಪು ಮಾಡಿದವರ ಭಯ'' ಎಂದು ಆಗುತ್ತದೆ.

ಎಷ್ಟರಮಟ್ಟಿಗೆ ನ್ಯಾಯದಾನವನ್ನು ಮಾಡುವ ನಿಟ್ಟಿನಲ್ಲಿ ಯಶಸ್ಸನ್ನು ಗಳಿಸಿದ್ದೇವೆ ಎನ್ನುವುದನ್ನು ಅವಲೋಕಿಸಿದ ಅಂಕೋಲೆಯ ಸಾಹಿತಿ (ಶ್ಯಾಮ ಹುದ್ದಾರ)ರವರ ತ್ರಿಪದಿಯ ಸಾಲುಗಳು ಈ ರೀತಿ ಇವೆ :

''ಹಾಡು ಹಗಲೇ ಕೊಲೆಯಾದದ್ದನ್ನು
ಏನಾಗಿದೆ ಎಂದು ಹಡ್ಡಿ ನೋಡಿದರೆ
ತಳದಲ್ಲಿ ನ್ಯಾಯವೇ ಸತ್ತಿತ್ತು.''

ಅವರ ಈ ಮುತ್ತಿನಂತಹ ಮಾತುಗಳು - 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂದು ಹೇಳಿರುವ ಬಸವಣ್ಣನವರ ವಚನದಂತಿಲ್ಲವೇ ? ಆದರೆ ನಮ್ಮ ದೇಶದ 'ನ್ಯಾಯ' ವ್ಯವಸ್ಥೆಗೆ ಸಂಬಂಧಪಟ್ಟವರೆಲ್ಲರೂ ಅವರ ಈ ಮುತ್ತಿನ ಹಾರವನ್ನು ಹಾಕಿಕೊಳ್ಳಲು ಇಚ್ಛಿಸದಿದ್ದರೂ ಆತ್ಮಾವಲೋಕನ ಮಾಡಿಕೊಂಡದ್ದೇ ಆದರೆ, ಅವರು ಈ ಶ್ರೇಷ್ಠನುಡಿಗಳನ್ನು ರಚಿಸಿರುವುದು ಸ್ವಾರ್ಥಕ.

ಬೆಂಜಾಮಿನ್ ಡಿಸ್ರೇಲಿಯವರು ಹೇಳುವಂತೆ - ನ್ಯಾಯದಾನವೆಂದರೆ,

''ಆಚರಣೆಯಲ್ಲಿ ಸತ್ಯ''

''ನುಡಿಯೊಳಾಡಿ ನಡೆಯದಿದ್ದರೆ'' ಎಂದು ಬಸವಣ್ಣನವರು ಹೇಳಿದುದು ಇದನ್ನೇ ಅಲ್ಲವೇ ? ಆದರೆ ಇಂದು ನಾವೆಷ್ಟು ಜನ ಸತ್ಯವನ್ನು ಆಡುತ್ತಿದ್ದೇವೆ - ಎನ್ನುವುದಕ್ಕೆ ಒಂದು ಚಿಕ್ಕ ಉದಾಹರಣೆ :

ಸಮಾಜಸೇವೆಯ ಬಗ್ಗೆಯೂ ಗಮನಿಸಿದ ಬೇರೊಬ್ಬ ಚುಟುಕು ಸಾಹಿತಿಯ ಕವನದ ಸಾಲುಗಳು ಹೀಗಿವೆ -

''ದಾರಿಯಲ್ಲಿ ಬಿದ್ದ ವೃದ್ಧನೋರ್ವನನ್ನು
ಎತ್ತಿ ಹಿಡಿಯದ ಯುವಕ
ಕಾಲೇಜು ಹುಡುಗಿಯ ಕೈಯಿಂದ
ಜಾರಿ ಕೆಳಗೆ ಬಿದ್ದ ಪುಸ್ತಕವನ್ನು ಎತ್ತಿ ಅವಳ ಕೈಗಿತ್ತು
ಹೇಳಿದ, ನಾನೊಬ್ಬ ಸಮಾಜಸೇವಕ'' ಎಂದು.

ಇರಲಿ, ಬೇಕಾನ್ ಹೇಳಿದ್ದೇನೆಂದರೆ, ''ಸಂವಿಧಾನ ಚಿಕ್ಕದಾಗಿರಬೇಕು ಮತ್ತು ತಿಳಿಯುವಂತೆ ಇರಬಾರದು'' ಎಂದು. ನಮ್ಮ ಸಂವಿಧಾನ ಎಷ್ಟು ಚಿಕ್ಕದು ಇದೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯ - ೩೯೫ ವಿಧಿಗಳು ಹಾಗೂ ೯೨ ತಿದ್ದುಪಡಿಗಳು - ಇಷ್ಟು ಚಿಕ್ಕ ಸಂವಿಧಾನ ನಮ್ಮದು !

ಆ ಮಾತು ಬೇರೆ. ಬೇಕಾನ್ ಹೇಳಿದ ತತ್ತ್ವವಾದ ಚಿಕ್ಕದಿರಬೇಕು ಎನ್ನುವುದನ್ನು ಪಾಲಿಸದೇ ಇದ್ದರೂ, ತಿಳಿಯುವಂತೆ ಇರಬಾರದು ಎನ್ನುವ ತತ್ವವನ್ನು ಮಾತ್ರ ಖಂಡಿತ ಪಾಲಿಸಿದ್ದೇವೆ.

ವುಡ್ರೋವಿಲ್ಸನ್ ಹೇಳುತ್ತಾರೆ, ಸಂವಿಧಾನವೆಂದರೆ ''ವಕೀಲರ ದಸ್ತಾವೇಜು ಅಲ್ಲ ಯುಗದ ಇಂಗಿತ'' ಅಂದರೆ ಯುಗ ಯುಗಾಂತರಗಳ ಇಡೀ ಜನಾಂಗದ ಅನುಭವದ ಸಾರವೇ ಅದು ಎಂದಾಗುತ್ತದೆ. ಆ ಕಾರಣಕ್ಕಾಗಿ ಥಾಮಸ್ ಜೆಫರ್‌ಸನ್ ಹೇಳುತ್ತಾರೆ ''ಯಾವ ಸಮಾಜಕ್ಕೂ ಶಾಶ್ವತ ಸಂವಿಧಾನವನ್ನಾಗಲಿ ಅಥವಾ ಕಾನೂನನ್ನಾಗಲಿ ರಚಿಸಲಾಗುವುದಿಲ್ಲ. ಕಾರಣವೇನೆಂದರೆ ಈ ಪೃಥ್ವಿ ಯಾವಾಗಲೂ ಒಂದು ಜೀವಂತ ತಲೆಮಾರಿಗೆ ಸೇರಿರುತ್ತದೆ. ಹಾಗಾದರೆ ಪ್ರತಿಯೊಂದು ಸಂವಿಧಾನ ಮತ್ತು ಶಾಸನಗಳು ಸಹಜವಾಗಿ ಪ್ರತಿ ೧೯ ವರ್ಷಗಳಿಗೊಮ್ಮೆ ಅಂತ್ಯಗೊಳ್ಳುತ್ತವೆ.''

ನಮ್ಮ ಭಾರತೀಯರ ಹವಾಮಾನ ಮತ್ತು ಸಂಸ್ಕೃತಿಗೆ ಅನುಗುಣವಾಗಿ ಒಂದು 'ತಲೆಮಾರು' ಎಂದರೆ ೩೦ ವರ್ಷವೆಂದು ನಿಘಂಟುಕಾರರು ಅರ್ಥೈಸಿದ್ದಾರೆ.

ಆ ಮಾತು ಬೇರೆ. ಸಂಖ್ಯೆ ೩೦ರಲ್ಲಿ ಸ್ವಲ್ಪ ಮಾರ್ಪಾಡು ಆಗಬೇಕಾಗಿದೆ. ಮುಂದಿನ ಸೊನ್ನೆಯನ್ನು ತೆಗೆದು ೩ ರ ಹಿಂದೆ ೧ನ್ನು ಸೇರಿಸಬೇಕಾಗುತ್ತದೆ. ಅಂದರೆ ಒಂದು ಶತಮಾನ ಆಗುವುದಕ್ಕೆ ಆಗಿನ ೩.೧/೩ ಬದಲು ಈಗಿನ ೭+ ತಲೆಮಾರುಗಳು ಆಗುತ್ತವೆ.

ಇರಲಿ, ಈ ಹಿನ್ನೆಲೆಯಲ್ಲಿ ಅಲೆಗ್ಸಾಂಡರ್ ಹ್ಯಾಮಿಲ್ಟನ್ ಒಂದು ಮಹತ್ವದ ಮಾತನ್ನು ಹೇಳಿದ್ದಾರೆ. ಅದು ಏನೆಂದರೆ - 'ಸಂವಿಧಾನ ಸರ್ವ ಸಾಧಾರಣದ ನಿಯಮಗಳನ್ನು ಮಾತ್ರ ಹೊಂದಿರಬೇಕು. ಕಾರಣವೇನೆಂದರೆ - ಅವು ಶಾಶ್ವತ ವಾಗಿರಬೇಕಾಗುತ್ತದೆ. ಕಾರಣ ಸಂವಿಧಾನ ರಚಿಸುವವರು ಮುಂಬರುವ ದಿನಗಳಲ್ಲಿ ಆಗುವ ಎಲ್ಲ ಬದಲಾವಣೆಗಳ ಲೆಕ್ಕಾಚಾರವನ್ನು ಮಾಡಲಾಗುವುದಿಲ್ಲ'' ಎಂದು.

ಇದನ್ನೆ ''ಜೀವನವು ಒಂದು ಪ್ರಯೋಗವಿದ್ದಂತೆ, ಅದೇ ರೀತಿ ಸಂವಿಧಾನವು ಒಂದು ಪ್ರಯೋಗ'' ಎಂದು ಅಲಿವಾರ್ ವೆಂಡಲ್ ಹೋಮ್ಸ್ ಹೇಳುತ್ತಾರೆ.

ಉದಾ : ಸರ್ವೇ ಸಾಧಾರಣ ಎಲ್ಲ ಧಾರವಾಹಿಗಳಲ್ಲಿ ಇಂದು ನಾವು ನೋಡುತ್ತಿರುವುದು ಒಬ್ಬ ಗಂಡಸಿಗೆ ಇಬ್ಬರು ಪತ್ನಿಯರು. ಅಷ್ಟೇ ಅಲ್ಲ, ಎರಡನೆಯ

ಹೆಂಡತಿಗೂ ಜೀವನಾಂಶದ ಹಕ್ಕುಂಟು ಎಂದು ನಿರ್ಣಯಿಸಿದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಇತ್ತೀಚೆಗೆ ಪತ್ರಿಕೆಗಳಲ್ಲಿ ನಾವೆಲ್ಲಾ ಓದಿರಲಿಕ್ಕೆ ಸಾಕು.

''ಸಂವಿಧಾನದ ಉದ್ದೇಶವೆಂದರೆ ದೈನಂದಿನ ಜೀವನದಲ್ಲಿ ಕಾರ್ಯರೂಪಕ್ಕೆ ತರಬಹುದಾದಂತಹ ಮಹತ್ವದ ಹಕ್ಕುಗಳ ರಕ್ಷಣೆ'' ಯೆಂದು ಹೋಮ್ಸ್ ಹೇಳಿದ್ದಾರೆ.

ಅಮೇರಿಕಾ ದೇಶದ ಸಂವಿಧಾನದ ಬಗ್ಗೆ ಮುಂದುವರೆದು ಅವರು ಹೇಳುವುದು ಏನೆಂದರೆ ''ಸಂವಿಧಾನದ ವಿಧಿ ನಿಯಮಗಳು - ಜೈವಿಕ ಜೀವಂತ ಸಂಸ್ಥೆಗಳು ಹಾಗೂ ಇಂಗ್ಲಿಷ್ ಮಣ್ಣಿನಿಂದ ಸ್ಥಳಾಂತರಿಸಿ ನಾಟಿ ಮಾಡಿದ ಸಸಿಗಳು. ಅಷ್ಟೇ ಅಲ್ಲ ಅವುಗಳ ಮಹತ್ವ ಬರೀ ಸಂಪ್ರದಾಯಿಕವಾಗಿರದೇ ಚೇತನಾತ್ಮಕವು ಆಗಿವೆ'' ಎಂದು.

ಚಾರ್ಲೀಸ್ ಎ ಅಂಡ್ ಮ್ಯಾರಿ ಬರ್ಡ್ ಹೇಳಿರುವುದೇನೆಂದರೆ ''ಸಂವಿಧಾನ ವೆಂದರೆ ಸಹಸ್ರ ಸಹಸ್ರ ವರುಷಗಳ ಬರೀ ಇತಿಹಾಸದ ಕತೆಯಲ್ಲ, ಅನುಭವದ ಮೇಲೆ ನಿಂತಿರುವ ಯುಗದ ಇಂಗಿತ'' ಎಂದು.

ಅದನ್ನೇ ಲೂಯಿಸ್ ಡಿ ಬ್ರಾಂಡಿಸ್ ಅವರ ಮಾತುಗಳಲ್ಲಿ ಹೇಳುವುದಾದರೆ ''ಸಂವಿಧಾನ ನಿಜಾಧಾರಗಳ ಬಗ್ಗೆ ವ್ಯವಹರಿಸುತ್ತದೆಯೇ ಹೊರತು ಬರೀ ನೆರಳಿನ ಬಗ್ಗೆ ಅಲ್ಲ.''

ಗಿಡ	ನೆರಳು
ಶಾಶ್ವತ	ಶಾಶ್ವತವಲ್ಲ

ಅಂದರೆ ಶಾಶ್ವತ ತಪ್ಪುಗಳ ಬಗ್ಗೆ ಚಿಂತನೆ - ಶಾಶ್ವತವಲ್ಲದವುಗಳ ಬಗ್ಗೆ ಚಿಂತನೆಯಲ್ಲ.

ಜಾನ್ ಎಂ. ಕಾರೆಲಾನ್ ಮತ್ತೊಂದು ಮಹತ್ವದ ಮಾತನ್ನು ಹೇಳುತ್ತಾರೆ - ''ನಮ್ಮ ಸಂವಿಧಾನವೆಂದರೆ ಬಣ್ಣಗುರುಡು (ವರ್ಣ ಅಂಧತೆ) ವರ್ಣ ನಿಷ್ಪಕ್ಷಪಾತ ವಾದುದು (Colour blinded). ಜಾತಿ ವರ್ಗಗಳು ಇಲ್ಲದ ಮತ್ತು ಅವುಗಳ ಬಗ್ಗೆ ಗೊತ್ತಿರದ ಮತ್ತು ಅವುಗಳನ್ನು ಸಹಿಸದೇ ಇರುವ ಒಂದು ಪವಿತ್ರ ದಾಖಲೆ'' ಎಂದ ಅವರ ಈ ಮಾತುಗಳಿಗೆ ಸರಿದೂಗುವ ಹನಿಗವನ ಒಂದನ್ನು ಸಾಹಿತಿ ಶ್ರೀ ಜರಗನಹಳ್ಳಿ ಶಿವಶಂಕರರವರು ರಚಿಸಿದ್ದಾರೆ. ಅದೇನೆಂದರೆ -

''ಕುಂಬಾರರು ಮಾಡಿದ ಹಣತೆಗೆ
ಗಾಣಿಗರು ಎಣ್ಣೆಯ ತುಂಬಿ
ಒಕ್ಕಲಿಗರು ಬೆಳೆದ ಹತ್ತಿಯ ಹೊಸೆದು
ಬತ್ತಿಯ ಮಾಡಿ ದೀಪವ ಹಚ್ಚಿದರೆ

ಹಲವು ಜಾತಿಗಳು ಕೂಡಿ ಕುಲಗೆಟ್ಟ

ಬೆಳಕನ್ನು ನೋಡ."

ಇಂತಹ ಬೆಳಕು ನಮ್ಮ ಸಂವಿಧಾನದಲ್ಲಿ ಇಲ್ಲದೇ ಇರುವುದು ವಿಷಾದನೀಯ ಸಂಗತಿ.

ಇಂತಹ ಸೂಕ್ಷ್ಮಾತ್ರಿ-ಸೂಕ್ಷ್ಮತೆಗಳು - ಶಾಸನಗಳನ್ನು ರಚಿಸುವ ನಮ್ಮ ಶಾಸಕರಿಗೆ ಅರ್ಥವಾಗಬೇಕು.

ಈಗಾಗಲೇ ಹೇಳಿದ ರೀತಿ ಅಮೇರಿಕಾದ ಸಂವಿಧಾನ ಇಂಗ್ಲಿಷ್ ಮಣ್ಣಿನಿಂದ ಸ್ಥಳಾಂತರಿಸಿ ನಾಟಿ ಮಾಡಿರುವ ಸಸಿಯಾದರೆ ಭಾರತೀಯರಾದ ನಾವು ಅಮೇರಿಕೆಯ ಮಣ್ಣಿನಿಂದ ಸ್ಥಳಾಂತರಿಸಿ ನಮ್ಮ ಸಂವಿಧಾನದಲ್ಲಿ ನಾಟಿ ಮಾಡಲು ಪ್ರಯತ್ನಿಸಿದ ಸಸಿಯೊಂದು ಇದೆ, ಅದೇನೆಂದರೆ - (Due process of Law) (ಕಾನೂನಿನಡಿಯಲ್ಲಿ ಜನರ ಕಲ್ಯಾಣಕ್ಕೆ ಏನು ಸಲ್ಲಬೇಕೋ ಅದು). ಈ ತತ್ವವನ್ನು ಅಲ್ಪಸ್ವಲ್ಪ ಬದಲಾವಣೆಯಿಂದ ನಾಟಿ ಮಾಡಿದ ಸಸಿ ಎಂದು ಹೇಳಿಕೊಳ್ಳುವ - (Procedure established by law) (ಕಾನೂನಿನಡಿಯಲ್ಲಿ ಸ್ಥಾಪಿಸಲ್ಪಟ್ಟ ಪ್ರಕ್ರಿಯೆ ಕಾರ್ಯ). ಏಕೆಂದರೆ ಮೊದಲನೆಯ ತತ್ವದ ಅರ್ಥವಿಷ್ಟೇ - ಯಾವ ಒಬ್ಬ ವ್ಯಕ್ತಿಯ ಪ್ರಾಣ, ಸ್ವತಂತ್ರ ಮತ್ತು ಸ್ವತ್ತುಗಳನ್ನು ಅವರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳುವ ಅವಕಾಶ ಕೊಡದೇ ಅವರಿಂದ ಅವುಗಳನ್ನು ಕಿತ್ತುಕೊಳ್ಳುವಂತೆ ಇಲ್ಲ, ಅಥವಾ ಅವುಗಳಿಂದ ಅವರು ವಂಚಿತರಾಗುವ ಅಂತಹ ಅವಕಾಶವನ್ನು ಕೊಡಲೇಬೇಕಾಗುತ್ತದೆ.


ಸ್ವಾತಂತ್ರ್ಯವೆಂದರೆ - ''ಕಾನೂನು ಕೊಡಮಾಡಿರುವಷ್ಟು ಮಾತ್ರವೇ ಉಪಯೋಗಿಸುವ ಅಧಿಕಾರ'' ಎನ್ನುವುದು ಅರ್ಥಮಾಡಿಕೊಳ್ಳಬೇಕಾದ ಸಂಗತಿ. ಇರಲಿ, ಆದರೆ ನಮ್ಮ ದೇಶದಲ್ಲಿ ಪ್ರಾಣ, ಸ್ವಾತಂತ್ರ್ಯ ಮತ್ತು ಸ್ವತ್ತನ್ನು ಸಹಾ ಕಾನೂನಿನ ಪ್ರಕ್ರಿಯೆ ಅಡಿಯಲ್ಲಿ ಕೊಡಮಾಡಿರದಿದ್ದರೆ ಅವರ ಅಹವಾಲುಗಳನ್ನು ಕೇಳದೆಯೇ ಅವುಗಳನ್ನು ಅವರಿಂದ ಕಿತ್ತುಕೊಳ್ಳಬಹುದು.

ಅಥವಾ ಅಂತಹ ಪ್ರಕ್ರಿಯೆಯಲ್ಲಿ ಕೊಡಮಾಡಿದಮಟ್ಟಿಗೆ ಮಾತ್ರ ಅಹವಾಲನ್ನು ಹೇಳಿಕೊಳ್ಳುವ ಸ್ವಾತಂತ್ರ್ಯ ಮಾತ್ರ ಪ್ರಜೆಗಳು ಪಡೆದಿರುತ್ತಾರೆ. ಅದಕ್ಕಿಂತಲೂ ಜಾಸ್ತಿಯ ಅಹವಾಲನ್ನು ಕೇಳುವಂತಿಲ್ಲ.

ನಾವು ಶಾಸನಗಳನ್ನು ಮಾಡಿದರೆ ಮಾತ್ರ ದೇಶಕ್ಕೆ ಶಾಸನಗಳು ಎಂದು ತಿಳಿದಿರುವ ಶಾಸಕರು, ಅವರು ಕಾನೂನುಗಳನ್ನು ಮಾಡಿದರೆ ಏನು ಆಯಿತು ? ಅವುಗಳನ್ನು ಆಚರಣೆಯಲ್ಲಿ ತರುವವರು ನಾವು ಅಲ್ಲವೇ ? ಎಂದು ತಿಳಿದಿರುವ ಕಾರ್ಯಾಂಗ, ಇದ್ದ ಕಾನೂನುಗಳನ್ನು ಅವುಗಳು ಅಸ್ತಿತ್ವದಲ್ಲಿ ಇಲ್ಲವೇ ಇಲ್ಲ ಎನ್ನುವಂತೆ

ನಡೆದುಕೊಳ್ಳುತ್ತಾ ಶ್ರೀಮಂತರಾಗಲು ಪ್ರಯತ್ನಿಸುತ್ತಿರುವ ಸರಕಾರದ ಅಧಿಕಾರಿಗಳನ್ನು, ನೋಡಿದರೂ ನೋಡದಂತೆಯೇ ನಟಿಸುವ ಶಾಸಕರು, ಯಾವ ಕಾರಣಕ್ಕಾಗಿ ಅವರುಗಳು ಹಾಗೆಯೇ ನಟನೆ ಮಾಡುತ್ತಾರೆ ಎಂದು ಒಬ್ಬ ನ್ಯಾಯಾಧೀಶನಾಗಿ ನಾನು ಹೇಳಬೇಕಾಗಿಲ್ಲ. ಇಂತಹವರ ಮಧ್ಯೆ ''We want Justice'' (ನಮಗೆ ನ್ಯಾಯ ಬೇಕು) ಎನ್ನುವ ತಮ್ಮ ಕೂಗಿಗೆ ಎಷ್ಟು ಬೆಲೆ ? ಒಂದು ಕ್ಷಣ ಯೋಚಿಸಿ.

ನ್ಯಾಯ ಬೇಕು ಎನ್ನುವವರ ಕೂಗಿಗೆ ಸ್ಪಂದಿಸಿ ನ್ಯಾಯಾಂಗ ಒಂದು ಸರಿಯಾದ ನಿರ್ಣಯವನ್ನಿತ್ತರೆ ಅದನ್ನು ನಿರರ್ಥಕಗೊಳಿಸುವ ಪ್ರಯತ್ನ ಶಾಸಕಾಂಗದಿಂದ ನಡೆಯುತ್ತಿರುವುದು ಸಹಾ ದುರ್ದೈವದ ಸಂಗತಿ.



ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಇವುಗಳಲ್ಲಿ ಯಾರೂ ಮೇಲು ಅಲ್ಲ ಯಾರೂ ಕೀಳು ಅಲ್ಲ. ಎಲ್ಲರೂ ಸರಿ ಸಮಾನ, ಎನ್ನುವ ಭಾವನೆ ಮೂಡುವವರೆಗೆ ದೇಶಕ್ಕೆ ಒಳಿತನ್ನು ಆಶಿಸುವುದು ಕಷ್ಟಕರ.

ತಮ್ಮ ಮೂಲಭೂತ ಹಕ್ಕುಗಳಿಗೆ ಧಕ್ಕೆಯುಂಟಾದಾಗ ಸಂವಿಧಾನದ ತತ್ವಗಳಿಗೆ ಅನುಗುಣವಾಗಿ ಒಂದು ವೇಳೆ ನ್ಯಾಯಾಲಯ ತಮ್ಮ ಅರ್ಜಿಗಳನ್ನು ಪುರಸ್ಕರಿಸಿ ತಮ್ಮ ಹಕ್ಕುಗಳನ್ನು ಎತ್ತಿ ಹಿಡಿದಿದ್ದೇ ಆದರೆ, ಅದಕ್ಕೆ ''Judicial activism'' (ನ್ಯಾಯಾಂಗ ಕ್ರಿಯಾಶೀಲತೆ) ಎಂದು ಹೆಸರಿಡುವುದು ಸರ್ವೇ ಸಾಮಾನ್ಯ.

ಆ ಮಾತು ಬೇರೆ. ಲ್ಯಾಟಿನ್ ದೇಶದ ನುಡಿಗಟ್ಟಿನ ಸಾಲು ಒಂದು, ಹೀಗಿದೆ - ''ನ್ಯಾಯಾಧೀಶರು ನ್ಯಾಯ ಆಡಳಿತವನ್ನು ನಿರ್ವಹಿಸಬೇಕೇ ವಿನಃ ಕಾನೂನುಗಳನ್ನು ರಚಿಸಬಾರದು.'' ಆದರೆ, ಯಾವುದು ಕಾನೂನು ಯಾವುದು ಅದರ ಸರಿಯಾದ ಅರ್ಥೈಸುವಿಕೆ ಎನ್ನುವ ತಿಳುವಳಿಕೆ ''Judicial activism'' (ನ್ಯಾಯಾಂಗ ಕ್ರಿಯಾಶೀಲತೆ) ಎಂದು ಹೇಳುವ, ಇಂದಿನ ಬುದ್ಧಿಜೀವಿಗಳಿಗೆ ಬೇಕು.

ಉದಾ : ಜೀವಿಸುವುದು ಎಂದರೆ ''ಗೌರವಯುತವಾಗಿ ಜೀವಿಸುವುದು'' ಪ್ರಾಣಿಗಳಂತೆ ಬದುಕುವುದು ಅಲ್ಲ'' ಎಂದು ಪ್ರಪ್ರಥಮವಾಗಿ ಅರ್ಥೈಸಿದ ಕೀರ್ತಿ

ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲುತ್ತದೆ. ಈ ಕಾರಣಕ್ಕಾಗಿಯೇ ಎಫ್. ಡಿ. ಜೆ. ರಿಬ್ಗೆ ಅವರು ಹೇಳುವುದು ಏನೆಂದರೆ ''ನ್ಯಾಯಾಧೀಶರು ಎಂದರೆ ನ್ಯಾಯದೇವತೆಯ ಗುಡಿಯಲ್ಲಿರುವ ಜಾಣಾಕ್ಷತೆಯುಳ್ಳ ಅರ್ಚಕರು'' ಎಂದು. ಶಾಸಕಾಂಗ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿ ಸೂಕ್ತ ಶಾಸನಗಳನ್ನು ಮಾಡಿದ್ದೇ ಆದರೆ ನ್ಯಾಯಾಂಗಕ್ಕೆ ಭಾರ ಕಡಿಮೆಯಾಗಬಹುದು, ಇದು ನನ್ನ ಭಾವನೆ.

ಇದ್ದ ಕಾನೂನನ್ನು ಕಾರ್ಯಾಚರಣೆಗೆ ತರುವ ಪೋಲೀಸರು ತಾವುಗಳು ನಮಗೆ ನ್ಯಾಯ ಬೇಕು ಎಂದೊಡನೆ ಯಾವ ಕಾರಣಕ್ಕಾಗಿ ಎಂದು ಹೇಳದೇ ತಮ್ಮನ್ನು ದಸ್ತಗಿರಿ ಮಾಡಿ ೩-೩ ದಿನಗಳವರೆಗೆ ಅಧಿಕೃತವಾಗಿ ಠಾಣೆಗಳಲ್ಲಿ ತಮ್ಮನ್ನು ಇರಿಸಿಕೊಂಡು ನ್ಯಾಯಾಲಯಗಳ ಮುಂದೆ ತರುವಾಗ ತಮ್ಮನ್ನು ಕೇವಲ ೨೪ ಗಂಟೆಗಳ ಒಳಗಡೆ ದಸ್ತಗಿರಿಯನ್ನು ತೋರಿಸುತ್ತಾರೆ ಎನ್ನುವ ದೂರು ಎಲ್ಲ ಕಡೆಯೂ ಕೇಳಿ ಬರುತ್ತಿದೆ. ಇದು ಯಾಕೆ ಹೀಗೆ ? ಎಂದು ಯೋಚಿಸಿದರೆ (Procedure established by law !) ಹಾಗಾದರೆ ನ್ಯಾಯದ ಹೆಸರಿನಲ್ಲಿ ಅನ್ಯಾಯಗಳನ್ನೆಸಗುವುದೇ ಕಾನೂನೇ? ಇಂತಹ ಮೂಲಭೂತ ಪ್ರಶ್ನೆಗಳು ಎದುರು ಆದಾಗ - ಫ್ರಾಂಕ್ ಪರ್ಟರ್ ಹೇಳುತ್ತಾರೆ - ''ಯಾವುದಾದರೊಂದು ವಿಷಯ ಸಂವಿಧಾನಾತ್ಮಕವಾಗಿದೆಯೋ ಇಲ್ಲವೋ ಎನ್ನುವ ಪ್ರಶ್ನೆಯನ್ನು ನಿರ್ಣಯಿಸಬೇಕಾದದ್ದು - ಸಂವಿಧಾನದ ಒರೆಗಲ್ಲಿನಲ್ಲಿ ಪರೀಕ್ಷಿಸಿಯೇ ಹೊರತು ನಾವು ನೀವುಗಳು ಆ ಬಗ್ಗೆ ಏನನ್ನೂ ಹೇಳಬಯಸುತ್ತೇವೆಯೋ ಅದು ಅಲ್ಲ'' ಎನ್ನುತ್ತಾರೆ.

ಹೆಚ್. ಎಲ್. ಬ್ಲಾಕ್ ಹೇಳುವುದೇನೆಂದರೆ ''ಸಂವಿಧಾನಾತ್ಮಕವೆಂದರೇನು ?'' ಎಂದರೆ -

ಸಾಮಾನ್ಯ ಮನುಷ್ಯನ ಅಭಿಪ್ರಾಯವಲ್ಲ ; ಅವನಿಗೆ ಇಷ್ಟವಾದರೆ ಸಂವಿಧಾನಾತ್ಮಕ -

ಅವನಿಗೆ ಇಷ್ಟವಾಗದಿದ್ರೆ ಅಸಂವಿಧಾನಾತ್ಮಕ ಎಂದು ಹೇಳುತ್ತಾನೆ. ಆದರೆ ಸಂವಿಧಾನಾತ್ಮಕ ಎಂದರೇನು ಎನ್ನುವ ಪ್ರಶ್ನೆಗೆ ಅವರು ಹೇಳುವುದು ಏನೆಂದರೆ - ''ವಿವೇಕವುಳ್ಳ ವ್ಯಕ್ತಿಯ ಅಭಿಪ್ರಾಯವಾಗಿರಬೇಕು'' ಎಂದು ಹೇಳುತ್ತಾರೆ.

ವಿವೇಕವುಳ್ಳ ವ್ಯಕ್ತಿ ಯಾರು ? ಎಂದರೆ

೧. ಪ್ರತಿಭಾವಂತನಲ್ಲದ

೨. ಹುಟ್ಟು ದಡ್ಡನಲ್ಲದ

೩. ದುರಾಭಿಮಾನವುಳ್ಳವನಲ್ಲದ

೪. ಆತ್ಮಾಭಿಮಾನದ ಹುಚ್ಚುಗೀಳು ಹಿಡಿದವನು ಅಲ್ಲದ

3

೫. ನಡೆದಾಡುವ ಜ್ಞಾನಕೋಶವಲ್ಲದ

೬. ಅನಕ್ಷರಸ್ಥನಲ್ಲದ

೭. ಸರಿಯಾದ (ಮುಕ್ತ) ನ್ಯಾಯಯುತ ಮನಸ್ಸುಳ್ಳವನು

೮. ಅಸ್ಪಷ್ಟ (ವಿಕಾರ) ಭಾವನೆಯಿಂದ ಕೂಡಿರದ ಮನಸ್ಸುಳ್ಳವನಲ್ಲದ

೯. ಸಂದೇಹಪಡುವ ಅಥವಾ ಸಂಶಯ ಸ್ವಭಾವದ ಅಥವಾ ಶಂಕೆಗೆ ಆಸ್ಪದವನ್ನು ಕೊಡುವ ಮನಸ್ಸುಳ್ಳವನಲ್ಲದ -

ಮನಸ್ಥಿತಿಗೆ ವಿವೇಕಶಾಲಿಯಾದ ಮನಸ್ಸು ಮತ್ತು ಅಂತಹ ಮನಸ್ಥಿತಿಯನ್ನು ಹೊಂದಿದ್ದವನಿಗೆ ವಿವೇಕಶಾಲಿ ಮನುಷ್ಯನೆನ್ನುತ್ತಾನೆ. ಅಂತಹ ಮನುಷ್ಯ ಯಾರು ಎಂದರೆ ನ್ಯಾಯಾಧೀಶರು.

ಕಾರಣ ಈ ಹಿನ್ನೆಲೆಯಲ್ಲಿ ಚಾರ್ಲಿನ್ ಇ ಹಗ್ಸ್ ಅವರು ಹೇಳುತ್ತಾರೆ - ''ನಾವೆಲ್ಲರೂ ಸಂವಿಧಾನದ ಅಡಿಯಲ್ಲಿ ಇದ್ದೇವೆ ಆದರೆ ನಮ್ಮ ಸಂವಿಧಾನ ವೆಂದರೇನು ಎಂದರೆ ನ್ಯಾಯಾಧೀಶರು ಆ ಬಗ್ಗೆ ಏನನ್ನು ಹೇಳುತ್ತಾರೋ ಅದು'' ಎಂದು. ಕಾರಣ ತಮ್ಮಲ್ಲಿ (Fundamental Rights) ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ, ಯಾವುದೇ ಕಾನೂನಿನ ಪ್ರಶ್ನೆಗಳು ಉದ್ಭವಿಸಿದಾಗ ಅಥವಾ ಬಂದಾಗ - ನಮ್ಮಲ್ಲಿಗೆ ಬನ್ನಿ, ನಮ್ಮ ನ್ಯಾಯಾಲಯಗಳ ಬಾಗಿಲುಗಳು ತಮಗೇ ಸದಾ...........? ಮುಚ್ಚಿರುತ್ತವೆ.

ಕಾರಣವೇನೆಂದರೆ ನಮ್ಮ ನ್ಯಾಯಾಲಯಗಳು ಶ್ರೇಷ್ಠ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಗಳು ಏನನ್ನೂ ಹೇಳುತ್ತಾರೋ - ಅವರು ಚೆಲ್ಲಿದ ಬೆಳಕಿನಡಿಯಲ್ಲಿ ವಾಸ್ತವಾಂಶದ ಸತ್ಯಾಸತ್ಯತೆಯನ್ನು ವಿಚಾರಣೆ ಮಾಡುವ ನ್ಯಾಯಾಲಯಗಳು ಮಾತ್ರ (Courts of Facts).

ಆದರೆ ಶ್ರೇಷ್ಠ ನ್ಯಾಯಾಲಯವಾಗಲೀ ಅಥವಾ ಸರ್ವೋಚ್ಚ ನ್ಯಾಯಾಲಯ ವಾಗಲೀ (Courts of Law) ಸಂವಿಧಾನಾತ್ಮಕ ನ್ಯಾಯಾಲಯಗಳು ಅಂದರೆ ಯಾವುದಾದರೂ ಒಂದು ಪ್ರಶ್ನೆಯನ್ನು ಕಾನೂನಿನ ಪ್ರಕಾರ ನ್ಯಾಯ ಸಮ್ಮತ ವಾಗಿದೆಯೋ ಇಲ್ಲವೋ ಎನ್ನುವುದನ್ನು ನಿರ್ಣಯಿಸುವ ಹಕ್ಕು ಅವರುಗಳಿಗೆ ಅಷ್ಟೇ ಸೀಮಿತವಾಗಿರುತ್ತದೆ.

ತಾವು ೨೨೬ನೇ ವಿಧಿಯ ಪ್ರಕಾರ ಶ್ರೇಷ್ಠ ನ್ಯಾಯಾಲಯಕ್ಕೆ ಮತ್ತು ೩೨ ವಿಧಿಯ ಪ್ರಕಾರ ಸರ್ವೋಚ್ಚ ನ್ಯಾಯಾಲಯಕ್ಕೆ ಅಂತಹ ವಿಷಯಗಳ ಬಗ್ಗೆ ಅರ್ಜಿಗಳನ್ನು ಸಲ್ಲಿಸಿ ತಮ್ಮ ಮೂಲಭೂತ ಹಕ್ಕುಗಳಿಗಾಗಿ ಅವರೆಡೂ ನ್ಯಾಯಾಲಯಗಳ ಬಾಗಿಲುಗಳನ್ನು ತಾವು ತಟ್ಟಬಹುದು - ಅವು ತಮಗೆ ಸದಾ ತೆರೆದಿರುತ್ತವೆ. ಅಷ್ಟೇ ಅಲ್ಲ ''ಮರಕ್ಕೆ ಬಾಯಿ

ಬೇರೆಂದು ನೀರು ಎರೆದರೆ ಮೇಲೆ ಪಲ್ಲವಿಸಿತು ನೋಡಾ'' ಎನ್ನುವ ಶರಣರ ನುಡಿಯಂತೆ ಈ ಪ್ರಪಂಚದಲ್ಲಿ ಯಾರಿಗಾದರೂ ತಮ್ಮ ತಮ್ಮ ಹಕ್ಕುಗಳನ್ನು ತಾವೆ ರಕ್ಷಿಸಿಕೊಳ್ಳಲು ಆಗುವುದಿಲ್ಲವೋ - ಅಂತಹವರ ಪರವಾಗಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗಳನ್ನು ತಾವು ಸಲ್ಲಿಸಿ - ಅವರುಗಳ ಕಣ್ಣೀರು ಒರೆಸುವ ಸತ್ಕಾರ್ಯ ತಮ್ಮಿಂದ ಆದಾಗ ಮಾತ್ರ ರಾಮರಾಜ್ಯದ ಕನಸು ನನಸಾಗಬಹುದು ಎಂದು ಹೇಳಬಹುದು.

ಇಲ್ಲಿ ಸ್ವಾಮಿ ವಿವೇಕಾನಂದರ ವಾಣಿಯೊಂದನ್ನು ನೆನೆಯಲಿಚ್ಛಿಸುವೆ. ಅದೇನೆಂದರೆ -

''ಸ್ವರ್ಗ ಎಂಬುದಿದೆಯೋ, ನರಕ ಎಂಬುದಿದೆಯೋ
ಅದನ್ನು ಕಟ್ಟಿಕೊಂಡು ನಮಗೆ ಆಗಬೇಕಾದುದೇನು ?
ಶಾಶ್ವತವಾದ ಒಂದು ವಸ್ತು ಇದೆಯೋ ಇಲ್ಲವೋ ಅದರ
ಚರ್ಚೆಯಿಂದ ಪ್ರಯೋಜನವೇನು ? ನಮ್ಮ ಕಣ್ಣೆದುರಿಗೆ
ಒಂದು ಪ್ರಪಂಚವಿದೆ, ಅದು ಅತ್ಯಂತ ದುಃಖಮಯವಾಗಿದೆ.
ಬುದ್ಧನಂತೆ, ಅದರಲ್ಲಿ ಪ್ರವೇಶಿಸಿ, ಅದರ ದುಃಖವನ್ನು
ಕಡಿಮೆ ಮಾಡಲು ಪ್ರಯತ್ನಪಡಿ, ಇಲ್ಲವಾದರೆ ಅಂಥ
ಪ್ರಯತ್ನದಲ್ಲಿ ನಿಮ್ಮ ಪ್ರಾಣವನ್ನೇ ಬಿಡಿ.''

ಇತ್ತೀಚಿನ ದಿನಗಳಲ್ಲಿ

'ಬೇಕೇ ಬೇಕು ನ್ಯಾಯ ಬೇಕು' (We want justice) ಇದು ಇಂದು ಎಲ್ಲೆಡೆ ಕೇಳಿ ಬರುತ್ತಿರುವ ಕೂಗು.

ಹಾಗಾದರೆ ನ್ಯಾಯದಾನ ಸಮರ್ಪಕವಾಗಿ ಜನಸಾಮಾನ್ಯರಿಗೆ ಸಿಗುತ್ತಿಲ್ಲವೆ ?

ಈ ವಿಷಯ ಚಿಂತನೆಗೆ ಎಡೆ ಮಾಡಿಕೊಡುತ್ತದೆ.

ನ್ಯಾಯದಾನದ ನಿರ್ವಹಣೆ ಸರಿಯಾಗಿ ಆಗುತ್ತಿದೆ ಅಥವಾ ಇಲ್ಲ ಎಂದು ನಿರ್ಣಯಕ್ಕೆ ಬರುವ ಮೊದಲು ಈ 'ನ್ಯಾಯದಾನವೆಂದರೇನು ?' ಎಂದು ತಿಳಿಯುವುದು ಮುಖ್ಯ.

ಅನ್ಯಾಯವನ್ನು ನಿವಾರಿಸಿ ನ್ಯಾಯವನ್ನು ಸ್ಥಾಪಿಸುವುದೇ ಕಾನೂನಿನ ಉದ್ದೇಶವಾದ್ದರಿಂದ ನ್ಯಾಯದಾನವೆಂದರೇನು ಎಂದು ತಿಳಿಯಲು, ಕಾನೂನಿನ ಬಗ್ಗೆಯೂ ತಿಳಿಯುವುದು ಸಹಾ ಅಷ್ಟೇ ಪ್ರಾಮುಖ್ಯವಾಗುತ್ತದೆ.

ನಮ್ಮ ದೇಶದ ಸಂವಿಧಾನದಡಿ ನಮ್ಮಿಂದ ಚುನಾಯಿತ ಪ್ರತಿನಿಧಿಗಳು

ಶಾಸನಗಳನ್ನು ರಚಿಸುತ್ತಾರೆ. ಕಾರ್ಯಾಂಗದವರು ಅವುಗಳನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಾರೆ. ಜಾರಿಯಲ್ಲಿ ಇದ್ದ ಕಾನೂನಿನಡಿಯಲ್ಲಿ ಪ್ರಜೆಗಳಿಗೆ ನ್ಯಾಯ ದೊರಕಿಸಿಕೊಳ್ಳಲಾರದೇ ಅನ್ಯಾಯಕ್ಕೆ ಒಳಗಾಗುವ ಸಂದರ್ಭಗಳಲ್ಲಿ ಅವರಿಗೆ ನ್ಯಾಯವನ್ನು ಒದಗಿಸುವ ಪವಿತ್ರ ಹೊಣೆ ನಮ್ಮ ದೇಶದ ನ್ಯಾಯಾಂಗದ ಮೇಲೆ ಹೊರಿಸಿದೆ. ಹಾಗೂ ಆ ದಿಶೆಯಲ್ಲಿ ಅವರುಗಳು ಪ್ರಾಮಾಣಿಕವಾಗಿ ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಾರೆಂದು ಸಮಸ್ತ ಪ್ರಜೆಗಳು ನಂಬಿದ್ದಾರೆ. ಕಾರಣ ಅವರ ನಂಬಿಕೆಗೆ ದ್ರೋಹವನ್ನು ಎಂದೂ ಎಸಗಬಾರದು ಎನ್ನುವ ಪ್ರಜ್ಞೆ ಪ್ರತಿಯೊಬ್ಬ ಅಧಿಕಾರಿಗಳ ಅಂತರಾತ್ಮದಲ್ಲಿ ಇರುವುದು ಇಂದಿನ ಅವಶ್ಯಕತೆ ಎಂದು ಎಲ್ಲರೂ ಚಿಂತಿಸುತ್ತಿದ್ದಾರೆ. ಒಂದು ವೇಳೆ ನಂಬಿಕೆಗೆ ದ್ರೋಹ ಬಗೆದದ್ದೆ ಆದರೆ ಹೆತ್ತ ತಾಯಿ ಮಗುವಿಗೆ ಅಮೃತವನ್ನು ಉಣಿಸುವ ಬದಲು ನಂಜನ್ನು ಉಣಿಸಿದಂತೆ ಆಗುವುದು. ಕಾರಣವೇನೆಂದರೆ ಅವರ ಆಶೋತ್ತರಗಳ ಎತ್ತರಕ್ಕೆ ಕೆಲಸಗಳನ್ನು ನಿರ್ವಹಿಸಬೇಕಾದರೆ ಪ್ರಪ್ರಥಮವಾಗಿ -

ಕಾನೂನು ಸಾಕ್ಷ್ಯ ಮತ್ತು ನ್ಯಾಯದಾನ ಇವುಗಳನ್ನು ಸರಿಯಾಗಿ ಅರ್ಥೈಸಿ ಕೊಳ್ಳುವುದು ಅತ್ಯವಶ್ಯ. ಆಗ ಅವುಗಳ ಕಾರ್ಯವೈಖರಿ ಹಾಗೂ ವೈಶಾಲ್ಯತೆಯ ಅರಿವಾಗುತ್ತದೆ. ಈ ದೇಶದ ಸಾರ್ವಭೌಮಾಧಿಕಾರವು ಸಂವಿಧಾನದ ಅಡಿಯಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂಬ ಮೂರು ಅಂಗಗಳಲ್ಲಿ ಹಂಚಿಕೊಂಡಿದೆ. ಈ ಮೂರು ಅಂಗಗಳು ಸಂವಿಧಾನಾನುಸಾರ ತಮ್ಮ ಕಾರ್ಯವನ್ನು ಸಮಂಜಸವಾಗಿ ಮತ್ತು ಸಾಮರಸ್ಯತೆಯಿಂದ ನಿರ್ವಹಿಸಿದರೆ ನಮ್ಮ ಗಣರಾಜ್ಯವು ಹೆಚ್ಚು ಬಲಶಾಲಿಯಾಗಿ, ಸಮರ್ಥಶಾಲಿಯಾಗಿ ಮತ್ತು ಪ್ರಯೋಜನಕಾರಿಯಾಗಿ ಇರಬಲ್ಲದು.

ಬಹಳಷ್ಟು ಕಾನೂನುಪದವೀಧರರು ಸಹ ಶಾಸನಸಭೆಯ ಮತ್ತು ಕಾರ್ಯಾಂಗದ ಸದಸ್ಯರಾಗಬಹುದು. ಆದ್ದರಿಂದ ಈ ದೇಶದ ಉನ್ನತಿ ಮತ್ತು ಅಭಿವೃದ್ಧಿಯು ದೇಶದ ಮಹತ್ವದ ಸ್ಥಾನವನ್ನು ಅಲಂಕರಿಸುವ ಕಾನೂನು ವಿದ್ಯಾರ್ಥಿಗಳು ಪಡೆಯುವ ಗುಣಾತ್ಮಕ ಶಿಕ್ಷಣವನ್ನು ಅವಲಂಬಿಸುತ್ತದೆ. ಹಲವಾರು ಶ್ರೇಷ್ಠ ವಕೀಲರು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಹಿಸಿರುವ ಪಾತ್ರವನ್ನು ಕೂಡ ನಾವು ಕೃತಜ್ಞತಾಪೂರ್ವಕವಾಗಿ ನೆನಪಿಸಿಕೊಳ್ಳಬೇಕಾಗಿದೆ. ಆದರೆ ಆ ನೆನಪುಗಳು ಕೇವಲ ನಮ್ಮ ಗತಕಾಲದ ಇತಿಹಾಸವಾಗಿ ಉಳಿಯಬಾರದು. ಆ ಇತಿಹಾಸದ ನೆನಪಿನಿಂದ ನಮ್ಮ ಈಗಿನ ಪೀಳಿಗೆಯ ವಕೀಲರು ಪ್ರೇರಣೆ ಪಡೆದುಕೊಂಡು ದೇಶದ ಭವ್ಯ ಇತಿಹಾಸ ನಿರ್ಮಾಣ ಮಾಡಬೇಕು.

ರಾಜಕೀಯ ಸ್ವಾತಂತ್ರ್ಯ ಪಡೆದ ನಂತರ ಕಳೆದ ೫ ೧/೨ ದಶಕಗಳಲ್ಲಿ ದೇಶವು

ರಾಜಕೀಯ ಸೇರಿದಂತೆ ವ್ಯವಸಾಯ, ಕೈಗಾರಿಕೆ, ಶಿಕ್ಷಣ, ಆರೋಗ್ಯ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಇತರೆ ರಂಗಗಳಲ್ಲಿ ಪ್ರಗತಿ ಸಾಧಿಸಿದೆ ಎಂಬುದು ನಿರ್ವಿವಾದದ ಅಂಶವಾಗಿದೆ. ಇಷ್ಟಾದರೂ ಕೂಡ, ದೇಶವು ನಾವು ನಿರೀಕ್ಷಿಸದಂತಹ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ನನ್ನ ದೃಷ್ಟಿಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳು, ಸಂಘ ಸಂಸ್ಥೆಗಳು, ಧಾರ್ಮಿಕ ನಾಯಕರು, ಯುವಕರು ಸೇರಿದಂತೆ ಸಂಪೂರ್ಣ ದೇಶವೇ ತಕ್ಷಣ ಗಮನ ನೀಡುವಂತಹ ಯಾವುದೇ ವಿಷಯವು ಇರುವುದಿಲ್ಲ. ಇದಕ್ಕೆ ಕಾರಣ ದೇಶವು ಸ್ವಾತಂತ್ರ್ಯ ಪಡೆದು ೫೫ ವರ್ಷ ಕಳೆದರೂ ಕೂಡ ಮುಖ್ಯವಾಗಿ ಎರಡು ಅಂಶಗಳಿಂದ ದುರ್ಬಲವಾಗಿದೆ. ಅವುಗಳೆಂದರೆ :

೧. ಅನೈಕ್ಯತೆ ೨. ಅನೈತಿಕತೆ.

ಸಂವಿಧಾನದ ಮುಖ್ಯ ಉದ್ದೇಶಗಳು :

೨೬ನೇ ಜನವರಿ ೧೯೫೦ ರಂದು ಜಾರಿಗೆ ಬಂದ ಸಂವಿಧಾನದ ಮುಖ್ಯ ಉದ್ದೇಶಗಳನ್ನು ಪ್ರಸ್ತಾವನೆಯಲ್ಲಿ ಬಹಳ ಸುಂದರವಾಗಿ ಸಮೀಕರಿಸಲಾಗಿದೆ. ಅದರ ಉದ್ದೇಶ ಭಾರತದ ಜನಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ, ಅಭಿವ್ಯಕ್ತಿ ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪನ್ಯಾಸ ಸ್ವಾತಂತ್ರ್ಯ ಮತ್ತು ಎಲ್ಲಾ ಜನರಿಗೂ ಸಮಾನ ಸ್ಥಾನಮಾನ ಮತ್ತು ಸಮಾನ ಅವಕಾಶ ದೊರೆಯುವಂತೆ ಮಾಡಲು ವ್ಯಕ್ತಿಗೌರವವನ್ನು (ರಾಷ್ಟ್ರದ ಏಕತೆ ಮತ್ತು ಅಖಂಡತೆಯನ್ನು) ಖಾತ್ರಿ ಮಾಡಲು ಅವರಲ್ಲಿ ಭ್ರಾತೃತ್ವ ಭಾವನೆಯನ್ನು ವಾದಗೊಳಿಸುವುದಕ್ಕಾಗಿ ಶ್ರದ್ಧಾಪೂರ್ವಕವಾಗಿ ದೃಢ ಸಂಕಲ್ಪ ಮಾಡುತ್ತೇವೆ.

ಸಂವಿಧಾನದ ಒಕ್ಕಣಿಕೆ ಮತ್ತು ಸಾರವಾಗಿರುವ ಈ ಪ್ರಸ್ತಾವನೆಯನ್ನು ಸಂಪೂರ್ಣ ಸಂವಿಧಾನದ ಕರಡು ಪ್ರತಿಯನ್ನು ತಯಾರಿಸಿ ಅದನ್ನು ಅಂಗೀಕರಿಸಿದ ನಂತರ ಕಟ್ಟಕಡೆಯದಾಗಿ ಸಂಯೋಜಿಸಲಾಯಿತು. ಸಂವಿಧಾನ ಶಿಲ್ಪಿ ಎಂದು ಹೆಸರಾದ ಹಾಗೂ ಕರಡು ಸಮಿತಿಯ ಅಧ್ಯಕ್ಷರಾದ ಡಾ। ಬಿ. ಆರ್. ಅಂಬೇಡ್ಕರ್‌ರವರು ನಾವೆಲ್ಲರೂ ಭಾರತಾಂಬೆಯ ಮಕ್ಕಳು ಎಂಬ ಸಂದೇಶವನ್ನು ಸಾರುವ, ದೇಶದ ಎಲ್ಲ ಜನರಲ್ಲಿ ಪರಸ್ಪರ ಪ್ರೀತಿ ಮತ್ತು ಮಮತೆಯನ್ನು ಬೆಳೆಸುವ ಮತ್ತು ಏಕತೆಯ ಭಾವನೆಯನ್ನು ಜಾಗೃತಗೊಳಿಸುವ ''ಭ್ರಾತೃತ್ವ'' ಎಂಬ ಪದದ ಬಗ್ಗೆ ಬಹಳಷ್ಟು ಒತ್ತು ನೀಡಿದರು.

ಪ್ರಸ್ತುತ ದೇಶದ ಪರಿಸ್ಥಿತಿ :

ಸಂವಿಧಾನ ಜಾರಿಗೆ ಬಂದು ೩.೦ ವರ್ಷ ಕಳೆದ ನಂತರ ನಮಗೆಲ್ಲರಿಗೂ ಇರುವುದು ಒಂದೇ ಒಂದು ದೇಶ ಮತ್ತು ಒಂದೇ ಪೌರತ್ವ ಎಂಬುದನ್ನು ಮರೆತು ವೃತ್ತಿಶಿಕ್ಷಣ ಪ್ರವೇಶದ ಸಂದರ್ಭದಲ್ಲಿ ಪ್ರತಿಯೊಂದು ರಾಜ್ಯಗಳು ವಾಸಸ್ಥಾನದ : ಜನ್ಮಸ್ಥಾನದ ಆಧಾರಗಳ ಮೇಲೆ ಜಗಳ ಆರಂಭಿಸಿದ್ದಾರೆ.

ಪ್ರದೀಪ್ ಜೈನ್ ವಿರುದ್ಧ ಕೇಂ.ಸಂ. (ಐ.ಐ.ಆರ್. ೧೯೮೪ ಸ.ನ್ಯಾ. ೧೪೨೦ ಪ್ಯಾರಾ -೧) ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ಆ ಸಂದರ್ಭದಲ್ಲಿ ದೇಶದಲ್ಲಿ ಇದ್ದಂತಹ ಪರಿಸ್ಥಿತಿಯನ್ನು ಕೆಳಕಂಡಂತೆ ಅವಲೋಕಿಸಿದೆ :

ಇಂದು ದೇಶದ ಸಮಗ್ರತೆಯು ಪ್ರಾದೇಶಿಕತೆ, ಭಾಷಾಭಿಮಾನ ಹಾಗೂ ಕೋಮುವಾದದಿಂದ ಅಪಾಯಕ್ಕೊಳಗಾಗಿದೆ ಹಾಗೂ ಭಾಷಾಭಿಮಾನ ಮತ್ತು ಕೋಮುವಾದ ಹಿತಾಸಕ್ತಿಗಳು ರಾಷ್ಟ್ರೀಯ ಜೀವನದ ಮೇಲೆ ಪ್ರಭಾವ ಬೀರುತ್ತಿದ್ದು ದೇಶದ ಸಮಗ್ರತೆಯಲ್ಲಿ ಒಡಕು ತಂದಿದ್ದು ಕಣ್ಣೀರು ಇಡುವಂತಾಗಿದೆ. ಭಾರತ ದೇಶ ಒಂದು, ನಾವೆಲ್ಲರೂ ಒಂದು, ಭಾರತ ದೇಶವೇ ಮೊದಲು, ಭಾರತ ದೇಶವೇ ಕೊನೆ ಎಂಬುದನ್ನು ನಾವಿಂದು ಮರೆಯುತ್ತಿದ್ದೇವೆ. ಪ್ರಾದೇಶಿಕತೆ, ಭಾಷಾಭಿಮಾನ ಹಾಗೂ ಕೋಮುವಾದದ ವಿಚಾರಗಳು ಸೇರಿದಂತೆ ಬೇರೆಲ್ಲಾ ವಿಚಾರಗಳು ಅನಿವಾರ್ಯವಾಗಿ ಹಾಗೂ ನಿರಂತರವಾಗಿ ದೇಶದ ಹಿತದೃಷ್ಟಿಯ ನಂತರದ ಅಂಶಗಳೆಂದು ನಾವು ಮನಗಾಣಬೇಕಾಗಿದೆ.

ಆ ಸಮಯದಲ್ಲಿ ಎಂತಹ ಕಠಿಣ ಪರಿಸ್ಥಿತಿಯನ್ನು ಎದುರಿಸಲಾಯಿತು ಎಂಬುದನ್ನು ತುಂಬಾ ಮಾರ್ಮಿಕವಾದ ಮತ್ತು ಬಲಯುಕ್ತವಾದ ಭಾಷೆಯಲ್ಲಿ ವರ್ಣಿಸಲಾಗಿದೆ.

ಆ ದಿನದ ನಂತರ ಮತ್ತೆ ೨೨ ವರ್ಷ ಕಳೆಯಿತು. ಆದರೆ ಸುಧಾರಣೆಯ ಯಾವುದೇ ಕುರುಹುಗಳು ಕಾಣುತ್ತಿಲ್ಲ. ಬದಲಾಗಿ ನೀರು ಹಂಚಿಕೆ ಅಥವಾ ಸರ್ಕಾರಿ ಹುದ್ದೆಗಳ ನೇಮಕಾತಿ ಅಥವಾ ಇನ್ನಾವುದೇ ಲಾಭಕ್ಕಾಗಿ ಆಂತರಿಕ ಜಗಳವಾಡುತ್ತಾ ಪರಿಸ್ಥಿತಿಯು ಹದಗೆಟ್ಟಿದೆ. ಇತ್ತೀಚಿನ ದಿನಗಳಲ್ಲಿ ಬಿಹಾರದ ಜನರಿಂದ ಅಸ್ಸಾಮೀಯರ ಮೇಲೆ ನಡೆದ ಆಕ್ರಮಣ ಹಾಗೂ ಅಸ್ಸಾಮೀಯರಿಂದ ಬಿಹಾರದ ಜನರ ಕೊಲೆಯು ನಮ್ಮ ಬಹಳಷ್ಟು ಸಹೋದರರ ಸಾವಿಗೆ ಕಾರಣವಾಗಿದೆ ಎಂಬುದನ್ನು ಹಾಗೂ ಭ್ರಾತೃತ್ವ ಭಾವನೆಯು ಕಡಿಮೆಯಾಗುತ್ತಿರುವುದನ್ನು ತೋರಿಸುತ್ತದೆ. ಕೇವಲ ಸರ್ಕಾರದ ಮೂರನೇ ಹಾಗೂ ನಾಲ್ಕನೇ ದರ್ಜೆಯ ನೇಮಕಾತಿಗಾಗಿ ಹಾಗೂ ಇನ್ನಿತರ ಸಣ್ಣ ಕಾರಣಗಳಿಗಾಗಿ ಸಂವಿಧಾನದ ೧೬ನೇ ಪರಿಚ್ಛೇದದಲ್ಲಿ ಎಲ್ಲರಿಗೂ ಸಮಾನಾಂತರ

ಉದ್ಯೋಗ ಹಕ್ಕು ಇದೆ ಎಂಬುದನ್ನು ಮತ್ತು ರಾಜ್ಯ ಸರ್ಕಾರದ ನೇಮಕಾತಿಗಳಿಗೆ ನಡೆಯುವ ಆಯ್ಕೆಯು ನೀತಿ ನಿಯಮಗಳಿಗನುಸಾರವಾಗಿ ನಡೆಯುತ್ತದೆ ವಿನಃ ವಾಸಸ್ಥಾನ ಅಥವಾ ಜಾತಿಯ ಆಧಾರದ ಮೇಲೆ ಅಲ್ಲ ಎಂಬುದನ್ನು ನಾವಿಂದು ಮರೆಯುತ್ತಿದ್ದೇವೆ.

ನಮ್ಮ ದೇಶದಲ್ಲಿ ನಮಗಿರುವುದು ಒಂದೇ ಭೂಮಿ. ಅದನ್ನು 'ಭಾರತ ಮಾತೆ' ಎಂದು ಕರೆಯುತ್ತೇವೆ ಎಂಬುದನ್ನು ಮರೆತು ದೇಶದ ಕೆಲವೊಂದು ಭಾಗಗಳಲ್ಲಿ ''ಮಣ್ಣಿನ ಮಕ್ಕಳು'' ಎಂಬ ವಾದವು ಕೇಳಿ ಬರುತ್ತಿದೆ. ಭಾರತಮಾತೆಯನ್ನು ವಿದೇಶಿಯರ ಬಂಧನದ ಕಪಿಮುಷ್ಟಿಯಿಂದ ಸ್ವತಂತ್ರಗೊಳಿಸುವುದಕ್ಕೋಸ್ಕರ ನಾವೆಲ್ಲರೂ ಒಟ್ಟಾಗಿ ಹೋರಾಡಿದೆವು ಹಾಗೂ ''ಭಾರತ ಮಾತಾ ಕೀ ಜೈ'' ಮತ್ತು ''ವಂದೇ ಮಾತರಂ'' ಎಂಬ ಎರಡು ಪ್ರಬಲ ಘೋಷಣೆಗಳು ಈ ದೇಶದ ಎಲ್ಲಾ ಜನರನ್ನೂ ಒಟ್ಟಾಗಿ ಬೆಸೆಯಿತು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇಶದ ಎಲ್ಲ ಜನರನ್ನು ಪ್ರೀತಿಯಿಂದ ಒಂದುಗೂಡಿಸಿದ ಈ ಎರಡು ಘೋಷಣೆಗಳು ಕಳೆಗುಂದಿರುವುದು ಅನಿರೀಕ್ಷಿತ ವಾಗಿದೆ. ಇದು ದೇಶ ಎದುರಿಸುತ್ತಿರುವ ಒಂದು ಭಾರಿ ತೊಂದರೆ ಹಾಗೂ ಅತ್ಯಂತ ವಿಚಾರಪೂರ್ಣ ವಿಚಾರವಾಗಿದೆ. ದೇಶದ ಸರ್ವತೋಮುಖ ಅಭಿವೃದ್ಧಿಯನ್ನು ಬಯಸುವ ಎಲ್ಲ ಸಮಾನ ಮನಸ್ಕ ವ್ಯಕ್ತಿಗಳು ಹಾಗೂ ದೇಶಭಕ್ತರು ಒಂದಾಗಿ ಇಂತಹ ದುರ್ಭಾವನೆಯನ್ನು ನಾಶಪಡಿಸಬೇಕು ಹಾಗೂ ಸದೃಢವಾದ ಮತ್ತು ಭಾವೈಕ್ಯ ರಾಷ್ಟ್ರವನ್ನು ಮರುಸ್ಥಾಪಿಸಲು ಕಾರ್ಯೋನ್ಮುಖರಾಗಬೇಕು.

ರಾಷ್ಟ್ರೀಯ ಏಕತೆಗೆ ಗಂಡಾಂತರ :

ಡಾ। ಅಂಬೇಡ್ಕರ್‌ರವರು ಹೇಳಿರುವಂತೆ ಹಿಂದಿನ ವರ್ಷಗಳಲ್ಲಿ ನಾಲ್ಕು ವರ್ಣಗಳ ಹಾಗೂ ಹಲವಾರು ಜಾತಿಗಳ ಆಚರಣೆಯು ಶತಮಾನಗಳಿಂದ ಜಾರಿಯಲ್ಲಿದೆ ಎಂಬುದು ವಾಸ್ತವಿಕ ಸಂಗತಿಯಾಗಿದೆ. ನಾಲ್ಕು ವರ್ಣ ಪದ್ಧತಿಗಳು ವ್ಯಕ್ತಿ ಕೈಗೊಳ್ಳುವ ವೃತ್ತಿಯಾಧಾರಿತವಾಗಿ ಜಾರಿಗೆ ಬಂದವು. ಅವುಗಳೆಂದರೆ ಜ್ಞಾನಾರ್ಜನೆ ಯನ್ನು ಮತ್ತು ಧಾರ್ಮಿಕ ಆಚರಣೆಯನ್ನು ಕೈಗೊಳ್ಳುವವರನ್ನು ಬ್ರಾಹ್ಮಣರೆಂದು, ದೇಶದ ಜನರನ್ನು ಹಾಗೂ ಗಡಿಗಳನ್ನು ರಕ್ಷಿಸುವ ಹಾಗೂ ರಾಜ್ಯವನ್ನಾಳುವವರನ್ನು ಕ್ಷತ್ರಿಯರೆಂದು, ವಾಣಿಜ್ಯ ಮತ್ತು ವ್ಯವಹಾರದಲ್ಲಿ ತೊಡಗಿಸಿಕೊಂಡವರನ್ನು ವೈಶ್ಯರೆಂದು ಮತ್ತು ಸಮಾಜಕ್ಕೆ ಅಗತ್ಯವಾದ ಎಲ್ಲಾ ಸೇವೆಗಳನ್ನು ಹಾಗೂ ಯಾವ ಸೇವೆಯ ಅನಿವಾರ್ಯತೆಯಿಂದಾಗಿ ಸಮಾಜವು ಬದುಕಲು ಸಾಧ್ಯವಿಲ್ಲವೋ ಅಂತಹ ಸೇವೆಯನ್ನು ಕೈಗೊಳ್ಳುವವರನ್ನು ನಾಲ್ಕನೇ ದರ್ಜೆಯ ಶೂದ್ರರು ಎಂದು

ಕರೆಯಲಾಗುತ್ತಿತ್ತು. ಈ ವರ್ಣಪದ್ಧತಿಯು ವೃತ್ತಿಯಾಧಾರಿತ ವಿಂಗಡಣೆಯ ಸಿದ್ಧಾಂತದ ಮೇಲೆ ಹಂಚಿಕೆಯಾಗಿತ್ತು.

ಇತಿಹಾಸ ಗತಿಸಿದಂತೆ ಜಾತಿ ಪದ್ಧತಿಯು ವಂಶ ಪಾರಂಪರ್ಯ ವೃತ್ತಿಯಾಧಾರಿತವಾಗಿ ಜಾರಿಗೆ ಬರಲು ಆರಂಭವಾಯಿತು. ಈ ಪದ್ಧತಿಯು ಎಲ್ಲರಿಗೂ ಉದ್ಯೋಗ ನೀಡುವ ಹಾಗೂ ವಂಶ ಪಾರಂಪರ್ಯ ಅಥವಾ ಪ್ರತಿ ಜಾತಿಯ ವೃತ್ತಿ ನೈಪುಣ್ಯತೆಯನ್ನು ಕಾಪಾಡುವ ಭರವಸೆಯನ್ನು ಹೊಂದಿತ್ತು. ಈ ಪದ್ಧತಿಯ ಭಾಗವಾಗಿ ಒಂದೇ ವರ್ಣದ ಅಥವಾ ಒಂದೇ ಜಾತಿಯ ಪುರುಷ ಮತ್ತು ಸ್ತ್ರೀಯೊಡನೆ ಮಾತ್ರ ವಿವಾಹ ನಡೆಯುತ್ತಿತ್ತು ಹಾಗೂ ಯಾವ ವರ್ಣ ಅಥವಾ ಜಾತಿಯವರು ತಮ್ಮನ್ನು ಮೇಲ್ಜಾತಿ ಎಂದು ಗುರುತಿಸಿಕೊಳ್ಳುತ್ತಿದ್ದರೋ ಅವರು ಕೆಳವರ್ಣದ ಅಥವಾ ಜಾತಿಯ ವ್ಯಕ್ತಿಗಳೊಂದಿಗೆ ನಿತ್ಯಾಹಾರಗಳನ್ನು ಸೇವಿಸುತ್ತಿರಲಿಲ್ಲ. ಅಂತಹ ಪದ್ಧತಿಯು ಹಲವಾರು ಶತಮಾನಗಳವರೆಗೂ ಜಾರಿಯಲ್ಲಿತ್ತು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೂ ಕೂಡಾ ಈ ಪದ್ಧತಿಯು ವರ್ಣ ಅಥವಾ ಜಾತಿಯ ಮಧ್ಯೆ ಯಾವುದೇ ದ್ವೇಷವನ್ನು ಉಂಟು ಮಾಡಲಿಲ್ಲ. ಈ ವಿಷಯವಾಗಿ ಸ್ವಾಮಿ ವಿವೇಕಾನಂದರು ಈ ಕೆಳಗಿನಂತೆ ನುಡಿದಿದ್ದಾರೆ:

''ಜಾತಿ ಪದ್ಧತಿಯು ವೇದಾಂತಧರ್ಮದ ವಿರುದ್ಧವಾಗಿದೆ. ಜಾತಿ ಪದ್ಧತಿಯು ಒಂದು ಸಾಮಾಜಿಕ ಆಚರಣೆ ಮತ್ತು ಎಲ್ಲಾ ಶ್ರೇಷ್ಠ ಧರ್ಮಬೋಧಕರು ಈ ಪದ್ಧತಿಯನ್ನು ಅಳಿಸಲು ಪ್ರಯತ್ನಿಸಿದರು. ಬೌದ್ಧಧರ್ಮದ ಅವನತಿಯ ನಂತರ, ಪ್ರತಿಯೊಂದು ಪಂಥವು ಜಾತಿಪದ್ಧತಿಯ ವಿರುದ್ಧ ಧರ್ಮೋಪದೇಶ ನೀಡಿತು. ಆದರೆ ಪ್ರತಿ ಸಂದರ್ಭದಲ್ಲಿಯೂ ಈ ಪ್ರಯತ್ನವು ಜಾತಿ ಸಂಕೋಲೆಯನ್ನು ಮತ್ತಷ್ಟು ಭದ್ರಗೊಳಿಸಿತು. ಜಾತಿಪದ್ಧತಿಯು ಭಾರತದಲ್ಲಿನ ರಾಜಕೀಯ ಸಂಸ್ಥೆಗಳ ವಂಶ ಪಾರಂಪರ್ಯ ಮತ್ತು ವಾಣಿಜ್ಯ ವ್ಯವಹಾರದ ಬೆಳವಣಿಗೆಯ ದ್ಯೋತಕವಾಗಿದೆ....''

ಧರ್ಮದಲ್ಲಿ ಯಾವುದೇ ಜಾತಿಯೆಂಬುದು ಇಲ್ಲ. ಜಾತಿಯೆಂಬುದು ಕೇವಲ ಸಾಮಾಜಿಕ ಪದ್ಧತಿಯಾಗಿದೆ. ಆದರೆ ಈ ಪದ್ಧತಿಯು ಸಾಮಾಜಿಕ ಪಕ್ಷಪಾತ ಅಥವಾ ಕೆಡುಕಾಗಿದೆ. ಆದರೆ ಸರ್ಕಾರಕ್ಕೆ ಸಂಬಂಧಿಸಿದಂತೆ ಅದು ಎಲ್ಲರನ್ನೂ ರಕ್ಷಿಸುವ ಜವಾಬ್ದಾರಿ ಹೊಂದಿದೆ ಮತ್ತು ರಾಜಧರ್ಮ ಆಚರಣೆಯ ಅಥವಾ ಪುರಾತನ ಭಾರತೀಯ ಸಂವಿಧಾನದ ಭಾಗವಾಗಿದೆ.

ಯಥಾ ಸರ್ವಾಣೀ ಭೂತಾನೀ ಧಾರಾ ಧಾರಯತೇ ಸಮಮ್

ತಥಾ ಸರ್ವಾಣೀ ಭೂತಾನೀ ಭಿಭ್ರತಃ ಪಾರ್ತಿರ್ವ ವ್ರತಮ್

ತಾಯಿ ಭೂಮಾತೆಯು ಎಲ್ಲ ಜೀವಿಗಳಿಗೂ ಆಶ್ರಯ ನೀಡುವಂತೆ ಒಬ್ಬ ರಾಜನು ಎಲ್ಲರನ್ನು ಯಾವುದೇ ಭೇದಭಾವವಿಲ್ಲದೆ ಆಶ್ರಯ ನೀಡಬೇಕು (ಮನು-ಎಕ್ಸ್-೩೧).

ಪಾಶಂಡನೆಗಾಮಶ್ರೇಣಿಪುಗಾವ್ರತಗಣಾದಿಷ್ಟು
ಸಂರಕ್ಷತ್ಸೆಮಯಂ ರಾಜಾ ದುರ್ಗೇ ಜನಪದೇ ತಥಾ.

ರಾಜನು ವೇದಾಂತದಲ್ಲಿ ನಂಬಿಕೆ ಹೊಂದಿರುವ ಜನರ ಗುಂಪಿಗೆ ಆಶ್ರಯ ನೀಡುವಂತೆ ವೇದಾಂತದಲ್ಲಿ ನಂಬಿಕೆ ಹೊಂದಿರದ (ಪಾಶಂಡಿಗಳು) ಮತ್ತು ಇತರರನ್ನು ಅದೇ ರೀತಿಯಲ್ಲಿ ಹಾಗೂ ಅದೇ ಮಟ್ಟದ ಆಶ್ರಯ ನೀಡಬೇಕು ಮತ್ತು ದೇಶದ ಭೌಗೋಳಿಕ ಐಕ್ಯತೆಯನ್ನು ಕೂಡ ರಕ್ಷಣೆ ಮಾಡಬೇಕು.

ಈ ಎರಡು ನಿಯಮಗಳಂತೆ ರಾಜನು ಎಲ್ಲಾ ಜನರೊಂದಿಗೆ ಒಂದೇ ರೀತಿಯಾಗಿ ನಡೆದುಕೊಳ್ಳಬೇಕು ಮತ್ತು ಎಲ್ಲಾ ಧರ್ಮೀಯರಿಗೂ ಸಮಾನವಾದ ರಕ್ಷಣೆ ನೀಡಬೇಕು. ಆದ್ದರಿಂದ ಯಾವುದೇ ನಿಶ್ಚಿತ ಧರ್ಮಕ್ಕೆ ಅಥವಾ ಜಾತಿಗೆ ಸೇರಿದವರನ್ನು ರಾಜ್ಯಾಡಳಿತವು ಹಿಂಸಿಸುವಂತಿಲ್ಲ. ಇದು ದೇಶದ ಗತ ಇತಿಹಾಸದಲ್ಲಿ ಎಂದೂ ಕಂಡುಬಂದಿಲ್ಲ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಧಿಸಲಾದ ಐಕ್ಯತೆ

ಇದರ ಬಗ್ಗೆ ಸ್ವಾತಂತ್ರ್ಯ ಸ್ಥಗ್ರಾಮದಲ್ಲಿ ಯಾವುದೇ ವರ್ಣ ಅಥವಾ ಜಾತಿಯ ಭೇದವಿಲ್ಲದೆ ಮುನ್ನಡೆಸಿದ ನಾಯಕರಿಗೆ ಗೌರವ ಸಲ್ಲಬೇಕು ಮತ್ತು ಅವರು ಈ ದೇಶದ ಎಲ್ಲಾ ಜನರ ಮಧ್ಯೆ ಭ್ರಾತೃತ್ವದ ಭಾವನೆಯನ್ನು ಅರಳಿಸಿದರು ಮತ್ತು ಅವರು ಈ ರೀತಿ ಮಾಡಲು ಇದ್ದ ಮೂಲಭೂತ ಅಂಶವೆಂದರೆ ಈಗಾಗಲೇ ಹೇಳಲಾದ ಘೋಷಣೆಗಳು ''ಭಾರತ ಮಾತಾ ಕೀ ಜೈ'' ಮತ್ತು ''ವಂದೇ ಮಾತರಂ''.

ಇದರಿಂದಾಗಿ ವರ್ಣ ಅಥವಾ ಜಾತಿಯಾಧಾರದ ಮೇಲಿನ ಭೇದಭಾವವು ಬಹುಮಟ್ಟಿಗೆ ಕೊನೆಗೊಂಡಿತು ಹಾಗೂ ಇದರ ಪರಿಣಾಮವಾಗಿ ಬಹಳಷ್ಟು ಜನರು ಕೆಳವರ್ಗದ ಅಥವಾ ಕೆಳಜಾತಿಯ ಮನೆಗಳಲ್ಲಿ ಆಹಾರ ಸ್ವೀಕರಿಸಲು ಆರಂಭಿಸಿದರು. ಮತ್ತು ಎರಡನೆಯದಾಗಿ ಹಲವಾರು ಸಾಮಾಜಿಕ ಸುಧಾರಕ ಪ್ರಯತ್ನದ ಫಲವಾಗಿ ಅಂತರಜಾತೀಯ ವಿವಾಹವು ವಾಡಿಕೆಯಾಯಿತು. ಈಗ ಸಂವಿಧಾನ ಜಾರಿಗೊಂಡ ನಂತರ ಹಾಗೂ ಕಳೆದ ೫೫ ವರ್ಷಗಳಲ್ಲಿ ವರ್ಣ ಅಥವಾ ಜಾತಿಯಾಧಾರದ ಮೇಲಿನ ಭೇದಭಾವವು ಕ್ರಮೇಣವಾಗಿ ಕೊನೆಗೊಂಡಿದೆ. ಮತ್ತು ಈ ಪದ್ಧತಿಯು ಆಹಾರ ಮತ್ತು ಮದುವೆಯ ವಿಷಯದಲ್ಲಿ ಬಹಳಷ್ಟು ಗಟ್ಟಿಯಾಗಿ ಅಂಟಿಕೊಂಡಿರುವ ಕೆಲವೇ ಜನರಲ್ಲಿ ಕಂಡುಬರುತ್ತಿದೆ.

ಸ್ವಾತಂತ್ರ್ಯ ನಂತರ ಅಧಿಕಾರಕ್ಕಾಗಿ ಕಲಹ

ಆದರೆ ದುರದೃಷ್ಟವಶಾತ್ ಸ್ವಾತಂತ್ರ್ಯ ದೊರೆತ ನಂತರ ಅಧಿಕಾರಕ್ಕಾಗಿ

ಹೋರಾಟ ಆರಂಭವಾಯಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರೀಯ ಏಕತೆಗಾಗಿ ಬದಿಗಿರಿಸಲಾಗಿದ್ದ ವರ್ಣ ಅಥವಾ ಜಾತಿ ಪದ್ಧತಿಯು ಉದ್ಯೋಗದ ನೇಮಕಾತಿಗಳಲ್ಲಿ ಹಾಗೂ ಸಂವಿಧಾನಾತ್ಮಕ ಹುದ್ದೆಯ ಚುನಾವಣೆಯ ಸಂದರ್ಭಗಳಲ್ಲಿ ಅಪಾಯದ ಪ್ರಮಾಣದಲ್ಲಿ ಮತ್ತೆ ಕಾಣಿಸಿಕೊಂಡಿತು.

ಈ ಸಮಸ್ಯೆಯನ್ನು ಕೂಡ ರಾಜಕೀಯ ಸ್ವಾತಂತ್ರ್ಯ ನಿಭಾಯಿಸಿದ ರೀತಿಯಲ್ಲೇ ಪ್ರಯತ್ನಿಸಬೇಕು ಮತ್ತು ಪ್ರತಿಯೊಬ್ಬನು ''ನಮಗೆ ಪ್ರೀತಿಸಲು ಇರುವುದೊಂದೇ ದೇಶ. ನಾವೆಲ್ಲರೂ ಭಾರತ ಮಾತೆಯ ಮಕ್ಕಳು. ಆದ್ದರಿಂದ ನಾವೆಲ್ಲರೂ ಅಣ್ಣ-ತಮ್ಮಂದಿರು ಹಾಗೂ ನಾವೆಲ್ಲರೂ ಒಂದು'' ಎಂಬ ಭ್ರಾತೃತ್ವ ಭಾವನೆಯನ್ನು ಹೊಂದಬೇಕು. ನಾವೆಲ್ಲರೂ ಸಂವಿಧಾನದಡಿಯಲ್ಲಿ ಹೊಂದಿರುವುದು ಒಂದೇ ಒಂದು ವಾಸದ ಹಕ್ಕು. ನಮಗೆಲ್ಲರಿಗೂ ಗೌರವಿಸಲು ಮತ್ತು ಹಾರಿಸಲು ಇರುವುದೊಂದೇ ರಾಷ್ಟ್ರಧ್ವಜ ಮತ್ತು ನಮಗೆ ಪರಿಪಾಲಿಸಲು ಇರುವುದೊಂದೇ ಸಂವಿಧಾನ ಮತ್ತು ಹಾಡಲು ಇರುವುದೊಂದೇ ರಾಷ್ಟ್ರಗೀತೆ ಮತ್ತು ರಾಷ್ಟ್ರೀಯ ಹಾಡು ಎಂಬುದನ್ನು ಮನಗಾಣಬೇಕು.

ಹಿಂದುಳಿದವರಲ್ಲದ ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಂದ ನಿಜವಾಗಿಯೂ ಹಿಂದುಳಿದವರಿಗಾದ ಅನ್ಯಾಯ

ಮತ್ತೊಂದು ಮಹತ್ವಪೂರ್ಣ ವಿಚಾರವನ್ನು ನಾನು ಉಲ್ಲೇಖಿಸಲು ಇಚ್ಛಿಸುವುದೇನೆಂದರೆ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರನ್ನು ಮೇಲೆತ್ತುವ ಉದಾತ್ತ ಉದ್ದೇಶವನ್ನು ಹೊಂದಿರುವ, ಸಂವಿಧಾನದಡಿಯಲ್ಲಿ ಒದಗಿಸಿರುವ ಹಿಂದುಳಿದ ವರ್ಗಗಳ ಮೀಸಲಾತಿಯ ಶೋಷಣೆ. ಒಂದು ವೇಳೆ ಈ ಪರಿಚ್ಛೇದಗಳು ಸಂವಿಧಾನದಡಿಯಲ್ಲಿ ಸೇರಿಸದಿದ್ದಲ್ಲಿ ಮತ್ತು ಪರಿಚ್ಛೇದ ೧೫ (೪) ಮತ್ತು ೧೬ (೪) ರಡಿಯಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಒದಗಿಸಿರದಿದ್ದಲ್ಲಿ ಅವರಿಗೆ ಅತಿಯಾದ ಅನ್ಯಾಯ ಉಂಟಾಗುತ್ತಿತ್ತು ಎನ್ನುವುದರಲ್ಲಿ ಸಂಶಯವಿಲ್ಲ ಮತ್ತು ಸಮಾಜದ ಕೆಲವೊಂದು ವರ್ಗದ ಜನರು ಮಾತ್ರ ಅಭಿವೃದ್ಧಿ ಹೊಂದಿ ಹಿಂದುಳಿದ ಜನರು ದೇಶದಲ್ಲಿ ಹಾಗೂ ದೇಶದ ಐಕ್ಯತೆಯಲ್ಲಿ ಹಿಂದುಳಿದವರಾಗಿಯೇ ಉಳಿಯುತ್ತಿದ್ದರು. ಹಿಂದುಳಿದ ವರ್ಗದ ಜನರ ಪರವಾಗಿರುವುದಲ್ಲ, ಬದಲಾಗಿ ಅದರ ಏಕಮಾತ್ರ ಉದ್ದೇಶ - ಸರ್ವೋಚ್ಚ ನ್ಯಾಯಾಲಯವು ಹಲವಾರು ಪ್ರಕರಣದಲ್ಲಿ ವಿವರಿಸಿರುವಂತೆ ಅವರಿಗೆ ಸಮಾನ ರೀತಿಯ ಅವಕಾಶ ನೀಡುವುದಾಗಿದೆ.

ಸರ್ವೋಚ್ಚ ನ್ಯಾಯಾಲಯವು ಈ ಮೊದಲೇ ಅಂದರೆ ೧೯೭೦ನೇ ಇಸವಿಯಲ್ಲಿ ಪೆರಿಯಾ ಕುರುಪ್ಪನ್ ಪ್ರಕರಣದಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ

ಹಿಂದುಳಿದ ವರ್ಗಗಳ ಪಟ್ಟಿಯನ್ನು ಪರಿಷ್ಕರಿಸಬೇಕೆಂದು ಮತ್ತು ಹಿಂದುಳಿದ ವರ್ಗದಲ್ಲಿ ಮುಂದುವರಿದ ಜನಾಂಗವನ್ನು ಅಂತಹ ಪಟ್ಟಿಯಿಂದ ಕೈ ಬಿಡಬೇಕೆಂದು ತೀರ್ಮಾನಿಸಿದೆ. ಇದರಿಂದಾಗಿ ಅರ್ಹ ಹಿಂದುಳಿದ ವರ್ಗದ ಜನರು ಲಾಭ ಹೊಂದುವರು ಮತ್ತು ಅವರು ಸಮಾಜದಲ್ಲಿ ಪ್ರಗತಿ ಹೊಂದಲು ಸಾಧ್ಯವಾಗುತ್ತದೆ. ಆದರೆ ದುರಾದೃಷ್ಟವಶಾತ್ ಹಿಂದುಳಿದ ವರ್ಗದಲ್ಲೇ ಇರುವ ಕೆಲವು ಪಟ್ಟಭದ್ರ ಹಿತಾಸಕ್ತಿಗಳು, ಕೆಲವು ಮುಂದುವರಿದ ಜಾತಿ ಹಾಗೂ ಜನಾಂಗಗಳು ಸರ್ಕಾರಿ ಸೇವೆಗಳಲ್ಲಿ ಹಾಗೂ ವೃತ್ತಿಶಿಕ್ಷಣ ಆಯ್ಕೆಯ ಪ್ರಕ್ರಿಯೆಯಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಯ ದುರ್ಲಾಭವನ್ನು ಪಡೆಯುತ್ತಿದ್ದಾರೆ.

ಈ ವ್ಯತಿರಿಕ್ತತೆಯು ಹಿಂದುಳಿದ ವರ್ಗದ ಜನರಿಗೆ ಆಘಾತಕಾರಿ ಅಂಶವಾಗಿ ಪರಿಣಮಿಸಿದೆ. ಈ ಕಾರಣದಿಂದಾಗಿ ಇಂದಿರಾ ಸಹಾನೆ ಪ್ರಕರಣದಲ್ಲಿ ಘನ ಸರ್ವೋಚ್ಚ ನ್ಯಾಯಾಲಯವು ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ಮುಂದುವರಿದ ಹಿಂದುಳಿದ ವರ್ಗದ ಜನರನ್ನು ಹಿಂದುಳಿದ ವರ್ಗದ ಪಟ್ಟಿಯಿಂದ ಕ್ರಿಮೀಲೇಯರ್ ಎಂದು ಗುರುತಿಸಿ ಕೈಬಿಡಬೇಕೆಂದು ತೀರ್ಮಾನಿಸಿದೆ. ಆದರೆ ದುರಾದೃಷ್ಟವಶಾತ್ ಸರ್ವೋಚ್ಚ ನ್ಯಾಯಾಲಯದಿಂದ ಹೊರಡಿಸಲಾದ ರಾಷ್ಟ್ರೀಯ ಹಿತಾಸಕ್ತಿಯನ್ನು ಒಳಗೊಂಡ ಈ ತೀರ್ಪು ಜಾರಿಯಾಗಲಿಲ್ಲ. ಇದು ಕೂಡ ಅನೈಕ್ಯತೆಗೆ ಕಾರಣವಾಗಿದೆ. ಆದ್ದರಿಂದ ಈ ವರ್ಗದ ಜನರನ್ನು ಅಧಿಕಾರಯುಕ್ತ ಹುದ್ದೆಗಳ ನೇಮಕಾತಿಯಿಂದ ಕೈಬಿಡಬೇಕು.

ನೈತಿಕ ಅಧಃಪತನಕ್ಕೆ ಕಾರಣ :

ಅನೈಕ್ಯತೆಯಂತೆ ಸಮಾನವಾಗಿ ಅಪಾಯಕಾರಿಯಾದುದು ಅನೈತಿಕತೆ. ಸಾವಿರಾರು ವರ್ಷಗಳಿಂದ ಸಂರಕ್ಷಿಸಿರುವ ಮಾನವ ಹಕ್ಕುಗಳೆಂದರೆ ಸಂತೋಷ ಜೀವನದ ಹಕ್ಕು. ಸಂವಿಧಾನದ ಮೂಲಭೂತ ಹಕ್ಕುಗಳಲ್ಲಿ ಸಮ್ಮಿಳಿತಗೊಂಡಿರುವ ವಾಕ್ ಸ್ವಾತಂತ್ರ್ಯ, ಏಕರೀತಿ ನಡೆದುಕೊಳ್ಳುವ ಹಕ್ಕು, ಯಾವುದೇ ಧರ್ಮಾಚರಣೆ ಆಚರಿಸುವ ಹಕ್ಕು ಮುಂತಾದವುಗಳು ಈ ನೆಲದಲ್ಲಿ ಜಾರಿಯಲ್ಲಿದ್ದು ಸಂತೋಷ ಜೀವನದ ಹಕ್ಕನ್ನು ವ್ಯಾಪಿಸಿದ್ದು ಎಲ್ಲಾ ಮನುಕುಲದ ಸಮಸ್ಯೆಗಳಿಗೆ ಪರಿಹಾರಾತ್ಮಕವಾಗಿದೆ.

ಈ ಅಂಶವನ್ನು ಘನ ಸರ್ವೋಚ್ಚ ನ್ಯಾಯಾಲಯವು ಮೇನಕಾ ಗಾಂಧಿ ವಿ. ಕೇಂದ್ರ ಸರ್ಕಾರ (೧೯೭೮ (೧) ಎಸ್.ಸಿ.ಸಿ. ೨೪೮) ಈ ಪ್ರಕರಣದಲ್ಲಿ ಕೆಳಕಂಡಂತೆ ಉಲ್ಲೇಖಿಸಿದೆ :

ಸಂವಿಧಾನದ ಮೂಲಭೂತ ಹಕ್ಕುಗಳು ಈ ದೇಶದ ಜನರು ವೇದಕಾಲದಿಂದಲೂ ಪ್ರಾಣಕ್ಕಿಂತ ಮಿಗಿಲಾಗಿ ಪರಿಪಾಲಿಸುವ ಮೂಲಭೂತ ಸಿದ್ಧಾಂತಗಳನ್ನು ಪ್ರತಿನಿಧಿಸುತ್ತವೆ. ಮತ್ತು ಅವುಗಳನ್ನು ವ್ಯಕ್ತಿಯ ಘನತೆಯನ್ನು ಕಾಪಾಡಲು ಮತ್ತು ಮಾನವನು ಯಾವ ಆಧಾರದಲ್ಲಿ ತನ್ನ ಸರ್ವತೋಮುಖ ಅಭಿವೃದ್ಧಿಗೆ ವ್ಯಕ್ತಿತ್ವ ಬೆಳವಣಿಗೆ ಹೊಂದಬೇಕೆಂಬ ನಿಯಮಗಳನ್ನು ಪೂರ್ವಯೋಜಿತಗೊಳಿಸಲಾಗಿದೆ.

ನಮಗೆಲ್ಲರಿಗೂ ತಿಳಿದಿರುವಂತೆ ಈ ದೇಶದ ಉನ್ನತ ಜೀವನ ಪದ್ಧತಿಯನ್ನು ಕೆಳಕಂಡ ಪ್ರಸಿದ್ಧ ಶ್ಲೋಕದಲ್ಲಿ ಚಿಕ್ಕದಾಗಿ ಮತ್ತು ಬಹು ಅರ್ಥಗರ್ಭಿತವಾಗಿ ಸಂಯೋಜಿಸಲಾಗಿದೆ. ಅದೇಂದರೆ -

ಲೋಕಾಃ ಸಮಸ್ತಾಃ ಸುಖಿನೋ ಭವಂತು

''ಸಮಸ್ತ ಜನಕೋಟಿಯು ಸುಖವಾಗಿರಲಿ'' ಎಂಬುದಾಗಿದೆ.

ಎಲ್ಲಾ ಜೀವಿಗಳಿಗೂ ಹಾಗೂ ವ್ಯಕ್ತಿಗಳಿಗೂ ಸಂತೋಷ ಜೀವನದ ಹಕ್ಕನ್ನು ಖಾತ್ರಿಪಡಿಸಲು ತ್ರಿವರ್ಗ ಸಿದ್ಧಾಂತವನ್ನು ಅಳವಡಿಸಲಾಗಿದೆ.

ತ್ರಿವರ್ಗ ಸಿದ್ಧಾಂತ :

ತ್ರಿವರ್ಗ ಸಿದ್ಧಾಂತವು ಭಾರತೀಯ ಜೀವನಶಾಸ್ತ್ರ ಸಿದ್ಧಾಂತದ ಒಕ್ಕಣಿಕೆ ಮತ್ತು ಸಾರವಾಗಿರುವ ಧರ್ಮ, ಅರ್ಥ ಮತ್ತು ಕಾಮವನ್ನು ಒಳಗೊಂಡಿದೆ. ವ್ಯಕ್ತಿ ಹಿತಾಸಕ್ತಿ ಮತ್ತು ಸಮುದಾಯ ಹಿತಾಸಕ್ತಿಯ ನಡುವೆ ಅಂದರೆ ಸಮಾಜ ಅಥವಾ ದೇಶಕ್ಕೆ ಸಂಬಂಧಿಸಿದ ಎಲ್ಲಾ ಜನರ ಹಿತಾಸಕ್ತಿಯನ್ನು ಅಥವಾ ಮನುಕುಲದ ಅಭಿವೃದ್ಧಿಯನ್ನು ವಿವೇಕವಾಗಿ ಸರಿದೂಗಿಸುವ ಜವಾಬ್ದಾರಿಯನ್ನು ಹೊಂದಿದೆ. ಈ ಸಿದ್ಧಾಂತದಂತೆ ಧರ್ಮವು ಅರ್ಥ (ಭೌತಿಕ ಸಂಪತ್ತು ಸಂಗ್ರಹಿಸುವ ಆಸೆ) ಮತ್ತು ಕಾಮ (ಭೌತಿಕ ಸಂಪತ್ತನ್ನು ಸಂಗ್ರಹಿಸುವ ಹಾಗೂ ಎಲ್ಲಾ ರೀತಿಯ ಸುಖಭೋಗವನ್ನು ಅನುಭವಿಸುವಂತಹ ಆಸೆ)ದ ಮೇಲೆ ಪ್ರಭುತ್ವ ಹೊಂದಿದೆ. ಇದು ಯಾವುದೇ ನಿರ್ದಿಷ್ಟ ಧರ್ಮಕ್ಕೆ ಸೇರಿದ ಅಥವಾ ಧರ್ಮಾತೀತ ವ್ಯಕ್ತಿಗಳ ಎಲ್ಲಾ ಸಮಸ್ಯೆಗಳಿಗೆ ಯಾವುದೇ ಬೆಲೆಕಟ್ಟಲಾಗದಂತಹ ಮತ್ತು ಶಾಶ್ವತವಾದಂತಹ ಪರಿಹಾರವಾಗಿದೆ.

ಈ ಸಿದ್ಧಾಂತದ ಅರ್ಥವೆಂದರೆ ಧರ್ಮವು ಆಸೆಯ (ಅರ್ಥ) ಜೊತೆಗೆ ಭೌತಿಕ ಸಂಪತ್ತು ಸಂಗ್ರಹಿಸುವ ಹಾಗೂ ಎಲ್ಲಾ ರೀತಿಯ ಸುಖವನ್ನು ಅನುಭವಿಸುವುದನ್ನು (ಕಾಮ) ಹತೋಟಿಯಲ್ಲಿಡಬೇಕು. ಆದ್ದರಿಂದ ಧರ್ಮವು ಮಾನವ ಜನಾಂಗದ ಅಭಿವೃದ್ಧಿಗೆ ಮತ್ತು ಸಮಾಜದ ಅಭಿವೃದ್ಧಿಗೆ ಬೇಕಾದಂತಹ ಸನ್ನಡತೆಯ ನಿಯಮವನ್ನು ನಿಗದಿಪಡಿಸಬೇಕು.

ಡಾ|| ಪಿ. ವಿ. ಕಾನೆಯವರ ಧರ್ಮಶಾಸ್ತ್ರದಂತೆ ತ್ರಿವರ್ಗ ಸಿದ್ಧಾಂತ ಕಡ್ಡಾಯವಾಗಿ ಪರಿಪಾಲಿಸುವುದರಿಂದ ಸಮಸ್ತ ಜನಸಮೂಹ ಸುಖವನ್ನು ಅನುಭವಿಸಬಹುದಾಗಿರುತ್ತದೆ ಮತ್ತು ಈ ನಿಯಮವು ಆಳು ಮತ್ತು ಅರಸ ಇಬ್ಬರಿಗೂ ಅನ್ವಯವಾಗುತ್ತದೆ. ಅದರಂತೆ ಪ್ರತಿಯೊಬ್ಬ ಪ್ರಜೆಯು ಭೌತಿಕ ಸಂಪತ್ತು ಸಂಗ್ರಹಿಸುವ ಸಂದರ್ಭದಲ್ಲಿ ಮತ್ತು ಸುಖವನ್ನು ಅನುಭವಿಸುವಾಗ ಧರ್ಮದಂತೆ ನಡೆಯಬೇಕು.

೧೯೯೩ನೇ ಇಸವಿಯಲ್ಲಿ ಬೆಂಗಳೂರು ಕಾನೂನು ಶಾಲೆಯ ಘಟಿಕೋತ್ಸವ ಸಮಾರಂಭದಲ್ಲಿ ಭಾರತದ ಅಂದಿನ ರಾಷ್ಟ್ರಪತಿಗಳಾದ ಶ್ರೀಯುತ ಡಾ|| ಶಂಕರ್ ದಯಾಳ್ ಶರ್ಮಾರವರು ತಮ್ಮ ಪ್ರಥಮ ಘಟಿಕೋತ್ಸವ ಭಾಷಣದಲ್ಲಿ ಧರ್ಮದ ಮಹತ್ವವನ್ನು ಬಹಳ ಸವಿಸ್ತಾರವಾಗಿ ವಿವರಿಸಿದ್ದರು.

ಆದರೆ ಸ್ವಾತಂತ್ರ್ಯ ಪಡೆದ ನಂತರ ಭೌತಿಕ ಜೀವನ ಪದ್ಧತಿಯ ಪ್ರಭಾವದಿಂದಾಗಿ ಆರ್ಥಿಕ ಅಭಿವೃದ್ಧಿಯ (ಅರ್ಥ) ಮತ್ತು ಸುಖವನ್ನು ಅನುಭವಿಸುವ ಆಸೆಗಳ ಈಡೇರಿಕೆಯ ಪ್ರಭಾವದಿಂದಾಗಿ ಧರ್ಮವನ್ನು ಉಪೇಕ್ಷಿಸಲಾಯಿತು. ಆದರೆ ಆದದ್ದೇ ಬೇರೆ. ಧರ್ಮವನ್ನು ಉಪೇಕ್ಷಿಸಿದ್ದರಿಂದ ಹಾಗೂ ತ್ರಿವರ್ಗ ನಿಯಮವನ್ನು ದ್ವಿವರ್ಗ ನಿಯಮವಾಗಿ ಆಚರಿಸಿದ್ದರಿಂದಾಗಿ ನಮ್ಮ ದೇಶದಲ್ಲಿ ಸಂಪೂರ್ಣ ನೈತಿಕ ಅಧಃಪತನಕ್ಕೆ ಕಾರಣವಾಯಿತು. ಈ ಅಧಃಪತನದ ಎಚ್ಚರವನ್ನು ಈ ಕೆಳಕಂಡ ಶ್ಲೋಕದಲ್ಲಿ ಸೂಕ್ಷ್ಮವಾಗಿ ಹೇಳಲಾಗಿದೆ :

ಧರ್ಮ ಯೇವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ

ತಸ್ಮಾಧರ್ಮೋನ ಹಂತವ್ಯೋ ಮಾ ನೋ ಧರ್ಮೋ ಹತೋವಧೀತಾಃ

ಧರ್ಮವನ್ನು ರಕ್ಷಿಸುವವನನ್ನು ಧರ್ಮವು ರಕ್ಷಿಸುತ್ತದೆ. ಧರ್ಮವನ್ನು ನಾಶಮಾಡುವವನನ್ನು ಧರ್ಮವು ನಾಶಪಡಿಸುತ್ತದೆ. ಆದ್ದರಿಂದ ಮನುಕುಲವು ನಾಶವಾಗದಿರುವುದಕ್ಕಾಗಿ ಧರ್ಮವನ್ನು ನಾಶಪಡಿಸಬಾರದು. (ಮನು - ೧೧-೧೫).

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತಮಾತೆಯೇ ನಮಗೆಲ್ಲಾ ಆರಾಧ್ಯ ದೈವವಾಗಿದ್ದಳು. ಆದರೆ ಸ್ವಾತಂತ್ರ್ಯ ಬಂದ ನಂತರ ಅವಳ ಸ್ಥಾನವನ್ನು ಹಣ ಮತ್ತು ರಾಜಕೀಯ ಅಧಿಕಾರಗಳು ತುಂಬಿದವು. ಭ್ರಷ್ಟಾಚಾರ, ಅಧಿಕಾರ ಭ್ರಷ್ಟತೆ, ಡಕಾಯಿತಿ, ಕಳ್ಳತನ, ಅಪಹರಣ, ಪ್ರಶ್ನೆಪತ್ರಿಕೆಗಳ ಬಯಲು ಮತ್ತು ನಕಲಿ ಸ್ಟಾಂಪ್ ಹಾಗೂ ನಕಲಿ ನೋಟ್‌ಗಳ ಮುದ್ರಣದಂತಹ ದುರ್ವ್ಯವಹಾರಗಳಿಗೆ ದಾರಿ ಮಾಡಿಕೊಟ್ಟಿತು. ಈಗ ಅಪರಾಧಗಳು ಹೆಚ್ಚುತ್ತಿರುವ ಪ್ರಮಾಣವನ್ನು ನೋಡಿದರೆ ಪ್ರಾಯಶಃ ಅದನ್ನು ತಡೆಗಟ್ಟುವುದು ಅಥವಾ ಹತೋಟಿಯಲ್ಲಿಡುವುದು ಅಸಾಧ್ಯವಾಗಿ ಕಂಡು ಬರುತ್ತಿದೆ. ಕಾರಣ, ಅವಶ್ಯಕತೆಗೆ ಅನುಗುಣವಾಗಿ ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳನ್ನು ಮತ್ತು

ನ್ಯಾಯಾಧೀಶರನ್ನು ಪಡೆಯುವುದು ಅಸಾಧ್ಯವಾಗುತ್ತಿದೆ. ಆದ್ದರಿಂದ ಯಾವುದೇ ಶಿಕ್ಷೆಯ ಭಯವಿಲ್ಲದೇ ಮತ್ತು ಸಮೀಪದ ಸಮಯದಲ್ಲಿ ಯಾವುದೇ ಶಿಕ್ಷೆ ನೀಡುವ ಲಕ್ಷಣಗಳು ಕಾಣುತ್ತಿಲ್ಲದಿರುವುದರಿಂದ ಮುಕ್ತವಾಗಿ ಅಪರಾಧಗಳು ನಡೆಯುತ್ತಿದೆ. ಇತ್ತೀಚಿನ ಹಣಕಾಸಿನ ಹಗರಣಗಳು ಮತ್ತು ಯೋಜನೆಗಳು ದೇಶವನ್ನು ನಡುಗಿಸಿದೆ. ಇದು ಗಣನೀಯ ಸಂಖ್ಯೆಯ ವ್ಯಕ್ತಿಗಳಲ್ಲಿ ಧರ್ಮರಕ್ಷಣೆಯ ಗುಣಲಕ್ಷಣಗಳು ಅವನತಿಯಾಗಿರುವ ನೇರ ಪರಿಣಾಮವಾಗಿದೆ.

ನನ್ನ ವಿನಯಪೂರ್ವಕ ಅನಿಸಿಕೆಯೆಂದರೆ ಅರ್ಥ ಮತ್ತು ಕಾಮವನ್ನು ಹತೋಟಿಯಲ್ಲಿಡುವ ಮೂಲಕ ಧರ್ಮವನ್ನು ಪುನಶ್ಚೇತನಗೊಳಿಸಿ ದೇಶವನ್ನು ರಕ್ಷಿಸಬಹುದು ಅಥವಾ ಬದಲಾಗಿ ಹೇಳುವುದಾದರೆ ನೈತಿಕ ಅಧಃಪತನದಿಂದ ಉಂಟಾಗಿರುವ ಸಮಸ್ಯೆಗಳಿಗೆಲ್ಲಾ ರಾಮಬಾಣವಾಗಿರುವ ಪುರಾತನವಾದ ಮತ್ತು ಕಾಲ ಪರೀಕ್ಷೆಗೊಳಪಟ್ಟ ತ್ರಿವರ್ಗ ಸಿದ್ಧಾಂತವನ್ನು ಮರುಸ್ಥಾಪಿಸಬೇಕು.

ಸಂತೋಷ ಜೀವನದ ಸರಿಯಾದ ಮಾಪನ

ಗಣನೀಯ ಪ್ರಮಾಣದ ಪ್ರಜ್ಞೆಗಳು ಶಾಸನ ನಿಯಮಕ್ಕೆ ಅಥವಾ ಧರ್ಮಕ್ಕೆ ಬದ್ಧರಾಗಿ ಒಟ್ಟಾರೆಯಾಗಿ ನಡೆದುಕೊಂಡರೆ, ಕಾನೂನು ಆಧಿಪತ್ಯವನ್ನು ಕಾಪಾಡ ಬಹುದು ಎಂಬುದನ್ನು ಹೇಳುವ ಅವಶ್ಯಕತೆಯಿಲ್ಲ. ಆದರೆ ಹೆಚ್ಚು ಬಹುಸಂಖ್ಯಾತ ಜನರು ಶಾಸನಕ್ಕೆ ಬದ್ಧರಾಗಿ ನಡೆದುಕೊಳ್ಳದಿದ್ದಲ್ಲಿ ದೇಶವು ನಶಿಸುತ್ತದೆ. ಈ ವಿಚಾರವನ್ನು ತೈತ್ರೇಯ ಉಪನಿಷತ್‌ನ ಶಿಕ್ಷಾವಳಿ (ಶಿಕ್ಷಣ) ಪಾಠ - ೮, ಅಧ್ಯಾಯ - ೨ರಲ್ಲಿ ಕೆಳಕಂಡ ಶಬ್ದಗಳಲ್ಲಿ ಸೂಚಿಸಲಾಗಿದೆ :

ಯುವ ಸ್ಯಾತ್ಸಾದು ಯುವತ್ಸಾಹಾಯಕ

ಅಶಿಷ್ಟೋ ದೃಢಿಷ್ಟೋ ಬಲಿಷ್ಠ

ತತ್ಸೇಯಂ ಪೃಥಿವಿ ಸರ್ವಾ ವಿತ್ತಸ್ಯ ಪೂರ್ಣಾಸ್ಯಾತ್

ಸವಿಕೋ ಮನುಷ್ಯ ಆನಂದ.

ಸಂತೋಷ ಎಂದರೆ ಯುವಜನಾಂಗವು ಸನ್ನಡತೆಯುಳ್ಳವರು, ಪಾಂಡಿತ್ಯ ವುಳ್ಳವರು, ದೃಢಸಂಕಲ್ಪವುಳ್ಳವರು ಮತ್ತು ನೈತಿಕವಾಗಿ ಹಾಗೂ ದೈಹಿಕವಾಗಿ ದೃಢವಾಗಿರಬೇಕು. ಆಗ ಮಾತ್ರ ಈ ಭೂಮಿಯು ಉಚ್ಛ್ರಾಯಸ್ಥಿತಿಗೆ ತಲುಪುವುದು ಮತ್ತು ಸಂಪದ್ಭರಿತವಾಗುವುದು. ಇದು ಮಾನವಜನಾಂಗದ ಸಂತೋಷಜೀವನದ ಸರಿಯಾದ ಮಾಪನವಾಗಿರುತ್ತದೆ.

ಈ ಪಾಠವು ಬಹಳ ಜ್ಞಾನೋದಯವುಂಟು ಮಾಡುವುದಾಗಿದೆ. ಯಾವುದೇ ದೇಶದ ನಿಜವಾದ ಸಂತೋಷ ಮತ್ತು ಅಭ್ಯುದಯವು ಸರಿಯಾದ ಶಿಕ್ಷಣ ಪರಿಸರದಲ್ಲಿ ಬೆಳೆದ ಅಸಂಖ್ಯಾತ ವ್ಯಕ್ತಿಗಳ ಅನುಪಾತದ ಆಧಾರದ ಮೇಲೆ ಅವಲಂಬಿತ ವಾಗಿರುತ್ತದೆ.

ಆದ್ದರಿಂದ ನಮ್ಮ ಶಿಕ್ಷಣಪದ್ಧತಿಯನ್ನು ಸಂಪೂರ್ಣವಾಗಿ ಪರಿಷ್ಕರಿಸಬೇಕು ಮತ್ತು ಒಬ್ಬ ವಿದ್ಯಾರ್ಥಿಯು ಯಾವುದೇ ವಿಷಯ ಅಥವಾ ವೃತ್ತಿಶಿಕ್ಷಣವನ್ನು ಅಭ್ಯಸಿಸಿದರೂ ಎಲ್ಲಾ ಪಠ್ಯ ವಿಷಯಗಳಲ್ಲಿ ಸಾಮಾನ್ಯ ವಿಷಯವಾಗಿ ತ್ರಿವರ್ಗ ಸಿದ್ಧಾಂತವನ್ನು ಅಳವಡಿಸಬೇಕು.

ಸಂವಿಧಾನ ಪರಿಪಾಲನೆ

ಭಾರತದ ಸಂವಿಧಾನದಡಿಯಲ್ಲಿ ಪ್ರಜೆಗಳ ಮಧ್ಯೆ ಭ್ರಾತೃತ್ವ ಉಂಟು ಮಾಡುವ ಮತ್ತು ಮಕ್ಕಳ ಹಾಗೂ ಯುವಪೀಳಿಗೆಯ ನೈತಿಕ ಹಾಗೂ ಭೌತಿಕ ಅಧಃಪತನವನ್ನು ತಡೆಯಲು ಕೆಲವೊಂದು ಪರಿಚ್ಛೇದಗಳಿವೆ. ಅಂತಹ ಪರಿಚ್ಛೇದಗಳನ್ನು ಜಾರಿಗೊಳಿಸಲು ರಾಜಕೀಯ ಪಕ್ಷಗಳು ಒಮ್ಮತಕ್ಕೆ ಬರುತ್ತಿಲ್ಲ. ಸಂವಿಧಾನದ ಪರಿಚ್ಛೇದನಗಳನ್ನು ಗೌರವಿಸುವುದು ಮತ್ತು ಅದನ್ನು ಜಾರಿಗೆ ತರುವುದು ಪ್ರತಿಯೊಬ್ಬನ ಆದ್ಯ ಕರ್ತವ್ಯವಾಗಿದೆ. ''ಕಾನೂನು ತನ್ನ ಕಾರ್ಯವನ್ನು ನಿರ್ವಹಿಸು ತ್ತದೆ - ಸರ್ವೋಚ್ಚ ನ್ಯಾಯಾಲಯವು ತೀರ್ಮಾನಿಸುತ್ತದೆ'' ಎಂಬ ಸೂಕ್ತಿಯನ್ನು ಪ್ರತಿಯೊಬ್ಬನು ರೂಢಿ ಮಾಡಿಕೊಂಡಿರುವುದು ಸತ್ಯದ ಸಂಗತಿಯಾಗಿದೆ. ಆ ಸೂಕ್ತಿಯನ್ನು ಪಾಲಿಸುವ ಸಂದರ್ಭದಲ್ಲಿ ಜನರು ಸರ್ವೋಚ್ಚ ನ್ಯಾಯಾಲಯದಿಂದ ಹೊರಡಿಸಲಾದ ಕಾನೂನುಗಳನ್ನು ಅಲಕ್ಷಿಸುತ್ತಾರೆ. ನಮ್ಮ ಅನುಭವಕ್ಕೆ ಬಂದಿರುವಂತೆ ಜನರು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಪರಿಪಾಲಿಸುವ ಘೋಷಣೆ ಮಾಡುತ್ತಾರೆ. ಆದರೆ ಅದಕ್ಕೆ ಒಂದು ನಿಯಮವನ್ನು ಸೇರಿಸುತ್ತಾರೆ. ಅದೆಂದರೆ ''ಅಂತಹ ನಿಯಮವು ತನ್ನ : ತಮ್ಮ ಪರವಾಗಿದ್ದ ಪಕ್ಷದಲ್ಲಿ ಮಾತ್ರ'' ಎಂದು.

ಒಂದು ಜ್ವಲಂತ ಉದಾಹರಣೆಯೆಂದರೆ, ಖಾಸಗಿ ಉದ್ಯೋಗದಲ್ಲಿ ಮತ್ತು ಕೈಗಾರಿಕೆಗಳಲ್ಲಿ ಕಾರ್ಮಿಕರು ಸಾಂಘಿಕ ಜವಾಬ್ದಾರಿಯಲ್ಲಿ ಆಚರಿಸುವ ಮುಷ್ಕರಕ್ಕೆ ವ್ಯತಿರಿಕ್ತವಾದ ಬಂದ್‌ಗಳು. ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಇದು ಅಸಂಖ್ಯಾತ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತದೆಯೆಂದು ಸ್ಪಷ್ಟವಾದ ಶಬ್ದಗಳಲ್ಲಿ ಘೋಷಿಸಿದೆ. ಸಂವಿಧಾನದ ೧೪೧ನೇ ಪರಿಚ್ಛೇದದಂತೆ ಸರ್ವೋಚ್ಚ ನ್ಯಾಯಾಲಯದಿಂದ ಊರ್ಜಿತಗೊಂಡ ಕಾನೂನು ಎಲ್ಲರಿಗೂ ಅನ್ವಯವಾಗುತ್ತದೆ. ಆದರೆ ಅದನ್ನು ಯಾರು ಗಂಭೀರವಾಗಿ ಚಿಂತಿಸುತ್ತಾರೆ ? ಬಂದ್

ಕರೆ ನೀಡಲು ಯಾರಿಗೂ ಮೂಲಭೂತ ಹಕ್ಕು ಇಲ್ಲ ಎಂಬ ತೀರ್ಮಾನದ ಪರವಾಗಿ ಸರ್ವೋಚ್ಚನ್ಯಾಯಾಲಯವು ನೀಡುವ ಕಾರಣಗಳು ಸರಿಯಾದುದು, ತುಲನಾತ್ಮಕ ವಾದುದು ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿದೆ.

೧. ಶಾಲಾ ಕಾಲೇಜುಗಳು ಬಂದ್‌ನ ದಿನ ಮುಚ್ಚುವುದರಿಂದ ಒಮ್ಮೆ ಕಳೆದ ಸಮಯ ಹಿಂಪಡೆಯಲಾರದೆ ದೇಶಕ್ಕೆ ತುಂಬಲಾರದ ನಷ್ಟವಾಗುತ್ತದೆ.

೨. ದಿನಗೂಲಿ ನೌಕರರು ದಿನದ ಆದಾಯವನ್ನು ಕಳೆದುಕೊಳ್ಳುವುದಲ್ಲದೆ ಅಪಾರ ಹಾನಿಗೊಳಗಾಗುತ್ತಾರೆ.

೩. ತರಕಾರಿ, ಹೂ ಮತ್ತು ಹಣ್ಣಿನ ವ್ಯಾಪಾರ ಮಾಡುವ ಸಣ್ಣಪುಟ್ಟ ವ್ಯಾಪಾರಿಗಳು ದಿನದ ಆದಾಯವನ್ನು ಕಳೆದುಕೊಳ್ಳುವುದಲ್ಲದೇ ಕೊಳೆಯುವ ವ್ಯಾಪಾರಿ ಸಾಮಗ್ರಿಗಳನ್ನು ಕಳೆದುಕೊಳ್ಳುತ್ತಾರೆ.

೪. ಶುಶ್ರೂಷೆಗೆ ಆಸ್ಪತ್ರೆಗೆ ಹೋಗುವ ಅಥವಾ ಉದ್ಯೋಗ ಪಡೆಯಲು ಸಂದರ್ಶನಕ್ಕೆ ಹೋಗುವಂತಹ ಅತ್ಯಾವಶ್ಯಕ ಕೆಲಸಗಳು ನಿರ್ಬಂಧಿತಗೊಂಡು ಜನರು ತುಂಬಲಾರದ ಹಾನಿಗೊಳಗಾಗುತ್ತಾರೆ.

೫. ನ್ಯಾಯಾಲಯಗಳ ಕಾರ್ಯಚಟುವಟಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿ ನ್ಯಾಯದಾನದಲ್ಲಿ ವಿಳಂಬ ಅಥವಾ ನ್ಯಾಯ ನಿರಾಕರಣೆ ಉಂಟಾಗಬಹುದು.

೬. ಬಂದ್‌ನಿಂದಾಗಿ ಕೆಲವು ಸಮಾಜಘಾತುಕ ಶಕ್ತಿಗಳು ಸಮಾಜದಲ್ಲಿ ತಲೆಯೆತ್ತುತ್ತಾರೆ ಮತ್ತು ಲೂಟಿ ಇನ್ನಿತರ ಪ್ರಕರಣಗಳಲ್ಲಿ ತೊಡಗುತ್ತಾರೆ.

೭. ಸರ್ಕಾರಿಸ್ವಾಮ್ಯದ ಬಸ್ಸುಗಳು ಬಂದ್‌ನ ಮೊದಲ ಆಹುತಿಯಾಗುತ್ತವೆ ಮತ್ತು ಕಳೆದ ೫೦ ವರ್ಷಗಳಲ್ಲಿ ಸಾವಿರಾರು ಸರ್ಕಾರಿ ಸ್ವಾಮ್ಯದ ಬಸ್ಸುಗಳು ಧ್ವಂಸಗೊಂಡಿವೆ.

೮. ಅಮೂಲ್ಯವಾದ ಸಾರ್ವಜನಿಕ ಸ್ವತ್ತುಗಳಿಗೆ ಹಾನಿಯಾಗುವುದರಿಂದ ದೇಶದ ಖಜಾನೆಗೆ ತುಂಬಲಾರದ ನಷ್ಟ ಉಂಟಾಗುತ್ತದೆ.

ಬಂದ್‌ನಿಂದ ಉಂಟಾಗುವ ನಷ್ಟವನ್ನು ನಾವು ಲೆಕ್ಕ ಮಾಡುತ್ತಿರಬೇಕು ಅಥವಾ ಬಂದ್‌ನಿಂದಾಗುವ ನಷ್ಟವನ್ನು ವಿಚಾರಣೆ ಮಾಡಲು ಒಂದು ಆಯೋಗವನ್ನು ರಚಿಸಿ ಅದಕ್ಕೆ ವರ್ಷಾನುಗಟ್ಟಲೆ ಮಿಲಿಯನ್ ಹಣವನ್ನು ವೆಚ್ಚಮಾಡಬೇಕಾಗುತ್ತದೆ. ಬಂದ್‌ಗೆ ಕರೆನೀಡದೆ ಸಂವಿಧಾನಾತ್ಮಕವಾಗಿ ಮುಷ್ಕರಗಳನ್ನು ನಡೆಸಬೇಕೆಂಬ - ದೇಶದ ಎಲ್ಲಾ ಪ್ರಜೆಗಳಿಗೆ ಅನ್ವಯವಾಗುವ ಘನ ನ್ಯಾಯಾಲಯದ ತೀರ್ಪಿನ ಬಗ್ಗೆ ರಾಜಕೀಯ ಪಕ್ಷಗಳಲ್ಲಿ ಅಥವಾ ಇತರ ಸಂಘಟನೆಗಳಲ್ಲಿ ಒಮ್ಮತ ಮೂಡುತ್ತಿಲ್ಲ.

ಈ ದೇಶವನ್ನು ದುರ್ಬಲಗೊಳಿಸಲು ಇದು ಕೂಡ ಒಂದು ಸಂಗತಿಯಾಗಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು ದೇಶದ ಹಿತಾಸಕ್ತಿಗೆ ಅನುಕೂಲವಾಗಿದ್ದರೆ ಅದನ್ನು ರಾಜಕೀಯ ಪಕ್ಷಗಳು ಪಾಲಿಸುವ ಪರಿಪಾಠವಿತ್ತು. ಈ ವಿಚಾರದಲ್ಲಿ ದಿ : ೨೫-೧೧-೧೯೪೯ರ ಶಾಸನ ಸಭೆಯಲ್ಲಿ ಡಾ|| ಬಿ. ಆರ್. ಅಂಬೇಡ್ಕರ್‌ರವರ ಭಾಷಣವನ್ನು ಉಲ್ಲೇಖಿಸುವುದು ಅತ್ಯಂತ ಸೂಕ್ತವಾಗುತ್ತದೆ. ವಿದೇಶಿ ಆಡಳಿತದ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಸ್ತೆ ತಡೆ, ದೂರವಾಣಿ ಸಂಪರ್ಕ ಕಡಿತ, ರೈಲು ಹಳಿಗಳನ್ನು ಜೋಡಿಸಲು ಉಪಯೋಗಿಸುವ ಕಬ್ಬಿಣದ ಪಟ್ಟಿಗಳನ್ನು ತೆಗೆಯುವುದು ಇನ್ನೂ ಮುಂತಾದ ಚಟುವಟಿಕೆಗಳನ್ನು ಉಲ್ಲೇಖಿಸುತ್ತಾ ಈ ಕೆಳಗಿನಂತೆ ನುಡಿದರು :

''ನಾವು ಸಂವಿಧಾನವನ್ನು ಕೇವಲ ಕೃತಿಯಲ್ಲಿ ಆಚರಿಸದೇ ಕಾರ್ಯರೂಪಕ್ಕೆ ತರಬೇಕಾದರೆ ಏನು ಮಾಡಬೇಕು ? ನನ್ನ ದೃಷ್ಟಿಯಲ್ಲಿ ನಾವು ಮೊದಲು ಮಾಡಬೇಕಾಗಿರುವುದೆಂದರೆ ಸಾಮಾಜಿಕ ಮತ್ತು ಆರ್ಥಿಕ ಉದ್ದೇಶಗಳನ್ನು ಶೀಘ್ರವಾಗಿ ಈಡೇರಿಸಿಕೊಳ್ಳಲು ಸಂವಿಧಾನಾತ್ಮಕವಾಗಿ ಪ್ರಯತ್ನಿಸಬೇಕು.... ಎಲ್ಲಿ ಸಂವಿಧಾನಾತ್ಮಕ ವಿಧಾನದಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವೋ ಅಂತಹ ಸಂದರ್ಭಗಳಲ್ಲಿ ಅಸಂವಿಧಾನಾತ್ಮಕ ಅಥವಾ ಸಂವಿಧಾನ ಬಾಹಿರ ಚಟುವಟಿಕೆಗೆ ಅವಕಾಶವಿಲ್ಲ. ಈ ವಿಧಾನಗಳು ನಿರಂಕುಶ ಪ್ರಭುತ್ವವಾಗಿದೆ ಮತ್ತು ಅದನ್ನು ಶೀಘ್ರವಾಗಿ ತೊಡೆದು ಹಾಕಿದರೆ ನಮಗೆ ಒಳ್ಳೆಯದು'' (ಭಾರತೀಯ ಸಂವಿಧಾನದ ರಚನೆ : ಬಿ. ಶಿವರಾವ್ ಸಂಪುಟ - ೪, ಪುಟ ೯೩೫-೯೪೬ರಲ್ಲಿ ೯೪೨-೯೪೩).

ರಾಷ್ಟ್ರೀಯ ಏಕತೆ ಮತ್ತು ಸಂವಿಧಾನದ ನಿಯಮಗಳನ್ನು ಪರಿಪಾಲಿಸುವ ಎರಡು ಸಂದರ್ಭಗಳಲ್ಲಿ ನಾವುಗಳು ಡಾ|| ಬಿ. ಆರ್. ಅಂಬೇಡ್ಕರ್‌ರವರು ನೀಡಿರುವ ಸಲಹೆಗಳನ್ನು ತಾತ್ಸಾರ ಮಾಡಿದ್ದೇವೆ .

ಭರ್ತೃಹರಿಯ ಸುಪ್ರಸಿದ್ಧ ನುಡಿಯೊಂದು ಹೀಗಿದೆ -

ನ್ಯಾಯತ್‌ಪಾತಃ ಪ್ರವಿಚಲಂತಿ ಪದಂ ನ ಧೀರಃ

ಧೈರ್ಯಶಾಲಿಯಾದ ಮತ್ತು ಪ್ರಾಮಾಣಿಕ ವ್ಯಕ್ತಿಯು ಎಂದೂ ಕೂಡ ಸನ್ಮಾರ್ಗದಿಂದ ತನ್ನ ಹೆಜ್ಜೆಯನ್ನು ಹಿಂತೆಗೆಯುವುದಿಲ್ಲ.

ತಾವುಗಳೆಲ್ಲರೂ ಅಂತಹ ವ್ಯಕ್ತಿಗಳಾಗಿರೆಂದು ನಾನು ಆ ಭಗವಂತನಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

****

ಶೋಷಿತ ವರ್ಗ - ಒಂದು ಚಿಂತನೆ

ಬಂಧುಗಳೇ ಸಂವಿಧಾನದ ಬಗ್ಗೆ ಚಿಂತನೆಗೈದ ಮೇಲೆ ಸಂವಿಧಾನದಡಿಯಲ್ಲಿ 'ಶೋಷಿತ ವರ್ಗ'ವಾದ ದಲಿತರ ಬಗ್ಗೆ ಚಿಂತನೆಗೈಯುವುದು ಸೂಕ್ತ.

''ಪುನರ್ಜನ್ಮವು ಇದ್ದುದೇ ಆದರೆ, ನಾನು ಒಬ್ಬ, ಹರಿಜನ ಶಿಶುವಾಗಿ ಹುಟ್ಟ ಬಯಸುತ್ತೇನೆ.'' ಈ ಮಾತನ್ನು ನಾನು ಹೇಳುತ್ತಿಲ್ಲ, ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಹೇಳಿದ ಮಾತು ಇದಾಗಿದೆ. ಅದೇ ರೀತಿ ಇಡೀ ರಾಷ್ಟ್ರವು ಸದಾ ನೆನಪಿನಲ್ಲಿಡುವಂಥ ಮಾತೊಂದನ್ನು ಡಾ|| ರಾಧಾಕೃಷ್ಣನ್ ಅವರು ಹೇಳಿದ್ದಾರೆ -

''ಎಲ್ಲಾ ಮಾನವರಲ್ಲಿಯೂ ಇರುವ ಭಗವಂತನ ಅಂಶ ಒಂದೇ ಸಮಾನವಾದದ್ದು''

There is a saying in English "It is virtue and not birth that makes us noble" ಎಂದರೆ - ''ಒಬ್ಬ ಮನುಷ್ಯ ದೊಡ್ಡವನಾಗುವುದು ಅವನ ಗುಣಗಳಿಂದಲೇ ಹೊರತು ಹುಟ್ಟಿನಿಂದಲ್ಲ'' ಎಂದಾಗುತ್ತದೆ. ಇದಕ್ಕೆ ಜೀವಂತ ನಿರ್ದಶನಗಳೆಂದರೆ ಅಂದಿನ ಭಾರತ ರತ್ನ ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಇಂದಿನ ರಾಷ್ಟ್ರಪತಿ ಎ.ಪಿ.ಜೆ. ಕಲಾಂರು.

ನಾನು, ಪ್ರಾರಂಭದಲ್ಲಿ ತಮ್ಮನ್ನುದ್ದೇಶಿಸಿ ''ಬಂಧುಗಳೇ'' ಎಂದು ಸಂಬೋಧಿಸಿದ್ದೇನೆ. ಅದು ಕೆಲವರಿಗೆ ಆಶ್ಚರ್ಯವನ್ನುಂಟುಮಾಡಿರಬಹುದು. ಆದರೆ, ಅದರಲ್ಲಿ ಆಶ್ಚರ್ಯಪಡುವ ಸಂಗತಿ ಏನಿಲ್ಲ, ಕಾರಣವೇನೆಂದರೆ -

ದಾರ್ಶನಿಕ ಕವಿ ಶ್ರೀ ಡಿ. ವಿ. ಗುಂಡಪ್ಪನವರು, ತಮ್ಮ ಒಂದು ಕಗ್ಗದಲ್ಲೇ ಹೇಳಿದ್ದಾರೆ -

''ಅಕ್ಕಿಯೊಳಗನ್ನವನು ಮೊದಲಾರು ಕಂಡವನು ?
ಅಕ್ಕರದ ಬರಹಕ್ಕೆ ಮೊದಲಿಗನಾರು ?
ಲೆಕ್ಕವಿರಿಸಿಲ್ಲ ಜಗ, ತನ್ನಾದಿಬಂಧುಗಳ
ದಕ್ಕುವುದೆ ನಿನಗೆ ಜಸ ? ಮಂಕುತಿಮ್ಮ''

ಕಾರಣ ತಾವುಗಳೆಲ್ಲರೂ ನನ್ನ ಬಂಧುಗಳಲ್ಲದೆ ಮತ್ತಿನ್ನೇನು ?

ಜಾತ್ಯತೀತ ರಾಷ್ಟ್ರವಾದ ಭಾರತದ ಒಗ್ಗಟ್ಟಿನ ಬಗ್ಗೆ ಕವಿ ದಿನಕರ ದೇಸಾಯಿಯವರು ತಮ್ಮ ಒಂದು ಚುಟುಕಿನಲ್ಲಿ ಹೀಗೆ ಹೇಳಿದ್ದಾರೆ -

''ಕೋಟಿ ಜಾತಿಗಳಿದ್ದರೂ ಇಲ್ಲ ಚಿಂತೆ
ಭಾರತದ ಒಗ್ಗಟ್ಟು ಕ್ಯಾಬೇಜಿನಂತೆ.
ಒಂದೊಂದು ಎಲೆ ಎನ್ನುವುದು ಒಂದು ಜಾತಿ
ಅಪ್ರತಿಮವಾದದ್ದು ಭಾರತದ ರೀತಿ''

ಶರಣ ಶ್ರೀ ಹರಳಯ್ಯನವರ ಚಮ್ಮಾವುಗೆಗಳನ್ನು, ತನ್ನ ತಲೆಯ ಮೇಲೆ ಹೊತ್ತ ಶರಣ ಶ್ರೀ ಬಸವಣ್ಣನವರ ಪ್ರಸಂಗವನ್ನು ಇಂದಿಗೂ ಸಹ ಇತಿಹಾಸ ನಮಗೆ ಸಾರಿ ಸಾರಿ ಹೇಳುತ್ತದೆ.

ಆದರೆ ಇತ್ತೀಚಿನ ದಿನಗಳಲ್ಲಿ 'ಸಾಮರ್ಥ್ಯ' ಎಂಬ ವಿಸ್ತೃತವಾದ ಅರ್ಥದ ಪದವನ್ನು 'ಸಂಕೀರ್ಣ' ಪದಕ್ಕೆ ಸೀಮಿತಗೊಳಿಸಿ ಸಾರ್ವಜನಿಕವಾಗಿ ಮತೀಯ ಭಾವನೆಗಳನ್ನು ಕೆರಳಿಸುವ, ಅರ್ಥಹೀನ ಹೇಳಿಕೆಗಳನ್ನು ಕೊಡುವ ನಾಯಕರ ಬಗ್ಗೆ ನೊಂದು, ಪ. ರಾಮಕೃಷ್ಣಶಾಸ್ತ್ರಿಯವರು ತಮ್ಮ ಒಂದು ಕವನದಲ್ಲಿ ನುಡಿಯುವ ರೀತಿ ಹೀಗಿದೆ -

''ಜಾತಿ ಕಲಹಕ್ಕೆ ಯಾವಾಗ ಬಂದೀತು ಮುಪ್ಪು ?
ರಾಜಕಾರಣಿಗಳು, ಅದಕ್ಕೆ ಹಾಕುವರು ಹೆಪ್ಪು
ಈ ಮೊಸರು ಕಡೆದು ತೆಗೆಯುವರು ಬೆಣ್ಣೆ
ಬೆಣ್ಣೆ ತಿಂದವರ, ಕೈಗೆ ಕೊಡುವುದು ಒಂದು ದೊಣ್ಣೆ'' ಎಂದು.

ಮೇಲ್ವರ್ಗದವರ ದಬ್ಬಾಳಿಕೆ ಅಥವಾ ತುಳಿತಕ್ಕೆ ಒಳಗಾದ ದಲಿತ ಸಮಾಜದ ಜನ ಬಡತನದಿಂದ ನಲುಗಿ ನಲುಗಿ ಬಸವಳಿದು ಹೋಗಿದ್ದಾರೆ.

ಆ ಮಾತು ಬೇರೆ. ನಮ್ಮಲ್ಲಿ ಪ್ರಚಲಿತವಿರುವ ಗಾದೆ ಮಾತೊಂದು ಉಂಟು :-

''ಸನ್ಯಾಸಿ ಎದ್ದರೆ, ಕಡವನೆ (ಮೃಗಚರ್ಮ) ಹೆಗಲ ಮೇಲೆ''

ಇದರ ಇಂಗ್ಲೀಷ್ ಅರ್ಥ -

(A poor man has no burden) ಎಂದರೆ ''ದಲಿತನಿಗೆ ಯಾವುದೇ ಭಾರ ಇರುವುದಿಲ್ಲ'' ಎಂದಾಗುತ್ತದೆ. ಆದರೆ ಆ ದಲಿತ, ಬದುಕಿರುವವರೆಗೂ, ಗೌರವ ದಿಂದ ಬದುಕಲೇಬೇಕಲ್ಲವೆ ? ಆದರೆ, ತಮ್ಮ ಹುಟ್ಟಿನಿಂದ ಬಂದ ಜಾತಿಯನ್ನೇ ಒಂದು

ಆಧಾರವನ್ನಾಗಿಟ್ಟುಕೊಂಡು, ಜನರಿಂದ ತುಳಿತಕ್ಕೆ ಒಳಗಾದ, ಅವರು ಒಂದು ಹುಲ್ಲುಕಡ್ಡಿಯಂತಾಗಿದ್ದಾರೆ.

ನೋಡಿ ಇತಿಹಾಸದ ಪುಟಗಳನ್ನು ಅವಲೋಕಿಸಿದರೆ, ಸಭಾರಂಜನ ಶತಕದಲ್ಲಿ ನೀಲಕಂಠದೀಕ್ಷಿತರು, ಆಡಿದ ಮಾತೊಂದು ಇದೆ. ಅದೇನೆಂದರೆ -

''ದುರ್ಬಲರಿಗೆ ಎಲ್ಲೂ ಸ್ಥಾನವಿಲ್ಲ.'' ಈ ಮಾತನ್ನು ಅವರು ವ್ಯಂಗ್ಯವಾಗಿ ಹೇಳಲಿಲ್ಲ, ನೆಲಕ್ಕೆ ಎಸೆಯಲ್ಪಟ್ಟ ಚೆಂಡು, ನೆಲವನ್ನು ಬಿಟ್ಟು, ತನ್ನಷ್ಟಕ್ಕೆ ತಾನೇ ಹೇಗೆ ಮೇಲಕ್ಕೆ ಬರುತ್ತದೆಯೋ ಅದೇ ರೀತಿ ತಾವುಗಳು ಪುಟಿದೇಳಬೇಕು ಎನ್ನುವ ಅರ್ಥ ದಲ್ಲಿ ಹೇಳಿದ್ದಾರೆ. ಇದಕ್ಕೆ ಸಮಾನಾರ್ಥವನ್ನು ಕೊಡುವ, ಇಂಗ್ಲೀಷ್ ಮಾತೊಂದಿದೆ. ಅದೇನೆಂದರೆ -

"Absence is to love, what wind is to fire, it extinguishes, the small, it enkindles, the great" ಇದರ ಅರ್ಥ, ನಮ್ಮಲ್ಲಿ ಪ್ರೀತಿಯ ಕೊರತೆ ಇದೆ. ''ಒಂದು ಬೆಂಕಿಯ ಕಡ್ಡಿಗೆ ಗಾಳಿಯ ಕೊರತೆ ಇದ್ದಂತೆ, ತಮ್ಮೆಲ್ಲರ ಬೆಳವಣಿಗೆಗೆ ಸಮಾಜದಲ್ಲಿಯ ಜನರ ಪ್ರೀತಿಯ ಕೊರತೆ ಇದೆ'' ಎಂದಾಗುತ್ತದೆ. ಅಷ್ಟೇ ಅಲ್ಲ, ''ಬೆಂಕಿಯಿಂದ ಉರಿಯುತ್ತಿರುವ ಒಂದೇ ಒಂದು ಕಡ್ಡಿಯನ್ನು ಗಾಳಿ ಆರಿಸುತ್ತದೆ. ಆದರೆ ಅದೇ ಗಾಳಿ ಅರಣ್ಯದಲ್ಲಿಯ ದೊಡ್ಡಪ್ರಮಾಣದ ಬೆಂಕಿಯನ್ನು ಹೊತ್ತಿ ಉರಿಯಲು ಸಹಾಯವನ್ನು ಮಾಡುತ್ತದೆ.'' ಕಾರಣ, ಅಂದಿನ ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅರಿತ, ಸಂವಿಧಾನದ ಶಿಲ್ಪಿ, ಶ್ರೀ ಬಾಬಾ ಸಾಹೇಬ್ ಅಂಬೇಡ್ಕರ್ ಸಂವಿಧಾನದ ೧೪ನೆಯ ವಿಧಿಯಲ್ಲಿ ಸಮಾನತೆಯನ್ನು ಹೇಳುವುದರ ಜೊತೆಜೊತೆಗೆ ದಲಿತರು ಹಾಗೂ ಕೆಳವರ್ಗದವರನ್ನು ಮೇಲ್ವರ್ಗದವರಿಗೆ ಸರಿಸಮಾನವಾಗುವಂತೆ, ಅವಕಾಶವನ್ನು ಕಲ್ಪಿಸುವುದಕ್ಕೋಸ್ಕರ ಸಂವಿಧಾನದ ೧೫,೧೬,೧೭,೨೯,೩೦ ಹಾಗೂ (Directive principles of state policy) ರಾಜ್ಯದ ನಿರ್ದೇಶನ ತತ್ವ ೩೮ನೇ ವಿಧಿಗಳನ್ನು ಪ್ರತಿಷ್ಠಾಪಿಸಿ ಸಾಮಾಜಿಕ ನ್ಯಾಯಕ್ಕೆ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದಾರೆ.

(Directive principles of state policy) ರಾಜ್ಯದ ನಿರ್ದೇಶನ ತತ್ವಗಳಿಗನುಗುಣವಾಗಿ ಹಿಂದುಳಿದ ಜನತೆಗೆ, ಕಾನೂನಿನ ಸಹಾಯ ಮಾಡುವುದು ರಾಷ್ಟ್ರದ ಕರ್ತವ್ಯವೆಂದು ಅರಿತ ಶಾಸಕರು ೧೯೮೭ರಲ್ಲಿ ಕಾನೂನು ಸೇವೆಗಳಿಗೆ ಸಂಬಂಧಿಸಿದ ಶಾಸನ ಒಂದನ್ನು ಜಾರಿಯಲ್ಲಿ ತಂದಿದ್ದಾರೆ.

ಆ ಶಾಸನದಡಿಯಲ್ಲಿ ಸರ್ಕಾರ ಮಾಡುವ ೩ ಕೆಲಸಗಳಲ್ಲಿ, ಇಂದಿನ ಈ ''ಕಾನೂನು ತಿಳುವಳಿಕೆ'' ಶಿಬಿರವು ಒಂದು.

ಮಹಾತ್ಮಾ ಗಾಂಧೀಜಿಯವರು ಅಂದು ದಲಿತರ ಬಗ್ಗೆ ಪ್ರೀತಿಯಿಂದ ಒಂದು ಮಾತನ್ನು ಹೇಳಿದ್ದರು -

''ಬೆತ್ತಲೆ ಇದ್ದವನಿಗೆ ಬಟ್ಟೆ ಕೊಟ್ಟು
ಅವಮಾನಿಸುವುದೇಕೆ ?
ಅದರ ಬದಲು ಕೆಲಸಕೊಟ್ಟು ಬಂದ
ಉತ್ಪನ್ನದಿಂದ ಆತ ಬಟ್ಟೆಕೊಳ್ಳುವಂತಾಗಬೇಕು'' ಎಂದು.

****

ದಸ್ತಗಿರಿ - ಕೈಕೋಳ ತೊಡಿಸುವಿಕೆ - ಒಂದು ಚಿಂತನೆ

ಸಂವಿಧಾನದಡಿಯಲ್ಲಿ 'ಸ್ವಾತಂತ್ರ್ಯ'ದ ಬಗ್ಗೆ ಈಗಾಗಲೇ ಚಿಂತನೆ ಮಾಡಿದ್ದಾಗಿದೆ. ಈಗ (Arrest and handcuffing) ದಸ್ತಗಿರಿ ಹಾಗೂ ಕೈಕೋಳ ತೊಡಿಸುವಿಕೆ ಈ ವಿಷಯದ ಬಗ್ಗೆ ಚಿಂತನೆ ಅವಶ್ಯ.

ಕಾನೂನು ಹಾಗೂ ಪೊಲೀಸ್ ಇವೆರಡು ಒಂದೇ ನಾಣ್ಯದ ಎರಡು ಮುಖಗಳು ಇದ್ದಂತೆ. ಅವು ಒಂದನ್ನೊಂದು ಅಗಲಿ ಇರಲಾರವು. ಏಕೆಂದರೆ ಕಾನೂನಿನ ಕಾರ್ಯಾಚರಣೆ ಆಗುವುದು ಪೊಲೀಸರ ಮುಖಾಂತರವೇ. ಗ್ರಾವರ್ ವೇಲ್‌ಮನ್ ಹೇಳುತ್ತಾರೆ -

There is a lot of Law, at the end of Police men's night-stick ಅಂದರೆ, ''ಪೊಲೀಸರ ಲಾಠಿಯ ತುದಿಯಲ್ಲಿ ಸಾಕಷ್ಟು ಕಾನೂನಿನ ಶಕ್ತಿ ಇರುತ್ತದೆ''.

ಆದರೆ ಮತ್ತೊಬ್ಬ ಜ್ಞಾನಿ ಹೇಳುತ್ತಾನೆ -

The long arms of law, are often being shortened ಎಂದು. ಅಂದರೆ ಕಾನೂನಿನ ಉದ್ದವಾದ ಕೈಗಳನ್ನು ಅನೇಕ ಸಲ ಮೊಟಕುಗೊಳಿಸಲಾಗುತ್ತದೆ ಎಂದು.

ಬಹುಬೇಗ ಪರಿವರ್ತನೆಯಾಗುವಂತಹ ಈ ಸಮಾಜದಲ್ಲಿ, ಜನರ ಬುದ್ಧಿಯೂ ಸಹ, ಅಷ್ಟೇ ವೇಗದಲ್ಲಿ ಬೆಳೆಯುತ್ತಿರುವುದು ನಮಗೆಲ್ಲಾ ತಿಳಿದ ವಿಷಯ. ಕಾನೂನಿನ ದೃಷ್ಟಿಯಲ್ಲಿ ಜನರ ಬುದ್ಧಿಮಟ್ಟ ಎಷ್ಟಿರಬೇಕೆಂದರೆ That of ordinary prudent man. ಅಂದರೆ ಸಾಮಾನ್ಯ ವಿವೇಕದ್ದಾಗಿರಬೇಕು. ಬುದ್ಧಿಮಟ್ಟ ಹೆಚ್ಚಾದರೆ (Mischief) ಕೇಡು, ಕೆಡಕನ್ನು ಮಾಡುತ್ತಾನೆ. ಬುದ್ಧಿಮಟ್ಟ ಕಡಿಮೆಯಾದರೆ (Mistake) ತಪ್ಪನ್ನು ಮಾಡುತ್ತಾನೆ.

ತಮಗೆಲ್ಲಾ ಗೊತ್ತಿದ್ದಂತೆ, ಸಾಮಾನ್ಯ ಜ್ಞಾನದ ಕೊರತೆಯಿಂದಾಗಿ ಜನರು ತಪ್ಪು ಮಾಡುವ ಕಾಲವೊಂದಿತ್ತು. ಆದರೆ ಇತ್ತೀಚೆಗೆ ಸಮಾಜದಲ್ಲಿ ಬುದ್ಧಿಮಟ್ಟ, ಸಾಮಾನ್ಯ ವಿವೇಕಕ್ಕಿಂತಲೂ ಹೆಚ್ಚಾಗಿ, ಕೆಡುಕನ್ನೆ ಮಾಡುವ ಜನರಿಗೆ ಕೊರತೆ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಕಾನೂನಿನ ಕಾರ್ಯಾಚರಣೆ ಸ್ವಲ್ಪ ಕಷ್ಟಕರವಾಗುತ್ತದೆ. ಈ ದೃಷ್ಟಿಯಿಂದ ಮೊಟ್ಟಮೊದಲನೆಯದಾಗಿ, Police Constable ಇದರ ಅರ್ಥ ತಿಳಿಯುವುದು ಅವಶ್ಯ.

Police = ಪ್ರಜೆಗಳ / ಸಾರ್ವಜನಿಕರ ನೆಮ್ಮದಿ / ಶಾಂತತೆ ಪಾಲನೆಯ ದಳ.

Constable = ಪೇದೆ / ಕಾಲಾಳು / ಸೇವಕ

Police Constable ಅಂದರೆ ಪ್ರಜೆಗಳ ಅಥವಾ ಸಾರ್ವಜನಿಕರ ನೆಮ್ಮದಿ ಅಥವಾ ಶಾಂತತೆ ಪಾಲನೆಯ ದಳದ ಕಾಲಾಳು ಅಥವಾ ಸೇವಕ ಎಂದಾಗುತ್ತದೆ.

ನ್ಯಾಯಾಧೀಶರಾದ ಕೂಡಲೇ ನಾವು ಯಾರಿಗಾದರು ಶಿಕ್ಷೆ ಕೊಡಬಹುದು. ಪೊಲೀಸ್ ಅಧಿಕಾರಿಗಳಾದೊಡನೆ, ನಾವು ಯಾರನ್ನಾದರೂ ಬಂಧಿಸಬಹುದು ಅಥವಾ ದಸ್ತಗಿರಿ ಮಾಡಬಹುದು. ಇವು ನಮ್ಮ ಹುಚ್ಚು ಮನಸ್ಸಿನ ತಪ್ಪು ಕಲ್ಪನೆಗಳು.

ಹಾಗಾದರೆ ಒಬ್ಬ ನಾಗರಿಕನನ್ನು ಪೊಲೀಸ್ ಅಧಿಕಾರಿ ಯಾವಾಗ ಬಂಧಿಸಬಹುದು, ಹಾಗೂ ಬಂಧಿಸುವಾಗ ಕೈಕೋಳ ಅಥವಾ ಬೇಡಿಯನ್ನು ಹಾಕಬಹುದೇ - ಇವು ನಮ್ಮ ಮುಂದಿರುವ ಪ್ರಶ್ನೆಗಳು.

ಈ ಪ್ರಶ್ನೆಗಳು ಬರೀ ವಸ್ತುಸ್ಥಿತಿಯಾಗದೆ ಕಾನೂನು ವ್ಯಾಪ್ತಿಯಲ್ಲಿ ಬರುವ ವಿಷಯಗಳಾದ್ದರಿಂದ, ತಾವುಗಳು ಈ ಬಗ್ಗೆ ತಿಳಿಯಲೇ ಬೇಕು. ಏಕೆ ತಿಳಿದುಕೊಳ್ಳಬೇಕು ಎನ್ನುವ ಪ್ರಶ್ನೆಗೆ ಉತ್ತರ Ignorance of law is no excuse ಅಂದರೆ ''ಕಾನೂನಿನ ಅಜ್ಞಾನ ಅಕ್ಷಮ್ಯ''

ಈ ವಿಷಯವನ್ನು ಕಾನೂನನ್ನು ಕಾರ್ಯಾಚರಣೆಯಲ್ಲಿ ತರುವ ಮಹತ್ವದ ಹೊಣೆ ಹೊತ್ತ ಪೊಲೀಸರೇ ತಿಳಿಯುವುದು ಅತ್ಯವಶ್ಯ.

ಕಾನೂನು ಎಂದ ಕೂಡಲೇ ಶಾಸನಗಳು -

(I.P.C.) ಭಾರತದ ದಂಡ ಸಂಹಿತೆ

(CR.P.C.) ಭಾರತದ ದಂಡ ಪ್ರಕ್ರಿಯಾ ಸಂಹಿತೆ

(Police Manual) ಆರಕ್ಷಕರ ಕೈಪಿಡಿ (ಇತ್ಯಾದಿ)ಮಾತ್ರ ನಮ್ಮ ಕಣ್ಣುಮುಂದೆ ಬರುವ ಪುಸ್ತಕಗಳು.

ಆದರೆ (Judge Made Laws) ''ನ್ಯಾಯಾಧೀಶರು ಮಾಡುವ ಕಾನೂನುಗಳು'' ಸಹ ೨ನೇ ವಿಧವಾದ ಕಾನೂನುಗಳು:ಳೇ.

ಅಮೇರಿಕಾ ದೇಶದ ನ್ಯಾಯಶಾಸ್ತ್ರಜ್ಞರಾದ ಜಾನ್ ಮಿನೋರ್ ವಿಜಹಂ (೧೯೬೭) ರಲ್ಲಿ ಹೇಳಿದ ಮಹತ್ವದ ಮಾತೊಂದು ಇದೆ. ಅದನ್ನು ಈ ಪ್ರಸಂಗದಲ್ಲಿ ನೆನೆದರೆ ಅಪ್ರಸ್ತುತವಾಗಲಿಕ್ಕಿಲ್ಲ ಎಂದು ಭಾವಿಸಿ ಅದನ್ನು ನೆನೆಯಬಯಸುತ್ತೇನೆ. ಅದೇನೆಂದರೆ,

''ಪೊಲೀಸರ (Efficiency) ಕಾರ್ಯಸಾಧನೆ ಮಾತ್ರ ಕೊನೆಯಾಗಿರದೇ, ಅದು ಸಂವಿಧಾನಾತ್ಮಕ ಹಕ್ಕುಗಳಿಗೆ ದಾರಿಮಾಡಿಕೊಡಬೇಕು'' ಎಂದು.

ನಾಗರಿಕತೆ ಬೆಳೆದಂತೆಲ್ಲಾ ಸ್ವತ್ತುಗಳಿಗೆ ಸಂಬಂಧಿಸಿದ ವ್ಯಾಜ್ಯಗಳು, ಕಡಿಮೆಯಾಗಿ (Human rights) ''ಮಾನವ ಹಕ್ಕುಗಳಿಗೆ'' ಹೆಚ್ಚಿನ ಪ್ರಾಶಸ್ತ್ಯತೆ ಉಂಟಾದುದರಿಂದ ಭಾರತದ ಸರ್ವೋಚ್ಚ ನ್ಯಾಯಾಲಯ, ಬಂಧನ ಹಾಗೂ ಕೈಕೋಳ ತೊಡಿಸುವ ಬಗ್ಗೆ ಅನೇಕ ಮಾರ್ಗದರ್ಶನ, ಸೂಚನೆಗಳನ್ನು ಆದೇಶಿಸಿದೆ.

ಪೋಲಿಸರಿಂದ ಅವುಗಳ ಉಲ್ಲಂಘನೆಯಾದರೆ, ಅಂತಹ ಬಂಧನ ಅಕ್ರಮ ಬಂಧನ ಎನಿಸಿಕೊಳ್ಳುತ್ತದೆ. ಆಗ ತಾವುಗಳು ಬರೀ (Disciplinary enquiry) ಆಡಳಿತದ ''ಶಿಸ್ತಿನ ಕ್ರಮ'ವನ್ನಷ್ಟೇ ಎದುರಿಸುವುದು ಅಲ್ಲ, ನ್ಯಾಯಾಲಯ ತಮ್ಮಿಂದ ಅವನಿಗೆ ಪರಿಹಾರವನ್ನು ಕೊಡಲು ಆಜ್ಞೆ ಮಾಡುತ್ತದೆ. (AIR 1997 S.C. 1886)

ಪರಿಹಾರದ ಧನವನ್ನು, ದಂಡದ ರೂಪದಲ್ಲಿ ತಮ್ಮಿಂದ ವಸೂಲಿ ಮಾಡಲು ಕಾನೂನಿನಲ್ಲಿ ಅವಕಾಶ ಉಂಟು. ಒಂದು ವೇಳೆ ಸದರಿ ಹಣ ದಂಡ ವಸೂಲಿಯಾಗದಿದ್ದರೆ ನ್ಯಾಯಾಲಯ, ತಮಗೆ ಶಿಕ್ಷೆಯನ್ನು ಸಹ ವಿಧಿಸಬಹುದಾಗಿದೆ. ಹಾಗೂ ತಾವುಗಳು ಸರ್ವೋಚ್ಚ ನ್ಯಾಯಾಲಯದ ನಿಂದನೆ ಅಥವಾ ಅಗೌರವಕ್ಕೆ ಹೊಣೆಗಾರರಾಗಿ (Contempt of Court Act) ಕೆಳಗೆ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಅದರಲ್ಲಿ ಸಂದೇಹವೇ ಇಲ್ಲ.

ಪೋಲಿಸರು ಮಾಡುವ ಪ್ರತಿಯೊಂದು ಕೆಲಸಗಳು, ಸರ್ಕಾರದ ಪರವಾಗಿ ಮಾಡುತ್ತೇವೆ ಹಾಗೂ ಅವುಗಳಿಗೆಲ್ಲಾ ಸರ್ಕಾರವೇ ಹೊಣೆ ಎಂದು ಹೇಳಿ ತಮ್ಮ ವೈಯಕ್ತಿಕ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಕಾಲವೊಂದಿತ್ತು. ಆದರೆ ೧೯೯೬ರ ನಂತರ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಪ್ರಕಾರ,

ಸರ್ಕಾರಿ ನೌಕರರು ಅಂತಹ ಕೃತ್ಯಗಳಿಗೆ ವೈಯಕ್ತಿಕವಾಗಿ ಹೊಣೆಯಾಗುತ್ತಾರೆ, ಹಾಗೂ ಅವರಿಂದ ಲಕ್ಷಾಂತರ ರೂಪಾಯಿಗಳನ್ನು ಪರಿಹಾರ ರೂಪವಾಗಿ ಕೊಡಿಸಬಹುದು ಎನ್ನುವ ಮಹತ್ವದ, ಐತಿಹಾಸಿಕ ತೀರ್ಪನ್ನು ನೀಡಿದ್ದಾರೆ. ತಾವೆಲ್ಲರೂ ಗಮನದಲ್ಲಿಡಬೇಕಾದ ಸಂಗತಿ ಇದಾಗಿದೆ. ಉದಾ : Lockup death cases ಇತ್ಯಾದಿ.

ಪ್ರಪ್ರಥಮವಾಗಿ ಪಿರ್ಯಾದಿ ಬಂದ ಕೂಡಲೇ ಅದು ''ಸಮಂಜಸವಾಗಿದೆಯೇ'' ಎಂದು ಕೂಲಂಕಷವಾಗಿ ಪರೀಕ್ಷಿಸಿದ ನಂತರವೇ ನೊಂದಾಯಿಸುವುದು ಪೊಲೀಸರ ಕರ್ತವ್ಯವಾಗಿದೆ. ಆದರೆ ಒಂದು ವೇಳೆ ನೊಂದಾಯಿಸದಿದ್ದರೆ ತಮ್ಮ ಮೇಲಧಿಕಾರಿಗಳಿಗೆ ಅಥವಾ ನ್ಯಾಯಾಲಯಕ್ಕೆ ಪಿರ್ಯಾದಿದಾರನು ಮೊರೆ ಹೋಗಬಹುದೆಂಬ ವಿಚಾರವನ್ನು ಇಟ್ಟುಕೊಂಡು ಯಾಂತ್ರಿಕವಾಗಿ ಪಿರ್ಯಾದಿಯನ್ನು ನೊಂದಾಯಿಸುತ್ತಿರುವುದು ವಿಷಾದದ ಸಂಗತಿ.

ಒಬ್ಬ ವ್ಯಕ್ತಿ (Cognizible offence)ಸಂಜ್ಞೆಯ ಅಪರಾಧವನ್ನು ಎಸಗಿದಲ್ಲಿ, ನ್ಯಾಯಾಧೀಶರಿಂದ ವಾರಂಟ್‌ಗಳಿಲ್ಲದೆ, ದಸ್ತಗಿರಿ ಮಾಡುವ ಹಕ್ಕು ತಮಗಿದೆ. ಅವಶ್ಯವೆನಿಸಿದರೆ ಅವನಿಗೆ ವೈದ್ಯಕೀಯ ತಪಾಸಣೆಗೂ ಕರೆದುಕೊಂಡು ಹೋಗುವಂತಹ ಹೊಣೆ ತಮ್ಮ ಮೇಲೆ ಇದೆ. ನ್ಯಾಯಾಲಯದ ವಾರಂಟ್ ಇದ್ದಾಗ ಅಥವಾ ಇಲ್ಲದೆಯೇ, ದಸ್ತಗಿರಿಯನ್ನು ಮಾಡಿದ ಸಂದರ್ಭದಲ್ಲಿಯೂ ಸಹ ಕೈಕೋಳವನ್ನು ತೊಡಿಸುವಂತಿಲ್ಲ. ಈ ಮುಂದೆ ಹೇಳುವ ಸರ್ವೋಚ್ಚ ನ್ಯಾಯಾಲಯದ ಅಂಶಗಳನ್ನು ಖಚಿತಪಡಿಸಿಕೊಂಡ ನಂತರವೇ ಹಾಗೂ ಅವುಗಳಿಗೆ ಅನುಸಾರವಾಗಿ ಮಾತ್ರ ಕೈಕೋಳವನ್ನು ತೊಡಿಸಬಹುದು.

ಆದರೆ ಒಬ್ಬ ವ್ಯಕ್ತಿಯನ್ನು ಬಂಧಿಸುವಾಗ, ತಾವುಗಳು ಗಮನದಲ್ಲಿಟ್ಟುಕೊಳ್ಳಬೇಕಾದದ್ದು, ಅವನೂ ಸಹ, ತಮ್ಮಂತೆ ಒಬ್ಬ ನಾಗರಿಕ - ಅವನ ಅಪರಾಧ (Prove) ರುಜುವಾತಾಗುವವರೆಗೆ ಅವನನ್ನು ಕಾನೂನಿನ ದೃಷ್ಟಿಯಲ್ಲಿ (Innocent) ಒಬ್ಬ ಮುಗ್ಧ ಎಂದು ಬಗೆಯಲಾಗುತ್ತದೆ. ಕಾರಣ ಕೈಕೋಳ ತೊಡಿಸುವುದರಿಂದ, ಅವರ ಗೌರವಕ್ಕೆ ಧಕ್ಕೆ ಉಂಟಾಗುತ್ತದೆ. ಅದು ಹಾಗಾಗಬಾರದು, ಏಕೆಂದರೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ, (Living) ಎಂದರೆ (Dignified Living or Living with Dignity) ಅಂದರೆ, ಜೀವಿಸುವುದು- ಅಂದರೆ ಗೌರವಯುತವಾಗಿ ಜೀವಿಸುವುದೇ ಹೊರತು ಬರೀ ಪಶುಪಕ್ಷಿಗಳಂತೆ ಜೀವಿಸುವದಲ್ಲ ಎಂದು ಅರ್ಥೈಸಿದ್ದಾರೆ.

ಇದು ಸಹ ಬಹಳ ಮಹತ್ವದ ಬೆಳವಣಿಗೆ, ಹಾಗೂ ತಾವೆಲ್ಲರೂ ಗಮನಿಸಬೇಕಾದ ಸಂಗತಿ.

ಕಾರಣ, ಕೈಕೋಳ ತೊಡಿಸುವಿಕೆಯ ಬಗ್ಗೆ, ಪೊಲೀಸ್ ಹಾಗೂ ಜೈಲಿನ ಅಧಿಕಾರಿಗಳು, ತಿಳಿದುಕೊಳ್ಳುವುದು ಅತ್ಯವಶ್ಯ. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ :

೧. ಯಾವುದೇ ಒಬ್ಬ ವ್ಯಕ್ತಿ, ದಸ್ತಗಿರಿಯಾದ ಕೂಡಲೇ ಅವನನ್ನು ಯಾವ ಕಾರಣಕ್ಕಾಗಿ ದಸ್ತಗಿರಿ ಮಾಡಲಾಗಿದೆ ಎನ್ನುವ ವಿಷಯವನ್ನು ಅವನಿಗೆ ತಿಳಿಸುವುದು ತಮ್ಮ ಪ್ರಪ್ರಥಮ ಕರ್ತವ್ಯವಾಗಿದೆ. ಇದು ಸ್ವಾಭಾವಿಕ ನ್ಯಾಯ ಅಥವಾ (Natural Justice) ತತ್ವಗಳಿಗೆ ಅನುಗುಣವಾದ ಸಂಗತಿಯಾಗಿದೆ.

೨. ಒಬ್ಬ ವ್ಯಕ್ತಿ, ಅಪರಾಧವನ್ನು ಎಸಗಿದ್ದಾನೆ ಎಂದು ಪೊಲೀಸರು ತಮ್ಮಷ್ಟಕ್ಕೆ ತಾವೇ, ಮನಸ್ಸಿಗೆ ಬಂದ ಹಾಗೆ ನಿರಂಕುಶ ಪ್ರಭುಗಳಂತೆ ವರ್ತಿಸಿ ಅವನ ತಪ್ಪಿನ ಬಗ್ಗೆ ಬರೀ ಊಹಿಸಿದರೆ ಸಾಲದು. ಯಾವ ಆಧಾರಗಳ ಮೇಲೆ ಅಂತಹ ಊಹೆಗೆ ತಲುಪಲು ಸಾಧ್ಯವಾಯಿತು ಎನ್ನುವುದನ್ನು ತಿಳಿಸಬೇಕು.

೩. ಆಧಾರವು ಸಹ ಬಂಧನಕ್ಕೆ ಸುಸಂಗತ, ಮತ್ತು ಸಾಮೀಪ್ಯವನ್ನು ಹೊಂದಿರಬೇಕು.

೪. ಬಂಧಿಸಲು ನಿರ್ಣಯಿಸಲಾಯಿತು ಎಂದಷ್ಟೇ ಹೇಳಿದರೆ ಸಾಲದು, ತಮ್ಮ ನಿರ್ಣಯಕ್ಕೆ ಸಂಬಂಧಪಟ್ಟ ಎಲ್ಲಾ ವಸ್ತುಸ್ಥಿತಿಯನ್ನು ಹೇಳಬೇಕು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಸಹ ಅವನಿಗೆ ಕೊಡಮಾಡಬೇಕು.

೫. ಬಂಧಿಸಲ್ಪಡುವ ವ್ಯಕ್ತಿಗೆ ಎಸ್. ಹೆಚ್. ಓ. ಆರಕ್ಷಕ ಠಾಣಾ ಅಧಿಕಾರಿಯ ಆಜ್ಞೆಯನ್ನಷ್ಟೇ ಹೇಳುವುದು ಅಲ್ಲ ಅವರ ಆಜ್ಞೆಯನ್ನು ಒಂದು ವೇಳೆ ಅವನು ಬಯಸಿದರೆ, ಅವನಿಗೆ ತಾವುಗಳು ತೋರಿಸಲೇಬೇಕು. ಇವುಗಳು ಕಾನೂನು ತಮ್ಮ ಮೇಲೆ ಹೊರಿಸಿದಂತಹ ಹೊಣೆಗಳಾದ್ದರಿಂದ ಅವುಗಳನ್ನು ತಾವುಗಳು ತಮ್ಮ ಕರ್ತವ್ಯಗಳೆಂದು ಪಾಲಿಸುವುದು ಅತ್ಯವಶ್ಯ.

೬. ಅಷ್ಟೇ ಅಲ್ಲ, ಆ ವ್ಯಕ್ತಿಗೆ ತನಗೆ ಬೇಕಾದ ಗೆಳೆಯನನ್ನು, ಸಂದರ್ಶಿಸುವ ಹಕ್ಕು ಇರುತ್ತದೆ. ಆ ಬಗ್ಗೆ, ಅವನಿಗೆ ಹೇಳುವ ಹೊಣೆ ತಮ್ಮ ಮೇಲಿದೆ. ಅವನಿಗೆ ಹೇಳಿದ ಬಗ್ಗೆ, ತಮ್ಮ ಠಾಣೆಯ ದಿನಚರಿಯಲ್ಲಿಯೂ ಸಹ ಹೇಳಲಾಗಿದೆ ಎಂದು ನಮೂದಿಸಲೇಬೇಕಾಗಿದೆ.

೭. ವಕೀಲರ ಸಹಾಯ ಅವಶ್ಯವಿದ್ದರೆ, ಅವರನ್ನು ಅವನು ಸಂಪರ್ಕಿಸಬಹುದು ಹಾಗೂ ಸಹಾಯವನ್ನು ಪಡೆಯಬಹುದು. ಒಂದು ವೇಳೆ ವಕೀಲರನ್ನು ಕೊಡುವ ತಾಕತ್ತು ಅಥವಾ ಶಕ್ತಿ ಅವನಿಗೆ ಇಲ್ಲದಿದ್ದರೆ, ಕಾನೂನು ಪ್ರಾಧಿಕಾರಗಳಿಂದ ಅಥವಾ ನ್ಯಾಯಾಲಯಗಳಿಂದ ಪುಕ್ಕಟೆಯಾಗಿ ವಕೀಲರನ್ನು ನೇಮಿಸಿಕೊಳ್ಳಬಹುದು ಎಂದೂ ಸಹ ತಾವುಗಳು ಅವನಿಗೆ ತಿಳಿಸಿ ಹೇಳಬೇಕಾಗುತ್ತದೆ.

೮. ಬಹಳ ಕೇಸುಗಳಲ್ಲಿ ಅವನು ಭಾಗಿಯಾಗಿದ್ದಾನೆಂದು ಕಂಡಾಗ್ಯೂ ಹಾಗೂ ಹೀನವಾದ ಅಪರಾಧವನ್ನು ಎಸಗಿದಾಗಲೂ ಸಹ, ಅದನ್ನೇ ಒಂದು ಕಾರಣವಾಗಿ ಮಾಡಿಕೊಂಡು ಕೈಕೋಳವನ್ನು ತೊಡಿಸುವಂತಿಲ್ಲ.

೯. (Under Trial Prisoner) ವಿಚಾರಣಾಧೀನ ಖೈದಿಯನ್ನು ಜೈಲಿನಲ್ಲಿ ಹಾಕಬೇಕಾದಾಗ ಹಾಗೂ ನ್ಯಾಯಾಲಯಕ್ಕೆ ತರಬೇಕಾದರೆ ಪೊಲೀಸರು ತಮ್ಮಷ್ಟಕ್ಕೆ ತಾವೇ ಕೈಕೋಳವನ್ನು ಹಾಕುವಂತಿಲ್ಲ.

೧೦. ಪೊಲೀಸರಿಗೆ ಖೈದಿ ಜೈಲಿನಿಂದ ಜಿಗಿಯುತ್ತಾನೆ ; ಪಾರಾಗುತ್ತಾನೆ ಎನ್ನುವ ಬಗ್ಗೆ ಅಥವಾ ಪೊಲೀಸರ ಸೆರೆಯಿಂದ ತಪ್ಪಿಸಿಕೊಳ್ಳುತ್ತಾನೆ ಎನ್ನುವ ವಿಷಯಗಳ ಬಗ್ಗೆ ಬಲವಾದ ಆಧಾರಗಳಿದ್ದಾಗ ಮಾತ್ರ ಕೈಕೋಳವನ್ನು ತೊಡಿಸುವಂತಹ ಒಂದು ನಿರ್ಧಾರಕ್ಕೆ ಬಂದರೆ, ಅವರು ಅವನನ್ನು ನ್ಯಾಯಾಧೀಶರ ಮುಂದೆ ಅಂದರೆ

Magistrate ಮುಂದೆ, ಹಾಜರುಪಡಿಸಿ ಕೈಕೋಳವನ್ನು ತೊಡಿಸಲು ಪರವಾನಿಗೆಯನ್ನು ಪಡೆಯಬೇಕಾಗುತ್ತದೆ.

೧೧. ನ್ಯಾಯಾಲಯ, ಅಂತಹ ವ್ಯಕ್ತಿಯ ಬಗ್ಗೆ ಈ ಅಂಶಗಳನ್ನು ವಿಚಾರಿಸಿ, ಅಂದರೆ -

೧. Proness of the prisoner to violence ವ್ಯಕ್ತಿಯು ನಿಷ್ಕರ್ಷ, ಕೆಟ್ಟ ಅಥವಾ ನೀಚ ಅಥವಾ ಅಧಮ, ಪ್ರವೃತ್ತಿಯವನಾಗಿದ್ದಾನೆ ಎಂದು ನಿರ್ಣಯಕ್ಕೆ ಬಂದರೆ ಅಥವಾ

೨. His tendency to escape ಅವನು ಪರಾರಿಯಾಗುವ ಪ್ರವೃತ್ತಿವುಳ್ಳವನಾಗಿದ್ದಾನೆ ಎಂಬ ನಿರ್ಣಯಕ್ಕೆ ಬಂದರೆ ಅಥವಾ

೩. He being too dangerous or desperate ಅವನು ಅತೀ ಅಪಾಯಕಾರಿ ಅಥವಾ ಉಗ್ರ ಮನುಷ್ಯನೆನ್ನುವ ನಿರ್ಣಯಕ್ಕೆ ಬಂದರೆ,

ಅಂಥವನ ಪಾರಾಗುವಿಕೆಯನ್ನು ತಡೆಗಟ್ಟುವ ಸಲುವಾಗಿ, ಬೇರೆ ಯಾವುದೇ ಮಾರ್ಗ ಇಲ್ಲ ಎನ್ನುವ ನಿರ್ಣಯಕ್ಕೆ ಬಂದಾಗ ಮಾತ್ರ ನ್ಯಾಯಾಲಯ ಕೈಕೋಳವನ್ನು ತೊಡಿಸಲು ಪರವಾನಿಗೆಯನ್ನು ನೀಡುತ್ತದೆ.

೧೨. ಒಬ್ಬ ಮಹಿಳಾ ಆರೋಪಿಯನ್ನು ದಸ್ತಗಿರಿ ಮಾಡುವುದು ಮತ್ತೊಬ್ಬ ಮಹಿಳಾ ಪೊಲೀಸರಿಂದಲೇ ಆಗಬೇಕು ಹಾಗೂ ಅವಳ ಶೋಧನೆಯ ಅವಶ್ಯಕತೆ ಇದ್ದರೆ, ಮತ್ತೊಬ್ಬ ಮಹಿಳಾ ಪೊಲೀಸ್ ಅವಳ ಸಭ್ಯತೆಯ ಎಲ್ಲೆ ಮೀರದಂತೆ ಶೋಧಿಸಬೇಕು ಎನ್ನುವುದನ್ನು ಸಹ ನಾವುಗಳು ಮರೆಯುವಂತಿಲ್ಲ.

ಕೈಕೋಳವನ್ನು ತೊಡಿಸುವುದನ್ನು ಕೈಬಿಡಲು ಪರ್ಯಾಯವಾಗಿ :

೧. Increase in the number of escorts

ಬೆಂಗಾವಲಿನ ಪಡೆಯ ಸಂಖ್ಯೆಯಲ್ಲಿ ಹೆಚ್ಚಳ

೨. Arm the escort party if necessary

ಅವಶ್ಯವೆನಿಸಿದರೆ, ಬೆಂಗಾವಲಿನ ಪಡೆಗೆ ಸಶಸ್ತ್ರಗಳನ್ನು ಒದಗಿಸುವುದು

೩. Give special training to escort party

ಬೆಂಗಾವಲಿನ ಪಡೆಗೆ ವಿಶೇಷ ತರಬೇತಿಯನ್ನು ಕೊಡುವುದು

೪. Transport of prinsoners in protected vehicle

ಖೈದಿಗಳನ್ನು ರಕ್ಷಣೆಯುಳ್ಳ ವಾಹನಗಳಲ್ಲಿ ಸಾಗಿಸುವುದು

ಈ ಅಂಶಗಳನ್ನು ಅಳವಡಿಸಿಕೊಂಡು ಚೆನ್ನೈ ರಾಜ್ಯದಲ್ಲಿ ಈಗಾಗಲೇ ಕೈಕೋಳ

ತೊಡಿಸುವುದನ್ನು ಕೈಬಿಡಲಾಗಿದೆ ಎಂದು ಸಹ ಸದರಿ ನಿರ್ಣಯದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಕಾರಣ ಸರ್ವೋಚ್ಚ ನ್ಯಾಯಾಲಯದ ಮಾರ್ಗದರ್ಶನ, ಸೂಚನಾ ಆದೇಶ ಗಳನ್ನು ಚಾಚೂ ತಪ್ಪದೆ ಪಾಲಿಸುವಲ್ಲಿ ಹಾಗೂ ಮೇಲೆ ಹೇಳಿದ ೪ ಅಂಶಗಳನ್ನು ಅಳವಡಿಸಿಕೊಂಡು ಕೈಕೋಳವನ್ನು ತೊಡಿಸುವ ಪದ್ಧತಿಯನ್ನು ಕೈಬಿಡುವ ದಿಶೆಯಲ್ಲಿ ಪೋಲಿಸ್ ಇಲಾಖೆಯಿಂದ ಪ್ರಾಮಾಣಿಕ ಪ್ರಯತ್ನವಾಗಬೇಕಾಗಿದೆ.

ಆ ಮಾತು ಬೇರೆ. ''ಸರ್ಕಾರದ ಕೆಲಸ ದೇವರ ಕೆಲಸ'' ಎಂದು ಬರೀ ವಿಧಾನಸೌಧದ ಶಿಲೆಯಲ್ಲಿ ಕೆತ್ತಿದ್ದರೆ ಅಥವಾ ಬರೀ ಬಾಯಿಮಾತಿನಲ್ಲಿ ಹೇಳಿದರೆ ಸಾಲದು. ಪ್ರತಿಯೊಬ್ಬರು ಅದೇ ಭಾವನೆಯಿಂದ ಕೆಲಸ ಮಾಡಿದಾಗ ಮಾತ್ರ ಅದು ನಿಜವಾಗಲೂ ''ದೇವರ ಕೆಲಸ''ವಾಗುತ್ತದೆ.

ಗೀತೆಯಲ್ಲಿ ಶ್ರೀಕೃಷ್ಣ ಅರ್ಜುನನಿಗೆ ಹೇಳಿದಂತೆ -

೧೮೪೭ರಲ್ಲಿಯೇ ಟೆನ್ನಿಸನ್‌ರವರು ಪೊಲೀಸ್ ಇಲಾಖೆ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ -

''A Policemen Lidless watcher of the Public weal''

ಇದರ ಅರ್ಥ ''ಕಣ್ಣಿನ ರೆಪ್ಪೆಯನ್ನು ಮುಚ್ಚದೆ ಸದಾ ಸಾರ್ವಜನಿಕರ ನೋವನ್ನು ಕಾಯುವ ಕಾವಲುಗಾರನೇ ಪೊಲೀಸ್'' ಎಂದು.

ಅಂತಹ ಆದರ್ಶವನ್ನು ಸದಾ ಪಾಲಿಸಿದ ಕೀರ್ತಿ ನಮ್ಮ ರಾಜ್ಯದ ಪೊಲೀಸ್ ಇಲಾಖೆಯಿಂದಾಗಲೀ ಹಾಗೂ ಚೆನ್ನೈ ರಾಜ್ಯದಂತೆ, ಕರ್ನಾಟಕ ಪೊಲೀಸ್ ಇಲಾಖೆಯು ಸಹಾ ಆದಷ್ಟೂ ಬೇಗನೆ ರಾಷ್ಟ್ರಮಟ್ಟದಲ್ಲಿ ತನ್ನ ಒಳ್ಳೆಯ ಕೆಲಸಕ್ಕೆ ಕೀರ್ತಿಯನ್ನು ಗಳಿಸಲಿ ಹಾಗೂ ಸರ್ವೋಚ್ಚ ನ್ಯಾಯಾಲಯದಿಂದ ಪ್ರಶಂಸೆಗೆ ಪಾತ್ರವಾಗಲಿ ಎಂದು ಹಾರೈಸುವೆ.

****

ಕಾನೂನಿನ ಮೂಲಗಳು - ಒಂದು ಚಿಂತನೆ

ಕಾನೂನಿನಲ್ಲಿ ಅಡಕವಾಗಿರುವ ವಿಚಾರಸಾಮಗ್ರಿಯೂ ಅದರ ವಚನ ರೂಪವೂ ಎಲ್ಲಿಂದಲೂ ಬರಬಹುದು. ಅದು ಅನ್ಯಶಾಸ್ತ್ರಗಳಿಂದ ಬಂದಿರಬಹುದು. ಪಂಡಿತರ ಗ್ರಂಥಗಳಿಂದ ಬಂದಿರಬಹುದು. ಆದರೆ ಅದರ ಕಾನೂನುತನ ಮಾತ್ರ ಕಾನೂನಿನಿಂದಲೇ ನಿರ್ದಿಷ್ಟವಾದ ಮೂಲಸ್ಥಾನಗಳಿಂದ ಬರಬೇಕು. ಯಾವುದೇ ನಾಣ್ಯದ ಮೂಲಧಾತು ಎಲ್ಲಿಂದಲೇ ಬರಬಹುದು. ಆದರೆ ಅದರ ನಾಣ್ಯತ್ವ ಮಾತ್ರ ಸರ್ಕಾರದ ಟಂಕಸಾಲೆಯಿಂದ ಮುದ್ರೆ ಪಡೆದು ಬಂದದ್ದರಿಂದಲೇ ಅದಕ್ಕೆ ಪ್ರಾಪ್ತವಾಗುತ್ತದೆ. ಅಂತೆಯೇ ಯಾವುದೇ ನಿಯಮವಾಗಲಿ, ಕಾನೂನಿನಿಂದ ನಿರ್ದೇಶಿತವಾದ ದ್ವಾರಗಳ ಮೂಲಕವೇ ಕಾನೂನು ಪ್ರಪಂಚವನ್ನು ಸೇರಿ ಕಾನೂನೆಂದು ಪರಿಗಣಿತವಾಗಬೇಕಾಗುತ್ತದೆ. ಯಾವುದೇ ನಿಯಮವನ್ನು ಕಾನೂನು ಎನ್ನಬೇಕಾದರೆ ಅದರ ಮೂಲ ಅಧಿಕೃತವಾಗಿದ್ದಿರಬೇಕು. ಅಂದರೆ ಕಾನೂನನ್ನು ಸೃಷ್ಟಿಸಲು ಅದಕ್ಕೆ ಅಧಿಕಾರವಿದೆಯೆಂಬುದನ್ನು ಕಾನೂನೇ ಮನ್ನಿಸಿರಬೇಕು. ಮತ್ತು ಅದು ಉಗಮಿಸುವ ರೀತಿ ಆ ಬಗೆಯ ಉಗಮಕ್ಕೆ ಯೋಗ್ಯವಾದದ್ದೆಂದು ಕಾನೂನೇ ಒಪ್ಪಿಕೊಂಡಿರಬೇಕು. ಅಂದರೆ ಅಧಿಕೃತ ರೀತಿಯಲ್ಲಿ ಬಂದದ್ದು ಮಾತ್ರ ಕಾನೂನಾಗುತ್ತದೆ. ಭಾರತದ ನ್ಯಾಯವ್ಯವಸ್ಥೆಯಲ್ಲಿ ಮುಂದಿನ ನಾಲ್ಕು ಮೂಲಗಳಲ್ಲಿ ಯಾವುದಾದರೊಂದರಿಂದ ಉಗಮಿಸಿದ್ದು ಮಾತ್ರವೇ ಕಾನೂನಿನ ಪರಿವಾರವನ್ನು ಸೇರಬಹುದು. ೧. ವಿಧಿನಿರ್ಮಾಣ ಅಥವಾ ಶಾಸನ ೨. ನ್ಯಾಯ ನಿರ್ಣಯ ೩. ಸಂಪ್ರದಾಯ ೪. ಸಮ್ಮತಿ.

ವಿಧಿನಿರ್ಮಾಣ :

ನಿಯಮಗಳನ್ನು ಯುಕ್ತರೀತಿಯಿಂದ ಸಾರಿ ಅವನ್ನು ಕಾನೂನಾಗಿ ಮಾಡುವುದು ವಿಧಿನಿರ್ಮಾಣ ಅಥವಾ ಶಾಸನ. ಉದಾಹರಣೆಗೆ ಸಂಸತ್ತು ಯಥೋಕ್ತ ಕ್ರಮದಿಂದ ಕಂಪನಿಗಳ ಅಧಿನಿಯಮವನ್ನು ಮಾಡಬಹುದು. ಇದು ಕಾನೂನು. ಇದು ಇಂಥ ದಿನದಿಂದ ಜಾರಿಯಲ್ಲಿ ಬರುವುದು ಎಂದು ಪ್ರಕಟಪಡಿಸುವುದರಿಂದಲೇ ಕಾನೂನಾಗುತ್ತದೆ. ಈ ಕಾನೂನಿನ ಬಲದಿಂದ ಸರ್ಕಾರವೂ ಅದರಿಂದ ನಿರ್ಮಿತವಾದ ಕಂಪನಿ ಆಡಳಿತ ಸಂಸ್ಥೆಯೂ ವ್ಯವಹರಿಸುತ್ತವೆ. ಈ ಕಾನೂನು ನೀಡಿದ ಅಧಿಕಾರ

ಬಲದಿಂದ ಉಚ್ಚ ನ್ಯಾಯಾಲಯಗಳು ಉಕ್ತಕ್ರಮದಲ್ಲಿ ನಿಯಮಾವಳಿಗಳನ್ನು ಸಾರುತ್ತವೆ. ಅವು ಕಾನೂನಾಗುವುದರಿಂದ ಅವನ್ನೂ ಈ ಕಾನೂನಿನ ವ್ಯಾಪ್ತಿಯಲ್ಲಿ ಸೇರಿಸಬೇಕಾಗುತ್ತದೆ. ಈ ಕಾನೂನಿನಲ್ಲಿಯ ವಾಕ್ಯಗಳ ಅಧಿಕೃತ ಅರ್ಥವನ್ನೂ ಕಾನೂನೆಂದೇ ಪರಿಗಣಿಸತಕ್ಕದ್ದು. ಆ ಅರ್ಥಕ್ಕೆ ನಿಶ್ಚಿತತೆಯನ್ನು ತಂದುಕೊಡಲು ಪ್ರತಿಯೊಂದು ಕಾನೂನು ಪದ್ಧತಿಯಲ್ಲೂ ಅರ್ಥನಿರ್ಣಯದ ವ್ಯವಸ್ಥೆ ಇರುತ್ತದೆ. ಭಾರತದಲ್ಲಿ ಕಾನೂನಿನ ಅರ್ಥನಿರ್ಣಯದ ಅಧಿಕಾರವನ್ನು ನ್ಯಾಯಾಲಯಗಳಿಗೆ ನೀಡಲಾಗಿದೆ.

ಯಾವುದೇ ಕಾನೂನಿನ ವ್ಯಾಪ್ತಿಯಲ್ಲಿ ಅದಕ್ಕೆ ಸಂಬಂಧಿಸಿದ ಅನೇಕ ಬಗೆಯ ಉಪನಿಧಿಗಳನ್ನು ಸೇರಿಸಬೇಕು. ಉದಾ : ವಿಧಾನಸಭೆ ಪೌರಸಭಾ ಅಧಿನಿಯಮು ವನ್ನೂ ವಿಧಿಗಳನ್ನೂ ಸ್ವೀಕರಿಸಿ ಅವನ್ನು ಕಾನೂನಾಗಿ ಮಾಡುತ್ತದೆ. ಆ ಕಾನೂನಿನ ಅಧಿಕಾರದಿಂದ ಪ್ರತಿಯೊಂದು ಪೌರಸಭೆಯೂ ಉಕ್ತಕ್ರಮದಲ್ಲಿ ನಿಯಮ - ಉಪನಿಯಮಗಳನ್ನು ಮಾಡಿಕೊಳ್ಳುತ್ತದೆ. ಈ ಉಪನಿಧಿಗಳಿಂದ ಉದಿಸುವ ನಿಯಮಗಳೂ ಕಾನೂನಿನ ಭಾಗವೇ ಆಗುತ್ತವೆ.

ನ್ಯಾಯ ನಿರ್ಣಯ :

ಕೆಲವು ಸಂದರ್ಭಗಳಲ್ಲಿ ವ್ಯಾಜ್ಯವೊಂದನ್ನು ನ್ಯಾಯಾಲಯ ನಿರ್ಣಯಿಸುವಾಗ ಒಂದು ತತ್ತ್ವವನ್ನು ಹಚ್ಚಿ ನಿರ್ಣಯಿಸುತ್ತದೆ. ಮುಂದೆ ಅಂಥ ವ್ಯಾಜ್ಯಗಳು ನ್ಯಾಯಾಲಯದ ಮುಂದೆ ಬಂದರೆ ಅದೇ ತತ್ತ್ವವನ್ನು ಹಚ್ಚಿ ನಿರ್ಣಯ ನೀಡುತ್ತವೆ. ಈ ವಿಷಯವನ್ನು ಅರಿತು ಜನರು ತಮ್ಮ ನಡತೆಯನ್ನು ಆ ತತ್ತ್ವಕ್ಕೆ ಅನುಗುಣವಾಗಿ ರೂಪಿಸಿಕೊಳ್ಳುತ್ತಾರೆ. ಹೀಗಾಗಿ ನ್ಯಾಯನಿರ್ಣಯದಲ್ಲಿ ಬಳಸಿದ ತತ್ತ್ವಗಳು ನಡತೆಯ ನಿಯಮಗಳಾಗಿ ಪರಿಣಮಿಸುತ್ತವೆ ಮತ್ತು ಅವು ಸರ್ಕಾರದ ಬಲದಿಂದ ನ್ಯಾಯಾಲಯಗಳ ಮುಖಾಂತರ ಜಾರಿಯಲ್ಲಿ ತರಲಾಗುವ ತತ್ತ್ವಗಳಾಗುವುದರಿಂದ ಅವು ಕಾನೂನಿನ ನಿಯಮಗಳಾಗುತ್ತವೆ. ಹೀಗೆ ನ್ಯಾಯಾಲಯಗಳೂ ಕಾನೂನಿನ ನಿಯಮಗಳ ಉಗಮಸ್ಥಳಗಳಾಗುತ್ತವೆ. ಆದರೆ ಅಧಿನಿಯಮಗಳಿಗೂ ಇವಕ್ಕೂ ಒಂದು ಮುಖ್ಯ ಭೇದವಿದೆ. ನ್ಯಾಯಾಲಯಗಳು ವಿಧಾನಸಭೆಗಳಂತೆ ತಾವಾಗಿಯೇ ನಿಯಮಗಳನ್ನು ಸಾರಿ ಅವು ಜಾರಿಯಲ್ಲಿ ಬರುವಂತೆ ಮಾಡುವುದಿಲ್ಲ. ವ್ಯಾಜ್ಯ ನಿರ್ಣಯದಲ್ಲಿ ಒಂದು ತತ್ತ್ವವನ್ನು ಎತ್ತಿಹಿಡಿದು, ಆ ವ್ಯಾಜ್ಯದ ನಿರ್ಣಯದಲ್ಲಿ ಉಪಯೋಗಿಸಿ, ಜನರಿಗೆ ಅಪ್ರತ್ಯಕ್ಷವಾಗಿ ಮಾರ್ಗದರ್ಶನ ನೀಡುತ್ತವೆ. ನ್ಯಾಯಾಲಯಗಳು ಪ್ರತಿವಿಧಾನಸಭೆಗಳಂತೆ ವರ್ತಿಸುವುದಿಲ್ಲ, ತಮ್ಮ ಮುಂದಿರುವ ವ್ಯಾಜ್ಯಗಳ ನಿರ್ಣಯ ಅವುಗಳ ಕಾರ್ಯ. ಆ ಕಾರ್ಯದ ಅಂಗವಾಗಿ, ನಿರ್ಣಯಕ್ಕೆ

ಅವಶ್ಯವಾದ ತತ್ತ್ವವನ್ನು ಅವು ಉಪಯೋಗಿಸುತ್ತವೆ. ಸಮಾನವಾದ ವ್ಯಾಜ್ಯವನ್ನು ಸಮಾನ ತತ್ತ್ವಗಳಿಂದ ನಿರ್ಣಯಿಸುವುದು ಯೋಗ್ಯ ನ್ಯಾಯನಿರ್ಣಯದ ಪದ್ಧತಿ. ಅವು ಈ ಆವಶ್ಯಕತೆಯನ್ನು, ತತ್ತ್ವಗಳನ್ನು ಸಾರುತ್ತ ಹೋದರೆ ತಮ್ಮ ಕ್ಷೇತ್ರಗಳನ್ನು ಬಿಟ್ಟು ವಿಧಾನಸಭೆಗಳ ಕ್ಷೇತ್ರಗಳನ್ನು ಪ್ರವೇಶಿಸಿದಂತಾಗುತ್ತದೆ. ಆದ್ದರಿಂದ ನ್ಯಾಯ ನಿರ್ಣಯಕ್ಕೆ ನ್ಯಾಯಾಲಯಗಳ ಕಾನೂನು ನಿರ್ಮಾಣ ಆನುಷಂಗಿಕ ಮತ್ತು ಅವುಗಳ ಮುಂದಿರುವ ಅಗತ್ಯಕ್ಕೆ ಸೀಮಿತ. ವಿಧಾನಸಭೆಗಳೂ ಉಳಿದ ಉಪನಿಧಿ ನಿರ್ಮಾಪಕ ಪ್ರಾಧಿಕರಣಗಳೂ ನಿಯಮಗಳನ್ನು ಸಾರುವ ಕ್ರಮದಿಂದ ಕಾನೂನನ್ನು ರಚಿಸಿದರೆ ನ್ಯಾಯಾಲಯಗಳು ನ್ಯಾಯನಿರ್ಣಯದಲ್ಲಿ ಯಥೋಚಿತ ತತ್ತ್ವಗಳನ್ನು ಬಳಸುವುದರ ಮೂಲಕ ನಿಯಮಗಳನ್ನು ರೂಪಿಸಿ ಕಾನೂನುತನವನ್ನು ನೀಡುತ್ತವೆ. ಆದರೆ ನ್ಯಾಯ ನಿರ್ಣಯದಲ್ಲಿ ತತ್ತ್ವಗಳ ಬಗ್ಗೆ ಹೇಳಿದ ಎಲ್ಲ ವಚನಗಳೂ ಕಾನೂನು ಎನಿಸುವುದಿಲ್ಲ. ಆ ನಿರ್ಣಯಕ್ಕೆ ಅವಶ್ಯವಾಗಿದ್ದು ಆ ತತ್ತ್ವವನ್ನು ಆಧರಿಸದೆಯೆ ಆ ನಿರ್ಣಯವನ್ನು ತಾರ್ಕಿಕವಾಗಿ ಮುಟ್ಟಲು ಸಾಧ್ಯವಿಲ್ಲವಾಗಿದ್ದರೆ ಆ ತತ್ತ್ವ ಆ ನಿರ್ಣಯಕ್ಕೆ ತಳಹದಿಯಾದರೆ ಆಗ ಮಾತ್ರ ಅದು ಕಾನೂನಾಗುತ್ತದೆ ಎಂದರೆ ಬಂಧನಕಾರಿಯಾಗುತ್ತದೆ. ಒಂದು ನಿರ್ಣಯಕ್ಕೆ ಒಂದಕ್ಕಿಂತ ಹೆಚ್ಚು ತತ್ತ್ವಗಳು ಆಧಾರವಾಗಿದ್ದರೆ ಅವೆಲ್ಲವೂ ಬಂಧನಕಾರಿಗಳು. ಆದರೆ ಎಷ್ಟರಮಟ್ಟಿಗೆ ಒಂದು ತತ್ತ್ವದ ಆಧಾರದ ಅವಶ್ಯಕತೆಯಿದೆಯೋ ಅಷ್ಟರ ಮಟ್ಟಿಗೆ ಮಾತ್ರ ಅದು ಬಂಧನಕಾರಿ.

ಸಂಪ್ರದಾಯ :

ಯಾವುದೇ ಜನಾಂಗದಲ್ಲಿ ಜನತೆಯಿಂದ ಸ್ವೀಕೃತವಾಗಿ ಬಹುಕಾಲದಿಂದ ನಡೆದುಬಂದಿರುವ ಜನತೆಯ ವರ್ತನೆಗಳನ್ನು ರೂಪಿಸಿರುವ, ಅವರ ನ್ಯಾಯಬುದ್ಧಿಗೆ ಉಚಿತವೆಂದು ತೋರಿಬಂದಿರುವ ಸಂಪ್ರದಾಯಗಳನ್ನು ಕಾನೂನು ಮನ್ನಿಸುತ್ತದೆ. ಅದನ್ನು ಅದು ಕದಡಿ, ಅನಿಶ್ಚಯವನ್ನುಂಟು ಮಾಡಿ, ಜನರ ಸಮಂಜಸವಾದ ನಿರೀಕ್ಷಣೆಗಳನ್ನು ಹುಸಿಗೊಳಿಸುವುದಿಲ್ಲ. ಭಾರತದ ಹಿಂದು ಕಾನೂನಿನಲ್ಲಿ ಸ್ಮೃತಿ ವಚನಗಳಿಗೆ ಶಿಷ್ಟಾಚಾರ ಅಥವಾ ಸಂಪ್ರದಾಯವೊಂದು ವಿರುದ್ಧವಾಗಿದ್ದರೂ ಅದನ್ನು ಎತ್ತಿಹಿಡಿಯಲಾಗುತ್ತದೆ. ರೋಮನ್ ನ್ಯಾಯಪದ್ಧತಿಯನ್ನು ಅನುಸರಿಸುವ ಜರ್ಮನಿ ಮುಂತಾದ ದೇಶಗಳಲ್ಲಿ ಅಧಿನಿಯಮಗಳಿಗೆ ಒಂದು ಸಂಪ್ರದಾಯ ವಿರುದ್ಧವಾಗಿದ್ದರೂ ಅದನ್ನು ಎತ್ತಿಹಿಡಿಯಲಾಗುತ್ತದೆ. ಆದರೆ ಇಂಗ್ಲಿಷ್ ನ್ಯಾಯಪದ್ಧತಿಯಲ್ಲಿ ಹಾಗಲ್ಲ, ಅಧಿನಿಯಮಕ್ಕೆ ಸಂಪ್ರದಾಯ ಅವಿರೋಧವಾಗಿರಬೇಕು. ಭಾರತದಲ್ಲೂ ಅದೇ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಸ್ಮೃತಿವಚನಗಳಿಗೆ ವಿರುದ್ಧವಾದ ವಿವಾಹ ಪದ್ಧತಿಗಳು, ವಾರಸು ಪದ್ಧತಿಗಳು ಜಾರಿಯಲ್ಲಿದ್ದವು. ಆದರೆ ವಿವಾಹ ಮತ್ತು ವಾರಸು

ಕಾನೂನುಗಳು ಅಧಿನಿಯಮಗಳ ರೂಪವನ್ನು ಪಡೆದ ಮೇಲೆ ಅವಕ್ಕೆ ವಿರೋಧವಾದ (ಅಂದರೆ ಅವು ಉಳಿಸಿಕೊಳ್ಳದಿರುವ) ಸಂಪ್ರದಾಯಗಳನ್ನು ಅನುಸರಿಸಿದರೆ ಅವು ಅಸಿಂಧು, ಅವು ಕಾನೂನೆನ್ನಿಸಿಕೊಳ್ಳಲು ಅನರ್ಹ.

ಸಂಪ್ರದಾಯವನ್ನು ಕಾನೂನು ಎನ್ನಬೇಕಾದರೆ ಅದು ಕೆಲವು ನಿಯಮಗಳಿಗೆ ಅನುಗುಣವಾಗಿರಬೇಕು. ಕಾನೂನಿನಂತೆ ಅದೂ ಬಂಧನಕಾರಿಯೆಂಬ ನಂಬುಗೆ ಅವಶ್ಯ. ಅಲ್ಲದೆ ಆ ಸಂಪ್ರದಾಯ ಹಳೆಯ ಕಾಲದಿಂದ ಬಂದು ರೂಢವಾಗಿರಬೇಕು. ಇಂಗ್ಲೆಂಡಿನಲ್ಲಿ ಸಂಪ್ರದಾಯಗಳು ಕಾನೂನಿನ ಏಕರೂಪತೆಗೆ ಭಂಗ ತರಬಾರದು ಎಂಬ ಉದ್ದೇಶದಿಂದ ಅವುಗಳ ಬೆಳವಣಿಗೆಯನ್ನು ತಡೆದು, ಅವು ೧ನೆಯ ರಿಚರ್ಡ್ ದೊರೆಯ ಕಾಲದಿಂದ ಪ್ರಚಾರದಲ್ಲಿರಬೇಕೆಂಬ ನಿಯಮವನ್ನು ವಿಧಿಸಲಾಗಿದೆ. ಭಾರತದಲ್ಲಿ ಆ ನಿಯಮವಿಲ್ಲ. ಯಾರ ಸ್ಮೃತಿಯಲ್ಲೂ ಅದಕ್ಕೆ ವಿರೋಧವಾದ ಆಚಾರ ಉಪಲಬ್ಧವಾಗಿರದಿದ್ದರೆ ಸಾಕು.

ಇನ್ನೊಂದು ಅವಶ್ಯಕತೆಯೆಂದರೆ, ಅದು ಅಸಮಂಜಸವಾಗಿರಬಾರದು. ಶಿಷ್ಟಾಚಾರದಿಂದ ಸಂಪ್ರದಾಯ ಬಂದದ್ದಾದರೆ ಶಿಷ್ಟರು ಅಸಮಂಜಸವಾಗಿ ಆಚರಿಸುವುದಿಲ್ಲ. ಹೀಗೆ ಅಸಮಂಜಸವಲ್ಲದ್ದು, ಶಾಸನಕ್ಕೆ ಅವಿರೋಧವಾಗದ, ಬಂಧನಕಾರಿ ಎಂದು ಎಣಿಸಲಾದ, ಯಾವುದೇ ವೃದ್ಧನ ಸ್ಮೃತಿಗೆ ಅವಿರೋಧವಾದಂಥ ಸಂಪ್ರದಾಯ ಪ್ರಚಲಿತವಿದೆಯೆಂದು ನ್ಯಾಯಾಲಯಕ್ಕೆ ಸಮಾಧಾನವಾಗುವಂತೆ ಸಿದ್ಧವಾದರೆ ಆ ಸಂಪ್ರದಾಯವನ್ನು ನ್ಯಾಯಾಲಯ ಮನ್ನಿಸಿ ಅದನ್ನು ಕಾನೂನೆಂದು ಪರಿಗಣಿಸುತ್ತದೆ.

ಸಮ್ಮತಿ :

ಕರಾರು ಅಧಿನಿಯಮಕ್ಕೆ ವಿರೋಧವಾಗಿರದೆ, ಪರಸ್ಪರ ಸಮ್ಮತಿಯಿಂದ ಇಬ್ಬರು ವಚನಬದ್ಧರಾದರೆ ನ್ಯಾಯಾಲಯ ಅವರನ್ನು ಅವರ ವಚನಬದ್ಧತೆಗೆ ಅನುಗುಣವಾಗಿ ನಡೆಯುವಂತೆ ಒತ್ತಾಯಿಸುತ್ತದೆ. ಆ ಕರಾರಿಗೆ ಸಂಬಂಧಪಟ್ಟ ಮಟ್ಟಿಗೆ ಅವರು ಬದ್ಧರು. ಹೀಗೆ ತಮ್ಮ ವರ್ತನೆಯನ್ನು ಕಾನೂನಿನ ಬಂಧನದಲ್ಲಿ ಸಿಲುಕಿಸಲು ಅವರ ಸ್ವತಂತ್ರ ಸಮ್ಮತಿಯೇ ಮೂಲ. ಈ ಬಂಧನಕಾರಿ ನಿಯಮಗಳು ಅವರ ಪೂರ್ವಸಮ್ಮತಿಯಿಂದ ಹುಟ್ಟಿದ್ದು, ಅವರವರ ಮಟ್ಟಿಗೆ ಇವು ಕಾನೂನಾಗಿ ಅವರ ಕೃತಿಗಳನ್ನು ನಿರ್ದೇಶಿಸುತ್ತವೆ. ಈ ಬಂಧನಕಾರಿ ನಿಯಮಗಳ ಉಗಮವಾದ್ದರಿಂದ, ಇವು ಅವರ ವರ್ತನೆಗೆ ವಿಶೇಷ ಕಾನೂನಾಗಿ ಪರಿಣಮಿಸುವುದರಿಂದ, ಕರಾರೂ ಕಾನೂನಿನ ಒಂದು ಉಗಮಸ್ಥಾನವಾಗುತ್ತದೆ.

ಕಾನೂನಿನ ತಂತ್ರ ಪರಿಭಾಷೆ :

ಕಾನೂನು ಒಂದು ಸಮಾಜದ ವ್ಯವಸ್ಥೆಯನ್ನೂ ಸಮಾಜದ ಉದ್ಧಾರದ ಗುರಿಯನ್ನೂ ಆರಿಸಿದ ಹಿತಗಳನ್ನೂ ರಕ್ಷಿಸುವ ಮತ್ತು ತದ್ವಿರುದ್ಧ ವರ್ತನೆಗಳನ್ನು ಪ್ರತಿಷೇಧಿಸಿ, ಪ್ರತಿಬಂಧಿಸುವ ಕಾರ್ಯವನ್ನು ಸಾಧಿಸುತ್ತದೆ. ಈ ಕಾರ್ಯದಲ್ಲಿ ಹಕ್ಕು ಮತ್ತು ಕರ್ತವ್ಯದ ಪರಿಭಾಷೆಯನ್ನು ಉಪಯೋಗಿಸುತ್ತದೆ. ಹಕ್ಕೆಂದರೆ ಕಾನೂನು ರಕ್ಷಿಸುವ ಹಿತ. ಕರ್ತವ್ಯವೆಂದರೆ ಕಾನೂನು ಒತ್ತಾಯಪಡಿಸುವ ಕೃತಿ. ಉದಾಹರಣೆಗೆ, ಒಂದು ಹೊಲವನ್ನು ಪಡೆಯಲು ನೆರೆಹೊರೆಯವರೆಲ್ಲ ಆಕಾಂಕ್ಷೆ ಪಡಬಹುದು. ಅವರೆಲ್ಲರ ದೃಷ್ಟಿಯಿಂದ ಆ ಹೊಲವನ್ನು ಪಡೆಯುವುದರಲ್ಲಿ ಅವರ ಹಿತವಿರುತ್ತದೆ. ಆದರೆ ಆ ಹೊಲವನ್ನು ಕೊಂಡವನಿಗೆ ಅಥವಾ ಅವನ ಮಗನಿಗೆ ಅಥವಾ ಸರ್ಕಾರ ಅದರ ಖಾತೆ ಹಾಕಿ ಕೊಟ್ಟವನಿಗೆ ಅದು ಸಿಗುವಂತೆ ಕಾನೂನು ಮಾಡುತ್ತದೆ ; ಎಂದರೆ ಅವನ ಹಕ್ಕನ್ನು ಎತ್ತಿ ಹಿಡಿದು ಸಂರಕ್ಷಿಸುತ್ತದೆ. ಉಳಿದವರು ಅದರಲ್ಲಿ ಹಸ್ತಕ್ಷೇಪ ಮಾಡದಂತೆ ಪ್ರತಿಷೇಧಿಸುತ್ತದೆ. ಅಲ್ಲಿ ಪ್ರವೇಶ ಮಾಡದಿರುವುದು, ಅದರ ಫಲವನ್ನು ಒಯ್ಯದಿರುವುದು, ಆ ಸ್ಥಳಕ್ಕೆ ಸಂಬಂಧಿಸಿದಂತೆ ಕಿರುಕುಳ ಉಂಟಾಗದಂತೆ ನಡೆದುಕೊಳ್ಳುವುದು - ಇವು ಅದರ ಮಾಲೀಕರಲ್ಲದವರ ಕರ್ತವ್ಯ. ಅದನ್ನು ಕಾನೂನಿನ ಮಿತಿಯಲ್ಲಿ ಸ್ವಂತ ಇಚ್ಛೆಯಂತೆ ಅನುಭವಿಸುವುದು, ಪರಾಧೀನ ಮಾಡುವುದು ಆ ಮಾಲೀಕನ ಹಕ್ಕು. ಬೇಕಾದವನಿಗೆ ಬೇಕಾದಷ್ಟು ಕಿಮ್ಮತ್ತಿಗೆ ಕೊಡುವುದರಲ್ಲಿ ಆ ಮಾಲೀಕನ ಹಿತವಿರಬಹುದಾದರೂ ಸಮಾಜದ ಹಿತದೃಷ್ಟಿಯಿಂದ ಅದನ್ನು ಬೇಸಾಯಗಾರನಿಗೇ ಕೊಡಬೇಕೆಂದು ಕಾನೂನು ನಿರ್ಬಂಧ ಹಾಕಬಹುದು. ಹೀಗೆ ಯಾವನ ಹಿತವನ್ನು ಎಷ್ಟರ ಮಟ್ಟಿಗೆ ಹೇಗೆ ರಕ್ಷಿಸಬೇಕೆಂದು ಕಾನೂನೇ ನಿರ್ಣಯಿಸಿ ಅದನ್ನು ರಕ್ಷಿಸುತ್ತದೆ.

ಹಕ್ಕಿನ ಬಗ್ಗೆ ಮೇಲೆ ಮಾಡಲಾದ ವಿವೇಚನೆಯಿಂದ ಅದರಲ್ಲಿ ಐದು ಅಂಶಗಳು ಸೇರಿರುತ್ತವೆಂಬುದು ವ್ಯಕ್ತವಾಗುತ್ತದೆ. ೧. ಕಾನೂನು ಯಾರ ಹಕ್ಕನ್ನು ಕಾಯುತ್ತದೆ. ೨. ಯಾರ ವಿರುದ್ಧ ಕಾಯುತ್ತದೆ, ೩. ಯಾವ ವಸ್ತುವಿನಲ್ಲಿ ಕಾಯುತ್ತದೆ , ೪. ಯಾವ ಕಾರಣದಿಂದ ಆ ಹಕ್ಕನ್ನು ಆ ವ್ಯಕ್ತಿಗೆ ಕೊಡಲಾಗಿದೆ ಮತ್ತು 5. ಯಾವ ಕರ್ತವ್ಯವನ್ನು ನಿರ್ದೇಶಿಸಿ ಆ ಹಕ್ಕನ್ನು ಕಾಯಲಾಗಿದೆ ? ಈ ಪ್ರಶ್ನೆಗಳಿಗೆ ಉತ್ತರಗಳು ಆ ಹಕ್ಕಿನ ಪರಿಕಲ್ಪನೆಯಲ್ಲಿ ಅಡಕವಾಗಿವೆ. ೧. ಅದು ಹಕ್ಕಿನ ಧಾರಣೆ ಅಥವಾ ಒಡೆಯನ ಹಕ್ಕನ್ನು ಕಾಯುತ್ತದೆ ೨. ಹಕ್ಕಿಗೆ ಸಂಬಂಧಿಸಿದ ಕರ್ತವ್ಯ ಬದ್ಧನ ವಿರುದ್ಧ ೩. ಹಕ್ಕಿಗೆ ಒಳಪಟ್ಟ ವಸ್ತು (ಆಸ್ತಿ, ಪೇಟೆಂಟ್ ಮೊದಲಾದವು) ೪. ಹಕ್ಕಿನ ಪ್ರಾಪ್ತಿಯ ಕಾರಣದಿಂದ (ಆಸ್ತಿಯನ್ನು ಕೊಂಡಿರುವುದರಿಂದ, ಅವನ ತಂದೆ ಕೊಂಡಿರುವುದರಿಂದ ಸರ್ಕಾರ ಖಾತೆ ಹಾಕಿಕೊಟ್ಟಿರುವುದರಿಂದ ಇತ್ಯಾದಿ, ೫. ತತ್‌ಸಂಬಂಧವಾದ ಕರ್ತವ್ಯದ

ಇತಿಮಿತಿ (ಹೀಗೆ ಮಾಡಬೇಕು. ಹೀಗೆ ಮಾಡಬಾರದು ಮುಂತಾಗಿ ಆ ಕರ್ತವ್ಯದ ವ್ಯಾಪ್ತಿ.)

ಮೇಲಿನ ಚರ್ಚೆಯಲ್ಲಿ ಹಕ್ಕಿನ ಪರಿಕಲ್ಪನೆಯಲ್ಲಿ ತತ್ಸಂಬಂಧಿ ಕರ್ತವ್ಯ ಅದರ ರಕ್ಷಣೆಯ ಅಂಗವಾಗಿ ಸೂಚ್ಯವಾಗುತ್ತದೆಂದು ಹೇಳಲಾಗಿದೆ. ಇದು ಹಕ್ಕಿನ ಸಂಕುಚಿತ ಅರ್ಥ. ಆದರೆ ಕಾನೂನು ವ್ಯಕ್ತಿಗೆ ಒದಗಿಸುವ ಎಲ್ಲ ಅನುಕೂಲ್ಯಗಳಿಗೂ ಇನ್ನೊಬ್ಬರ ಮೇಲೆ ಕರ್ತವ್ಯವನ್ನು ಹೇರಿಯೇ ತೀರುವುದಿಲ್ಲ. ಉದಾಹರಣೆಗೆ ತನ್ನ ಆಸ್ತಿಯನ್ನು ಮರಣಶಾಸನದ ಮೂಲಕ ಹೆರವರಿಗೆ ಕೊಡುವ ಹಕ್ಕು ಒಬ್ಬನಿಗೆ ಇದೆ. ಅಂದರೆ ಇದರ ಮೇಲಿಂದ ಯಾರ ಮೇಲಾದರೂ ಏನೊಂದೂ ಕರ್ತವ್ಯವಿದೆಯೆಂಬ ಸೂಚನೆಯಾಗುವುದಿಲ್ಲ. ಆದರೆ ಒಬ್ಬನಿಗೆ ಋಣಿಯಿಂದ ಹಣ ಪಡೆಯುವ ಹಕ್ಕು ಇದೆ ಎಂದರೆ, ಋಣಿಯಾದವನು ಧಣಿಗೆ ಆ ಸಾಲವನ್ನು ಮುಟ್ಟಿಸುವುದು ಅವನ ಕರ್ತವ್ಯ ಎಂಬುದು ಸೂಚ್ಯವಾಗುತ್ತದೆ. ಹೀಗೆ ೧. ಕರ್ತವ್ಯಸೂಚಕ ಹಕ್ಕುಗಳು ಮತ್ತು ೨. ತದಿತರ ಹಕ್ಕುಗಳು ಎಂದು ಎರಡು ತರದ ಹಕ್ಕುಗಳಿವೆ ಎಂಬುದು ಸ್ಪಷ್ಟವಾಗುತ್ತದೆ. ಹಕ್ಕು ಎಂಬ ಶಬ್ದ ವ್ಯಾಪಕವಾಗಿದ್ದು ಇವನ್ನೆಲ್ಲ ಒಳಗೊಳ್ಳುತ್ತದೆ. ಒಬ್ಬ ವ್ಯಕ್ತಿಗೆ ಕಾನೂನು ಒದಗಿಸುವ ಎಲ್ಲ ಅನುಕೂಲ್ಯಗಳು ಹಕ್ಕಿನ ಈ ವ್ಯಾಪಕವಾದ (೨ನೆಯ) ಅರ್ಥದಲ್ಲಿ ಇರುತ್ತವೆ. ಇವು ಮೂರು ವಿಧವಾದವು. ೧. ಸ್ವಾತಂತ್ರ್ಯ (ಅನಿರ್ಬಂಧ) ೨. ಸಾಮರ್ಥ್ಯ ಅಥವಾ ಅಧಿಕಾರ ಮತ್ತು ೩. ಅನಧೀನತೆ (ಅಬಾಧಿತತ್ವ).

೧. ಸ್ವಾತಂತ್ರ್ಯ :

ಒಬ್ಬಾತ ಹೀಗೆ ಮಾಡಬೇಕು, ಹೀಗೆ ಮಾಡಬಾರದು ಎಂಬ ಕಾನೂನಿನ ನಿರ್ಬಂಧವಿಲ್ಲ. ಇಂಥ ಪ್ರಸಂಗದಲ್ಲಿ ಒಬ್ಬಾತನಿಗೆ ಏನನ್ನು ಮಾಡಲೂ ಹಕ್ಕು ಇದೆ. ಕಛೇರಿಯ ಕೆಲಸ ಮುಗಿದ ನಂತರ ಅಡ್ಡಾಡಲು ಹೋಗುವ ಹಕ್ಕು ಅವನಿಗೆ ಇದೆ, ಅಥವಾ ವಿಶ್ರಾಂತಿ ಪಡೆಯುವ ಹಕ್ಕು ಇದೆ. ಆದರೆ ಆ ಹೊತ್ತಿಗೆ ಅವನು ಇನ್ನೊಂದು ಕೆಲಸವನ್ನು ಒಪ್ಪಿಕೊಂಡಿದ್ದರೆ ಅಲ್ಲಿಗೆ ತಾನು ಹೋಗಲೇಬೇಕೆಂಬ ನಿರ್ಬಂಧವಿರುತ್ತದೆ. ಆತ ಆ ವೇಳೆಯನ್ನು ಬೇರೆ ರೀತಿಯಲ್ಲಿ ಕಳೆಯಲು ಹಕ್ಕು ಇಲ್ಲ. ಇಲ್ಲಿ ಸ್ವಾತಂತ್ರ್ಯವೆಂದರೆ ಆತನ ಮೇಲೆ ಕರ್ತವ್ಯವಿಲ್ಲದ ಸ್ಥಿತಿ, ಆತನ ಕರ್ತವ್ಯವೆಂದರೆ ಆತನಿಗೆ ಕ್ರಿಯಾಸ್ವಾತಂತ್ರ್ಯವಿಲ್ಲದ ಸ್ಥಿತಿ. ಕರ್ತವ್ಯದ ವಿರುದ್ಧವಾಗಿ ನಡೆದರೆ ಅದು ಕಾನೂನಿನಂತೆ ತಪ್ಪಾಗುತ್ತದೆ. ಈ ಸ್ವಾತಂತ್ರ್ಯದ ವೈಶಿಷ್ಟ್ಯವೆಂದರೆ ಕೇವಲ ಅನಿರ್ಬಂಧ. ಯಾವುದೂ ನಿರ್ಬಂಧವಿಲ್ಲದ್ದರಿಂದ ಆತ ಹೇಗೆ ನಡೆದರೂ ತಪ್ಪಲ್ಲ. ಆ ಸ್ವಾತಂತ್ರ್ಯವನ್ನು ಉಪಯೋಗಿಸುವುದರಿಂದ ಆತನ ಹಕ್ಕು-ಕರ್ತವ್ಯಗಳಲ್ಲಾಗಲಿ ಇನ್ನೊಬ್ಬರ ಹಕ್ಕು - ಕರ್ತವ್ಯಗಳಲ್ಲಾಗಲಿ ಏನೂ ಹೆಚ್ಚು ಕಡಿಮೆ ಆಗುವುದಿಲ್ಲ. ಆದರೆ ಸ್ವತಂತ್ರವೆಂಬಂತೆ

ತೋರುವ ಆದರೆ ಇನ್ನೂ ಬಲಿಷ್ಠವಾದ ಇನ್ನೊಂದು ಹಕ್ಕು ಇದೆ. ಅದು ಒಬ್ಬನ ಅಧಿಕಾರ.

೨. ಅಧಿಕಾರ :

ಇದು ಕಾನೂನು ನೀಡಿರುವ ಸಾಮರ್ಥ್ಯ. ಒಬ್ಬ ತನ್ನ ಹಕ್ಕನ್ನು ಉಪಯೋಗಿಸುವುದರಿಂದ ಆತನ ಇಲ್ಲವೇ ಹೆರವರ ಹಕ್ಕು ಸಂಬಂಧ ಮತ್ತು ಕರ್ತವ್ಯ ಸಮುಚ್ಚಯದಲ್ಲಿ ಹೆಚ್ಚು ಅಥವಾ ಕಡಿಮೆ ಆಗುತ್ತದೆ. ಮುಸ್ಲಿಂ ಗಂಡ ಆತನ ಹೆಂಡತಿಗೆ ಮೂರು ಸಾಲಿ ತಲಾಖ್ ಹೇಳಿ ಆಕೆಯನ್ನು ಬಿಡಲು ಅವನಿಗೆ ಹಕ್ಕು ಇರುತ್ತದೆ. ಇದು ಕೇವಲ ಸ್ವಾತಂತ್ರ್ಯವಲ್ಲ ಕಾನೂನು ನೀಡಿದ ಸಾಮರ್ಥ್ಯ. ಹೀಗೆ ಮಾಡಿದೊಡನೆಯೇ ಆ ಹೆಂಡತಿಯ ದಾಂಪತ್ಯದ ಹಕ್ಕು ಮತ್ತು ಕರ್ತವ್ಯಗಳು ನಷ್ಟವಾಗುತ್ತವೆ. ತಂದೆಗೆ ಅಪ್ರಾಪ್ತವಯಸ್ಕ ಮಗಳನ್ನು ಮದುವೆ ಮಾಡಿಕೊಡುವ ಹಕ್ಕು ಇರಬಹುದು. ಅಂದರೆ ಅವಳನ್ನು ಮದುವೆ ಮಾಡಿಕೊಟ್ಟರೆ ತಪ್ಪಲ್ಲ ಎಂದು ಮಾತ್ರವೇ ಇದರ ಅರ್ಥವಲ್ಲ. ಅವನು ಮಾಡಿಕೊಟ್ಟರೆ ಆ ಮದುವೆ ಕಾನೂನಿನಂತೆ ಸಿಂಧುವಾಗಬಹುದು. ಅವಳಿಗೂ ಅವಳ ವರನಿಗೂ ದಾಂಪತ್ಯದ ಹಕ್ಕು ಮತ್ತು ಕರ್ತವ್ಯಗಳು ಪ್ರಾಪ್ತವಾಗುತ್ತವೆಂದು ಅದರ ಅರ್ಥ. ಕ್ಲುಪ್ತ ಅಪರಾಧ ವಿಷಯದಲ್ಲಿ ಆರೋಪಿಗೆ ಕಾರಾಗೃಹ ಶಿಕ್ಷೆಯನ್ನು ವಿಧಿಸಲು ದಂಡಾಧೀಶನಿಗೆ (ಮ್ಯಾಜಿಸ್ಟ್ರೇಟ್) ಅಧಿಕಾರವಿದೆ, ಎಂದರೆ ಆ ಅಧಿಕಾರವನ್ನು ಉಪಯೋಗಿಸುವುದರಿಂದ ಆರೋಪಿ ತನ್ನ ಚಲನವಲನ ಸ್ವಾತಂತ್ರ್ಯದ ಹಕ್ಕು ಕಳೆದುಕೊಳ್ಳುತ್ತಾನೆ ; ಕಾರಾಗೃಹಾಧಿಕಾರಿಯ ಅಧೀನದಲ್ಲಿರಲು ಕರ್ತವ್ಯಬದ್ಧನಾಗುತ್ತಾನೆ. ಹೀಗೆ ಅವನ ಹಕ್ಕು - ಕರ್ತವ್ಯಗಳಲ್ಲಿ ಬದಲಾವಣೆಗಳಾಗುತ್ತವೆ. ಪ್ರತಿವಾದಿಯ ಆಸ್ತಿಯನ್ನು ಮಾರಲು ನ್ಯಾಯಾಲಯಕ್ಕೆ ಹಕ್ಕು ಇದೆ. ಎಂದರೆ ಪ್ರತಿವಾದಿಯ ಸ್ವಾಮ್ಯದ ಹಕ್ಕನ್ನು ವಜಾ ಮಾಡಿ ಹರಾಜಿನಲ್ಲಿ ಪಡೆದವನಿಗೆ ಅದನ್ನು ಕೊಡುವ ಸಾಮರ್ಥ್ಯವಿದೆ. ಇಲ್ಲಿ ಗಮನಿಸುವಂಥ ಇನ್ನೊಂದು ವಿಷಯವೆಂದರೆ ಒಬ್ಬನ ಸಾಮರ್ಥ್ಯ ಇಲ್ಲವೇ ಅಧಿಕಾರವೆಂದರೆ ಇನ್ನೊಬ್ಬನಲ್ಲಿ ಅದರ ಉಪಯೋಗದಿಂದ ಉಂಟಾಗುವ ಬದಲಾವಣೆಗೆ ಅಧೀನನಾಗುವ ಸ್ಥಿತಿ ಇದೆಯೆಂಬುದನ್ನು ತೋರಿಸುತ್ತದೆ. ಒಬ್ಬನ ಅಧಿಕಾರದ ಪ್ರತಿಬಿಂಬವೆಂದರೆ ಇನ್ನೊಬ್ಬನ ಅಧೀನತೆ. ಮೇಲೆ ಹೇಳಿದ ಮುಸ್ಲಿಂ ಗಂಡನ ತಲಾಖ್ ಅಧಿಕಾರ, ಹಿಂದೂ ತಂದೆಯ ಕನ್ಯಾದಾನದ ಅಧಿಕಾರ, ದಂಡಾಧೀಶನ ಶಿಕ್ಷೆ ವಿಧಿಸುವ ಅಧಿಕಾರ - ಇವಕ್ಕೆ ಸರಿಯಾಗಿ ಮುಸ್ಲಿಂ ಪತ್ನಿಯ, ಹಿಂದೂ ಪುತ್ರಿಯ, ಆರೋಪಿಯ ಅಧೀನತೆ ಇದೆ. ಆದರೆ ಕೆಲವು ಸಂದರ್ಭಗಳಲ್ಲಿ ಕೆಲವು ವ್ಯಕ್ತಿಗಳು ಉಳಿದವರ ಮೇಲೆ ಪರಿಣಾಮಕಾರಿಯಾಗುವ ಅಧಿಕಾರದಿಂದ

ಅಬಾಧಿತರಾಗಿರುವ ವಿಶಿಷ್ಟ ಹಕ್ಕು ಪಡೆದಿರುತ್ತಾರೆ. ಆ ವಿಶಿಷ್ಟ ಹಕ್ಕನ್ನು ಅನಧೀನತೆ ಅಥವಾ ಅಬಾಧಿತತೆ ಎಂದು ಕರೆಯಬಹುದು.

೩. ಅನಧೀನತೆ ಅಥವಾ ಅಬಾಧಿತತೆ :

ಅಪರಾಧ ಮಾಡಿದವನು ದಂಡಾಧೀಶನ ಶಿಕ್ಷೆ ವಿಧಿಸುವ ಅಧಿಕಾರಕ್ಕೆ ಅಧೀನನೂ ಸಾಲ ತೆಗೆದುಕೊಂಡವನು ಹಣ ತೆರುವಂತೆ ನ್ಯಾಯಾಲಯದ ಅಧಿಕಾರಕ್ಕೆ ಅಧೀನನೂ ಆಗಿರುತ್ತಾನೆ. ಆದರೆ ಒಂದು ದೇಶದಲ್ಲಿರುವ ರಾಯಭಾರಿ, ಆದೇಶ ನೀಡುವ ಅಲ್ಲಿಯ ನ್ಯಾಯಾಲಯದ ಇಂಥ ಅಧಿಕಾರಕ್ಕೆ ಅಧೀನನಲ್ಲ. ಆದ್ದರಿಂದ ಅವನು ಅಬಾಧಿತ. ಒಬ್ಬಾತನಿಗೆ ಅಪಮಾನಕರವಾದ ರೀತಿಯಲ್ಲಿ ಇನ್ನೊಬ್ಬ ಭಾಷಣ ಮಾಡಿದರೆ, ಮೊದಲನೆಯವನಿಗೆ ಎರಡನೆಯವನ ವಿರುದ್ಧ ಮಾನಹಾನಿಯ ಮೊಕದ್ದಮೆ ತರುವ ಅಧಿಕಾರವಿದೆ. ಆದರೆ ಸಂಸತ್ತಿನ ಸಭೆಯಲ್ಲಿ ಅದರ ಸದಸ್ಯ ಅಂಥ ಭಾಷಣ ಮಾಡಿದರೆ ಅವನು ಅಪಮಾನಿತನ ಈ ಅಧಿಕಾರಕ್ಕೆ ಅಧೀನ ನಲ್ಲ; ಅದರಿಂದ ಅಬಾಧಿತ. ಅಂತೆಯೇ ರಾಷ್ಟ್ರಪತಿ, ರಾಜ್ಯಪಾಲ, ನ್ಯಾಯಾಧೀಶ ಮತ್ತು ಕೆಲವು ವಿಶಿಷ್ಟ ವ್ಯಕ್ತಿಗಳು ಸಾಧಾರಣ ವ್ಯಕ್ತಿಗಳಂತೆ ಇತರರ ಅಧಿಕಾರಕ್ಕೆ ಒಳಪಡುವುದಿಲ್ಲ. ಈ ವಿಶಿಷ್ಟ ಹಕ್ಕು ಅವರಿಗೆ ಕಾನೂನು ನೀಡಿದ ಅನುಕೂಲತೆ. ಕಾನೂನು ಅವರಿಗೆ ಅನಧೀನತೆಯನ್ನು ನೀಡುತ್ತದೆ ; ಸಾಧಾರಣ ಜನರಿಗೆ ಕಾನೂನಿನಿಂದ ದೊರೆತ ಅಧಿಕಾರ ಇಲ್ಲವೇ ಸಾಮರ್ಥ್ಯವನ್ನು ಆ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಮೊಟಕು ಮಾಡುತ್ತದೆ. ಅಂದರೆ ಅವರ ಅಬಾಧಿತತೆಗೆ ಅನುಗುಣವಾಗಿ ಸಾಧಾರಣ ಜನರಿಗೆ ಅಸಾಮರ್ಥ್ಯ ಉಂಟಾಗುತ್ತದೆ.

★★★★

ಕಾನೂನು ತಿಳುವಳಿಕೆ - ಒಂದು ಚಿಂತನೆ

ಸಂವಿಧಾನದ ಬಗ್ಗೆ ಚಿಂತನೆಗೈದ ಮೇಲೆ ಕಾನೂನಿನ ಬಗ್ಗೆ ತಿಳಿಯುವುದು ಸೂಕ್ತ. ಕಾರಣ ಈಗ ಕಾನೂನಿನ ಬಗ್ಗೆ ತಿಳಿಯೋಣ.

ಕಾನೂನು ತಿಳುವಳಿಕೆ

ಕಾನೂನನ್ನು ಜನರಿಗೆ ತಿಳಿಯದ ಹಾಗೆ ಬರೆದಿಡುವ ಹಾಗೂ ಬರೆದದ್ದನ್ನು ಅರ್ಥೈಸುವ ಕಾಲವೊಂದಿತ್ತು. ಆದರೆ ಕಾನೂನನ್ನು ಜನಸಾಮಾನ್ಯರೇ ತಿಳಿಯುವ ಹಾಗೆ ರಚಿಸಬೇಕು ಹಾಗೂ ಇದ್ದ ಕಾನೂನುಗಳನ್ನು ಅವರಿಗೆ ತಿಳಿಹೇಳಬೇಕು ಎನ್ನುವ ಹೊಸ ಅಲೆ - ಇತ್ತೀಚೆಗೆ ಬಂದ ಕಾರಣ, ಘನ ಸರಕಾರದ ನಿರ್ದೇಶನದ ಪ್ರಕಾರ ಈ ಹೊಣೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಹಾಗೂ ತಾಲೂಕು ಕಾನೂನು ಸೇವಾಸಮಿತಿ ಗಳ ಮೇಲಿದೆ.

ಇರಲಿ, ಕಾನೂನು ಹಾಗೂ ನ್ಯಾಯದ್ದಾನ ಎಂದರೆ ಏನು ? ಎನ್ನುವುದನ್ನು ತಿಳಿಯೋಣ.

ಕಾನೂನು ಎಂದರೆ ಟಿ.ವಿ. ಹಾಗೂ ಸಿನಿಮಾಗಳಲ್ಲಿ ತೋರಿಸುವ ಕಾನೂನು ಖಂಡಿತವಾಗಿಯೂ ನಿಜವಾದ ಕಾನೂನು ಅಲ್ಲ. ಹಾಗಾದರೆ ನಿಜವಾಗಿ ಕಾನೂನು ಹಾಗೂ ನ್ಯಾಯದಾನ ಎಂದರೆ ಏನು ?

ಇಂಗ್ಲಿಷ್‌ನಲ್ಲಿ "Without Law Civilization dies" ಎನ್ನುವ ಮಾತೊಂದಿದೆ. ಇದರ ಅರ್ಥ - ''ಕಾನೂನು ಇಲ್ಲದಿದ್ದರೆ ನಾಗರಿಕತೆ ನಶಿಸುತ್ತದೆ'' ಎಂದಾಗುತ್ತದೆ. ಕಾರಣ ಕಾನೂನಿನ ಹಾಗೂ ನ್ಯಾಯದಾನ - ಪದಗಳ ಬಹಳ ಸರಳವಾದ ವ್ಯಾಖ್ಯಾನವೆಂದರೆ -

ಸಮಾಜದಲ್ಲಿಯ ಒಳ್ಳೆಯ ನಡತೆಯೇ ಕಾನೂನು ಹಾಗೂ ನಡತೆಯಲ್ಲಿ ಸತ್ಯವೇ ನ್ಯಾಯದಾನ.

ಕಾನೂನನ್ನು ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ -

''ಶಾಸನರೂಪದಲ್ಲಿ ಪ್ರಭುತ್ವ ವಿಧಿಸುವ ಪರಮಾದೇಶ. ಉಲ್ಲಂಘನೆಗೆ ಶಿಕ್ಷೆ ಇರಬೇಕು'' ಸಿವಿಲ್ ವ್ಯಾಜ್ಯಗಳಲ್ಲಿ ಆದ ಅನ್ಯಾಯಕ್ಕೆ ಪರಿಹಾರ ನೀಡಲಾಗುತ್ತದೆ.

ಆದರೆ ಪರಿಹಾರ ಕೇಳುವವರೇ ವಿರಳ. ಇದು ವಿಷಾದದ ಸಂಗತಿ. ಆ ಮಾತು ಬೇರೆ, ನ್ಯಾಯಾಂಗದ ಶುಲ್ಕವನ್ನು ಕೊಡಬೇಕಾಗುತ್ತದೆ. ಯಾರಿಗೆ ನ್ಯಾಯಾಂಗದ ಶುಲ್ಕವನ್ನು ಕೊಡಲು ಶಕ್ಯವಿಲ್ಲವೋ ಅಂಥವರಿಗೆ ಪ್ರಾಧಿಕಾರ ಕಾನೂನಿನ ನೆರವನ್ನು ನೀಡುತ್ತದೆ. ಹಾಗೂ ಅದನ್ನು ವ್ಯಾಜ್ಯದಲ್ಲಿ ತಾವು ಯಶಸ್ವಿಯಾದಾಗ ಮರಳಿ ಕೊಡಬೇಕಾಗುತ್ತದೆ. ಕಾರಣ ಖಂಡಿತ ಪರಿಹಾರವನ್ನು ಕೇಳಿ ತಮಗೆ ಆದಂತಹ ಅನ್ಯಾಯಗಳನ್ನು ಸರಿಪಡಿಸಿ ಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಜನತೆಯಲ್ಲಿ ಕೇಳಿಕೊಳ್ಳುವೆ.

ಕಾನೂನಿನ ಬಗ್ಗೆ ಒಬ್ಬ ಇಂಗ್ಲಿಷ್ ತತ್ವಜ್ಞಾನಿ ಹೇಳಿದ್ದಾನೆ -

"God's blood is law for man's sake" - ಇದರ ಅರ್ಥ ''ಮಾನವನ ರಕ್ಷಣೆಗಾಗಿ ಭಗವಂತನ ರಕ್ತವೇ ಕಾನೂನು'' ಎಂದಾಗುತ್ತದೆ. ಮತ್ತೊಬ್ಬ ತತ್ವಜ್ಞಾನಿ ಕಾನೂನಿನ ಬಗ್ಗೆ ಹೇಳಿದ ಮಾತು ಬಹಳ ಮಹತ್ವಪೂರ್ಣದ್ದಾಗಿದೆ. ಅದೇನೆಂದರೆ -

Law govern man and reason the law - ಇದರ ಅರ್ಥ ''ಶಾಸನ ಮನುಷ್ಯನನ್ನು ಆಳಿದರೆ, ಮನುಷ್ಯನ ಪರಿಜ್ಞಾನ, ಶಾಸನವನ್ನೇ ಆಳುತ್ತದೆ'' ಎಂದಾಗುತ್ತದೆ. ಇದನ್ನೇ ವರಕವಿ ದ.ರಾ. ಬೇಂದ್ರೆಯವರು ತಮ್ಮ ಒಂದು ಕವನದಲ್ಲಿ ಬಹು ಸುಂದರವಾಗಿ ಹೇಳಿದ್ದಾರೆ. ಅದೇನೆಂದರೆ - ''ಹೊರಗಿನ ದೇವರೇಕೆ ? ಒಳದೈವಕೆ ತಿದಿಗೊಡು...'' ಎಂದು.

೧೬೦೮ರಲ್ಲಿ ಲಾರ್ಡ್ ಕೋಕ ಎನ್ನುವವರು ನೈತಿಕ ಕಾನೂನಿನ ಬಗ್ಗೆ ಹೀಗೆ ಸುಂದರವಾಗಿ ಹೇಳಿದ್ದಾರೆ -

''ಈ ವಿಶ್ವದಲ್ಲಿ ಕಾನೂನು ಎನ್ನುವ ಪದವನ್ನು ಮೊಟ್ಟಮೊದಲು ಬಳಸಿದ ವ್ಯಕ್ತಿ ಮೊನೆಸ್ ಎಂದು ಹೇಳುತ್ತಾರೆ. ಅದಕ್ಕಿಂತಲೂ ಆದಿಯಲ್ಲಿ ಭಗವಂತ ಮಾನವನನ್ನು ಸೃಷ್ಟಿಸುವಾಗ ತನ್ನ ಬೆರಳಿನಿಂದ ಅವರ ಹೃದಯದಲ್ಲಿ ಬರೆದದ್ದೇ ನೈತಿಕ ಕಾನೂನು...''

ವಿಶ್ವದ ಎಲ್ಲ ಧರ್ಮಗಳು ಹೇಳುವ ಮಾತೊಂದು ಇದೆ. ಅದೇನೆಂದರೆ -''ಸತ್ಯವೇ ದೇವರು.'' ನಾವು, ಒಳದೈವಕೆ ಕಿವಿಗೊಡದೆ, ಸತ್ಯವನ್ನು ಬಿಟ್ಟು ನಡೆದಾಗ, ಸಮಾಜದಲ್ಲಿ ಕಾನೂನಿನ ಉಲ್ಲಂಘನೆ, ಹಾಗೂ ಅನ್ಯಾಯಗಳು ಜರುಗುತ್ತವೆ.

ಶರಣರು, ಸಂತರು-ನುಡಿದಂತೆ ನಡೆಯಲಿಲ್ಲ - ಅವರು ನಡೆದಂತೆ ನುಡಿದರು.

ನಾವುಗಳು ನಡೆದಂತೆ ನುಡಿಯುವುದು ದೂರದ ಮಾತು. ನಾವುಗಳು ನುಡಿದಂತೆಯೂ ನಡೆಯುವುದಿಲ್ಲ. ಒಂದು ಕಾಲದಲ್ಲಿ ಜನಪದ ಸಾಹಿತ್ಯದಲ್ಲಿ ಹೀಗೆ ಹಾಡಿ ಹರಸಿದ್ದಾರೆ. ಅದೇನೆಂದರೆ -

"ಕಲ್ಲು ಮುಳ್ಳು ಇದ್ದರೆ ಹುಲ್ಲಂತ ತುಳಿದೆವು
ಸೊಲ್ಲೆಂಸಿ ಹಾಡಿ ನಲಿದೆವು
ಶಿವನ ಸುಳ್ಳಾಡೆವು ದಾರಿ ಬಿರುಸಂತಾ"

ಈ ರೀತಿ ಸತ್ಯಕ್ಕೆ ಗೌರವ ಕೊಡುವ ಕಾಲವೊಂದಿತ್ತು. ಆದರೆ ಇಂದಿನ ನಮ್ಮ ಜೀವನ ಬರಿ ಸುಳ್ಳು ಮೋಸಗಳ ಮಧ್ಯೆ ಅನ್ಯಾಯದೊಂದಿಗೆ ರಾಜಿ ಮಾಡಿ ಕೊಳ್ಳುತ್ತಲೇ ನಡೆದಿದೆ ಎಂದು ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಒಂದೆಡೆ ಹೇಳಿದ್ದಾರೆ.

ಯಾಕೆಂದರೆ ನೋಡಿ, ಇವರಾಡುವುದು ಸತ್ಯವಿರಬಹುದೆ ?

೧. ಭಿಕ್ಷುಕ : ಅಮ್ಮಾ, ಊಟ ಮಾಡದೆ ಎರಡು ವಾರಗಳಾದವು

೨. ಕ್ಷೌರಿಕ : ಆಯಿತು ಇನ್ನು ಎರಡೇ ನಿಮಿಷ

೩. ಪೂಜಾರಿ : ದೇವರ ಹೆಸರಿನಲ್ಲಿ ಕಾಣಿಕೆ ನೀಡಿ

೪. ಡಾಕ್ಟರ್ : ಹೆದರುವ ಕಾರಣವಿಲ್ಲ, ಎಲ್ಲ ಸರಿಹೋಗುತ್ತೆ

೫. ಅಂಗಡಿಕಾರ : ಈ ದರದಲ್ಲಿ ಈ ವಸ್ತು ನಿಮಗೆ ಬೇರೆಲ್ಲೂ ಸಿಗುವುದಿಲ್ಲ

೬. ಸಂಪಾದಕ : ಬರುವ ಸಲ ನಿಮ್ಮ ಲೇಖನವನ್ನು ಪ್ರಕಟಿಸುವೆ

೭. ದರ್ಜಿ : ನಾಳೆ ನಿಮ್ಮ ಅಂಗಿ ಕೊಡುತ್ತೇನೆ

೮. ಕಂಡಕ್ಟರ್ : ಹೆಚ್ಚು ಹೊತ್ತು ನಿಲ್ಲದು, ಐದೇ ನಿಮಿಷದಲ್ಲಿ ಹೊರಡುತ್ತೆ

೯. ಅತಿಥಿ : ಬೇಡ, ಬೇಡ, ಈಗ ತಾನೆ ಕುಡಿದು ಬಂದೆ

೧೦. ಜ್ಯೋತಿಷಿ : ಈ ತಿಂಗಳು ನಿಮಗೆ ಕೆಟ್ಟಿದ್ದರೆ ಮುಂದೆ ಸರಿ ಹೋಗುತ್ತೆ

೧೧. ಪತಿ : ಆಫೀಸಿನಲ್ಲಿ ತುಂಬಾ ಕೆಲಸವಿದ್ದುದರಿಂದ ಹೊತ್ತಾಗಿ ಹೋಯಿತು

೧೨. ಪತ್ನಿ : ಪಕ್ಕದ ಮನೆಗೆ ಹೋಗಿ ಐದೇ ನಿಮಿಷದಲ್ಲಿ ಬರ್ತೀನಿ.

ಕಾರಣ ಈ ಎಲ್ಲಾ ಜನರೂ ಸುಳ್ಳನ್ನೇ ಆಡಿ ಸುಖವಾಗಿ ಬದುಕುತ್ತಿರುವಾಗ ನಾನೊಬ್ಬನೇಕೆ ಸತ್ಯವನ್ನು ಆಡಿ ಕಷ್ಟವನ್ನು ಅನುಭವಿಸಲಿ ಎಂದು ಅಪರಾಧ ಮಾಡಿದ ವ್ಯಕ್ತಿ ಮಾಡಿಲ್ಲ ಎಂದ ಕೂಡಲೇ ಅವನು ನಿಜವಾಗಿ ಅಪರಾಧವನ್ನು ಮಾಡಿದನೇ ? ಇದು ತನಿಖೆಯ ವಿಷಯವಾಗುತ್ತದೆ.

ಕಾನೂನಿನ ತನಿಖೆ ಪ್ರಾರಂಭವಾದ ಕೂಡಲೇ ತನಿಖೆಯ ಅಂಶಗಳ ವಿಚಾರಣೆ ಪ್ರಾರಂಭ :

ಅಪರಾಧ ಯಾರು ಮಾಡಿದರು ?

ಅಪರಾಧ ಯಾರಿಗೆ ಮಾಡಿದರು ?

ಅಪರಾಧ ಯಾಕೆ ಮಾಡಿದರು ?

ಅಪರಾಧ ಯಾವ ಸ್ಥಳದಲ್ಲಿ ಮಾಡಿದರು ?

ಅಪರಾಧ ಯಾವ ಸಮಯದಲ್ಲಿ ಮಾಡಿದರು ?

ಅಪರಾಧ ಯಾವ ರೀತಿ ಮಾಡಿದರು ?

ಈ ಎಲ್ಲಾ ಪ್ರಶ್ನೆಗಳು ಯಾವ ಆಧಾರದ ಮೇಲೆ ನಿರ್ಣಯವಾಗುತ್ತವೆ ಎಂದರೆ-

೧. ಅನುಮಾನ (Suspicion)

೨. ಸಾಕ್ಷಿ (Oral statements on oath)

೩. ದಸ್ತಾವೇಜು (Documentary evidence)

ಅನುಮಾನದ ಮೇಲೆ ಖಂಡಿತ ನ್ಯಾಯಾಲಯಗಳು ತಮ್ಮ ನಿರ್ಣಯಗಳನ್ನು ನಿರ್ಧರಿಸುವುದಿಲ್ಲ. ಆದರೆ ಅನುಮಾನ, ಪೊಲೀಸರ ತನಿಖೆಯಲ್ಲಿ ಯಾವಾಗಲೂ ಮೊದಲನೆಯ ಹೆಜ್ಜೆ ಎನ್ನುವುದನ್ನು ಮರೆಯುವಂತಿಲ್ಲ. ಪೊಲೀಸರು ತಮ್ಮ ತನಿಖೆ ಮುಗಿದ ನಂತರ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸುತ್ತಾರೆ. ಅವರು ತನಿಖಾ ಕಾಲದಲ್ಲಿ ತಮ್ಮನ್ನು ದಸ್ತಗಿರಿ ಮಾಡಲು ಅಧಿಕಾರವಿದೆ.

೧. ಆದರೆ ಯಾವ ಕಾರಣಕ್ಕಾಗಿ ದಸ್ತಗಿರಿ ಮಾಡಲಾಯಿತು ಎನ್ನುವುದನ್ನು ತಮಗೆ ತಿಳಿಸಬೇಕು.

೨. ಬಂಧು ಬಳಗ ಅಥವಾ ಗೆಳೆಯರಿಗೆ ದಸ್ತಗಿರಿ ಬಗ್ಗೆ ತಿಳಿಸಬೇಕು.

೩. ತಮಗೆ ವಕೀಲರ ಸಹಾಯ ಬೇಕಿದ್ದರೆ ಅದಕ್ಕೂ ಅನುಕೂಲ ಮಾಡಿಕೊಡಬೇಕು.

೪. ಅನಾವಶ್ಯಕವಾಗಿ ಕೈಗೆ ಬೇಡಿಯನ್ನು (Hand Cuff) ಹಚ್ಚಬಾರದು ಅಥವಾ ಕೈಕೋಳವನ್ನು ತೊಡಿಸಬಾರದು ಮತ್ತು

೫. ತಮ್ಮನ್ನು ದಸ್ತಗಿರಿ ಮಾಡಿದ ವೇಳೆಯಿಂದ ೨೪ ಗಂಟೆಯೊಳಗೆ ನ್ಯಾಯಾಧೀಶರ ಮುಂದೆ ಹಾಜರುಪಡಿಸಬೇಕು.

ಪೊಲೀಸರ ವರದಿಯನ್ನು ಆಧರಿಸಿ ನ್ಯಾಯಾಧೀಶರು ವಿಚಾರಣೆ ಕಾಲಕ್ಕೆ ಆರೋಪಿಗೆ ತಪ್ಪು ಮಾಡಿದ್ದೀಯಾ ? ಎಂದು ಕೇಳುವ ಹಂತ (stage) ಬರುತ್ತದೆ. ಹಾಗೆ

ಆ ಹಂತದಲ್ಲಿ ನ್ಯಾಯಾಧೀಶರೊಬ್ಬರು ಕೇಳಿದ ಪ್ರಶ್ನೆಗೆ ಒಬ್ಬ ಆರೋಪಿ ಈ ರೀತಿ ಉತ್ತರಿಸಿದರಂತೆ -

''ತಡೆಯಿರಿ ಸರ್, ಸಾಕ್ಷಿಗಳು ಏನನ್ನು ಹೇಳುತ್ತವೆ, ಎನ್ನುವುದನ್ನು ಕೇಳಿದ ಮೇಲೆ ತಮಗೆ ಉತ್ತರ ಹೇಳುವೆ''

ಸರ್ವೇ ಸಾಧಾರಣ ಯಾವ ಆರೋಪಿಯೂ ತಪ್ಪನ್ನು ಒಪ್ಪಿಕೊಳ್ಳುವುದಿಲ್ಲ. ಒಪ್ಪಿಕೊಳ್ಳಬೇಕೆಂದು ಕಾನೂನು ನಿರ್ದೇಶಿಸುವುದಿಲ್ಲ. ವಿಚಾರಣೆ ಪ್ರಾರಂಭವಾಗುತ್ತದೆ. ನ್ಯಾಯಾಲಯಗಳಲ್ಲಿ ಮೌಖಿಕ ಸಾಕ್ಷಿಗಿಂತ ದಸ್ತಾವೇಜಿನ ಸಾಕ್ಷ್ಯಕ್ಕೆ ಹೆಚ್ಚಿನ ಮಹತ್ವ ಹಾಗೂ ದಸ್ತಾವೇಜಿನಲ್ಲಿ ನಮೂದಿಸಿದ ವಿಷಯಗಳ ಬಗ್ಗೆ ಮೌಖಿಕ ಸಾಕ್ಷಿಯನ್ನು ಅಂಗೀಕರಿಸಲಾಗುವುದಿಲ್ಲ.

ವಿವಾಹವಾದ ಗಂಡ - ಈ ಹೆಂಡತಿ ಯಾರು ಗೊತ್ತಿಲ್ಲ ಎಂದಾಗ ವಿವಾಹದ ಸಮಯದಲ್ಲಿ ತೆಗೆದ ಫೋಟೋ ತೋರಿಸಿ - ಇವಳು ಯಾರು? ಗೊತ್ತಿಲ್ಲ. ಹೋಗಲಿ, (ಅವನನ್ನೇ ಉದ್ದೇಶಿಸಿ) ಅವಳ ಪಕ್ಕದಲ್ಲಿ ನಿಂತಿರುವ ವ್ಯಕ್ತಿ ಯಾರು ? ಗೊತ್ತಿಲ್ಲ ಕೊನೆಯಲ್ಲಿ ನೀನು ಯಾರು ? ಎಂದು ಕೇಳಿದರೆ, ಹೌದು ನೋಡಿ ಸಾರ್, ಅಂದ ಹಾಗೆ ನಾನು ಯಾರು ? ಎಂದು ಕೇಳುವ ದಿನಗಳು ಸಹ ದೂರವಿಲ್ಲ ಎನಿಸುತ್ತದೆ.

ಇಂತಹ ಸಾಕ್ಷಿಗಳ ಆಧಾರದ ಮೇಲೆ ವಂಚಿತ ಮಹಿಳೆಗೆ ನ್ಯಾಯದಾನ ನೀಡುವುದು ಎಷ್ಟು ಕಷ್ಟಕರ ನೀವೇ ಯೋಚಿಸಿ.

ಸಿವಿಲ್ ವ್ಯಾಜ್ಯಗಳಲ್ಲಿ ಸಾಧ್ಯಾಸಾಧ್ಯತೆ (preponderance of probability) ಗಳ ಮೇಲೆ ನಿರ್ಣಯಿಸಲಾಗುತ್ತದೆ.

ಸಿವಿಲ್ ವ್ಯಾಜ್ಯಗಳಲ್ಲಿ ಉದಾ : ಎ ಎನ್ನುವವನು ಬಿ ಎನ್ನುವವನಿಂದ ಒಂದು ನೂರು ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದರೆ ಎ ಎನ್ನುವವನು ಸಾಲವನ್ನು ತೆಗೆದುಕೊಂಡಿಲ್ಲ ಎಂದು ಹೇಳುವುದು ಸಹಜ. ಆದರೆ ಎ ಎನ್ನುವವನು ಬಡವನಿದ್ದರೆ ಸಾಲವನ್ನು ತೆಗೆದುಕೊಂಡಿರಲು ಸಾಧ್ಯತೆ ಉಂಟು ಎಂದು ನ್ಯಾಯವನ್ನು ನಿರ್ಣಯಿಸುತ್ತೇವೆ.

ಇನ್ನು ಕ್ರಿಮಿನಲ್ ಕೇಸುಗಳ ಬಗ್ಗೆ ಹೇಳುವುದಾದರೆ - ಪಿರ್ಯಾದಿಯ ವತಿಯಿಂದ ಸರಕಾರ (prosecution) ಅಧಿಯೋಜನೆ ಮಾಡಿದ ಆರೋಪವನ್ನು ನಿಸ್ಸಂಶಯವಾಗಿ ಅಥವಾ ನಿಸ್ಸಂದೇಹವಾಗಿ (Beyond reasonable doubt) ಸಿದ್ಧ ಮಾಡಿದೆಯೇ ? ಇದು ನಮ್ಮ ಕ್ರಿಮಿನಲ್ ನ್ಯಾಯಶಾಸ್ತ್ರದ ಮೂಲತತ್ವವಾಗಿದ್ದು ಇಂದಿಗೂ ಅದನ್ನೇ ನಾವು ಪಾಲಿಸುತ್ತ ಬಂದಿದ್ದೇವೆ.

ಆದರೆ ಕ್ರಿಮಿನಲ್ ಕೇಸುಗಳಲ್ಲಿ ಪಿರ್ಯಾದಿದಾರನು, ಆರೋಪಿತನು ಮಾಡಿದ

ಅಪರಾಧವನ್ನು ನಿಸ್ಸಂದೇಹವಾಗಿ ಅಥವಾ ಸಂಶಯಾತೀತವಾಗಿ ಸಿದ್ಧ ಮಾಡಬೇಕಾಗುತ್ತದೆ. ಆದರೆ ಉದಾ : ೧ನೇ ಸಾಕ್ಷಿ ಒಂದು ಏಟನ್ನು ಹೊಡೆದಿದ್ದಾನೆ ಎಂದು ಹೇಳಿದರೆ, ೨ನೇ ಸಾಕ್ಷಿ ಎರಡು ಏಟು ಹೊಡೆದಿದ್ದಾನೆ ಎಂದು ಹೇಳಿದಾಗ ಈ ವ್ಯತ್ಯಾಸ ಸಂಶಯಕ್ಕೆ ಎಡೆಮಾಡಿ ಆರೋಪಿಯು ಬಿಡುಗಡೆಯಾಗುತ್ತಾನೆ. ಇಂದಿಗೂ ನಾವು ಪಾಲಿಸುತ್ತಿರುವ ತತ್ವ ೯೯ ಜನ ಅಪರಾಧಿಗಳು ಬಿಡುಗಡೆಯಾದರೂ ಚಿಂತೆಯಿಲ್ಲ, ಒಬ್ಬ ಮುಗ್ಧ ಮನುಷ್ಯನಿಗೆ ಶಿಕ್ಷೆಯಾಗಬಾರದು. ಈ ತತ್ವದ ಅಡಿಯಲ್ಲಿ ಅನೇಕ ಸಲ ನ್ಯಾಯದಾನದ ಕೆಲಸ ಕಷ್ಟವೇ ಆಗುತ್ತದೆ.

ಸಿವಿಲ್ ವ್ಯಾಜ್ಯ ಅಥವಾ ಕ್ರಿಮಿನಲ್ ಕೇಸ್ ಇರಲಿ, ನ್ಯಾಯಾಧೀಶರ ಪಾತ್ರ ಕ್ರೀಡಾ ನ್ಯಾಯದರ್ಶಿಯ ಪಾತ್ರದಂತೆ ಇರುತ್ತದೆ. ಕ್ರೀಡಾ ನ್ಯಾಯದರ್ಶಿ ಸಮನ್ಯಾಯವನ್ನು ಗೌರವಿಸಿದರೆ ನ್ಯಾಯಾಧೀಶರು ಕಾನೂನನ್ನು ಗೌರವಿಸುತ್ತಾರೆ. ಆದರೆ ತಾವು ತಿಳಿದುಕೊಳ್ಳಬೇಕಾದ ವಿಷಯ. ಉದಾ : ಕಬಡ್ಡಿ ಪಂದ್ಯದಲ್ಲಿ ಆಟಗಾರನು ತನ್ನ ಶಕ್ತಿಯನ್ನು ಉಪಯೋಗಿಸಿ ಬಂದು ಮಧ್ಯದ ಗೆರೆಯನ್ನು ತಲುಪಿದಾಗ ಮಾತ್ರ ಗೆದ್ದನೆಂದು ಘೋಷಿಸುತ್ತಾನೆ. ಆದರೆ ಆ ಗೆರೆಯನ್ನು ಮುಟ್ಟಲು ಅವನು ಸಹಾಯ ಮಾಡುವುದಿಲ್ಲ. ಅದೇ ರೀತಿ ನ್ಯಾಯಾಧೀಶರ ಪಾತ್ರವು ಕೂಡ ಸಾಕ್ಷಿ ಪುರಾವೆಗಳಿಂದ ಸಿದ್ಧವಾದರೆ ಮಾತ್ರ ಕಕ್ಷಿದಾರರು ವ್ಯಾಜ್ಯಗಳಲ್ಲಿ ಜಯವನ್ನು ಗಳಿಸಬಹುದು.

ಇನ್ನು ದಾಖಲೆಗಳ ಬಗ್ಗೆ ಯೋಚಿಸೋಣ.

ಕೊಲೆ ಮಾಡುವ ವ್ಯಕ್ತಿ ಕೊಲೆಯಾಗುವ ವ್ಯಕ್ತಿಗೆ ನೀನು ನಾಳೆ ಬೆಳಗ್ಗಿನ ಸೂರ್ಯನನ್ನು ನೋಡಲಾರೆ ಎಂದು ಪತ್ರವನ್ನು ಬರೆದಿದ್ದರೆ ತನಿಖೆಯ ಕಾಲದಲ್ಲಿ ಆ ಪತ್ರ ಪೊಲೀಸರ ಕೈಗೆ ಸಿಕ್ಕಿಬಿದ್ದರೆ ಉತ್ತರ ಸಿದ್ಧವಾಗಿರುತ್ತದೆ. ಇದರಲ್ಲಿರುವ ಬರೆದಿರುವ ಹಸ್ತಾಕ್ಷರ ನನ್ನದಲ್ಲ, ಸಹಿ ನನ್ನದಲ್ಲ, ಇತ್ಯಾದಿ.

ಒಂದು ವೇಳೆ ಕೈಬರಹ ನಿಪುಣ ಅಥವಾ ಪ್ರವೀಣರಿಗೆ (Handwriting Experts) ಕಳಿಸಿದರೆ ಅವರಿಂದ ಉತ್ತರ -

''೧೦ ಲಕ್ಷಣಗಳಲ್ಲಿ ೫ ಲಕ್ಷಣಗಳು ಕೂಡುತ್ತದೆ ಹಾಗೂ ಇನ್ನು ೫ ಲಕ್ಷಣಗಳು ಕೂಡುತ್ತಿಲ್ಲ''

ಅಡ್ಡಗೋಡೆಯ ಮೇಲೆ ದೀಪ ಇಟ್ಟ ಹಾಗೆ ಇಂತಹ ಅಭಿಪ್ರಾಯಗಳ ಮೇಲೆ ನ್ಯಾಯನಿರ್ಣಯವನ್ನು ನಿರ್ಣಯಿಸುವುದು ಎಷ್ಟು ಕಷ್ಟಕರ - ಒಂದು ಕ್ಷಣ ವಿಚಾರ ಮಾಡಿರಿ. ವರಕವಿ ಡಾ|| ದ. ರಾ. ಬೇಂದ್ರೆಯವರು ''ರವಿ ಕಾಣದ್ದನ್ನು ಕವಿ ಕಾಣುತ್ತಾನೆ'' ಎಂದು ಹೇಳಿದ್ದಾರೆ. ಆದರೆ ಇಂಥ ದೀಪದ ಕೆಳಗಿನ ಕತ್ತಲೆಯಲ್ಲಿ ಕಂಡು ಹಿಡಿದು ನ್ಯಾಯದಾನವನ್ನು ಮಾಡುವ ನಿಜವಾದ ಕವಿಗಳೆಂದರೆ ನ್ಯಾಯಾಧೀಶರೇ ಎಂದರೆ ತಪ್ಪಾಗಲಿಕ್ಕಿಲ್ಲ.

ಇನ್ನು ಕಾನೂನಿನ ಇನ್ನೊಂದು ಲಕ್ಷಣವಾದ ಶಿಕ್ಷೆಯ ಬಗ್ಗೆ ವಿಚಾರಿಸೋಣ. ನಾನು ಈಗಾಗಲೇ ಹೇಳಿದಂತೆ ಉಲ್ಲಂಘನೆಗೆ ಶಿಕ್ಷೆ ಇರಬೇಕು. ಸೂತ್ರ ಶೈಲಿ (Greek Aphorismic style) ಯಲ್ಲಿ ಹೇಳಿದ್ದಾರೆ.

''ಅಪರಾಧಾನುಸಾರೇಣ ದಂಡಮ್''

ದಂಡವು ಅಪರಾಧಕ್ಕನುಸಾರವಾಗಿರಬೇಕು.

ಉದಾಹರಣೆಗೆ ಒಬ್ಬ ವ್ಯಕ್ತಿ ತನ್ನ ಹೆಂಡತಿ ಜೀವಂತ ಇರುವಾಗ ಇನ್ನೊಬ್ಬಳನ್ನು ಮದುವೆಯಾಗುವಂತಿಲ್ಲ, ಒಂದು ವೇಳೆ ಮದುವೆ ಆದರೆ ಅವನಿಗೆ ೭ ವರ್ಷ ಶಿಕ್ಷೆ ಹಾಗೂ ದಂಡಗಳನ್ನು ವಿಧಿಸಬಹುದು.

ಇಲ್ಲಿ ನಾವು ಗಮನಿಸಬೇಕಾದುದೆಂದರೆ ಕಾನೂನಿನಲ್ಲಿ ಅವನಿಗೆ ಗಲ್ಲುಶಿಕ್ಷೆಯನ್ನು ವಿಧಿಸಿಲ್ಲ. ಕಾರಣವೇನೆಂದರೆ ಒಂದು ವೇಳೆ ಗಲ್ಲುಶಿಕ್ಷೆಯಾದರೆ ಅವನು ಇಬ್ಬರು ಹೆಂಡಂದಿರಿಗೂ ಇಲ್ಲವಾಗುತ್ತಾನೆ. ಅದು ಕಾನೂನಿನ ಉದ್ದೇಶವಲ್ಲ.

ನಾನು ಇಷ್ಟು ಹೇಳಿದ ಕೂಡಲೇ ತಮ್ಮಲ್ಲಿ ಯಾರಾದರೂ ಕಾನೂನನ್ನು ಉಲ್ಲಂಘನೆ ಮಾಡಲು ಧೈರ್ಯ ಮಾಡಬೇಡಿ.

ಒಬ್ಬ ಜ್ಞಾನಿ ಹೇಳಿದ್ದು ಅದೇನೆಂದರೆ -

''ಸುಖದ ಸಾವು ಒಂದು ವ್ಯಾಜ್ಯಕ್ಕಿಂತಲೂ ಮೇಲು''

ಇನ್ನು ನ್ಯಾಯಾಲಯದಲ್ಲಿ ವಿಳಂಬ, ಇಂದು ಪ್ರಾರಂಭಿಸಿದ ವ್ಯಾಜ್ಯದ ಫಲ ಮಕ್ಕಳು, ಮೊಮ್ಮಕ್ಕಳಿಗೂ ದಕ್ಕಿದರೆ ಅವರ ಪುಣ್ಯ. ಇದು ಸರ್ವೇಸಾಮಾನ್ಯವಾಗಿ ಜನರಿಗೆ ನ್ಯಾಯಾಲಯದ ಬಗ್ಗೆ ಇರುವ ಅಭಿಪ್ರಾಯ. ಅದು ಸಂಪೂರ್ಣ ತಪ್ಪು ಅಭಿಪ್ರಾಯ ಎಂದು ಹೇಳಲಾಗದಿದ್ದರೂ ಅದಕ್ಕೆ ಕಾರಣವೇನು ಎನ್ನುವುದನ್ನು ತಿಳಿಯುವುದು ಬಹುಮುಖ್ಯ. ಜನಸಂಖ್ಯೆಗನುಗುಣವಾಗಿ ನ್ಯಾಯಾಲಯಗಳು ಇಲ್ಲದಿರುವುದೇ ಕಾರಣ. ನ್ಯಾಯಾಲಯದಲ್ಲಿ ವಿಳಂಬಕ್ಕಿಂತಲೂ ಮಹತ್ವದ ಸಂಗತಿಯೆಂದರೆ - ಸತ್ಯಾನ್ವೇಷಣೆ, ಅದರ ಬಗ್ಗೆ ಸ್ವಲ್ಪ ಯೋಚಿಸೋಣ.

ಸರ್ವೇಸಾಧಾರಣ ಪ್ರತೀ ವ್ಯಾಜ್ಯದಲ್ಲಿ ಇಬ್ಬರು ಕಕ್ಷಿದಾರರು ಇರುತ್ತಾರೆ. ಅವರಲ್ಲಿ ಒಂದು ಪಕ್ಷದವರು ಸತ್ಯವನ್ನಾಡಿ, ಇನ್ನೊಂದು ಪಕ್ಷದವರು ಸುಳ್ಳನ್ನಾಡುವ ಕಾಲವೊಂದಿತ್ತು, ಆದರೆ, ಇತ್ತೀಚಿನ ದಿನಗಳಲ್ಲಿ ಎರಡು ಪಕ್ಷದವರು ಸತ್ಯ ಪ್ರತಿಜ್ಞೆಯನ್ನು ಮಾಡಿ, ಸುಳ್ಳನ್ನೇ ಹೇಳಲು ಪ್ರಾರಂಭಿಸಿದ್ದಾರೆ. ನ್ಯಾಯದಾನ ಮಾಡುವುದು ಕಷ್ಟಕರವಲ್ಲವೆ ? ಇದನ್ನು ಸಮಾಜ ಹಾಗೂ ಸಂಬಂಧಪಟ್ಟವರು ಯೋಚಿಸಬೇಕಾದುದು ಅತ್ಯವಶ್ಯ. ಇದನ್ನು ಹೇಳುವ ಉದ್ದೇಶವಿಷ್ಟೆ, ಸರಿಯಾದ ರೀತಿಯಲ್ಲಿ ಸಮರ್ಪಕವಾದ ನ್ಯಾಯದಾನವಾದಾಗ ಮಾತ್ರ ಸಮಾಜದಲ್ಲಿ ಸುಖ, ಸಮೃದ್ಧಿ

ನೆಲೆಸಲು ಸಾಧ್ಯ. ಅಂತಹ ನ್ಯಾಯದಾನವನ್ನು ಮಾಡುವ ಹಾಗೂ ಮಾಡಿಸುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಕಾರಣ- ಕಾನೂನನ್ನು ತಿಳಿಯುವುದು ಇತ್ತೀಚಿನ ದಿನಗಳಲ್ಲಿ ನಮ್ಮ-ನಿಮ್ಮೆಲ್ಲರ ಉಸಿರಾಟದಷ್ಟೇ ಮಹತ್ವವನ್ನು ಪಡೆದಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ಇನ್ನು ಕಾನೂನು ಪ್ರಾಧಿಕಾರ ತಿಳಿಸುವ ವಿಷಯಗಳು ಯಾವುವೆಂದರೆ -

೧. ಕಾನೂನಿನ ಅಜ್ಞಾನ ಅಕ್ಷಮ್ಯ. ಉದಾಹರಣೆಗೆ ಕೊಲೆ ಮಾಡಿ ಅಥವಾ ಮಾನಭಂಗ ಮಾಡಿ ಅದು ಶಿಕ್ಷಾರ್ಹ ಅಪರಾಧ ಎಂದು ಗೊತ್ತಿದ್ದಿಲ್ಲ ಎಂದು ಹೇಳಲು ಬರುವಂತಿಲ್ಲ.

೨. (Abatment) ಪ್ರಚೋದನೆಗೆ ಶಿಕ್ಷೆ ಉಂಟು, ಅಷ್ಟೇ ಅಲ್ಲ ಅವುಗಳ (Attempt) ಪ್ರಯತ್ನಕ್ಕೂ ಶಿಕ್ಷೆ ಉಂಟು.

೩. ಇನ್ನೂ ಒಂದು ಹೆಜ್ಜೆ ಮುಂದೆ ಹೋದರೆ ಅಪರಾಧ ಮಾಡುವವನ ಜೊತೆ ನಮ್ಮ ಸಂಗನಮತ : ಸಹಮತ (Common intention) ಹಾಗೂ ಒಂದೇ ಉದ್ದೇಶ (Common object) ತಾವು ಹೊಂದಿದ್ದರೆ ತಮಗೂ ಆರೋಪಿತನಿಗೆ ಆದಷ್ಟೇ ಶಿಕ್ಷೆ ಕೊಡಲಾಗುತ್ತದೆ.

ಬ್ಯಾಂಕ್ ಸಾಲಗಳಲ್ಲಿ ತಾವು ಜಾಮೀನುದಾರರಾದರೂ, ಸಾಲ ಪಡೆದವನಷ್ಟೇ ಸಾಲ ತೀರಿಸುವ ಹೊಣೆ ತಮ್ಮ ಮೇಲೆ ಇರುತ್ತದೆ.

ಯಾವುದಾದರೂ ಅರ್ಜಿಯನ್ನು ಕೊಡಲು ಒಂದು ವೇಳೆ ರವಿವಾರ ಕೊನೆಯ ದಿನಾಂಕ ಇದ್ದರೆ ಆ ಅರ್ಜಿಯನ್ನು ಸೋಮವಾರವೂ ಸಹ ಕೊಡಬಹುದು ಇತ್ಯಾದಿ.

ಆಡಿದ ಮಾತು

ಬಿಟ್ಟ ಬಾಣ

ಕಳೆದ ಕಾಲ

ಉಪೇಕ್ಷಿಸಿದ ಅವಕಾಶ ಮತ್ತೆ ಬಾರದು

ಎಂದು ತಿಳಿದವರು ಹೇಳಿದ್ದಾರೆ.

ಭೂಮಿಗಿಂತ ದೊಡ್ಡ ವಸ್ತು ಯಾವುದೆಂದರೆ - ತಾಯಿ

ಆಕಾಶಕ್ಕಿಂತ ದೊಡ್ಡ ವಸ್ತು ಯಾವುದೆಂದರೆ - ಗುರಿ ಹಾಗೂ

ಗಾಳಿಗಿಂತ ವೇಗವಾದ ವಸ್ತು ಯಾವುದೆಂದರೆ - ಅವಕಾಶ - ಎಂದು ಹೇಳುತ್ತಾರೆ.

ಆದ್ದರಿಂದ ಕಾನೂನು ಪ್ರಾಧಿಕಾರ ಕೊಡಮಾಡುವ ಇಂಥ ಕಾನೂನು-

ತಿಳುವಳಿಕೆಯಂಥ ಅವಕಾಶವನ್ನು ಕಳೆದುಕೊಳ್ಳದೆ, ತಮ್ಮ ತಮ್ಮ ಗುರಿಗಳನ್ನು ಸಾಧಿಸುವಲ್ಲಿ ಶ್ರೇಷ್ಠ ಚಿಂತನೆಗಳು ಎಲ್ಲಾ ದಿಕ್ಕುಗಳಿಂದ ನಿಮ್ಮತ್ತ ಹರಿದು ಬರಲಿ ಎಂದು ಹಾರೈಸುವೆ.

ಕೊನೆಯಲ್ಲಿ - "The laws are with us and God is on our side"

ಇದರ ಅರ್ಥ - ನಾವುಗಳು ಕಾನೂನನ್ನ ಪಾಲಿಸಿದ್ದೇ ಆದರೆ

ಭಗವಂತ ಯಾವಾಗಲೂ ನಮ್ಮ ಪಕ್ಷವನ್ನೇ ವಹಿಸುತ್ತಾನೆ - ಎಂದಾಗುತ್ತದೆ.

ಆ ಕಾರಣ, ನಾವು ನೀವೆಲ್ಲರೂ ಕಾನೂನನ್ನು ಪಾಲಿಸೋಣ.

ಆ ಭಗವಂತ ಸದಾ ನಮ್ಮ ಪಕ್ಷವನ್ನೇ ವಹಿಸುವಂತಾಗಲಿ.

****

ಮಹಿಳೆಯರಿಗೆ ಸಂಬಂಧಿಸಿದ ಕಾನೂನುಗಳು - ಒಂದು ಚಿಂತನೆ

ಒಟ್ಟಾರೆ ಕಾನೂನಿನ ಬಗ್ಗೆ ಚಿಂತನೆಗೈದ ನಾವು ಈಗ ಮಹಿಳೆಯರಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ತಿಳಿಯೋಣ.

''ತಾಯಿ ದೇವರು'' ಎಂದು ಎಲ್ಲರು ಬರಿ ಬಾಯಿಮಾತಿನಿಂದ ಹೇಳುತ್ತಾರೆ. ಆದರೆ ಹುಟ್ಟುವ ಶಿಶು ಮಹಿಳೆ ಎಂದು ಗೊತ್ತಾದ ಕ್ಷಣವೇ ಅದರ ಭ್ರೂಣಹತ್ಯೆಗೆ ಮುಂದಾಗುತ್ತಾರೆ. ಆ ಕ್ಷಣ ಅವರಿಗೆ ತೊಟ್ಟಿಲನ್ನು ತೂಗುವ ಕೈ ಜಗತ್ತನ್ನೇ ಆಳಬಲ್ಲದು ಎಂಬ ಗಾದೆ ಹಾಗೂ ದಿವಂಗತ ಇಂದಿರಾ ಗಾಂಧಿ ಹಾಗೂ ಇಂದಿನ ಕಿರಣ ಬೇಡಿ ಹಾಗೂ ಕಲ್ಪನಾ ಚಾವ್ಲಾರಂತಹವರ ನೆನೆಪು ಯಾಕೆ ಬರುವುದಿಲ್ಲವೋ ದೇವರೇ ಬಲ್ಲ.

ಅದಕ್ಕೆ ಕಾರಣ ಇಲ್ಲವೆಂತಲ್ಲ, ಇಂದಿನ ನಮ್ಮ ಸಮಾಜದಲ್ಲಿ ಸ್ತ್ರೀಯರಿಗೆ ಶಾಪವಾಗಿರುವ ವರದಕ್ಷಿಣೆಯಂಥ ಪಿಡುಗು ಹಾಗೂ ಕಿರುಕುಳಗಳೇ ಕಾರಣವಾಗಿರಬಹುದು. ಸರಕಾರ ಈ ನಿಟ್ಟಿನಲ್ಲಿ ವರದಕ್ಷಿಣೆ ನಿಷೇಧ ಕಾನೂನನ್ನು ಜಾರಿಯಲ್ಲಿ ತಂದಿದೆ. ಆದರೂ ದಾಂಪತ್ಯ ಜೀವನದ ಕನಸನ್ನು ಹೊತ್ತು ಗಂಡನ ಮನೆಯ ಹೊಸ್ತಿಲನ್ನು ತುಳಿದ ಸ್ತ್ರೀ ಚಿತ್ರಹಿಂಸೆಗಳಿಗೆ ಹೆಣವಾಗಿ ಹೊರಬರುವ ನಿರ್ದಶನಗಳಿಗೆ ನಮ್ಮಲ್ಲಿ ಕೊರತೆ ಇಲ್ಲ.

ಸರಕಾರ ಭ್ರೂಣಹತ್ಯೆಯನ್ನು ನಿಷೇಧಿಸುವ ಕಾನೂನನ್ನು ಜಾರಿಗೊಳಿಸಿದೆ. ಆದರೆ ಅದನ್ನು ಆಚರಣೆಯಲ್ಲಿ ತರುವ ಜನರ ಕೊರತೆ ನಮ್ಮಲ್ಲಿದೆ.

ಇಂತಹ ಪರಿಸ್ಥಿತಿಯಿಂದ ಪಾರಾಗಿ ಒಂದು ವೇಳೆ ಸುದೈವವಶಾತ್ ಒಂದು ಹೆಣ್ಣು ಶಿಶು ಜನ್ಮಿಸಿದಲ್ಲಿ ಅವಳಿಗೆ ಶಾಲೆ ಓದುವಾಗಿನಿಂದಲೂ, ಪುರುಷರಿಂದ ಕಿರುಕುಳ ಪ್ರಾರಂಭವಾಗುತ್ತದೆ. ಅಂತಹ ಕಿರುಕುಳವನ್ನು ತಡೆಯಲು ಭಾರತದ ದಂಡ ಸಂಹಿತೆಯ ೩೫೪ನೇ ವಿಧಿಯ ಪ್ರಕಾರ ಶಿಕ್ಷೆಗೆ ಒಳಪಡಿಸಬಹುದು.

ಈ ಕಿರುಕುಳ ಇಷ್ಟಕ್ಕೆ ನಿಲ್ಲದೆ, ಅನೇಕ ಸಾರಿ ಮಾನಭಂಗಗಳಲ್ಲಿ ಕೊನೆಯಾಗುವುದನ್ನು ಸಹ ನಾವು, ನೀವೆಲ್ಲ ಪತ್ರಿಕೆಗಳಲ್ಲಿ ಓದುತ್ತಲೇ ಇರುತ್ತೇವೆ. ಒಂದು ಸಮೀಕ್ಷೆಯ ಪ್ರಕಾರ ಪ್ರತಿಯೊಂದು ನಿಮಿಷಕ್ಕೆ ೫೪ ಮಹಿಳೆಯರ ಮಾನಭಂಗ ನಮ್ಮ ದೇಶದಲ್ಲಿ ನಡೆಯುತ್ತಿದೆ ಎನ್ನುವುದು ವಿಷಾದದ ಸಂಗತಿ. ಇದಕ್ಕಿಂತಲೂ ಹೃದಯವಿದ್ರಾವಕ ಚಿತ್ರಣ ಬೇಕೇ ? ಒಂದು ಕ್ಷಣ ಯೋಚಿಸಿ.

ಮಾನಭಂಗಕ್ಕೆ ದಂಡಸಂಹಿತೆಯಲ್ಲಿ ಕಲಂ ೩೭೬ರ ಪ್ರಕಾರ ಶಿಕ್ಷೆ ಉಂಟು. ಆದರೆ ಶಿಕ್ಷೆಯಲ್ಲಿ ಕೊನೆಗೊಳ್ಳುವ ನಿರ್ಣಯಗಳು ಬಹಳ ವಿರಳ. ಮಾನಭಂಗಕ್ಕೆ ಒಳಗಾದ ಸ್ತ್ರೀಗೆ ಸಾಕಷ್ಟು ಪರಿಹಾರಧನವನ್ನಾದರೂ ನೀಡಿ ಅಥವಾ ಅದಕ್ಕೆ ಕಾರಣವಾದ ವ್ಯಕ್ತಿಯೊಡನೆ ವಿವಾಹವನ್ನಾದರೂ ಮಾಡಿಸಿ ಮಹಿಳೆಗೆ ನ್ಯಾಯವನ್ನು ಒದಗಿಸಬೇಕು. ಇದು ಸಾಮಾಜಿಕ ಪ್ರಜ್ಞೆಯುಳ್ಳ ನ್ಯಾಯಾಧೀಶರಿದ್ದಾಗ ಮಾತ್ರ ಸಾಧ್ಯ.

''ಪ್ರತಿಯೊಂದು ಮನೆಯೊಳಗೆ ಇರಬೇಕು ಹೆಣ್ಣು

ಹೆಣ್ಣು ಇಲ್ಲದ ಜಾಗ ಗಿಡವಿರದ ಮಣ್ಣು'' - ಕವಿವಾಣಿ

ಈಗ ನಾನು ಏನನ್ನು ಪ್ರಸ್ತಾಪಿಸಬಯಸುವೆ ಎಂದು ತಾವು ಊಹಿಸಿರಬಹುದು - ವಿವಾಹ. ಇನ್ನು ವಿವಾಹದ ಬಗ್ಗೆ ಯೋಚಿಸೋಣ.

ಕಾನೂನಿನ ದೃಷ್ಟಿಯಲ್ಲಿ ನಿಶ್ಚಿತಾರ್ಥಕ್ಕೆ ಯಾವ ಬೆಲೆಯೂ ಇಲ್ಲ. ಆದರೆ ನಿಶ್ಚಯವಾದ ನಂತರ ವಿವಾಹವಾಗದಿದ್ದರೆ ಅವರ ಕುಟುಂಬಕ್ಕೆ ಹಾಗೂ ಅವಳಿಗೆ ಆದಂತಹ ಮಾನನಷ್ಟಕ್ಕೆ ಅಪಕೃತ್ಯ ಕಾನೂನಿನಡಿಯಲ್ಲಿ ಲಕ್ಷಾಂತರ ರೂಪಾಯಿಗಳ ಪರಿಹಾರವನ್ನು ಕೇಳಬಹುದು.

ಎಷ್ಟು ಪರಿಹಾರವನ್ನು ಕೇಳುತ್ತೇವೆಯೋ ಅದಕ್ಕನುಗುಣವಾಗಿ ಸರಕಾರಕ್ಕೆ ನ್ಯಾಯಾಲಯದ ಶುಲ್ಕವನ್ನು ಅರ್ಜಿದಾರರು ತುಂಬಬೇಕಾಗುತ್ತದೆ. ಆದರೆ ಕಾನೂನು ಸೇವಾ ಪ್ರಾಧಿಕಾರಗಳು ಅಸ್ತಿತ್ವಕ್ಕೆ ಬಂದ ಮೇಲೆ ಮಹಿಳೆಯರಿಗೆ ಅಂತಹ ತೊಂದರೆ ಇಲ್ಲ. ಯಾಕೆಂದರೆ ಆ ಕಾನೂನಿನಡಿಯಲ್ಲಿ ಅರ್ಜಿದಾರರು ಮಹಿಳೆಯರಾದ ಪಕ್ಷದಲ್ಲಿ ಸರಕಾರಕ್ಕೆ ಹಾಗೂ ವಕೀಲರಿಗೆ ಕೊಡಬೇಕಾದಂತಹ ಫೀಯನ್ನು ಸರಕಾರವೇ ಭರಿಸುತ್ತದೆ. ಹಾಗೂ ತಾವು ವ್ಯಾಜ್ಯವನ್ನು ಗೆದ್ದ ಮೇಲೆ ಆ ಹಣವನ್ನು ಸರಕಾರಕ್ಕೆ ಮರಳಿ ತುಂಬಬೇಕಾಗುತ್ತದೆ.

ಸರಕಾರದ ಈ ಸಹಾಯ ಸ್ತ್ರೀಯರು ಹಾಕುವಂತಹ ಪ್ರತಿಯೊಂದು ವ್ಯಾಜ್ಯಗಳಿಗೂ ಅನ್ವಯಿಸುತ್ತದೆ.

ಅಂತರಜಾತಿ ವಿವಾಹಕ್ಕೆ ಕಾನೂನಿನಲ್ಲಿ ಯಾವುದೇ ನಿರ್ಬಂಧವಿಲ್ಲ. ಆದರೆ ವಿವಾಹದ ನಂತರ ಸ್ತ್ರೀ ಪುರುಷನ ಧರ್ಮವನ್ನು ಹೊಂದುತ್ತಾಳೆ.

ಆದರೆ ವಿವಾಹಿತ ಗಂಡ ಅಥವಾ ಹೆಂಡತಿ ಮತ್ತೊಬ್ಬರ ಜೀವಿತಕಾಲದಲ್ಲಿ ಇನ್ನೊಬ್ಬರನ್ನು ಮದುವೆಯಾಗುವಂತಿಲ್ಲ. ಒಂದು ವೇಳೆ ಮದುವೆಯಾದರೆ ಅದಕ್ಕೆ ಕಾನೂನಿನ ದೃಷ್ಟಿಯಲ್ಲಿ ಯಾವ ಬೆಲೆಯೂ ಇಲ್ಲ. ಹಾಗೂ ಅವಳಿಗೆ ಯಾವ ಹಕ್ಕುಗಳೂ ಪ್ರಾಪ್ತವಾಗುವುದಿಲ್ಲ.

ಆದರೆ ಅಂತಹವಳ ಮಕ್ಕಳಿಗೆ ಅವರ ತಂದೆ-ತಾಯಿಗಳ ಭಾಗದಲ್ಲಿ ಮಾತ್ರ ಆಸ್ತಿಗಳು ದೊರೆಯುತ್ತವೆ. ವಿವಾಹದ ನಂತರ ಮಕ್ಕಳೇ ಆಗಿರದಿದ್ದ ಪಕ್ಷದಲ್ಲಿ

ದತ್ತಕವನ್ನು ತೆಗೆದುಕೊಳ್ಳ ಬಹುದು. ದತ್ತಕ ಕಾಯ್ದೆ ಜಾರಿಗೆ ಬರುವ ಮುನ್ನ ಸ್ತ್ರೀಯರನ್ನು ದತ್ತಕ ತೆಗೆದುಕೊಳ್ಳುವಂತಿರಲಿಲ್ಲ. ಆದರೆ ಈಗ ಸ್ತ್ರೀಯರನ್ನು ಸಹ ದತ್ತಕ ತೆಗೆದುಕೊಳ್ಳಬಹುದು. ದತ್ತಕ ತೆಗೆದುಕೊಳ್ಳುವವನು ಪುರುಷನಾಗಿದ್ದ ಪಕ್ಷದಲ್ಲಿ ಅವನಿಗೂ ಹಾಗೂ ದತ್ತಕ ಮಗಳ ವಯಸ್ಸಿನಲ್ಲಿ ೨೧ ವರ್ಷಗಳು ಕನಿಷ್ಟ ಅಂತರವಿರಬೇಕು.

ವಿವಾಹವಾದ ಮೇಲೆ ಕಾರಣವಿಲ್ಲದೆ ಗಂಡ ಬಿಟ್ಟರೆ ಹೆಂಡತಿ ಗಂಡನನ್ನು ಕೋರಿ ಅರ್ಜಿಯನ್ನು ಸಲ್ಲಿಸಬಹುದು. ವೈವಾಹಿಕ ಜೀವನ ನಡೆಸಲು ಸಾಧ್ಯವೇ ಇಲ್ಲ ಎನ್ನುವ ಪಕ್ಷದಲ್ಲಿ ವಿವಾಹ ವಿಚ್ಛೇದನ ಪಡೆದು ಬೇರೊಬ್ಬರನ್ನು ವಿವಾಹವಾಗಬಹುದು. ಆದರೆ ವಿಚ್ಛೇದಿತ ಮಹಿಳೆಗೆ ಗಂಡನ ಆಸ್ತಿಯಲ್ಲಿ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ.

ವಿಚ್ಛೇದಿತ ಮಹಿಳೆ ತನ್ನ ಉಪಜೀವನಕ್ಕಾಗಿ ಜೀವನಾಂಶವನ್ನು ಕೋರಿ ಸಿವಿಲ್ ಹಾಗೂ ಕ್ರಿಮಿನಲ್ ಜೀವನಾಂಶವನ್ನು ಏಕಕಾಲಕ್ಕೆ ಕೇಳಲು ಬರುವಂತಿಲ್ಲ. ಅವಳು ಬರೀ ಕ್ರಿಮಿನಲ್ ಜೀವನಾಂಶವನ್ನು ಭಾರತ ದಂಡ ಪ್ರಕ್ರಿಯಾ ಸಂಹಿತೆಯ ಕಲಂ ೧೨೫ರ ಪ್ರಕಾರ ಕೇಳಿಕೊಳ್ಳಬಹುದು. ಈ ವ್ಯತ್ಯಾಸ ವಿವಾಹವಾದ ವಿಚ್ಛೇದನ ಪಡೆಯದ ಮಹಿಳೆಗೆ ಅನ್ವಯಿಸುವುದಿಲ್ಲ. ಅಂದರೆ ಅವಳು ಸಿವಿಲ್ ಹಾಗೂ ಕ್ರಿಮಿನಲ್ ಜೀವನಾಂಶಗಳನ್ನು ಏಕಕಾಲಕ್ಕೆ ಕೇಳಿ ಪಡೆಯಬಹುದು.

ವಿವಾಹಿತ ಮಹಿಳೆಯು ಸಹ ಗಂಡನ ಆಸ್ತಿಯಲ್ಲಿ ತಾನೊಬ್ಬಳೇ ಭಾಗವನ್ನು ಕೇಳಲು ಬರುವುದಿಲ್ಲ. ಅವಳು ತನ್ನ ಮಗ ಅಥವಾ ಮಗಳು ಭಾಗ ಕೇಳಿದ್ದರೆ ಅಂತಹ ಪ್ರಸಂಗದಲ್ಲಿ ಅವಳಿಗೂ ಸಮಪಾಲನ್ನು ಕೊಡಲಾಗುತ್ತದೆ. ಇದನ್ನೇ ಬೇರೆ ಭಾಷೆಯಲ್ಲಿ ಹೇಳುವುದಾದರೆ ಕಾನೂನಿನಲ್ಲಿ ಗಂಡನ ತಾಯಿಗೆ ಹಾಗೂ ಮಗಳಿಗೆ ಹಕ್ಕನ್ನು ಕೊಡಮಾಡಿದೆಯೇ, ಹೊರತು ಹೆಂಡತಿಗೆ ಅಂತಹ ಹಕ್ಕನ್ನು ಇಂದಿಗೂ ಕೊಟ್ಟಿಲ್ಲ. ಅಂದರೆ ಮಕ್ಕಳನ್ನು ಹೆರದ (ಹಡಿಯದ) ಸ್ತ್ರೀಯರಿಗೆ ಅವರು ವಿಧವೆಯರಾಗುವುದಕ್ಕಿಂತ ಮೊದಲು ಆಸ್ತಿಯಲ್ಲಿ ಹಕ್ಕನ್ನು ಕೇಳಲು ಬರುವಂತಿಲ್ಲ. ನಮ್ಮ ದೇಶ ಸ್ವತಂತ್ರವಾಗಿ ಇಷ್ಟು ವರುಷಗಳು ಗತಿಸಿದ ನಂತರವೂ ಸಹ, ನಮ್ಮ ಕಾನೂನು ಸ್ತ್ರೀಗೆ ಅಂದರೆ ಹೆಂಡತಿಗೆ ಕೊಟ್ಟ ಗೌರವವಿಷ್ಟೇ. ಅಂದರೆ ಅವಳನ್ನು ಇಂದಿಗೂ ಮಕ್ಕಳನ್ನು ಹೆರುವ ಯಂತ್ರವನ್ನಾಗಿ ಮಾಡಿದ್ದಾರೆ ಹೊರತು ಅವಳಿಗೆ ಸಿಗಬೇಕಾದ ನ್ಯಾಯವನ್ನು ಪುರುಷ ಪ್ರಧಾನವಾದ ಸಮಾಜ ಇಂದಿಗೂ ಅವಳಿಗೆ ಒದಗಿಸಿಲ್ಲ.

ವಿವಾಹವಾಗದೇ ಇದ್ದ ಮಹಿಳೆಯಾದಲ್ಲಿ ತನ್ನ ತಂದೆಯ ಭಾಗದಲ್ಲಿ ಮಾತ್ರ ಅವಳಿಗೆ ಸಮಪಾಲು ಸಿಗುತ್ತಿತ್ತು. ಆದರೆ ೧೯೯೪ರ ತಿದ್ದುಪಡಿ ಜಾರಿಗೆ ಬಂದ ನಂತರ ಒಂದು ವೇಳೆ ಮಗಳು ೧೯೯೪ರ ಮುಂಚೆಯೇ ವಿವಾಹವಾಗಿರದಿದ್ದ ಪಕ್ಷದಲ್ಲಿ ಅವಳು

ಗಂಡು ಮಕ್ಕಳ ಜೊತೆಗೆ ಒಟ್ಟು ಕುಟುಂಬದ ಆಸ್ತಿಯಲ್ಲಿ ಸಮಪಾಲನ್ನು ಪಡೆಯಲು ಅರ್ಹಳಾಗಿದ್ದಾಳೆ.

೧೯೯೪ರ ಮುಂಚೆ ವಿವಾಹವಾದ ಮಹಿಳೆಯರು ಮಹಿಳೆಯರೇ ಅಲ್ಲವೇ ? ಇದು ನಮ್ಮ ಮುಂದಿರುವ ಪ್ರಶ್ನೆ. ಅವರೂ ಸಹ ಮಹಿಳೆಯರು ಎನ್ನುವ ಸಂಗತಿ ಶಾಸಕರಿಗೇ ತಿಳಿಯಬೇಕಾಗಿದೆ. ಇಂತಹ ಅನೇಕ ಕಾಯ್ದೆಯ ಲೋಪದೋಷಗಳನ್ನು ಶಾಸಕರಿಗೆ ಮನಮುಟ್ಟುವ ಹಾಗೆ ತಿಳಿಸುವಲ್ಲಿ ಸ್ತ್ರೀಶಕ್ತಿ ಕೇಂದ್ರಗಳು ಒಗ್ಗೂಡಿ ಮುಂದಾಗಬೇಕು.

ಸರಕಾರ ವಿಧವೆಯರಿಗೆ ಹಾಗೂ ವಯೋವೃದ್ಧರಿಗೆ ವೃದ್ಧಾಪ್ಯವೇತನವನ್ನು ಕೊಡಮಾಡಿದೆ. ಆದರೆ ಎಷ್ಟು ಜನರಿಗೆ ಅದರ ಫಲ ಸಿಗಬೇಕೋ ಅದು ಸಿಗುತ್ತಿಲ್ಲ. ಈ ದಿಶೆಯಲ್ಲಿಯೂ ಸಹ ಸ್ತ್ರೀ ಸ್ವಯಂಸೇವಾ ಸಂಸ್ಥೆಗಳು ಮುಂದಾಗಿ ದುಡಿಯಬೇಕು.

ಇನ್ನು ದುಡಿಯುವ ಮಹಿಳೆಯ ಬಗ್ಗೆ ಯೋಚಿಸುವುದಾದರೆ, ವಿಶ್ವಸಂಸ್ಥೆಯ ವರದಿಯ ಪ್ರಕಾರ ಸ್ತ್ರೀಯರು ವಿಶ್ವದ ೧/೨ ಜನಸಂಖ್ಯೆ ಇದ್ದು,

ಸ್ತ್ರೀಯರು ವಿಶ್ವದ ೨/೩ ಕೆಲಸ ಮಾಡಿ,

ಸ್ತ್ರೀಯರು ವಿಶ್ವದ ೧/೧೦ ಆದಾಯವನ್ನು ಪಡೆಯುತ್ತಿದ್ದಾರೆ.

ವಿಶ್ವದ ೧/೧೦ ಆದಾಯವೆಂದರೆ ಇಡೀ ವಿಶ್ವದ ೧/೧೦೦ ಆಸ್ತಿಯನ್ನಷ್ಟೇ ಊಟ ಮಾಡುತ್ತಿದ್ದಾರೆ. ಇದು ನ್ಯಾಯಸಮ್ಮತವೇ ? ನೀವೇ ಯೋಚಿಸಿ. ನನ್ನ ಅಭಿಪ್ರಾಯದಲ್ಲಿ ಖಂಡಿತ ಇದು ನ್ಯಾಯಸಮ್ಮತವಲ್ಲ.

ಇಂತಹ ಪರಿಸ್ಥಿತಿಯಲ್ಲಿಯೂ ಸಹ ಸರಕಾರಿ ನೌಕರಿಗಳಲ್ಲಿ ಸ್ತ್ರೀಗೆ ಬರೀ ೩೩ ಪ್ರತಿಶತ ಮಾತ್ರ ಮೀಸಲಾತಿಯನ್ನು ನೀಡಲಾಗಿದೆ. ಅದು ಶೇಕಡಾ ೫೦ ಪ್ರತಿಶತ ಮೀಸಲಾತಿಯಾಗಬೇಕು ಅಂದಾಗ ಮಾತ್ರ ನ್ಯಾಯಸಮ್ಮತ ಅವಕಾಶವಾಗುತ್ತದೆ.

ಎರಡನೆಯ ವಿವಾಹಕ್ಕೆ ಕಲಂ ೪೯೪ ಭಾರತದ ದಂಡ ಸಂಹಿತೆಯ ಪ್ರಕಾರ ಶಿಕ್ಷೆ ಹಾಗೂ ದಂಡ ಉಂಟು. ಆದರೆ ಮಹಿಳೆಯರಿಗೆ ನಿಜವಾಗಿ ಈ ನಿಟ್ಟಿನಲ್ಲಿ ಹೆಚ್ಚಿನ ನ್ಯಾಯ ಒದಗಿಸುವ ಉದ್ದೇಶದಿಂದ ನಮ್ಮ ಸರಕಾರ ದಿ : ೧೪-೦೯-೨೦೦೧ರಂದು ಒಂದು ಸುತ್ತೋಲೆಯನ್ನು ಹೊರಡಿಸಿ ಅಂತಹ ವ್ಯಕ್ತಿಗಳಿಗೆ ಕಡ್ಡಾಯ ನಿವೃತ್ತಿಯನ್ನು ಜಾರಿಗೆ ತಂದಿದೆ. ಅಷ್ಟೇ ಅಲ್ಲಾ ನೌಕರಿಯಲ್ಲಿದ್ದ ಮಹಿಳೆಗೆ ಕಿರುಕುಳ ಕೊಟ್ಟರೆ ಅಂತಹ ಪುರುಷರಿಗೆ ಅವರಿದ್ದ ಸ್ಥಾನದಿಂದ ಕೆಳಸ್ಥಾನಕ್ಕೆ : ಹಿಂಬಡ್ತಿಗೆ ಇಳಿಸುವ ಕಾನೂನನ್ನು ಜಾರಿಗೆ ತಂದಿದೆ. ಇವುಗಳು ಸ್ವಾಗತಾರ್ಹ.

ಕಚೇರಿಗಳಲ್ಲಿ ಮಾನಭಂಗಕ್ಕೆ ಸಂಬಂಧಿಸಿದ ಅಪರಾಧಗಳಲ್ಲಿ ನಾನು ನಿರಪರಾಧಿ ಎಂದು ನಿರೂಪಿಸುವ ಹೊಣೆಯನ್ನು ಅಪರಾಧಿಯ ಮೇಲೆ ಹೇರಿ, ಭಾರತ ಸಾಕ್ಷ್ಯ ಅಧಿನಿಯಮಕ್ಕೂ ಸಹ ತಿದ್ದುಪಡಿಯನ್ನು ತಂದಿದ್ದಾರೆ. ಇದು ಸಹ ಪ್ರಶಂಸಾರ್ಹ.

ಮಹಿಳೆಯರನ್ನು ರಾತ್ರಿ ಕಚೇರಿ ಅಥವಾ ಆಫೀಸುಗಳನ್ನು ಕಾಯುವ ಕೆಲಸಕ್ಕೆ ನಿಯಮಿಸುವಂತಿಲ್ಲ. ಇದು ಮತ್ತೊಂದು ಕಾನೂನು. ಖಾಸಗಿ ಕಾರ್ಖಾನೆಗಳಲ್ಲಿ ಮಹಿಳೆಯರು ಕೆಲಸವನ್ನು ಮಾಡುತ್ತಿದ್ದರೆ, ಅವರಿಗಾಗಿ ಪ್ರತ್ಯೇಕ ವಿಶ್ರಾಂತಿ ಕೊಠಡಿ ಮತ್ತು ಶೌಚಾಲಯಗಳನ್ನು ನಿರ್ಮಿಸಬೇಕು ಎಂದು ಸರ್ವೋಚ್ಚ ನ್ಯಾಯಾಲಯ ತೀರ್ಪನ್ನಿತ್ತಿರುವುದು ಸಹ ಗಮನಾರ್ಹ.

ನಡತೆಗೆಟ್ಟ ಸ್ತ್ರೀಗೂ ಗೌಪ್ಯತೆ ಹಕ್ಕುಂಟು. (Judge made laws)

ಕಾನೂನು ಎಂದಾಗ ಬರಿ ಹಕ್ಕು ಮಾತ್ರವಲ್ಲ, ಕರ್ತವ್ಯವು ಕೂಡಾ ಎನ್ನುವುದನ್ನು ಇಂದಿನ ಮಹಿಳೆಯರು ಮರೆಯುವಂತಿಲ್ಲ.

ಕಾರಣ ಹಿರಿಯರು ಹೇಳಿದಂತೆ :

ಕೆಲಸದಲ್ಲಿ	-	ಸೇವಕಿ
ಸಲಹೆ ನೀಡುವಲ್ಲಿ	-	ಮಂತ್ರಿ
ಉಣಬಡಿಸುವಲ್ಲಿ	-	ಮಾತೆ
ಕ್ಷಮೆಯಲ್ಲಿ	-	ಭೂಮಿತಾಯಿ
ರೂಪದಲ್ಲಿ	-	ಲಕ್ಷ್ಮಿ ಹಾಗೂ
ಹಾಸಿಗೆಯಲ್ಲಿ	-	ವೇಶ್ಯೆ

ಈ ಆರು (೬) ಗುಣಗಳನ್ನು ಹೊಂದಿದ ಸ್ತ್ರೀಯರು ಮಾತ್ರ 'ಕುಲಧರ್ಮಪತ್ನಿ' ಎಂದೆನಿಸಿಕೊಳ್ಳುತ್ತಾರೆ.

ಆದರೆ ಪುರುಷರನ್ನು ದೂಷಿಸುವ ಕೆಲಸದೊಂದಿಗೆ ಹಣಕ್ಕೆ ಆಸೆ ಬಿದ್ದು ಜಾಹಿರಾತುಗಳಲ್ಲಿ ತಮ್ಮನ್ನು ತಾವೇ ಪ್ರದರ್ಶಿಸಿಕೊಳ್ಳುವ ಸ್ತ್ರೀಯರಿಗೂ ನಮ್ಮಲ್ಲಿ ಕೊರತೆ ಇಲ್ಲ. ಪ್ರಪ್ರಥಮವಾಗಿ ಇದನ್ನು ನಿಲ್ಲಿಸುವ ಕಾರ್ಯ ಸ್ತ್ರೀಯರಿಂದಲೇ ಆಗಬೇಕಾಗಿದೆ.

ನಮ್ಮ ದೇಶದಲ್ಲಿ ಸ್ತ್ರೀ ಅಪರಾಧಿಗಳು ಸಹ ಇದ್ದಾರೆ ಎನ್ನುವುದನ್ನು ಸಹ ನಾವು ಮರೆಯುವಂತಿಲ್ಲ. ಪರಿಸ್ಥಿತಿಯ ಒತ್ತಡಕ್ಕೋ ಮತ್ತ್ಯಾವುದೋ ಕಾರಣಕ್ಕಾಗಿ ಅವರು ಅಪರಾಧಿಗಳಾಗಿರಬಹುದು. ಆದರೆ ಸರಕಾರ ಅಂತಹವರನ್ನು ದಸ್ತಗಿರಿ ಮಾಡಬೇಕಾದರೆ ಮಹಿಳಾ ಪೊಲೀಸರ ಸಹಾಯದಿಂದಲೇ ಮಾಡಬೇಕು ಎಂದು ಹಾಗೂ ಜೈಲಿನಲ್ಲಿ ಅವರಿಗಾಗಿ ಪ್ರತ್ಯೇಕ ಕೋಣೆಗಳಲ್ಲಿ ಇಡಮಾಡಬೇಕು ಎಂದೂ ಸಹ ಆಜ್ಞೆಗಳನ್ನು ಹೊರಡಿಸಿದ್ದಾರೆ.

ಒಂದು ವೇಳೆ ಸ್ತ್ರೀಗೆ ಗಲ್ಲು ಶಿಕ್ಷೆಯಾದರೆ ಅವಳು ಗರ್ಭಿಣಿಯಾಗಿದ್ದ ಪಕ್ಷದಲ್ಲಿ ಹೆರಿಗೆಯಾಗುವುದಕ್ಕಿಂತ ಮುನ್ನ ಗಲ್ಲಿಗೆ ಏರಿಸುವಂತಿಲ್ಲ.

ಈ ಎಲ್ಲಾ ವಿಷಯಗಳನ್ನು ಗಮನಿಸಿದರೆ, ಮೇಲ್ನೋಟಕ್ಕೆ ಸ್ತ್ರೀಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲಾಗಿದೆ ಎಂದು ಕಂಡುಬಂದರೂ ಸಹ, ಅವಳಿಗೆ ಸಿಗಬೇಕಾದ ಸಮಾನತೆ ಹಾಗೂ ಸಮನ್ಯಾಯ ಇನ್ನೂ ಕನಸಾಗಿಯೇ ಉಳಿದಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಆ ಕನಸು ನನಸಾಗಬೇಕಾದರೆ ಪುರುಷ ಪ್ರಧಾನವಾದ ನಮ್ಮ ಸಮಾಜದಲ್ಲಿ ಚುನಾವಣೆಗಳಲ್ಲಿ ಸ್ತ್ರೀ ಶಾಸಕರು ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಜಯಗಳಿಸಿ ಸ್ತ್ರೀಯರಿಗೆ ಇನ್ನೂ ಸಿಗಬೇಕಾದ ಹಕ್ಕುಗಳನ್ನು ಕೊಡಮಾಡಿದಾಗ ಮಾತ್ರ ಅವಳಿಗೆ ಸಲ್ಲುವ ಗೌರವ ಸಲ್ಲುತ್ತದೆ. ಆಗ ಮಾತ್ರ ಸಮಾನತೆ ಹಾಗೂ ಸಮನ್ಯಾಯವನ್ನು ನಿರೀಕ್ಷಿಸಬಹುದು. ಅಂತಹ ಶುಭದಿನಗಳು ಬಹುದೂರವಾಗಿರದೆ ಅವಳ ಕನಸು ಆದಷ್ಟು ಬೇಗನೆ ನನಸಾಗಲೀ ಎಂದು ಹಾರೈಸುವೆ.

★★★★

ನ್ಯಾಯ ಶಿಕ್ಷಣ - ಒಂದು ಚಿಂತನೆ

ನ್ಯಾಯವೃತ್ತಿಗೆ ಅಗತ್ಯವಾದ ಶಿಕ್ಷಣ. ಇದು ಇತರ ಶಿಕ್ಷಣಕ್ಕಿಂತ ಮೂಲತಃ ಬೇರೆಯಲ್ಲ. ನ್ಯಾಯ ಶಿಕ್ಷಣದ ಬೇರು ಗತಕಾಲದಲ್ಲಿ ಹುದುಗಿದೆ. ಪ್ರಚಲಿತ ನ್ಯಾಯ ಶಿಕ್ಷಣ ವ್ಯವಸ್ಥೆ ಯಾರೊಬ್ಬರಿಂದಲೋ ಒಂದೇ ದಿನದಲ್ಲಿ ಆದದ್ದಲ್ಲ; ಅನೇಕ ವಿದ್ವಾಂಸರ, ನ್ಯಾಯಶಾಸ್ತ್ರಕೋವಿದರ ಸತತ ಪ್ರಯತ್ನ, ಅಭ್ಯಾಸ, ಅನುಭವಗಳಿಂದ ರೂಪುಗೊಂಡಿದ್ದು.

ಈವರೆಗೆ ದೊರೆತಿರುವ ಇತಿಹಾಸದ ಆಧಾರದಿಂದ ಹೇಳುವುದಾದರೆ ಎರಡು ಸಾವಿರ ವರ್ಷಗಳ ಹಿಂದೆ ಪುಂಬೇಡಿತ ಎಂಬಲಿದ್ದ ನ್ಯಾಯಶಾಲೆಯೇ ಪ್ರಪಂಚದ ಮೊಟ್ಟಮೊದಲನೆಯ ನ್ಯಾಯಶಾಲೆ. ಅದರ ಕೇಂದ್ರ ಬೇಬಿಲೋನಿಯದಲ್ಲಿತ್ತು. ಈ ಕೇಂದ್ರದಲ್ಲಿ ನದಿ ದಂಡೆಯಲ್ಲಿದ್ದ ವಿಶಾಲವಾದ ಮರದ ಕೆಳಗೆ ಗುರುವಿನ ಸುತ್ತಲೂ ವಿದ್ಯಾರ್ಥಿಗಳು ಕುಳಿತು ಪಾಠ ಪ್ರವಚನಗಳನ್ನು ಕೇಳಿ, ಕಲಿತು ಪಂಡಿತರಾಗುತ್ತಿದ್ದರು. ಅದು ಜಗತ್ತಿನ ಒಂದು ಆದರ್ಶ ಕಾನೂನು ಬೋಧನ ಕೇಂದ್ರವಾಗಿತ್ತೆಂದು ಹೇಳಲಾಗಿದೆ.

ನ್ಯಾಯಶಿಕ್ಷಣ ಶಾಲೆಗಳಲ್ಲಿ ಸಾಮಾಜಿಕ ನ್ಯಾಯಶಾಲೆ ಮುಖ್ಯ ಶಾಖೆ. ಅದರ ಪ್ರಮುಖ ಅಧ್ವರ್ಯು ಡೀನ್‌ರೇ ಸೋಪಾಂಡ್. ಸಾಮಾಜಿಕ ಮೌಲ್ಯದ ಗುರಿಗೆ ಕಾನೂನು ಮಾರ್ಗದರ್ಶಿ ಅಥವಾ ಸೂಚಿಯಾಗಿರಬೇಕು. ನ್ಯಾಯಶಾಸ್ತ್ರದ ಬೆಳವಣಿಗೆಗೆ ಜೆರೆಮಿ ಬೆಂತಮ್ ಸಲ್ಲಿಸಿದ ಕಾಣಿಕೆ ಅಮೋಘವಾದುದು. ಬಹು ಜನರಿಗೆ ಸಮ್ಮತವಾಗುವಂತಿರುವ ಅವನ ತತ್ತ್ವ ಪ್ರಪಂಚದ ಎಲ್ಲೆಡೆಯೂ ಮಾನ್ಯತೆ ಪಡೆದಿದೆ.

೧೯೫೦ರಲ್ಲಿ ಭಾರತ ರಾಷ್ಟ್ರ ಪ್ರಜಾಪ್ರಭುತ್ವವನ್ನು ಸ್ಥಾಪಿಸಿಕೊಂಡಿತು. ಈಗ ನಮ್ಮನ್ನಾಳುವ ಸರ್ಕಾರ ಆಗಿಂದಾಗ್ಗೆ ಹೊರಡಿಸಿದ ವಿಧಿಗಳ ಮೂಲಕ ಆಡಳಿತ ನಡೆಸುತ್ತಿದೆ. ಈಗ ನ್ಯಾಯ ಶಿಕ್ಷಣ ಹಿಂದೆಂದೂ ಇಲ್ಲದ ಮಾನ್ಯತೆಯನ್ನೂ ಮಹತ್ವ ವನ್ನೂ ಪಡೆದಿದೆ. ಸ್ವಾತಂತ್ರ್ಯ ಪೂರ್ವದ ಸಮಾಜದಲ್ಲಿ ನ್ಯಾಯಶಿಕ್ಷಣದ ವ್ಯವಸ್ಥೆ ತೀರಾ ಅಸಮರ್ಪಕವಾಗಿತ್ತು. ಸ್ವಾತಂತ್ರ್ಯಾನಂತರ ಸುಭದ್ರ ಆಡಳಿತಕ್ಕೆ ಹಲವಾರು ವಿಧಿಗಳು ಹುಟ್ಟಿಕೊಂಡ ಕಾರಣ ಅದರ ಅನುಷ್ಠಾನಕ್ಕೂ ಅರ್ಥಕಲ್ಪನೆಗೂ ನ್ಯಾಯಶಾಸ್ತ್ರಜ್ಞರ ಅಗತ್ಯ ಹೆಚ್ಚಿತು. ಸ್ವಾತಂತ್ರ್ಯಪೂರ್ವದಲ್ಲಿ ಸರ್ಕಾರಕ್ಕೆ ಸಮಾಜವನ್ನು ತನ್ನ

ಹಿಡಿತದಲ್ಲಿಟ್ಟುಕೊಳ್ಳಲು ಎಷ್ಟು ಬೇಕೋ ಅಷ್ಟು ಮಾತ್ರ ವಿಧಿಗಳು ಅವಶ್ಯಕತೆಯಿದ್ದರೆ ಸ್ವಾತಂತ್ರ್ಯಾನಂತರ ಹೊಸತಾಗಿ ಹುಟ್ಟಿಕೊಂಡ ಹಲವಾರು ಸಮಸ್ಯೆಗಳ ಪರಿಹಾರಕ್ಕೂ ಆಡಳಿತ ವ್ಯವಸ್ಥೆಗೂ ಅನೇಕ ಹೊಸ ಹೊಸ ವಿಧಿಗಳು ಅಗತ್ಯವೆನಿಸಿದೆ. ಹಿಂಸಾಕೃತ್ಯಗಳನ್ನು ತಡೆದಿಕ್ಕಲು, ವ್ಯಾಜ್ಯ ವಗೈರೆಯನ್ನು ತೊಡೆದು ಹಾಕಲು, ಮಾನವೀಯ ಹಕ್ಕು ಬಾಧ್ಯತೆಗಳನ್ನು ಕಾಪಾಡಲು ಹೊಸ ಹೊಸ ವಿಧಿಗಳ ಉಗಮ ಅವಶ್ಯವಾಯಿತು. ಒಂದಾನೊಂದು ಕಾಲದಲ್ಲಿ ಪೊಲೀಸು ರಾಜ್ಯವೆನಿಸಿದ್ದ ಭಾರತ ಸ್ವಾತಂತ್ರ್ಯಾನಂತರದಲ್ಲಿ ಕ್ಷೇಮಾಭ್ಯುದಯ ರಾಷ್ಟ್ರವಾಗಿ ಪರಿಣಮಿಸಿತು. ನಾಗರಿಕರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಕ್ಕುಗಳ ರಕ್ಷಣೆ ಆಳರಸರ ಆದ್ಯ ಕರ್ತವ್ಯವಾಗಿದೆ. ನ್ಯಾಯವೃತ್ತಿಯನ್ನು ಕೈಗೊಳ್ಳಲು ಬೇಕಾದ ಶಿಕ್ಷಣವನ್ನು ಕೊಡುವ ವಿಶ್ವವಿದ್ಯಾಲಯಗಳು ನಾಗರಿಕರ ಹಿತಾಸಕ್ತಿಗಳು ಕಾಪಾಡುವ ಕೇಂದ್ರಗಳಾಗಿವೆ. ಇಂಥ ಪೌರಪ್ರಭುತ್ವದ ಪೌರರು ಕೆಲವು ಹೊಣೆಗಾರಿಕೆಯನ್ನು ನಿರ್ವಹಿಸಬೇಕಾಗುವುದರಿಂದ ನ್ಯಾಯ ಶಿಕ್ಷಣ ಪ್ರತಿಯೊಬ್ಬ ನಾಗರಿಕನಿಗೂ ಬೇಕೆನಿಸುತ್ತದೆ.

ಉದ್ದೇಶ :

೧. ನ್ಯಾಯಕಲಾಪದ ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು ಮತ್ತು ೨. ಕಾನೂನುತಜ್ಞರಿಂದ ಸರ್ಕಾರಕ್ಕೂ ನಾಗರಿಕರಿಗೂ ಸರಿಯಾದ ತಿಳುವಳಿಕೆ ಒದಗಿಸುವುದು ನ್ಯಾಯ ಶಿಕ್ಷಣದ ಮೂಲ ಉದ್ದೇಶ. ೧೯೭೪ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ನೇಮಿಸಿದ ಸಮಿತಿಯ ಹೇಳಿಕೆಯಂತೆ ೧. ಪರಿಪೂರ್ಣತೆ ಪಡೆದ ಕಾನೂನುತಜ್ಞರನ್ನು ತಯಾರು ಮಾಡುವುದು ೨. ಕಾನೂನಿನ ವಿಧಿಗಳ ಹಿಂದೆ ಅಡಕವಾಗಿರುವ ಕಾನೂನಿನ ಸಾಮಾಜಿಕ ಮೌಲ್ಯವನ್ನು ತಿಳಿಸಿ ಹೇಳುವುದು, ೩. ಅಂಥವರಿಂದ ಬೆಳೆಯುತ್ತಿರುವ ಸಮಾಜಕ್ಕೆ ಸುಧಾರಿತ ಕಾನೂನನ್ನು ಒದಗಿಸಲು ಶ್ರಮಿಸುವುದು, ೪. ಕಾನೂನಿನ ಅಡಿಗಲ್ಲಿನ ಮೇಲೆ ಸುಭದ್ರ ಪ್ರಜಾಪ್ರಭುತ್ವವನ್ನು ಕಟ್ಟುವುದು - ಇವು ಕಾನೂನು ಶಿಕ್ಷಣ ಅಥವಾ ನ್ಯಾಯ ಶಿಕ್ಷಣದ ಉದ್ದೇಶಗಳಾಗಿವೆ.

ನ್ಯಾಯ ಶಿಕ್ಷಣದ ಸಾಧನ :

ಆಯಾಯ ದೇಶದ ಸ್ಥಿತಿಗತಿ, ಧೋರಣೆ, ಸಂವಿಧಾನ ಅಲ್ಲಿ ರೂಪಿತಗೊಳಿಸಿರುವ ಕಾನೂನುಗಳು ಮತ್ತು ಅದರ ಗುರಿ, ಇವೆಲ್ಲ ನ್ಯಾಯ ಶಿಕ್ಷಣದ ಸಾಧನಗಳಾಗಿವೆ. ಉಚ್ಚ ನ್ಯಾಯಾಲಯದ ತೀರ್ಪುಗಳೂ ಬಹಳಷ್ಟು ಮಟ್ಟಿಗೆ ನ್ಯಾಯ ಶಿಕ್ಷಣದ ಸಾಧನಗಳಾಗಿ ಪರಿಣಮಿಸುತ್ತವೆ. ಇಂಥ ತೀರ್ಪುಗಳು ಬೆಳೆಯುತ್ತಿರುವ ಸಮಾಜದಲ್ಲಿರುವ ಅಡ್ಡಿ ಆತಂಕ ಕುಂದುಕೊರತೆಗಳನ್ನು ಎತ್ತಿ ತೋರಿಸಿ ಅವುಗಳ ಪರಿಹಾರೋ

ಪಾಯಗಳನ್ನು ಸೂಚಿಸುತ್ತವೆ ; ಅವು ನ್ಯಾಯಶಿಕ್ಷಣದ ಬೆಳವಣಿಗೆಗೆ ಅತ್ಯುತ್ತಮ ಸಾಧನಗಳಾಗಿ ಪರಿಣಮಿಸುತ್ತವೆ.

ವ್ಯಾಸಂಗ ಕ್ರಮಗಳು :

ನ್ಯಾಯಶಾಸ್ತ್ರದ ಬೋಧನೆಯಲ್ಲಿ ಐದು ಪ್ರಮುಖ ವ್ಯಾಸಂಗ ವಿಧಾನಗಳಿವೆ.

೧. ನೇರ ಉಪನ್ಯಾಸ ವಿಧಾನ :

ಪ್ರಪಂಚದ ಕಾನೂನು ಬೋಧನ ಕ್ರಮಗಳಲ್ಲಿ ಇದು ಪ್ರಸಿದ್ಧವಾದುದು. ಭಾರತವೂ ಸೇರಿದಂತೆ ಪ್ರಪಂಚದ ಅನೇಕ ದೇಶಗಳಲ್ಲಿ ಈ ವಿಧಾನ ಬಳಕೆಯಲ್ಲಿದೆ. ಈ ಕ್ರಮದಲ್ಲಿ ಶಿಕ್ಷಕರು ಸರಿಯಾದ ರೀತಿಯಲ್ಲಿ ಕಾನೂನಿನ ವಿಶ್ಲೇಷಣೆ ನಡೆಸುತ್ತಾರೆ. ಈ ಪದ್ಧತಿ ಪ್ರಕಾರ ಸಂಬಂಧಪಟ್ಟ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪೂರ್ವ ತಯಾರಿ ಬೇಕಾಗಿಲ್ಲ. ಕೇವಲ ಶಿಕ್ಷಕನಿಂದಲೇ ಕಲಿಸಲ್ಪಡುವುದರಿಂದ ವಿದ್ಯಾರ್ಥಿಗಳು ಶಿಕ್ಷಕ ಹೇಳಿಕೊಟ್ಟಷ್ಟನ್ನೇ ಕಲಿತುಕೊಳ್ಳಲು ಸಹಾಯವಾಗುತ್ತದೆ. ಉಪನ್ಯಾಸದ ಕೊನೆಗೆ ವಿಷಯದ ಪೂರ್ವಚಿತ್ರವನ್ನು ವಿದ್ಯಾರ್ಥಿಯ ಮನಃಪಟಲದಲ್ಲಿ ಮೂಡಿಸುವ ಪ್ರಯತ್ನ ನಡೆಸಲಾಗುತ್ತದೆ. ಆದರೆ (ಅ) ಎಲ್ಲ ವಿದ್ಯಾರ್ಥಿಗಳನ್ನು ಆಕರ್ಷಿಸಲು ಸಾಧ್ಯವಾಗದಿರುವುದು ; (ಆ) ಹೇಳಿದ್ದನ್ನೇ ಪುನಃ ಹೇಳುವ ಅಭ್ಯಾಸ ಶಿಕ್ಷಕರಲ್ಲಿ ಬಂದು ಹೊಸದನ್ನು ತಿಳಿದುಕೊಂಡು ಅದನ್ನು ವಿದ್ಯಾರ್ಥಿಗಳಿಗೆ ತಿಳಿಸಲು ಸಾಧ್ಯವಾಗದಿರುವುದು - ಈ ವಿಧಾನದ ಮುಖ್ಯ ಲೋಪದೋಷಗಳೆನಿಸುತ್ತವೆ.

೨. ಅಧ್ಯಯನ ವಿಧಾನ :

ಇದರಲ್ಲಿ ವಿದ್ಯಾರ್ಥಿ ಸಂಬಂಧಪಟ್ಟ ವಿಷಯದ ಮೇಲೆ ಪ್ರಬಂಧವನ್ನು ಬರೆಯಬೇಕಾಗುತ್ತದೆ ; ಶಿಕ್ಷಕನ ಸರಿಯಾದ ಮಾರ್ಗದರ್ಶನವೂ ವಿದ್ಯಾರ್ಥಿಗೆ ಸಿಗುತ್ತದೆ. ಆದರೆ ಇಂಥ ಶಿಕ್ಷಣಕ್ಕೆ ಹೆಚ್ಚು ಸಮಯ ತಗಲುತ್ತದೆ. ವ್ಯಾಸಂಗಕ್ಕೆ ಬಹಳಷ್ಟು ಕಾಲವನ್ನೇ ವಿನಿಯೋಗಿಸಬೇಕಾಗುತ್ತದೆ ; ವಿಷಯದ ಜ್ಞಾನ ಸಾಕಷ್ಟು ಬಂದರೂ ಓದಿ ಗ್ರಹಿಸುವುದರಿಂದ ಬರುವಷ್ಟು ಪರಿಪೂರ್ಣ ಜ್ಞಾನ ಸಿಗದು. ಅದಲ್ಲದೆ ತರಗತಿಯಲ್ಲಿ ತುಂಬ ವಿದ್ಯಾರ್ಥಿಗಳಿದ್ದರೆ ಈ ಪದ್ಧತಿಯಿಂದ ಏನೇನೂ ಅನುಕೂಲವಾಗಲಾರದು. ಈ ಪದ್ಧತಿ ಸಣ್ಣ ತರಗತಿಗಳಲ್ಲಿ ಮಾತ್ರ ಉತ್ತಮ ಫಲಿತಾಂಶವನ್ನು ಕೊಡಬಲ್ಲದು.

೩. ಚಿಕ್ಕ ಸಮಸ್ಯೆ ವರ್ಗ (ಕೇಂಬ್ರಿಜ್ ವಿಧಾನ) :

ಈ ವಿಧಾನಕ್ಕೆ ಬಹಳಷ್ಟು ಹಣದ ಖರ್ಚು ತಗಲುತ್ತದೆ. ಭಾರತದಂಥ

ಅಭಿವೃದ್ಧಿಶೀಲ ರಾಷ್ಟ್ರಕ್ಕೆ ಈ ವಿಧಾನ ಅಷ್ಟು ಸೂಕ್ತವೆನಿಸಲಾರದು. ದೇಶದ ಸಂಪತ್ತಿನ ದೃಷ್ಟಿಯಿಂದ ಅದರ ಅನುಸರಣೆ ಅಸಾಧುವೆನಿಸುವುದು. ವಿಷಯಗಳನ್ನು ಸಣ್ಣಪುಟ್ಟ ವರ್ಗಗಳನ್ನಾಗಿ ವಿಂಗಡಿಸಿಕೊಂಡು ಬೋಧಿಸುವುದು ಈ ಕ್ರಮದ ವೈಶಿಷ್ಟ್ಯ.

೪. ಜರ್ಮನ್ ಸೆಮಿನಾರ್ ವಿಧಾನ :

ಈ ವಿಧಾನವನ್ನು ವಿನೋಗ್ರೇಥೆಫ್ ಎಂಬಾತ ಇಂಗ್ಲೆಂಡಿನ ಆಕ್ಸ್‌ಫರ್ಡಿನಲ್ಲಿ ಬಳಕೆಗೆ ತಂದ. ಇದು ಶಿಕ್ಷಕ ಹಾಗೂ ವಿದ್ಯಾರ್ಥಿ ಒಟ್ಟಿಗೆ ಕ್ಲಿಷ್ಟಕರವಾದ ಸಮಸ್ಯೆಗಳನ್ನು ಬಗೆಹರಿಸುವ ವಿಧಾನ. ಈ ಪದ್ಧತಿಯಿಂದ ಹೊಸ ಹೊಸ ವಿಚಾರಗಳು ಹೊರಬರಲು ಸಾಧ್ಯವಾಗುತ್ತದೆ. ಆದರೆ ಇದರಿಂದ ವಿದ್ಯಾರ್ಥಿಗಳ ಅನುಕೂಲವಾಗುವುದು ಕಡಿಮೆ; ಬೋಧಿಸುವ ಶಿಕ್ಷಕನ ಜ್ಞಾನ ಹೆಚ್ಚಾಗುತ್ತ ಹೋಗುವುದರಿಂದ ಆತ ಉತ್ತಮ ಗ್ರಂಥಗಳನ್ನು ರಚಿಸಿಕೊಡಬಲ್ಲ.

೫. ಚರ್ಚಾವಿಧಾನ :

ಹಾರ್ವರ್ಡ್ ನ್ಯಾಯ ಶಿಕ್ಷಣ ವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದ ಪ್ರೊಫೆಸರ್ ಲ್ಯಾಂಗ್‌ಡೆಲ್ ಈ ಪದ್ಧತಿಯ ಜನಕ. ಈ ವಿಧಾನದಂತೆ ಪ್ರತಿಯೊಬ್ಬ ವಿದ್ಯಾರ್ಥಿಯ ಮತ್ತು ಶಿಕ್ಷಕನ ಕೈಯಲ್ಲಿ ಆ ದಿನದ ಚರ್ಚೆಯ ವಿಷಯದ ಸೂಚಿಯೊಂದು ಇರುತ್ತದೆ. ಇದನ್ನು ಚರ್ಚಾಸಮಯಕ್ಕೆ ಮೊದಲೇ ಕೊಡಲಾಗುತ್ತದೆ. ಚರ್ಚಾಸಮಯದಲ್ಲಿ ಶಿಕ್ಷಕ ವಿಷಯದ ವಿಂಗಡನೆ ಮಾಡಿ ಮಂಡಿಸುತ್ತಾನೆ ; ಚರ್ಚೆ ಪ್ರಾರಂಭವಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಚರ್ಚೆಯಲ್ಲಿ ಭಾಗವಹಿಸಬೇಕಾಗುತ್ತದೆ. ವಿಷಯದ ನಾನಾ ಮುಖಗಳ ಬಗ್ಗೆ ಚರ್ಚೆ ಬಿರುಸಾಗಿಯೇ ನಡೆಯುತ್ತದೆ. ಇಂಥ ಚರ್ಚೆಗಳಿಂದ ವಿದ್ಯಾರ್ಥಿಯ ಶಂಕೆ ದೂರಾಗುತ್ತದೆ ; ಅಂಜಿಕೆ ಮಾಯವಾಗುತ್ತದೆ ; ಪ್ರತಿಭೆ ಕುದುರುತ್ತದೆ ; ವಿಷಯದ ಆಳವಾದ ಜ್ಞಾನ ಮೂಡಿ ಬರುತ್ತದೆ. ಇಲ್ಲಿ ವಿದ್ಯಾರ್ಥಿಯ ಸುಪ್ತಚೇತನವನ್ನು ಜಾಗೃತಗೊಳಿಸುವಲ್ಲಿ ಶಿಕ್ಷಕ ಮಹತ್ತಮ ಪಾತ್ರ ವಹಿಸುತ್ತಾನೆ. ವಿದ್ಯಾರ್ಥಿ ವಿಷಯದ ಬಗ್ಗೆ ಪರಿಪೂರ್ಣತೆ ಪಡೆಯಲು ಮುಂದೆ ಜೀವನರಂಗದಲ್ಲಿ ಚೆನ್ನಾಗಿ ವ್ಯವಹರಿಸಲು ಈ ವಿಧಾನ ತುಂಬಾ ಅನುವು ಮಾಡಿಕೊಡುತ್ತದೆ.

ಆಧುನಿಕ ಪ್ರವೃತ್ತಿಗಳು :

ಪ್ರಜಾಧಿಪತ್ಯದ ತಿರುಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳಲು ನ್ಯಾಯಶಿಕ್ಷಣ ಪಡೆದವರಿಗೆ ಮಾತ್ರ ಸಾಧ್ಯ. ಸಂವಿಧಾನದಲ್ಲಿ ನೀಡಲಾಗಿರುವ ಹಕ್ಕನ್ನು

ಸ್ಥಾಪಿಸಿಕೊಳ್ಳುವಲ್ಲಿ ನ್ಯಾಯಶಾಸ್ತ್ರದ ಅಭ್ಯಾಸ ಬಹಳ ಉಪಯೋಗಕ್ಕೆ ಬರುತ್ತದೆ. ಕೆಲವೊಂದು ಕಾನೂನುಗಳನ್ನು ಕಂಠಪಾಠ ಮಾಡುವುದು ನ್ಯಾಯಶಿಕ್ಷಣದ ಉದ್ದೇಶವಲ್ಲ. ಎದುರಿಗೆ ಇರುವ ಸಮಸ್ಯೆಗೆ ಕಾನೂನು ಏನು ಹೇಳುತ್ತದೆ ಎಂದು ಹುಡುಕಿ ತೆಗೆಯುವುದು ಉತ್ತಮ ವಕೀಲನ ಕೆಲಸ.

ಜನರ ಹಿತಾಸಕ್ತಿಯ ಪರಮೋದ್ದೇಶವಾಗಿರುವ ಭಾರತದಲ್ಲಿ ಸರ್ಕಾರ ನಾಗರಿಕರ ಕಾರ್ಯಾಚರಣೆಗಳನ್ನು ಹಿಡಿತದಲ್ಲಿಡಬೇಕಾಗುತ್ತದೆ ; ಅವರ ಹಕ್ಕು ಬಾಧ್ಯತೆಗಳನ್ನು ಕಾಪಾಡಬೇಕಾಗುತ್ತದೆ. ಅವರ ಆಸ್ತಿಪಾಸ್ತಿಗಳನ್ನು ಕೆಲವೊಂದು ವೇಳೆ ಸಾರ್ವಜನಿಕ ಹಿತೋದ್ದೇಶಗಳಿಗಾಗಿ ಸರ್ಕಾರ ವಶಪಡಿಸಿಕೊಳ್ಳಬೇಕಾಗುತ್ತದೆ. ಇವೆಲ್ಲ ಕೆಲಸಗಳು ಕಾನೂನುರೀತ್ಯ ರಚನೆಗೊಂಡ ವಿಧಿಗಳಿಂದ ಮಾತ್ರ ಸಾಧ್ಯ. ಸರಿಯಾದ ಕಾನೂನು ರಚನೆ ಅದನ್ನು ಸರಿಯಾಗಿ ಅಭ್ಯಾಸ ಮಾಡಿದವರಿಂದ ಮಾತ್ರ ಸಾಧ್ಯ. ವಿಧಿಗಳ ಉಲ್ಲಂಘನೆ ಶಿಕ್ಷಾರ್ಹವಾಗುತ್ತದೆ. ಆದ್ದರಿಂದ ಕಾನೂನಿನ ಅಜ್ಞಾನ ಯಾರಿಗೂ ರಕ್ಷಣೆಯನ್ನೀಯದು.

ಇತ್ತೀಚಿನ ದಿನಗಳಲ್ಲಿ ವಿಜ್ಞಾನ ಮತ್ತು ತಾಂತ್ರಿಕ ಜ್ಞಾನ ಸಮಾಜದ ಮೇಲೆ ಹೆಚ್ಚಿನ ವರ್ಚಸ್ಸನ್ನು ಬೀರುತ್ತಿವೆ. ಆದ್ದರಿಂದ ನಾಗರಿಕನ ಹಿತಕ್ಕೆ, ರಕ್ಷಣೆಗೆ ನ್ಯಾಯಶಿಕ್ಷಣ ಅಗತ್ಯ. ಸಮಾಜ ಬೆಳೆಯುತ್ತ ಹೋದಂತೆ ತೊಡಕುಗಳು ಹೆಚ್ಚುತ್ತ ಹೋಗುತ್ತವೆ ; ಅವನ್ನು ನಿವಾರಿಸಿಕೊಳ್ಳಲು ವಿಧಿಗಳು ಸೃಷ್ಟಿಯಾಗಲೇ ಬೇಕು. ಹಾಗೆ ವಿಧಿ, ನಿಯಮಗಳ ಸೃಷ್ಟಿಯಾದ ಮೇಲೆ ಅವುಗಳಿಂದ ಉದ್ಭೂತವಾಗುವ ಹಕ್ಕುಬಾಧ್ಯತೆಗಳನ್ನು ದೊರಕಿಸಿ ಕೊಳ್ಳಲು ನ್ಯಾಯಶಿಕ್ಷಣ ಪಡೆದು ಪರಿಣತರಾದವರ ನೆರವು ಅತ್ಯಗತ್ಯ.

ನ್ಯಾಯಾಲಯದಲ್ಲಿ ವಕೀಲಿ ವೃತ್ತಿಯನ್ನು ಮಾಡಲೆಳಸುವವರಿಗೂ ಸರ್ಕಾರದ ನಾನಾ ಹುದ್ದೆಗಳಲ್ಲಿ ಕೆಲಸ ಮಾಡುವವರಿಗೂ ನ್ಯಾಯಶಿಕ್ಷಣವನ್ನು ಇತರರಿಗೆ ಬೋಧಿಸುವ ವೃತ್ತಿಯನ್ನು ಕೈಗೊಳ್ಳುವವರಿಗೂ ನ್ಯಾಯಶಿಕ್ಷಣದ ಅಗತ್ಯವಿದೆ. ಗಣಿ, ಕಾರ್ಖಾನೆ, ಯಂತ್ರಾಗಾರಗಳಲ್ಲಿ ಕೆಲಸ ಮಾಡುವ ಪ್ರತಿಯೊಬ್ಬನಿಗೂ ಸೇವಕನಿಂದ ಹಿಡಿದು ರಾಜನವರೆಗೂ ನ್ಯಾಯಶಿಕ್ಷಣದ ಅಗತ್ಯವಿದೆ. ರಾಜಕೀಯಪಟು ವೆನಿಸಿದವನಿಗೂ ನ್ಯಾಯಶಿಕ್ಷಣವಿರಬೇಕಾಗುತ್ತದೆ.

ಗಣರಾಜ್ಯದಲ್ಲಿ ವಿಧಿಗಳು ವ್ಯಕ್ತಿಯ ಹಿತಾಸಕ್ತಿಗಳನ್ನು ಸಂರಕ್ಷಿಸುತ್ತವೆ. ಅಂಥ ಒಂದೊಂದು ವ್ಯಕ್ತಿ ಸಮಾಜದ ಒಂದೊಂದು ಘಟಕ ; ಒಂದೊಂದು ಘಟಕ ಏಳಿಗೆಯಾಯಿತೆಂದರೆ ಸಮಗ್ರ ಸಮಾಜದ ಏಳಿಗೆಯಾಗುತ್ತದೆ. ಇದೆಲ್ಲಕ್ಕೂ ನ್ಯಾಯಶಾಸ್ತ್ರದ ಅಭ್ಯಾಸ ಅಗತ್ಯ.

****

ನ್ಯಾಯವೃತ್ತಿ : ಒಂದು ಚಿಂತನೆ

ಕಾನೂನು ಮತ್ತು ಅದರ ಅನ್ವಯವನ್ನು ಕುರಿತ ಪರಿಣತಿಯನ್ನು ಆಧರಿಸಿದ ಕಸುಬು (ಲೀಗಲ್ ಪ್ರೊಫೆಷನ್), ನ್ಯಾಯಾಧೀಶರು ಅಥವಾ ನ್ಯಾಯಪೀಠ, ವೃತ್ತಿನಿರತ ವಕೀಲರು ಅಥವಾ ನ್ಯಾಯವಾದಿಗಳು ಎಂದು ನ್ಯಾಯವೃತ್ತಿಯಲ್ಲಿ ಎರಡು ಮುಖ್ಯ ವಿಭಾಗಗಳುಂಟು. ನ್ಯಾಯಾಧೀಶರನ್ನು ಅಥವಾ ನ್ಯಾಯಪರರನ್ನು ಕುರಿತ ವಿವೇಚನೆಯನ್ನು ನ್ಯಾಯಾಂಗ ಮತ್ತು ನ್ಯಾಯಾಲಯ ಅಧಿಕಾರಿಗಳು ಎಂಬ ಲೇಖನದಲ್ಲಿ ನೋಡಬಹುದು. ಇಲ್ಲಿ ವಕೀಲರ, ವಿಧಿಜ್ಞರ ಅಥವಾ ನ್ಯಾಯವಾದಿಗಳ ವೃತ್ತಿಯನ್ನು ಕುರಿತ ವಿವೇಚನೆ ಇದೆ.

ನ್ಯಾಯವೃತ್ತಿ ಬಹಳ ಹಿಂದಿನಿಂದ ನಡೆದುಬಂದಿರುವ ಗೌರವಾನ್ವಿತ ವೃತ್ತಿಗಳಲ್ಲೊಂದು. ಪ್ರಾಚೀನ ಕಾಲದಲ್ಲಿ ರೋಮಿನ ನ್ಯಾಯವಾದಿಗಳಿಗೆ ಅತ್ಯಂತ ಹೆಚ್ಚಿನ ಸ್ಥಾನಮಾನಗಳಿದ್ದವು. ನ್ಯಾಯವೃತ್ತಿಯನ್ನು ಕೈಗೊಂಡವರಿಗೆ ಗ್ರೀಸಿನಲ್ಲಿ ಹೆಚ್ಚಿನ ಮರ್ಯಾದೆ ಸಲ್ಲುತ್ತಿತ್ತು. ಇಂಗ್ಲೆಂಡಿನಲ್ಲಿ ಹಿಂದಿನಿಂದಲೂ ನ್ಯಾಯವೃತ್ತಿ ರೂಢಿಯಲ್ಲಿ ಬಂದಿತ್ತು. ನ್ಯಾಯವಿಚಾರಗಳ ತಿಳಿವಳಿಕೆಯಿಲ್ಲದವರು ಇತರರ ವಿರುದ್ಧ ತಮ್ಮ ಹಕ್ಕನ್ನು ಚಲಾಯಿಸಿಕೊಳ್ಳಲು ಅಥವಾ ಇತರರು ತಮ್ಮ ವಿರುದ್ಧ ವ್ಯಾಜ್ಯ ಹೂಡಿದ್ದರೆ ಅದನ್ನು ಪರಿಹರಿಸಿಕೊಳ್ಳಲು ಶುಲ್ಕವನ್ನು ಕೊಟ್ಟು ನ್ಯಾಯವಿಚಾರಗಳಲ್ಲಿ ಪರಿಣತರಾದವರನ್ನು ನಿಯೋಜಿಸಿಕೊಳ್ಳಬಹುದೆಂದು ಶುಕ್ರನೀತಿ ಹೇಳುತ್ತದೆ. ಅಂಥವರಿಗೆ ಸಮಾಜದಲ್ಲಿ ನಿಯೋಗಿಗಳೆಂದು ಹೆಸರಿತ್ತು. ಸಚ್ಚಾರಿತ್ರ್ಯದಿಂದ ಕೂಡಿದ್ದ ನಿಯೋಗಿಗಳಿಗೆ ಪೂರ್ಣ ಸನ್ಮಾನವೂ ಅಪಚಾರವೆಸಗಿದವರಿಗೆ ಶಿಕ್ಷೆಯೂ ಆಗಿನ ಸಮಾಜದಲ್ಲಿ ಪ್ರಚಲಿತವಿತ್ತು. ಅಂತೂ ನ್ಯಾಯವೃತ್ತಿ ಇತರ ಅನೇಕ ವೃತ್ತಿಗಳಂತೆ ಹಳೆಯದೂ, ಗೌರವಾನ್ವಿತವಾದುದೂ ಆಗಿದೆಯೆನ್ನಬಹುದು.

ಕಾರ್ಯಭಾರ :

ಪ್ರಚಲಿತ ಕಾನೂನುಗಳಿಗೆ ಅನುಗುಣವಾಗಿ ನ್ಯಾಯಾಲಯಗಳೆದುರು ಅಥವಾ ಇತರ ಕ್ಷೇತ್ರಗಳಲ್ಲಿ ತನ್ನ ಕಕ್ಷಿದಾರರ ಪರವಾಗಿ ವಾದಿಸುವುದು, ಅವನ ಹಿತಗಳನ್ನು ರಕ್ಷಿಸುವುದು ವಕೀಲನ, ವಿಧಿಜ್ಞನ, ನ್ಯಾಯವಾದಿಯ ಕಾರ್ಯಭಾರ. ತನ್ನ ಕಕ್ಷಿಯ ಕ್ಷೇಮಾಭ್ಯುದಯಕ್ಕಾಗಿ, ವ್ಯಾವಹಾರಿಕಜೀವನದಲ್ಲಿ ಅವನಿಗೆ ಬಂದಿರುವ ಅಡ್ಡಿ

ಆತಂಕವನ್ನು ನಿವಾರಿಸುವ ಸಲುವಾಗಿ, ಅವನ ಪರವಾಗಿ ಕಾನೂನಿನ ತತ್ವಗಳನ್ನು ಅಳವಡಿಸಿ ಆತ ವಾದವನ್ನು ಮಂಡಿಸುತ್ತಾನೆ. ನಿರ್ದಿಷ್ಟ ಪ್ರಕರಣಗಳಿಗೆ ಕಾನೂನನ್ನು ಅನ್ವಯಿಸುವುದು, ಬಳಸಿಕೊಳ್ಳುವುದು - ಕಾನೂನನ್ನು ವ್ಯಷ್ಟೀಕರಿಸುವುದು ನ್ಯಾಯವೃತ್ತಿಯ ಪ್ರಥಮ ಕರ್ತವ್ಯ. ನ್ಯಾಯಾಲಯದಲ್ಲಿ ವ್ಯಾಜ್ಯಗಳ ವಿಚಾರಣೆ ನಡೆಸಿ ತೀರ್ಪು ನೀಡುವುದಕ್ಕೆ ಸಂಬಂಧಿಸಿದಂತೆ ನ್ಯಾಯವಾದಿಗಳೂ ನ್ಯಾಯಾಧೀಶನೂ ನಿರತರಾದಾಗ ಇದು ವ್ಯಕ್ತಪಡುತ್ತದೆ. ನ್ಯಾಯವಾದಿ ತನ್ನ ಕಕ್ಷಿಯೊಂದಿಗೆ ಸಮಾಲೋಚಿಸಿ ಸಾಕ್ಷಿಗಳನ್ನು ಸಂದರ್ಶಿಸಿ, ದಸ್ತವೇಜುಗಳನ್ನು ಪರಿಶೀಲಿಸಿ, ವಾಸ್ತವಿಕಾಂಶಗಳು ಹಾಗೂ ಪುರಾವೆಯನ್ನು ತನಿಖೆ ಮಾಡುತ್ತಾನೆ ; ನ್ಯಾಯಾಲಯದ ಮುಂದೆ ವಾದವನ್ನು ರೂಪಿಸಿ ಮಂಡಿಸುತ್ತಾನೆ. ಪ್ರತಿಕಕ್ಷಿಯ ವಾದ ಸಮರ್ಥನೀಯ ವಲ್ಲವೆಂಬುದು ಸ್ಪಷ್ಟವಾಗಿದ್ದ ಪಕ್ಷದಲ್ಲಿ ಸಂಕ್ಷಿಪ್ತ ತೀರ್ಪು ನೀಡಬೇಕೆಂದು ಅವನು ಕೋರಬಹುದು ಅಥವಾ ಪ್ರತಿಪಕ್ಷದ ವಾದಕ್ಕೆ ಆಧಾರವಾದ ವಿವಾದಾಂಶಗಳನ್ನೂ ವಾಸ್ತವಿಕಾಂಶಗಳನ್ನೂ ಹೆಚ್ಚು ಸಮಗ್ರವಾಗಿ ಹೊರಗೆಡಹಲೇಬೇಕಾಗುವಂತೆ ವ್ಯವಹರಣೆಯನ್ನು ಮುಂದುವರಿಸಬಹುದು. ಸಾಕ್ಷ್ಯದ ಮಂಡನೆ, ಪ್ರತಿಪಕ್ಷ ಮಂಡಿಸಬಹುದಾದ ಅನುಚಿತ ಸಾಕ್ಷ್ಯದ ಬಗ್ಗೆ ಆಕ್ಷೇಪಣೆ, ಕಾನೂನು ಮತ್ತು ವಾಸ್ತವಿಕಾಂಶಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕುರಿತ ವಾದ - ಇವು ನ್ಯಾಯವಾದಿ ಅನುಸರಿಸುವ ವಿಧಾನ. ತನ್ನ ಪಕ್ಷಕ್ಕೆ ಸೋಲಾದಾಗ ಅವನು ಹೊಸ ವಿಚಾರಣೆ ಯನ್ನಾಗಲಿ ಅಪೀಲು ನ್ಯಾಯಾಲಯದಲ್ಲಿ ಪರಿಹಾರವನ್ನಾಗಲಿ ಅರಸಬಹುದು.

ನ್ಯಾಯಾಲಯದ ಮುಂದೆ ಇರುವ ಪ್ರಕರಣವೊಂದರಲ್ಲಿ ಪಕ್ಷವೊಂದನ್ನು ಹಿಡಿದು ವಾದಿಸುವುದಷ್ಟೇ ಅಲ್ಲ; ವಿಚಾರಣೆಯನ್ನು ನಿವಾರಿಸಿ ಎರಡೂ ಪಕ್ಷಗಳ ನಡುವೆ ವಾದವನ್ನು ಇತ್ಯರ್ಥಪಡಿಸಲು ಸಂಧಾನ, ರಾಜಿ, ಸಮನ್ವಯ ಮುಂತಾದವು ಗಳಲ್ಲೂ ವಕೀಲರು ಪ್ರಧಾನಪಾತ್ರ ವಹಿಸುತ್ತಾರೆ.

ಒಂದು ಸಂಸ್ಥೆಯ ಅಥವಾ ವ್ಯಕ್ತಿಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ನ್ಯಾಯವಾದಿ ನೀಡುವ ನೆರವು ಪ್ರಮುಖವಾದುದ್ದು. ಅನೇಕ ಕಛೇರಿಗಳ ಕೆಲಸಗಳಲ್ಲಿ ನ್ಯಾಯವಾದಿಯ ಸಹಾಯ ಹೆಚ್ಚು ಹೆಚ್ಚು ಅಗತ್ಯವಾಗುತ್ತಿದೆ. ಕೈಗೊಳ್ಳಲಿರುವ ಯಾವುದೇ ಯೋಜನೆ, ಕಾರ್ಯಕ್ರಮ, ಕಲಾಪ ಅಥವಾ ವಹಿವಾಟು ವಿಧಿಬದ್ಧ ವಾದದ್ದೇ ಅಲ್ಲವೆ ಎಂಬುದರ ಬಗ್ಗೆ ಸೂಕ್ತ ಸಲಹೆ ನೀಡಿ, ಅವೈದಿಕವಾದ ಕ್ರಮಗಳನ್ನು ಕೈಗೊಳ್ಳದಂತೆ ತಡೆಯಲು ಅವನು ನೆರವಾಗುತ್ತಾನೆ. ದಸ್ತಾವೇಜುಗಳ ರಚನೆಯಲ್ಲಿ ನ್ಯಾಯವಾದಿಯ ಸಲಹೆ ಅತ್ಯಧಿಕವಾದದ್ದು. ಉಯಿಲು, ಕರಾರು, ಕಂಪನಿಗಳ ಹಾಗೂ ಸಂಘಗಳ ನಿಬಂಧನೆಗಳು, ಟ್ರಸ್ಟುಗಳು ನಿಯಮಗಳು ಮುಂತಾದವುಗಳ ರಚನೆಯಲ್ಲಿ ನ್ಯಾಯವಾದಿಯ ನೆರವು ಅತ್ಯಾವಶ್ಯಕವೆನಿಸುತ್ತದೆ. ಈ ನಾನಾ ಕ್ಷೇತ್ರಗಳಲ್ಲಿ ವಿವಿಧ

ಪಕ್ಷಗಳ ವೈದಿಕ ಹಕ್ಕುಗಳನ್ನು ನಿರ್ದಿಷ್ಟಗೊಳಿಸುವಲ್ಲಿ ಅವನು ನೆರವಾಗುತ್ತಾನೆ. ಆರ್ಥಿಕ ಕ್ಷೇತ್ರದಲ್ಲಿ ಸರ್ಕಾರದ ನಿಯಂತ್ರಣಗಳೂ ನಿರ್ಬಂಧಗಳೂ ಪ್ರವೇಶವೂ ಅಧಿಕವಾಗಿ ಬೆಳೆಯುತ್ತಿರುವ ಈ ಶತಮಾನದಲ್ಲಿ ತನ್ನ ಕಕ್ಷಿಗಳ ಹಿತಗಳನ್ನು ಅವರ ಪರವಾಗಿ ಆಯೋಗಗಳ ಹಾಗೂ ಸಮಿತಿಗಳ ಮುಂದೆ ಮಂಡಿಸುವುದೂ ಪ್ರತಿಪಾದಿಸುವುದೂ ನ್ಯಾಯವಾದಿಯ ಕಾರ್ಯಭಾರವಾಗಿದೆ.

ನ್ಯಾಯಾಲಯದ ಮುಂದಿರುವ ಪ್ರಕರಣಗಳಲ್ಲಾಗಲಿ ಅನ್ಯಕ್ಷೇತ್ರಗಳಲ್ಲಿಯ ವ್ಯವಹಾರಗಳಲ್ಲಾಗಲಿ ಕಛೇರಿಯ ಕಲಾಪಗಳಲ್ಲಾಗಲಿ ವಕೀಲ ಅಥವಾ ವಿಧಿಜ್ಞ ಭಾಗವಹಿಸುವಾಗ ಅವನು ಯಾವುದೇ ಒಂದು ಪಕ್ಷದ ಪರವಾಗಿ ಮಾತ್ರ ವರ್ತಿಸುತ್ತಾನೆ. ಇಲ್ಲೆಲ್ಲ ಪ್ರಧಾನವಾಗಿರತಕ್ಕದ್ದು ಪಕ್ಷ-ಪ್ರತಿಪಕ್ಷ ಪರಿಕಲ್ಪನೆ. ವಕೀಲ ತನ್ನ ಕಕ್ಷಿಯ ಹಿತಗಳಿಗಾಗಿ ಅತ್ಯಂತ ಶ್ರದ್ಧೆ ಉತ್ಸಾಹಗಳಿಂದ ಹೋರಾಡುತ್ತಾನೆ. ಇದು ಆವೇಶಭರಿತ ಹೋರಾಟಕ್ಕಿಂತ ಪರಸ್ಪರ ನಿಲುವುಗಳ ಬೌದ್ಧಿಕ ಅರಿವಿನ ಮೂಲಕ ನಡೆಯುವ ಹೋರಾಟವಾಗುವುದರಿಂದ ಅಂತಿಮವಾಗಿ ಇದರಿಂದ ಸತ್ಯ ಹೊರಬರುವುದಕ್ಕೆ ಸಹಾಯವಾಗುತ್ತದೆ.

ಅರ್ಹತೆ :

ನ್ಯಾಯವೃತ್ತಿ ಹುಟ್ಟಿನಿಂದ ಬರುವಂಥದಲ್ಲ. ಅದು ಸತತ ಪ್ರಯತ್ನದ ಫಲವಾಗಿ ಕರಗತವಾಗುತ್ತದೆ. ವ್ಯಕ್ತಿಯೊಬ್ಬ ಬಹಳ ಮೇಧಾವಿಯಾಗಿರಬಹುದು ; ಆದರೂ ಅವನು ನ್ಯಾಯವೃತ್ತಿಯಲ್ಲಿ ಯಶಸ್ಸನ್ನು ಗಳಿಸಲು ಅಸಮರ್ಥನಾಗಬಹುದು. ಸಾಮಾನ್ಯ ವ್ಯಕ್ತಿಯೊಬ್ಬ ಸ್ವಪ್ರಯತ್ನದಿಂದ ಸತತ ಅಭ್ಯಾಸದಿಂದ ನ್ಯಾಯವೃತ್ತಿಯಲ್ಲಿ ಅದ್ವಿತೀಯ ನಾಗಬಹುದು. ನ್ಯಾಯಾನ್ಯಾಯ ವಿಚಾರ, ವ್ಯವಹಾರ ಜ್ಞಾನ ಇವು ನ್ಯಾಯವೃತ್ತಿಗೆ ಮೆರುಗನ್ನು ಕೊಡುತ್ತವೆ.

ನ್ಯಾಯವೃತ್ತಿಗೆ ವಾಕ್ಪಟುತ್ವವಿರಬೇಕೆಂಬುದೇನೋ ನಿಜ. ವಾದದಲ್ಲಿ ಹುರುಳಿಲ್ಲ ದಿದ್ದರೂ ಮಾತಿನ ವೈಖರಿಯಿದ್ದರೆ ಒಂದೊಮ್ಮೆಗೆ ಅದು ಮಾನ್ಯವಾಗಬಹುದು. ಆದರೆ ವಿಷಯದ ವೃತ್ತವನ್ನು ಬಿಟ್ಟು ಹೊರಗೆ ಹೋಗುವಂತೆಯೇ ಇಲ್ಲ. ಕಾನೂನಿನ ಸೀಮಾರೇಖೆಯೊಳಗೆ ಮಾತ್ರ ವಿಷಯವಿರಬೇಕಲ್ಲದೆ ಅದನ್ನು ಮೀರಕೂಡದು.

ಇತರ ವೃತ್ತಿಗಳಿಗಿರುವಂತೆ ನ್ಯಾಯವೃತ್ತಿಗೂ ತಾಂತ್ರಿಕ ಜ್ಞಾನದ ಅವಶ್ಯಕತೆಯಿದೆ. ನ್ಯಾಯವೃತ್ತಿಗೆ ಕಾನೂನಿನ ಅರಿವಿಲ್ಲದಿದ್ದರೆ ಯಾರೂ ಯಶಸ್ವಿಯಾಗಲಾರರು. ಬರೀ ವಾಗಾಡಂಬರದಿಂದ ಪಕ್ಷಗಾರನ ಹಿತ ಸಾಧಿಸಲು ಬರಲಾರದು. ಆದ್ದರಿಂದ ನ್ಯಾಯದ ಅಥವಾ ಕಾನೂನಿನ ಸೂಕ್ಷ್ಮಾತಿಸೂಕ್ಷ್ಮ ಎಳೆಗಳ ಜ್ಞಾನ, ಅವನ್ನು ತನ್ನ ವಾದಕ್ಕೆ ಅಳವಡಿಸಿಕೊಳ್ಳುವ ಜಾಣ್ಮೆ ಇವು ಅಗತ್ಯ.

ನ್ಯಾಯವೃತ್ತಿಯಲ್ಲಿ ಉತ್ತೀರ್ಣತೆ ಪಡೆಯಬೇಕಾದರೆ ಕಾನೂನಿನ ಜ್ಞಾನವನ್ನು ಅದುನಾತನವಾಗಿರಿಸಿಕೊಳ್ಳಬೇಕಾಗುತ್ತದೆ. ಕಾನೂನಿನ ವಿಚಾರಗಳ ಅಧ್ಯಯನ ಮುಂದುವರಿಯಬೇಕಾಗುತ್ತದೆ. ಕಾನೂನಿನ ಕ್ಷೇತ್ರ ಅತ್ಯಂತ ವಿಸ್ತಾರವಾದದ್ದು. ಅದು ಸಂಕೀರ್ಣವಾಗುತ್ತಲೇ ಇರುತ್ತದೆ. ವಿಸ್ತರಿಸುತ್ತಲೂ ಇರುತ್ತದೆ. ನ್ಯಾಯಾಲಯಗಳು ನೀಡುತ್ತಿರುವ ಆದೇಶಗಳಲ್ಲಿ ಕಾನೂನಿನ ತತ್ತ್ವದ ಎಳೆಗಳು ಹೆಣೆದುಕೊಂಡಿರುತ್ತವೆ. ಅವುಗಳ ನಿತ್ಯಪರಿಚಯ ಅವಶ್ಯವಾಗುತ್ತದೆ. ಸಮಾಜ ಬೆಳೆದಂತೆ ಕಾನೂನಿನ ಹಿಡಿತ ಬಲವತ್ತರವಾಗುತ್ತ ಹೋಗುತ್ತದೆ. ಅದನ್ನೆಲ್ಲ ತಿಳಿದ ವಕೀಲ ಮಾತ್ರ ತನ್ನ ಬಳಿಗೆ ಬಂದ ಕಕ್ಷಿಗೆ ಯೋಗ್ಯ ಸಲಹೆ ನೀಡಬಲ್ಲ. ನ್ಯಾಯಾಲಯಗಳಲ್ಲಿ ಋಜುತ್ವದ ತೀರ್ಮಾನಕ್ಕೆ ಅವನು ನೆರವಾಗಬಲ್ಲ.

ನ್ಯಾಯವೃತ್ತಿಯನ್ನು ಕೈಗೊಂಡವನಿಗೆ ವಿಷಯಜ್ಞಾನದ ಜೊತೆಗೆ ಜನಜೀವನದ ಅರಿವೂ ಇರಬೇಕು. ಯಾಕೆಂದರೆ ಸಾಮಾನ್ಯನಿಗೆ ಅವನು ಕಾನೂನಿನ ಊರುಗೋಲು.

ಕಾನೂನಿನ ಪುಸ್ತಕಗಳನ್ನಷ್ಟೇ ಓದಿಕೊಂಡ ಮಾತ್ರಕ್ಕೆ ಸಾಲುವುದಿಲ್ಲ. ದಿನವಹಿ ಬರುತ್ತಿರುವ ಪತ್ರಿಕೆಗಳನ್ನು, ನಿಯತಕಾಲಿಕೆಗಳನ್ನು, ಅಂತರ್ದೇಶೀಯ ಸುದ್ದಿಸಾರಗಳನ್ನು ಓದಬೇಕಾಗುತ್ತದೆ. ನ್ಯಾಯವೃತ್ತಿನಿರತನಿಗೆ ಹಲವಾರು ತರಹದ ವ್ಯಾಜ್ಯಗಳು ಬರುತ್ತಲೇ ಇರುವುದರಿಂದ ಅವನು ವೈಜ್ಞಾನಿಕ, ತಾಂತ್ರಿಕ ವಿಷಯಗಳ ಬಗ್ಗೆಯೂ ತಿಳಿದುಕೊಳ್ಳಬೇಕಾಗುತ್ತದೆ. ಇಲ್ಲವಾದರೆ ಅವನಿಗೆ ತನ್ನ ಮುಂದೆ ನಿಂತಿರುವ ಸಾಕ್ಷಿಯ ಪಾಟೀಸವಾಲು ಮಾಡಲು ಸಾಧ್ಯವಾಗದು. ವೈದ್ಯಶಾಸ್ತ್ರ, ಶರೀರವಿಜ್ಞಾನ, ಅಪರಾಧಶಾಸ್ತ್ರ, ಯಂತ್ರಶಿಲ್ಪ, ವ್ಯಾಪಾರೀ ಸಂಪ್ರದಾಯಗಳು, ಲೆಕ್ಕಪತ್ರಗಳ ಕ್ರಮ, ಬೆರಳಚ್ಚಿನ ಜ್ಞಾನ ಇವೇ ಮುಂತಾದವನ್ನೂ ತಿಳಿದುಕೊಂಡಿರಬೇಕು. ಇಲ್ಲವಾದರೆ ಸಾಕ್ಷಿಗಳು ಕೊಡುವ ಹೇಳಿಕೆಗಳು ಅರ್ಥವಾಗುವುದಿಲ್ಲ ; ಅವರ ಪಾಟೀಸವಾಲು ಮಾಡಲು ಸಾಧ್ಯವಾಗುವುದಿಲ್ಲ. ನ್ಯಾಯವೃತ್ತಿಯಲ್ಲಿರುವವನು ತನ್ನ ಪರಿಸರದ ಎಲ್ಲ ವಸ್ತುಗಳ ಬಗ್ಗೆ ಮಾಹಿತಿ ಪಡೆದಿರಬೇಕು ; ಅವನೊಬ್ಬ ಸುಸಂಸ್ಕೃತನಿರಬೇಕು.

ತಾನು ಮಂಡಿಸಬೇಕಾದ ವಿಷಯದ ಬಗ್ಗೆ ಪೂರ್ಣ ಮಾಹಿತಿ ಪಡೆದಿರ ಬೇಕಾದ್ದೂ ನ್ಯಾಯವಾದಿಗೆ ಅಗತ್ಯ. ವಿಷಯಕ್ಕೆ ಉಚಿತವಾದ ಪದಗಳನ್ನು ಸಂಯೋಜಿಸಿ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಹಿತಮಿತವಾಗಿ ವಾದವನ್ನು ಮಂಡಿಸಬೇಕಾಗುತ್ತದೆ.

ಎಲ್ಲ ವೃತ್ತಿಯಲ್ಲಿರುವಂತೆ ನ್ಯಾಯವೃತ್ತಿಯಲ್ಲಿ ನೀತಿ ನಿಯಮಾವಳಿಗಳಿವೆ. ನ್ಯಾಯವೃತ್ತಿಯನ್ನಾಗಿಸಿಕೊಂಡ ವ್ಯಕ್ತಿ ಅಸಂಸ್ಕೃತ ರೀತಿಯಲ್ಲಿ ನಡೆದುಕೊಂಡರೆ ಅವನು ಸಮಾಜದಲ್ಲಿ ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತಾನೆ. ಪ್ರಾಮಾಣಿಕತೆ, ಋಜುತ್ವ ಮತ್ತು

ಸಚ್ಚಾರಿತ್ರ, ತಾಳ್ಮೆ ಇವು ನ್ಯಾಯವೃತ್ತಿಗೆ ಅವಶ್ಯ. ನ್ಯಾಯವೃತ್ತಿಯಲ್ಲಿ ತೊಡಗಿದವನು ಜಗಳಗಂಟನಾಗಿದ್ದರೆ, ದಿನವಹಿ ಕಾಣುತ್ತಿರುವ ನ್ಯಾಯಾಧೀಶನ ಜೊತೆ ಜಗಳ ಕಾಯುವವನಾಗಿದ್ದರೆ ಅಂಥವನು ತನ್ನ ಕಕ್ಷಿಯ ಹಿತವನ್ನು ಯಶಸ್ವಿಯಾಗಿ ರಕ್ಷಿಸಲಾರ.

ನ್ಯಾಯವಾದಿ ತನ್ನ ವೃತ್ತಿಯನ್ನು ಅನ್ಯಾಯವಾದ ಸಂಪಾದನೆಗೆ ಬಳಸಿಕೊಳ್ಳ ಬಾರದು. ನ್ಯಾಯವಾದಿ ತನ್ನ ಕಕ್ಷಿಗೆ ನ್ಯಾಯೋಚಿತ ಸಲಹೆ ಕೊಡುವವನೇ ವಿನಾ ಅವನು ಕಕ್ಷಿಯ ರಾಯಭಾರಿಯಲ್ಲ. ನ್ಯಾಯವಾದಿ ತನ್ನ ಕಕ್ಷಿಯ ಹಿತಾಕಾಂಕ್ಷಿಯಾದರೂ ಅವನ ಪರವಾಗಿ ವಾದಿಸುವಾಗ ಕಾನೂನಿನ ಸೀಮಾರೇಖೆಗಳನ್ನು ಅತಿಕ್ರಮಿಸ ಬಾರದು; ಋಜುತ್ವದ ತಂತುಗಳನ್ನು ಕಡಿದೊಗೆಯಬಾರದು. ವ್ಯಕ್ತಿನಿಷ್ಠೆಯ ಜೊತೆಗೆ ವಸ್ತುನಿಷ್ಠೆಯನ್ನು, ಸತ್ಯನಿಷ್ಠೆಯನ್ನು ಹೊಂದಿಸಿಕೊಂಡು ಹೋಗುವುದು ನ್ಯಾಯವೃತ್ತಿಯ ಕುಶಲ ಕಲೆ. ಎಲ್ಲೆ ಮೀರಿ ಹೋಗುವ ಕಕ್ಷಿಯನ್ನು ಋಜುಮಾರ್ಗಕ್ಕೆ ಎಳೆಯುವ ಪ್ರಭಾವ ಆತನಲ್ಲಿರಬೇಕೆಂಬುದು ಆದರ್ಶ.

ಯಾವನೇ ವ್ಯಕ್ತಿ ತನ್ನ ಬಗ್ಗೆ ಪ್ರಕರಣವೊಂದರಲ್ಲಿ ನ್ಯಾಯಾಲಯದಲ್ಲಿ ವಾದಿಸ ಬೇಕೆಂದು ಕೋರಿದಾಗ ಅದನ್ನು ನಿರಾಕರಿಸಬಹುದೆ ಎಂಬುದು ಒಂದು ಪ್ರಶ್ನೆ. ಸಲಹೆಯನ್ನು ಬಯಸಿ ಬಂದವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು ನ್ಯಾಯವೃತ್ತಿಯನ್ನನುಸರಿಸುವವರ ಕರ್ತವ್ಯವಾಗಿರುತ್ತದೆ. ಆದರೆ ಒಂದು ಪಕ್ಷಕ್ಕೆ ನ್ಯಾಯ ಸಲಹೆ ನೀಡುವ ಮತ್ತು ಅದರ ಪರವಾಗಿ ವಾದಿಸುವ ಕೆಲಸವನ್ನೊಪ್ಪಿಕೊಂಡ ಮೇಲೆ ಪ್ರತಿಪಕ್ಷದ ಪರವಾಗಿಯೂ ವಾದಿಸುವುದು ಅಥವಾ ಅದಕ್ಕೂ ಸಲಹೆ ನೀಡುವುದು ದೋಷಕಾರಕವಾಗುತ್ತದೆ. ನ್ಯಾಯವಾದಿ ದ್ವಿಪಕ್ಷಗಳ ವಕಾಲತ್ತನ್ನು ಹಿಡಿದಿರುವುದು ತಿಳಿದು ಬಂದರೆ ಅವನ ವಿರುದ್ಧ ವೃತ್ತಿಗೇಡಿನ ಪ್ರಕರಣ ತರಲಾಗುತ್ತದೆ ; ಮತ್ತು ಅಂಥವನಿಗೆ ಶಿಕ್ಷೆಯನ್ನೂ ವಿಧಿಸಲಾಗುತ್ತದೆ.

ವ್ಯಾಪಾರವೃತ್ತಿಗೂ ನ್ಯಾಯವೃತ್ತಿಗೂ ಅಂತರವುಂಟು. ವ್ಯಾಪಾರಿ ತನ್ನ ಸರಕಿನ ಮಾರಾಟಕ್ಕಾಗಿ ಎಷ್ಟು ಬೇಕಾದರೂ ಪ್ರಚಾರಕಾರ್ಯ ಕೈಗೊಳ್ಳಬಹುದು. ತನ್ನ ಸರಕು ಉನ್ನತಮಟ್ಟದ್ದೆಂದೂ ಅದನ್ನು ಎಲ್ಲರೂ ಕೊಳ್ಳಬೇಕೆಂದು ಜಾಹಿರಾತು ಮಾಡ ಬಹುದು. ಆದರೆ ನ್ಯಾಯವೃತ್ತಿಯಲ್ಲಿ ಹಾಗಿಲ್ಲ. ತನ್ನ ನ್ಯಾಯವೃತ್ತಿಯ ಬಗ್ಗೆ ಪ್ರಚಾರ ಮಾಡಿಕೊಳ್ಳುವುದಾಗಲಿ ಜಾಹಿರಾತು ನೀಡುವುದಾಗಲಿ ಮಾಡಿದರೆ ಅದು ನಿಯಮಬಾಹಿರ ಪ್ರವೃತ್ತಿಯಾಗುತ್ತದೆ. ವ್ಯಕ್ತಿಗಳಿಗಿಂತಲೂ ನ್ಯಾಯವೃತ್ತಿ ಬಹಳ ಸುಲಭ ಎಂದು ಹಲವರು ಭಾವಿಸಿ ಅದನ್ನೇ ತಮ್ಮ ಮುಖ್ಯವೃತ್ತಿಯಾಗಿ ಆರಿಸಿಕೊಳ್ಳುವುದರಿಂದ ಅದರಲ್ಲಿ ಪೈಪೋಟಿ ಹೆಚ್ಚಾಗಿದೆ. ಆದರೂ ನ್ಯಾಯವೃತ್ತಿ ತನ್ನ ನಿಯಮಗಳನ್ನು ಕಾಪಾಡಿಕೊಂಡು ಬಂದಿದೆ. ನಿಯಮಗಳನ್ನು ಉಲ್ಲಂಘಿಸಿದವರಿಗೆ ಶಿಕ್ಷೆಯನ್ನು ವಿಧಿಸಿ ಅಂಥವರನ್ನು ಹೊರತಳ್ಳಿದ ಅನೇಕ ನಿದರ್ಶನಗಳಿವೆ.

ನ್ಯಾಯವಾದಿ ಒಬ್ಬನ ಪರವಾಗಿ ವಾದಿಸಲು ನೇಮಕಗೊಂಡವನಲ್ಲದೆ ಅವನ ಪ್ರತಿನಿಧಿಯಲ್ಲ ಎಂದು ಜಸ್ಟಿಸ್ ಕ್ರಾಮ್ಟನ್ ಹೇಳಿದ್ದಾರೆ. ಅವನು ತನ್ನ ಕಕ್ಷಿಗೆ ತಾನು ಕಲಿತ ನ್ಯಾಯಶಾಸ್ತ್ರದ ಉಪಯೋಗ ಮತ್ತು ಸಲಹೆಯನ್ನು ಮಾತ್ರ ಕೊಡಬಲ್ಲವನಾಗಿರುತ್ತಾನೆ; ಅವನ ಹೇಳಿಕೆಯಂತೆ ಕುಣಿಯುವ ಬೊಂಬೆಯಲ್ಲ. ತನ್ನ ಕಕ್ಷಿಯನ್ನು ಗೆಲ್ಲಿಸಲು ಅವನು ಕಾನೂನನ್ನು ಅಸ್ತವ್ಯಸ್ತಗೊಳಿಸಲಾರ. ಗೊತ್ತಿದ್ದೂ ಅವನು ತಪ್ಪು ವಾದಿಸಲಾರ. ತನ್ನ ಕಕ್ಷಿ ತನ್ನ ಪರ ವಾದಿಸಲು ಅಪಾರ ಹಣ ಕೊಟ್ಟಿದ್ದರೂ ತಾನು ಮಾತ್ರ ಸತ್ಯ ಮತ್ತು ಧರ್ಮಕ್ಕೆ ಚ್ಯುತಿಯಾಗುವಂತೆ ವರ್ತಿಸಲಾರ. ಹಣ ಗಳಿಸುವ ಒಂದೇ ಉದ್ದೇಶಕ್ಕೆ ತನ್ನನ್ನು ತಾನೇ ಮಾರಿಕೊಳ್ಳಲಾರ.

ಇತರರಂತೆ ವಕೀಲನೂ ತನ್ನ ಕೆಲಸದಲ್ಲಿ ಅನೇಕ ಬಗೆಯ ನಿಷ್ಠೆಗಳಿಗೆ ಒಳಗಾಗಬೇಕಾಗುತ್ತದೆ. ಪ್ರಥಮತಃ ಅವನು ತನ್ನ ಕಕ್ಷಿಗೆ ನಿಷ್ಠೆಯಿಂದಿರಬೇಕೆಂಬುದು ಸ್ವಯಂವೇದ್ಯ. ಅದರೊಂದಿಗೇ ನ್ಯಾಯ ಪರಿಪಾಲನೆಗೂ ನಿಷ್ಠೆ ತೋರಬೇಕಾಗುತ್ತದೆ. ಜೊತೆಗೆ ಅವನು ತನ್ನ ಸಮಾಜವನ್ನು ಮರೆಯುವಂತಿಲ್ಲ. ತನ್ನಂತೆ ವೃತ್ತಿನಿರತರಾದ ಸಹೋದ್ಯೋಗಿಗಳಿಗೂ ಜೊತೆಗಾರರಿಗೂ ಅವನು ನಿಷ್ಠೆಯಿಂದಿರುವುದು ಅವಶ್ಯ. ಅಂತಿಮವಾಗಿ ಆತ್ಮನಿಷ್ಠೆಯೂ ಮುಖ್ಯ. ತನ್ನ ಆರ್ಥಿಕ ಹಿತಗಳನ್ನು ದುರ್ಲಕ್ಷಿಸುವುದಾದರೆ ನ್ಯಾಯವೃತ್ತಿಯನ್ನು ಹಿಡಿದು ಪ್ರಯೋಜನವಾಗದು. ಅದರಷ್ಟೇ ಮುಖ್ಯವಾದ್ದೆಂದರೆ ಮಾನವನಾಗಿ ಅವನು ಕೆಲವು ನೈತಿಕ ಮೌಲ್ಯಗಳನ್ನು ಎತ್ತಿಹಿಡಿಯಬೇಕಾಗುತ್ತದೆ. ಹೀಗೆ ಅವನ ಆತ್ಮನಿಷ್ಠೆ ದ್ವಿಮುಖವಾದ್ದಾಗಿರುತ್ತದೆ.

ಈ ನಿಷ್ಠೆಗಳು ವಿಭಿನ್ನವೂ ಅನೇಕ ವೇಳೆ ಪರಸ್ಪರ ವಿರೋಧಾತ್ಮಕವೂ ಸ್ಪರ್ಧಾತ್ಮಕವೂ ಆಗಿರುವುದುಂಟು. ಇವುಗಳ ಸಾಮರಸ್ಯವನ್ನು ವಿವೇಕಿಯಾದ ನ್ಯಾಯವಾದಿ ಸಾಧಿಸಬೇಕು. ತನ್ನ ಕಕ್ಷಿಯ ಬಗ್ಗೆ ನ್ಯಾಯವಾದಿ ಹೊಂದಿರುವ ನಿಷ್ಠೆಯಿಂದಾಗಿಯೇ ಅವನು ಆ ಕಕ್ಷಿಯ ಹಿತಗಳಿಗೆ ವಿರೋಧವಾದ ಹಿತಗಳುಳ್ಳ ಇನ್ನೊಬ್ಬನನ್ನು ಪ್ರತಿನಿಧಿಸಲು ಇಷ್ಟಪಡುವುದಿಲ್ಲ. ಒಂದು ವ್ಯಾಜ್ಯದ ವಿಚಾರಣೆಯಲ್ಲಿ ಅವನು ತೋರುವ ಉತ್ಸಾಹದಿಂದ ನ್ಯಾಯಕ್ಕೆ ಚ್ಯುತಿ ಬರಬಾರದು. ನ್ಯಾಯ ಹಾಗೂ ನಿಷ್ಪಕ್ಷಪಾತ ದೃಷ್ಟಿಗಳು ಸತ್ವಪರೀಕ್ಷೆಗೊಳಗಾಗುವ ಸಂದರ್ಭಗಳು ಹಲವು ಉಂಟು. ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸರ್ಕಾರದ ಪರವಾಗಿ ವಾದಿಸುವ ವಕೀಲನಿಗೆ ಉಭಯಸಂಕಟದ ಪರಿಸ್ಥಿತಿ ಉಂಟಾಗಬಹುದು. ಇಲ್ಲಿ ಅವನು ಒಂದು ಸಾಮಾನ್ಯ ಪಕ್ಷದ ಪರವಾಗಿ ವಾದಿಸುವ ವಕೀಲನಲ್ಲ; ಆತನು ಸರ್ಕಾರದ ಪರ. ನಿಷ್ಪಕ್ಷಪಾತವಾಗಿ ಆಳುವುದು ಸರ್ಕಾರದ ಹೊಣೆ. ಕೇವಲ ಆಳ್ವಿಕೆಯಷ್ಟೇ ಅದರ ಜವಾಬ್ದಾರಿಯಲ್ಲ. ಆದ್ದರಿಂದ ಇಂಥ ಮೊಕದ್ದಮೆಯಲ್ಲಿ ತನ್ನ ಪಕ್ಷವಾದ ಸರ್ಕಾರ ಗೆಲ್ಲುವಂತೆ ಮಾಡುವುದು ಪ್ರಾಸಿಕ್ಯೂಷನ್ನಿನ (ಅಭಿಯೋಜನೆ) ಕರ್ತವ್ಯವಲ್ಲ; ನ್ಯಾಯವಾದ್ದೇ

ಆಗುವಂತೆ ನೋಡಿಕೊಳ್ಳುವುದು ಅದರ ಹೊಣೆ. ಅಪರಾಧಿಯೆಂದು ಆಪಾದಿತನಾದವನ ಅಪರಾಧದ ಬಗ್ಗೆ ನ್ಯಾಯವಾದಿಯ ವೈಯಕ್ತಿಕ ಅಭಿಪ್ರಾಯವೇನೇ ಇರಲಿ, ಅಂಥವನ ಪರವಾಗಿ ಪ್ರತಿಪಾದಿಸಲು ಒಪ್ಪುವ ಹಕ್ಕು ನ್ಯಾಯವಾದಿಗೆ ಇರುತ್ತದೆ. ಇಲ್ಲದಿದ್ದರೆ ಸಂದೇಹಾಸ್ಪದ ಪರಿಸ್ಥಿತಿಯ ಫಲವಾಗಿ ಅಪರಾಧದ ಆಪಾದನೆಗೆ ಒಳಗಾದ ನಿರಪರಾಧಿಗೆ ಆಪಾದನೆಯ ವಿರುದ್ಧವಾಗಿ ಸೂಕ್ತವಾದ ಪ್ರತಿವಾದದ ರಕ್ಷಣೆ ದೊರಕದೆ ಅವನಿಗೆ ನ್ಯಾಯ ದೊರಕದೆ ಹೋಗಬಹುದಾದ ಅಪಾಯ ಇರುತ್ತದೆ.

★★★★

ನ್ಯಾಯಾಂಗ ಮತ್ತು ನ್ಯಾಯಾಲಯ ಅಧಿಕಾರಿಗಳು - ಒಂದು ಚಿಂತನೆ

ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲೂ ನ್ಯಾಯಾಲಯಗಳ ಉದ್ದೇಶ ನ್ಯಾಯ ನೀಡುವುದೇ ಆಗಿದ್ದರೂ ರಾಷ್ಟ್ರರಾಷ್ಟ್ರಗಳ ನ್ಯಾಯವ್ಯವಸ್ಥೆಗಳ ಸಂಘಟನೆ, ನ್ಯಾಯಾಲಯ ಅಧಿಕಾರಿಗಳ ಅಧಿಕಾರನಾಮಗಳು, ಅವರಿಗೆ ನಿಗದಿ ಮಾಡಲಾದ ಕಾರ್ಯಭಾರಗಳು - ಇವುಗಳಲ್ಲಿ ವ್ಯತ್ಯಾಸಗಳಿರುತ್ತವೆ. ಏಕೀಕೃತ ನ್ಯಾಯವ್ಯವಸ್ಥೆ ಇರುವ ಭಾರತದಲ್ಲಿ ಕೇಂದ್ರ, ರಾಜ್ಯಗಳು, ಜಿಲ್ಲೆಗಳು, ತಾಲ್ಲೂಕುಗಳು ಮುಂತಾಗಿ ವಿವಿಧ ಮಟ್ಟಗಳಲ್ಲಿ ಪ್ರತ್ಯೇಕ ನ್ಯಾಯಾಲಯಗಳಿವೆ ; ಮತ್ತು ನ್ಯಾಯಾಲಯ ಅಧಿಕಾರಿಗಳಿದ್ದಾರೆ. ಕೇಂದ್ರಮಟ್ಟದಲ್ಲಿರುವ ಸರ್ವೋಚ್ಚ ನ್ಯಾಯಾಲಯ ಉಳಿದೆಲ್ಲ ನ್ಯಾಯಾಲಯಗಳಿಗಿಂತ ಹೆಚ್ಚಿನ ನ್ಯಾಯಾಧಿಕಾರವುಳ್ಳದ್ದಾಗಿದೆ. ಅದು ದೆಹಲಿಯಲ್ಲಿದೆ. ಅದು ಭಾರತದ ಸಂವಿಧಾನದ ರಕ್ಷಕ ಹಾಗೂ ಅದಕ್ಕೆ ವ್ಯಾಖ್ಯಾನ ನೀಡುವ ನ್ಯಾಯಾಲಯ. ಎಲ್ಲ ಪ್ರಕಾರದ ವ್ಯಕ್ತಿಸ್ವಾತಂತ್ರ್ಯಗಳ ಮೇಲ್ವಿಚಾರಣೆಯ ಭಾರ ಆದರದು. ಅದಕ್ಕೆ ಮೂಲಭೂತವಾದ ಮತ್ತು ಅಪೀಲುಗಳನ್ನು ನಿರ್ಣಯಿಸುವ ನ್ಯಾಯಾಧಿಕಾರಗಳಿವೆ. ಅದಕ್ಕಿರುವ ಮೂಲಭೂತ ನ್ಯಾಯಾಧಿಕಾರದಿಂದಾಗಿ ಅದು ಕೇಂದ್ರ ಮತ್ತು ರಾಜ್ಯಗಳ ಹಾಗೂ ರಾಜ್ಯರಾಜ್ಯಗಳ ನಡುವಿನ ವ್ಯಾಜ್ಯಗಳನ್ನು ನಿರ್ಣಯಿಸುತ್ತದೆ. ಸಂವಿಧಾನದಲ್ಲಿ ಹೇಳಿದ ಮೂಲಭೂತ ಹಕ್ಕುಗಳನ್ನು ಎತ್ತಿಹಿಡಿಯುವ ಮತ್ತು ಮೂಲಭೂತ ನ್ಯಾಯಾಧಿಕಾರವನ್ನು ಚಲಾಯಿಸುವ ಸಂದರ್ಭಗಳಲ್ಲಿ ಅದು ಸೂಕ್ತ ಆಜ್ಞೆ ಮತ್ತು ಆದೇಶಗಳನ್ನು ಜಾರಿ ಮಾಡಬಲ್ಲುದು. ರಾಜ್ಯಗಳ ಉಚ್ಚ ನ್ಯಾಯಾಲಯಗಳು ಪ್ರಮಾಣಪತ್ರವನ್ನಿತ್ತಾಗ ಇಲ್ಲವೆ ಸಂವಿಧಾನ ವ್ಯಾಖ್ಯಾನಕ್ಕೆ ಸಂಬಂಧಿಸಿದ ಕಾನೂನಿನ ಸಾರಭೂತವಾದ ಪ್ರಶ್ನೆಗಳನ್ನು ಒಳಗೊಂಡ ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯಗಳು ನೀಡಿದ ನಿರ್ಣಯ, ಡಿಕ್ರಿ ಇಲ್ಲವೆ ಅಂತಿಮ ಆದೇಶ ಇವುಗಳ ವಿರುದ್ಧ ಸರ್ವೋಚ್ಚ ನ್ಯಾಯಾಲಯದ ವಿಶೇಷ ಅನುಮತಿಯೊಂದಿಗೆ ಅದಕ್ಕೆ ಅಪೀಲು ಮಾಡಬಹುದು. ಸಿವಿಲ್ ಪ್ರಕರಣಗಳಲ್ಲಿ ವಿವಾದಕ್ಕೆ ಒಳಗಾದ ವಿಷಯದ ಮೌಲ್ಯವಾದಲ್ಲಿ ನಿರ್ಣಯ ಡಿಕ್ರಿ ಅಥವಾ ಅಂತಿಮ ಆದೇಶಕ್ಕೆ ಇಲ್ಲವೇ ಯಾವುದೇ ಪ್ರಕರಣಗಳನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಲುತಕ್ಕುದೆಂದು ಪ್ರಮಾಣೀಕರಿಸಿದಾಗ ಆ ನ್ಯಾಯಾಲಯಕ್ಕೆ ಅಪೀಲು

ಮಾಡಬಹುದು. ಕ್ರಿಮಿನಲ್ ಪ್ರಕರಣಗಳಲ್ಲಿ ಆಪಾದಿತನ ವಿಮೋಚನಾದೇಶವನ್ನು ಹೊಡೆದುಹಾಕಿ ಅವನನ್ನು ಮರಣದಂಡನೆಗೆ ಗುರಿ ಮಾಡಿದಾಗ, ಅದು ತನ್ನ ನ್ಯಾಯಾಧಿಕಾರಕ್ಕೆ ಒಳಪಟ್ಟ ನ್ಯಾಯಾಲಯವೊಂದರ ಎದುರಿಗಿದ್ದ ಪ್ರಕರಣವನ್ನು ಹಿಂತೆಗೆದುಕೊಂಡು ಅದನ್ನು ತಾನೇ ನಿರ್ಣಯಿಸಿ ಆಪಾದಿತನಿಗೆ ಮರಣದಂಡನೆ ವಿಧಿಸಿದಾಗ, ಇಲ್ಲವೆ ಅದು ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಲು ತಕ್ಕುದಾದ ಪ್ರಕರಣ ಎಂದು ಪ್ರಮಾಣೀಕರಿಸಿದಾಗ ಆ ನ್ಯಾಯಾಲಯಕ್ಕೆ ಅಪೀಲು ಮಾಡಬಹುದು. ಕ್ರಿಮಿನಲ್ ಪ್ರಕರಣವೊಂದರಲ್ಲಿ ಉಚ್ಚ ನ್ಯಾಯಾಲಯ ನೀಡಿದ ನಿರ್ಣಯ, ಅಂತಿಮ ಆದೇಶ ಇಲ್ಲವೇ ದಂಡನೆಯನ್ನು ಪುನಃ ವಿಚಾರಣೆ ಮಾಡಿ ತೀರ್ಮಾನ ನೀಡಬೇಕೆಂದು ಸಂಸತ್ತೂ ಆ ನ್ಯಾಯಾಲಯಕ್ಕೆ ಅಧಿಕಾರ ನೀಡಬಹುದು. ಅಪೀಲುಗಳಿಗೆ ಸಂಬಂಧಿಸಿದಂತೆ ಅದಕ್ಕೆ ಇರುವ ಅತ್ಯಂತ ವಿಸ್ತಾರವಾದ ನ್ಯಾಯಾಧಿಕಾರದಿಂದಾಗಿ ಅದು ದೇಶದ ಯಾವುದೇ ಪ್ರಕರಣ ಅಥವಾ ವಿಷಯದಲ್ಲಿ ಯಾವುದೇ ನ್ಯಾಯಾಲಯ ಇಲ್ಲವೇ ನ್ಯಾಯಾಧಿಕರಣ ನೀಡಿದ ನಿರ್ಣಯ, ಡಿಕ್ರಿ, ದಂಡನೆ, ಆದೇಶ ಇವುಗಳ ವಿರುದ್ಧ ಅಪೀಲು ಮಾಡಲು ವಿಶೇಷ ಅನುಮತಿ ನೀಡಬಹುದಾಗಿದೆ. ಸಂವಿಧಾನದ ೧೪೩ನೆಯ ಅನುಚ್ಛೇದದ ಪ್ರಕಾರ ರಾಷ್ಟ್ರಪತಿ ಅದಕ್ಕೆ ಒಪ್ಪಿಸಿದ ವಿಷಯಗಳಲ್ಲಿ ಸಲಹೆ ನೀಡುವ ನ್ಯಾಯಾಧಿಕಾರವೂ ಅದಕ್ಕಿದೆ. ಸರ್ವೋಚ್ಚ ನ್ಯಾಯಾಲಯದಲ್ಲಿ ರಾಷ್ಟ್ರಪತಿಯಿಂದ ನೇಮಕ ಹೊಂದಿದ ಒಬ್ಬ ಶ್ರೇಷ್ಠ ನ್ಯಾಯಾಧೀಶನೂ ಇತರ ನ್ಯಾಯಾಧೀಶರೂ ಇರುತ್ತಾರೆ.

ಸರ್ವೋಚ್ಚ ನ್ಯಾಯಾಲಯದ ಅನಂತರ (ಅದಕ್ಕೆ ಅಧೀನವಾಗಿ) ನ್ಯಾಯಾಂಗದ ಸ್ಥೂಲ ಸ್ವರೂಪ ಈ ರೀತಿ ಇದೆ. ೧. ಉಚ್ಚ ನ್ಯಾಯಾಲಯ (ಪ್ರತಿ ರಾಜ್ಯದ ರಾಜಧಾನಿಯಲ್ಲಿ), ೨. ಜಿಲ್ಲಾ ನ್ಯಾಯಾಲಯ (ಪ್ರತಿ ಜಿಲ್ಲೆಯ ಮುಖ್ಯ ಸ್ಥಳದಲ್ಲಿ), ೩. ತಾಲ್ಲೂಕು ಅಥವಾ ತಾಲ್ಲೂಕುಗಳ ನ್ಯಾಯಾಲಯ, ಜಿಲ್ಲಾ ನ್ಯಾಯಾಲಯದಿಂದ ಕೆಳಮಟ್ಟದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣದ ಬಗ್ಗೆ ಪ್ರತ್ಯೇಕ ವಿಭಾಗಗಳು ಇರುತ್ತವೆ. ಖಾಸಗಿ ಹಕ್ಕುಗಳ ಸ್ವತ್ತು ವಗೈರೆಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಮೂಲದಲ್ಲಿ ಅತಿ ಕೆಳಗಿನ ನ್ಯಾಯಾಲಯದಲ್ಲಿ ದಾಖಲೆಪಡಿಸ ಬೇಕಾಗುತ್ತದೆ. ಇದರ ಅಧಿಕಾರವ್ಯಾಪ್ತಿಯನ್ನು ಭೌಗೋಳಿಕ ರೆವಿನ್ಯೂ ತಾಲ್ಲೂಕಿನ ಗಡಿಗೂ ಆರ್ಥಿಕವಾಗಿ ರೂ. ೧೦,೦೦೦ಕ್ಕೆ, ಅಂದರೆ ೯,೯೯೯ರವರೆಗೂ, ಸೀಮಿತಗೊಳಿಸಲಾಗಿದೆ. ವ್ಯಾಜ್ಯಕ್ಕೆ ಸಂಬಂಧಿಸಿದ ಹಣದ ಮೊತ್ತ ಅಥವಾ ಆಸ್ತಿಯ ಕಿಮ್ಮತ್ತು (ನ್ಯಾಯಾಲಯ ಶುಲ್ಕ ಕಾನೂನಿನನ್ವಯ) ರೂ. ೧೦,೦೦೦ನ್ನು ಮೀರಿದಲ್ಲಿ ಅಂಥ ವಿವಾದವನ್ನು ಮೂಲದಲ್ಲೇ ಜಿಲ್ಲೆಯ ಸಿವಿಲ್ ನ್ಯಾಯಾಲಯಕ್ಕೆ ಸಲ್ಲಿಸ ಬೇಕಾಗುತ್ತದೆ. ಅದರಂತೆ ಶಿಕ್ಷೆಯ ಅವಧಿ ಹಾಗೂ ದಂಡದ ಗಾತ್ರಕ್ಕೆ ಅನುಗುಣವಾಗಿ ಬೇರೆಬೇರೆ ರೀತಿಯ ಗುನ್ಹೆಯ ಪ್ರಕರಣಗಳನ್ನು ತಾಲ್ಲೂಕು ಮಟ್ಟದ ಹಾಗೂ ಜಿಲ್ಲಾ

ಮಟ್ಟದ ನ್ಯಾಯಾಲಯದ ಕಾರ್ಯಕ್ಷೇತ್ರದೊಳಗೇ ದಾಖಲೆಪಡಿಸತಕ್ಕದ್ದಾಗಿದೆ. ಉದಾ : ಖೂನಿ ಪ್ರಕರಣವನ್ನು ಜಿಲ್ಲೆಗೆ ಒಳಪಟ್ಟ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯದಲ್ಲೇ ವಿಚಾರಣೆ ನಡೆಸತಕ್ಕದ್ದು.

ರೆವಿನ್ಯೂ ನ್ಯಾಯಾಲಯಗಳ ವ್ಯವಸ್ಥೆ ಹೀಗಿರುತ್ತದೆ : ನ್ಯಾಯಮಂಡಲಿ (ಟ್ರಿಬ್ಯೂನಲ್) ವಿಭಾಗಾಧಿಕಾರಿ, ಜಿಲ್ಲಾಧಿಕಾರಿ (ಈತ ಜಿಲ್ಲಾ ದಂಡಾಧಿಕಾರಿ ಕೂಡ), ತಹಸೀಲ್ದಾರ (ತಾಲ್ಲೂಕಿನ ರೆವಿನ್ಯೂ ಮುಖ್ಯಸ್ಥ). ಈ ಶ್ರೇಣಿಯಲ್ಲಿ ಕೆಳಗಿನ ನ್ಯಾಯಾಲಯದ ಆಜ್ಞೆಗಳ ವಿರುದ್ಧ ಅದರ ಮೇಲಣ ನ್ಯಾಯಾಲಯಕ್ಕೂ ಅಂತಿಮವಾಗಿ ನ್ಯಾಯಮಂಡಲಿಗೂ ಮೇಲ್ಮನವಿ ಸಲ್ಲಿಸಬಹುದು. ಇದು ಪ್ರಮುಖವಾಗಿ ಕಾರ್ಯಾಂಗದ ಅಂಶವನ್ನೂ ಸ್ವಲ್ಪಮಟ್ಟಿಗೆ ನ್ಯಾಯಾಂಗದ ಅಂಶವನ್ನೂ ಹೊಂದಿದೆ. ಕಾರ್ಯಾಂಗದ ಆಚರಣೆಯಲ್ಲಿ ಬರಬಹುದಾದ ಸಣ್ಣಪುಟ್ಟ ಅಡಚಣೆಗಳನ್ನು ನಿವಾರಣೆ ಮಾಡಿಕೊಳ್ಳುವ ಮಟ್ಟಿಗೆ ಮಾತ್ರ ನ್ಯಾಯಾಂಗಕ್ಕೆ ಹೋಲಿಸಬಹುದಾದ ಅಧಿಕಾರವನ್ನು ಇವು ಹೊಂದಿದೆಯೇ ವಿನಾ ಇದು ಮುಖ್ಯವಾದ ವ್ಯಾಜ್ಯ ವ್ಯವಹರಣೆಗಳನ್ನು ತೀರ್ಮಾನಿಸಲಾರದು. ಕೂಲಿಗಾರರ ನ್ಯಾಯಮಂಡಳಿ, ಪಂಚಾಯತಿ ನ್ಯಾಯಾಲಯ ಮುಂತಾದವು ...ಾಂಗದ ಕೆಲವು ಹೊಣೆಗಾರಿಕೆಗಳನ್ನು ನಿರ್ವಹಿಸುತ್ತವೆ.

ಉಚ್ಚ ನ್ಯಾಯಾಲಯ :

ಪ್ರತಿಯೊಂದು ರಾಜ್ಯದಲ್ಲೂ ಒಂದು ಉಚ್ಚನ್ಯಾಯಾಲಯ ಇರುತ್ತದೆ. ಅದಕ್ಕೂ ಮೂಲಭೂತವಾದ ಮತ್ತು ಅಪೀಲುಗಳಿಗೆ ಸಂಬಂಧಿಸಿದ ನ್ಯಾಯಾಧಿಕಾರಗಳಿರುತ್ತವೆ. ರಾಜ್ಯದ ನ್ಯಾಯಾಡಳಿತವೆಲ್ಲ ಅದರ ಮೇಲ್ವಿಚಾರಣೆಯಲ್ಲಿಯೇ ನಡೆಯುತ್ತದೆ. ಅದು ತನ್ನ ನ್ಯಾಯಾಧಿಕಾರದೊಳಗಿರುವ ಯಾವುದೇ ವ್ಯಕ್ತಿಗೆ, ಅಧಿಕಾರಿಗೆ ಇಲ್ಲವೇ ಸರ್ಕಾರಕ್ಕೆ ಆದೇಶಗಳನ್ನು ಇಲ್ಲವೇ ಆಜ್ಞೆಗಳನ್ನು ಹಾಗೂ ಸಂವಿಧಾನದ ೩ನೆಯ ಭಾಗದಲ್ಲಿ ಹೇಳಿರುವ ಹಕ್ಕುಗಳ ಜಾರಿಗಾಗಿ ಅಥವಾ ಇನ್ನಾವುದೇ ಉದ್ದೇಶಕ್ಕಾಗಿ ರಿಟ್ಟುಗಳನ್ನು ನೀಡಬಹುದು. ತನ್ನ ನ್ಯಾಯಾಧಿಕಾರದೊಳಗಿದ್ದ ನ್ಯಾಯಾಲಯಗಳ ಮತ್ತು ನ್ಯಾಯಾಧಿಕರಣಗಳ ಆಚರಣೆ ಮತ್ತು ನ್ಯಾಯನಿರ್ಣಯ ವಿಧಿಗಳನ್ನು ಕ್ರಮಪಡಿಸುವುದಕ್ಕೆ ಅದು ನಿಯಮಗಳನ್ನು ಮಾಡಬಹುದು. ಅದರಲ್ಲಿ ಒಬ್ಬ ಮುಖ್ಯ ನ್ಯಾಯಾಧೀಶನೂ ರಾಷ್ಟ್ರಾಧ್ಯಕ್ಷರು ಅವಶ್ಯ ಕಂಡಂತೆ ನೇಮಕ ಮಾಡಿದಷ್ಟು ಮಂದಿ ನ್ಯಾಯಾಧೀಶರೂ ಇರುತ್ತಾರೆ. ಮುಖ್ಯ ನ್ಯಾಯಾಧೀಶನನ್ನು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನ ಮತ್ತು ರಾಜ್ಯಪಾಲನ ಸಲಹೆ ಪಡೆದು ನೇಮಿಸಲಾಗುತ್ತದೆ. ಈ ನ್ಯಾಯಾಧೀಶರು ೬೦ ವರ್ಷ ವಯಸ್ಸಿನವರಾಗುವವರೆಗೆ ಅಧಿಕಾರದಲ್ಲಿರುತ್ತಾರೆ.

ಅಧೀನ ನ್ಯಾಯಾಲಯಗಳು :

ಸಿವಿಲ್ ನ್ಯಾಯಾಡಳಿತಕ್ಕೆ ಸಂಬಂಧಿಸಿದಂತೆ ಇಡೀ ದೇಶಾದ್ಯಂತ ಅಧೀನ ನ್ಯಾಯಾಲಯಗಳ ರಚನೆ ಮತ್ತು ಕಾರ್ಯಗಳಲ್ಲಿ ಸಾಮ್ಯತೆಯಿದೆ. ಪ್ರತಿ ರಾಜ್ಯವನ್ನು ಅನೇಕ ಜಿಲ್ಲೆಗಳಾಗಿ ವಿಭಾಗಿಸಲಾಗಿದೆ. ಪ್ರತಿ ಜಿಲ್ಲೆಗೆ ಒಬ್ಬ ಜಿಲ್ಲಾ ನ್ಯಾಯಾಧೀಶ ಇರುತ್ತಾನೆ. ಅವನಿಗೂ ಮೂಲಭೂತ ಮತ್ತು ಅಪೀಲು ನಿರ್ಣಯ ನ್ಯಾಯಾಧಿಕಾರಗಳಿರುತ್ತವೆ. ಅವನದು ಜಿಲ್ಲೆಯ ಮುಖ್ಯ ಸಿವಿಲ್ ನ್ಯಾಯಾಲಯ. ಅವನಿಗೆ ಅಧೀನವಾಗಿ ಅನೇಕ ಬೇರೆ ಬೇರೆ ದರ್ಜೆಗಳ ನ್ಯಾಯಾಲಯಗಳ ನ್ಯಾಯಾಧಿಕಾರಿಗಳಿರುತ್ತಾರೆ. ದಾವೆಗಳನ್ನು ವಿಚಾರಿಸುವುದಲ್ಲದೆ ಪಾಲನೆ (ಗಾರ್ಡಿಯನ್‌ಷಿಪ್), ವಿವಾಹ, ವಿವಾಹವಿಚ್ಛೇದ, ಉಯಿಲು ಮೊದಲಾದ ವಿಷಯಗಳ ಮೇಲೆ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳ ರಚನೆಯೂ ದಂಡಪ್ರಕ್ರಿಯಾಸಂಹಿತೆಯಿಂದ ನಿಯಂತ್ರಿತವಾಗಿರುತ್ತದೆ. ಜಿಲ್ಲೆಯ ಸಿವಿಲ್ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನೇ ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲೆಯ ಸೆಷನ್ಸ್ ವಿಭಾಗದ ಮುಖ್ಯ ನ್ಯಾಯಾಧೀಶನಾಗಿರುತ್ತಾನೆ. ಕೆಳಗಿನ ದರ್ಜೆಯ ನ್ಯಾಯಾಲಯಗಳ ನ್ಯಾಯಾಧಿಕಾರಿಗಳು ಆರಂಭದ ವಿಚಾರಣೆ ನಡೆಯಿಸಿ ಅವನಿಗೆ ಒಪ್ಪಿಸಿದ ಹೆಚ್ಚು ಭೀಕರ ಅಪರಾಧಗಳಲ್ಲಿ ಮಾತ್ರ ಅವನು ತೀರ್ಪು ನೀಡುತ್ತಾನೆ. ಉಳಿದ ಅಪರಾಧಗಳ ವಿಷಯದಲ್ಲಿ ಕೆಳಗಿನ ದರ್ಜೆಯ ನ್ಯಾಯಾಲಯಗಳ ನ್ಯಾಯಾಧಿಕಾರಿಗಳು ವಿಚಾರಣೆ ನಡೆಯಿಸುತ್ತಾರೆ.

ಯಾವುದೇ ನ್ಯಾಯಾಲಯವಾಗಲಿ, ಅದಕ್ಕೆ ಒಳಪಟ್ಟ ನ್ಯಾಯಾಧಿಕಾರಿ ಅಥವಾ ನಿರ್ಣಾಯಕನಾಗಲಿ, ಸಂಬಂಧಪಟ್ಟ ಕಾನೂನಿನ ಚೌಕಟ್ಟಿನಲ್ಲಿ, ಅವನ ಅಧಿಕಾರ ವ್ಯಾಪ್ತಿಯ ಒಳಗೆ ಮಾತ್ರ ವ್ಯವಹರಿಸಬಹುದು. ಅದಕ್ಕೆ ಮೀರಿದ ಯಾವುದೇ ನಿರ್ಣಯ ಯಾರಿಗೂ ಬಂಧನಕಾರಿಯಾಗದು. ಅದು ಸಿಂಧುವಲ್ಲ. ಯಾವುದನ್ನು ನ್ಯಾಯ ಎಂದು ಕಾನೂನು ಹೇಳುತ್ತದೆಯೋ, ಆ ನ್ಯಾಯವನ್ನು ಮಾತ್ರ ನ್ಯಾಯಾಲಯ ದೊರಕಿಸಿಕೊಡಲು ಸಮರ್ಥವಾಗಿದೆ. ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯವಾದರೂ ಸಂವಿಧಾನದ ವಿಧಿಗಳ ಅರ್ಥವಿವರಣೆಯನ್ನು ಮಾತ್ರ ನೀಡಿ, ಸಂಬಂಧಿಸಿದ ವಿವಾದಕ್ಕೆ ಅವನ್ನು ಅನ್ವಯಿಸಿ ನಿರ್ಣಯ ನೀಡುತ್ತದೆ.

ಸರ್ವೋಚ್ಚ ನ್ಯಾಯಾಲಯದ ನಿರ್ಣಯಕ್ಕೆ ಎಲ್ಲರೂ ಬದ್ಧರಾಗಿರಬೇಕಾಗುತ್ತದೆ. ರಾಷ್ಟ್ರದ ಎಲ್ಲ ಉಚ್ಚ ನ್ಯಾಯಾಲಯಗಳೂ ಅವುಗಳ ಕೆಳಗಿನ ಎಲ್ಲ ನ್ಯಾಯಾಲಯಗಳೂ ಈ ನಿರ್ಣಯಕ್ಕೆ ಬದ್ಧವಾಗಿರುತ್ತವೆ. ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ವಿರುದ್ಧ ಮೇಲ್ಮನವಿಯಿಲ್ಲ. ಅದು ಈ ದೇಶದ ಅಂತಿಮ ನ್ಯಾಯತೀರ್ಮಾನದ ಘಟಕ.

ನ್ಯಾಯಾಲಯವೊಂದರ ತೀರ್ಮಾನವನ್ನು ದೂಷಣೆ ಮಾಡುವ ಅಧಿಕಾರ ಆಯಾ ನ್ಯಾಯಾಲಯದ ಮೇಲಿನ ದರ್ಜೆಯ ನ್ಯಾಯಾಲಯಕ್ಕೆ ಮಾತ್ರ ಇದೆ. ವಿಧಾನಾಂಗವೂ ಕಾರ್ಯಾಂಗವೂ ಅದಕ್ಕೆ ಕೇವಲ ಬದ್ಧವಾಗಿರುತ್ತದೆ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ನ್ಯಾಯಾಂಗದ ಸಂಸ್ಥೆಗಳಿಗೆ ಇರಬಹುದಾದ ಒಂದು ವಿಶಿಷ್ಟಸ್ಥಾನ ಮತ್ತು ಸ್ವಾತಂತ್ರ್ಯ ಇದಾಗಿರುತ್ತದೆ. ನ್ಯಾಯಾಲಯವೊಂದರಲ್ಲಿ ವಿಚಾರಣೆ ನಡೆಯುತ್ತಿರುವಾಗ ಕೂಡ ಯಾರೊಬ್ಬರೂ ಅದರ ನಿರ್ಣಯದ ಬಗ್ಗೆ ಚರ್ಚಿಸುವುದನ್ನೂ, ಅಭಿಪ್ರಾಯ ವ್ಯಕ್ತಪಡಿಸುವುದನ್ನೂ ಕಾನೂನು ನಿಷೇಧಿಸುತ್ತದೆ. ತನ್ನದೇ ಆದ ಸ್ವತಂತ್ರ ನಿರ್ಣಯಕ್ಕೆ ಬರುವಲ್ಲಿ ನ್ಯಾಯಾಂಗ ಅನಿರ್ಬಂಧ ವಿವೇಚನೆ ಹೊಂದಿದೆ. ಯಾವುದೇ ಆಕ್ಷೇಪಾರ್ಹ ವಿಮರ್ಶೆಯನ್ನು ನ್ಯಾಯಾಲಯದ ಇಂಥ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ, ನ್ಯಾಯಾಲಯಕ್ಕೆ ಅಗೌರವ ಸೂಚಿಸುವ ವಿಷಯವೆಂದು ಪರಿಗಣಿಸಿ ಅದನ್ನು ಗಣನೆಗೆ ತೆಗೆದುಕೊಂಡು ಶಿಕ್ಷಿಸುವ ಅಧಿಕಾರವನ್ನು ನ್ಯಾಯಾಂಗ ಹೊಂದಿದೆ. ತನಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತಾನೇ ನಿರ್ಣಯ ಕೊಡುವುದು ಬರಬಾರದು ಎಂಬ ವಸ್ತುನಿಷ್ಠ ತತ್ತ್ವಕ್ಕೆ ಇದು ಒಂದು ವಿಸಂಗತ ವಿಷಯವೆನಿಸಿದರೂ, ನಿಯಮದ ಅಪವಾದವೆಂದೆನಿಸಲ್ಪಡುತ್ತದೆ. ಯಾವ ಬೆಲೆಯಿಂದಾದರೂ ಸರಿ, ನ್ಯಾಯಾಲಯದ ಸ್ವಾತಂತ್ರ್ಯವನ್ನು, ಗೌರವವನ್ನು ಕಾಯ್ದುಕೊಳ್ಳಬೇಕೆಂಬುದು ಮೂಲತತ್ತ್ವ ಹಾಗೂ ಉದ್ದೇಶ. ದೇಶದ ಎಲ್ಲ ನ್ಯಾಯಾಲಯಗಳೂ ಈ ಅಧಿಕಾರ ಹೊಂದಿವೆ. ಸರ್ವೋಚ್ಚ ನ್ಯಾಯಾಲಯ ಹಾಗೂ ಉಚ್ಚನ್ಯಾಯಾಲಯಗಳೂ ಖುದ್ದಾಗಿ ಇದರ ವಿಚಾರಣೆ ಕೈಗೊಳ್ಳಬಹುದು ; ಅವಕ್ಕಿಂತ ಕೆಳಗಿನ ನ್ಯಾಯಾಲಯ ನಿಂದನೆಯನ್ನು ಕುರಿತ ವಿವಾದಗಳನ್ನು ಉಚ್ಚನ್ಯಾಯಾಲಯಕ್ಕೆ ಸಲ್ಲಿಸಬೇಕು. ಕೆಳ ನ್ಯಾಯಾಲಯಗಳು ನ್ಯಾಯ ನಿರ್ವಹಣೆಯಲ್ಲಿ ಬರಬಹುದಾದ ಇತರ ಅಡಚಣೆಗಳನ್ನು ಅಲ್ಲಿಯೇ ನಿವಾರಿಸಿಕೊಳ್ಳುವ ಅಧಿಕಾರ ಹೊಂದಿವೆ.

ಸರ್ವೋಚ್ಚ ನ್ಯಾಯಾಲಯದ ನಿರ್ಣಯ ವಿಧಾನಾಂಗಕ್ಕೆ ಕೂಡ ಬಂಧನಕಾರಿ ಯಾದದ್ದು. ವಿಧಾನಾಂಗ ಕಾನೂನುಗಳನ್ನು ರಚಿಸಬಲ್ಲದು. ಅವನ್ನು ಬದಲಾಯಿಸಲೂ ಬಹುದು. ಆದರೆ ಪ್ರಚಲಿತ ಕಾನೂನು ಚೌಕಟ್ಟಿನಲ್ಲಿ ನ್ಯಾಯಪೀಠ ನೀಡಿದ ನಿರ್ಣಯವನ್ನು ಬದಲಿಸಲಾರದು. ನ್ಯಾಯಾಂಗವಾಗಲಿ, ವಿಧಾನಾಂಗವಾಗಲಿ, ಕಾರ್ಯಾಂಗವಾಗಲಿ ಎಲ್ಲ ಅಂಗಸಂಸ್ಥೆಗಳೂ ಕೂಡಿಯೇ ಆಗಲಿ, ಸಂವಿಧಾನಕ್ಕೆ ಬದ್ಧವಾಗಿರತಕ್ಕದ್ದು.

★★★★

ನ್ಯಾಯವಾದಿಗಳು - ಒಂದು ಚಿಂತನೆ

ನ್ಯಾಯವಾದಿಗಳ ಅಥವಾ ವಕೀಲರ ವೃತ್ತಿಯನ್ನು ಉದ್ಯೋಗವೆಂದು ಎಂದೂ ಬಗೆಯಬಾರದು. ಈ ವೃತ್ತಿ ಬಹಳ ಉದಾತ್ತವಾದದ್ದು. ಅದನ್ನು ಯಾವಾಗಲೂ ಸತ್ಯಶುದ್ಧವಾದ ಕಾಯಕವೆಂದೇ ಭಾವಿಸಬೇಕು. ಅದನ್ನು ವ್ಯಾಪಾರ ಅಥವಾ ಮೋಜಿನ ವ್ಯವಹಾರವೆಂದು ಎಂದೂ ಬಗೆಯಬಾರದು. ಇದನ್ನು ಪ್ರತಿಯೊಬ್ಬ ನ್ಯಾಯವಾದಿಯೂ ಜೀವನದುದ್ದಕ್ಕೂ ತಪ್ಪದೇ ಅನುಸರಿಸಿಕೊಂಡು ಹೋಗಬೇಕು.

ದೇವರಿಗೆ ಕೊಡುವಷ್ಟು ಬೆಲೆಯನ್ನು ನಾವುಗಳು ಯಾವಾಗಲೂ ನ್ಯಾಯಸ್ಥಾನಕ್ಕೆ ಕೊಡಬೇಕು. ಇವರು ಮುನ್ಸಿಫ್, ಇವರು ಸಿವಿಲ್ ಜಡ್ಜ್ ಹಾಗೂ ಇವರು ಜಿಲ್ಲಾ ನ್ಯಾಯಾಧೀಶರು ಎನ್ನುವ ತಾರತಮ್ಯ ಭಾವವನ್ನು ನಾವೆಂದೂ ಹೊಂದಬಾರದು. ನ್ಯಾಯಾಧೀಶರಷ್ಟೇ ನ್ಯಾಯದಾನವನ್ನು ಒದಗಿಸುವ ಕರ್ತವ್ಯ ನ್ಯಾಯವಾದಿಗಳ ಮೇಲೂ ಇದೆ ಎನ್ನುವ ಮನೋಭಾವ ನನ್ನದು. ಯಾವುದೇ ತೆರನಾದ ವ್ಯಾಜ್ಯಗಳಿರಲೀ ಪ್ರಪ್ರಥಮವಾಗಿ ನ್ಯಾಯವಾದಿಗಳು ಸಾಧ್ಯವಿದ್ದಷ್ಟು ರಾಜಿಗಾಗಿ ಪ್ರಯತ್ನಿಸಬೇಕು. ಏಕೆಂದರೆ ಅದು ಪುಣ್ಯದ ಕೆಲಸ. ಒಂದು ವೇಳೆ ರಾಜಿಯಾಗದಿದ್ದರೆ ಮಾತ್ರ ಅನಿವಾರ್ಯವಾಗಿ ನಿಶ್ಚಲ ಮನಸ್ಸಿನಿಂದ ವ್ಯಾಜ್ಯವನ್ನು ನಡೆಸಬೇಕು. ಅದು ಅನಿವಾರ್ಯ.

ಪ್ರತಿಯೊಂದು ವ್ಯಾಜ್ಯಕ್ಕೂ ತನ್ನದೇ ಆದ ಶಕ್ತಿ ಇದ್ದೇ ಇರುತ್ತದೆ. ಶಕ್ತಿ ಇಲ್ಲದ ಮರ (ಗಿಡ) ಬೀಳುವ ಹಾಗೆ ವ್ಯಾಜ್ಯವೂ ಸಹ ವಕೀಲರೂ ಎಷ್ಟೇ ಪ್ರಯತ್ನ ಮಾಡಿದರೂ ಬಿದ್ದುಹೋಗಬಹುದು. ಕೆಲವು ಸಾರಿ ಕಕ್ಷಿಗಾರರ ಪ್ರಾರಬ್ಧ ಕರ್ಮವೂ ಇರಬಹುದು. ವ್ಯಾಜ್ಯವು ಸೋತಕೂಡಲೇ ನ್ಯಾಯಾಧೀಶರ ಮೇಲೆ ಸಿಟ್ಟಿಗೆದ್ದು ನ್ಯಾಯಾಧೀಶರ ಕರುಣೆಗೆ ಎರವಾಗಬಾರದು. ಇಲ್ಲದ ಸಂಗತಿಗಳನ್ನು ನ್ಯಾಯಾಲಯದ ಮುಂದೆ ಹೇಳಲು ಹೋಗಿ ವೈಯಕ್ತಿಕ ಹೆಸರನ್ನು ಹಾಳುಮಾಡಿಕೊಳ್ಳಬಾರದು. ಪ್ರಾಮಾಣಿಕವಾಗಿ ವ್ಯಾಜ್ಯವನ್ನು ನಡೆಸುವುದು ನ್ಯಾಯವಾದಿಗಳ ಕರ್ತವ್ಯವೇ ಹೊರತು ಗೆಲ್ಲುವುದು ಅಥವಾ ಸೋಲುವುದು ಅವರಿಗೆ ಸಂಬಂಧಿಸಿದ ವಿಷಯವಲ್ಲ. ಆದ್ದರಿಂದ ನಾನು ಗೆದ್ದು ಬರುತ್ತೇನೆ ಎಂದು ಆಶ್ವಾಸನೆಯನ್ನು ಕೊಡಬೇಡಿ.

ಕಾನೂನು ಹಾಗೂ ತೀರ್ಪುಗಳನ್ನು ಕೂಲಂಕಷವಾಗಿ ಅಭ್ಯಸಿಸಿಯೋ ಅಥವಾ ತಾವೇ ಉತ್ತರವನ್ನು ಬರೆಯಬೇಕು. ಕ್ಲಿಷ್ಟವಾದ ವ್ಯಾಜ್ಯಗಳಿದ್ದಲ್ಲಿ ಸ್ಥಳ ಪರೀಕ್ಷೆಗೂ

ಹೋಗಿ ಬರಬೇಕು. ಆಗ ಸತ್ಯದ ವಾಸ್ತವತೆ ಮನಗಂಡು ಬರೆಯುವ ಲೇಖನಗಳು ಅಥವಾ ವಾದಮಂಡನೆಯಲ್ಲಿ ಶಕ್ತಿಯು ತುಂಬಿರುತ್ತದೆ.

ಪಾಟೀಸವಾಲು ಮಾಡುವಾಗ ಪ್ರಭುತ್ವವನ್ನು ಸಾಧಿಸಬೇಕಾದರೆ ಬರೀ ಪುಸ್ತಕಗಳನ್ನು ಓದಿದರೆ ಸಾಲದು, ಹಿರಿಯ ವಕೀಲರುಗಳು ಪಾಟೀ ಸವಾಲುಗಳನ್ನು ಮಾಡುತ್ತಿರುವುದನ್ನು ಕಿರಿಯ ವಕೀಲರುಗಳು ಕಣ್ಣಾರೆ ವೀಕ್ಷಿಸಿದಾಗ ಮಾತ್ರ ಆ ಕಲೆಯನ್ನು ಕರಗತ ಮಾಡಿಕೊಳ್ಳಲು ಸಾಧ್ಯ. ಭಗವಂತ ಮನುಷ್ಯನಿಗೆ ಕಾಲುಗಳನ್ನು ಕೊಟ್ಟಿದ್ದಾನೆ ಎಂದು ಬರೀ ನಡೆಯದೇ ಎಲ್ಲಿ ನಿಲ್ಲಬೇಕು ಎನ್ನುವುದನ್ನು ತಿಳಿದು ಕೊಂಡರೆ ವಕೀಲಿ ವೃತ್ತಿಯಲ್ಲಿ ಪಾಟೀಸವಾಲು ಮಾಡುವ ಕಲೆ ಕರಗತವಾಯಿತು ಎಂದು ತಿಳಿಯಬೇಕು. ಈ ಮಾತು ಕ್ರಿಮಿನಲ್ ಮೊಕದ್ದಮೆಗಳಿಗೆ ವಿಶೇಷವಾಗಿ ಇಂದಿನ ಯುವಪೀಳಿಗೆಗೆ ಬೇಕಾದ ಸಂಗತಿಯೆಂದು ನಾನು ಭಾವಿಸುತ್ತೇನೆ.

ವಾದವನ್ನು ಮಾಡುವ ಮೊದಲು ಕಕ್ಷಿಗಾರನೊಂದಿಗೆ ಮಾತನಾಡಿದ ಫೀಸನ್ನು ಪಡೆಯಬೇಕು. ವಾದವನ್ನು ಮಂಡಿಸಿದ ಮೇಲೆ ಫೀಜ್ ಬರುತ್ತದೆಯೋ ಇಲ್ಲವೋ ಎನ್ನುವ ವಿಚಾರವನ್ನು ತಲೆಯಲ್ಲಿ ಇಟ್ಟುಕೊಂಡು ಎಂದೂ ವಾದವನ್ನು ಮಂಡಿಸ ಬಾರದು. ಒಂದು ವೇಳೆ ಹಾಗೆ ಮಾಡಿದರೆ ಅಥವಾ ವಾದದಲ್ಲಿ ಬಲ ಕಡಿಮೆಯಾಗಿ ಸೋಲುವ ಸಾಧ್ಯತೆಗಳೇ ಬಹಳ. ವಾದ ಮಂಡನೆ, ಮಂಡಿಸಿದ ವ್ಯಕ್ತಿಗೆ ಹಾಗೂ ನ್ಯಾಯಾಧೀಶರಿಗೆ ಮಾತ್ರ ತಿಳಿಯುವಂತಿರಬೇಕು. ಆದರೆ ಎದುರುದಾರ ವಕೀಲರಿಗೆ ತಿಳಿಯದಂತಿರಬೇಕು ಎನ್ನುವ ಜಾಣತನವು ವಕೀಲರಿಗೆ ಬೇಕಾಗುತ್ತದೆ. ಏಕೆಂದರೆ ವಾದಮಂಡನೆ ಎದುರುದಾರ ವಕೀಲರಿಗೆ ತಿಳಿದರೆ ಅವರೂ ಸಹ ಗೆಲ್ಲುವ ಸಾಧ್ಯತೆಗಳು ಹೆಚ್ಚು.

ಸಿವಿಲ್ ಹಾಗೂ ಕ್ರಿಮಿನಲ್ ಅಥವಾ ಮತ್ತಾವುದೇ ಕ್ಷೇತ್ರಗಳಲ್ಲಿ ಕೃಷಿಗೈಯುವ ಬದಲು ಒಂದು ಕ್ಷೇತ್ರವನ್ನು ಆರಿಸಿಕೊಂಡರೆ ಪರಿಶ್ರಮಗೈದು ಪರಿಣಿತಿ ಸಾಧಿಸಿದರೆ ಹಣವೂ ಬರುತ್ತದೆ, ಜೊತೆಯಲ್ಲಿ ಹೆಸರೂ ಪ್ರಸಿದ್ಧಿಗೊಳ್ಳುತ್ತದೆ. ಹೆಸರು ಪ್ರಸಿದ್ಧಿಗೊಂಡ ಮೇಲೆ ತಮಗೆ ಪ್ರತೀ ತಿಂಗಳಿಗೆ ಅಥವಾ ವರ್ಷಕ್ಕೆ ಎಷ್ಟು ಹಣ ಬರಬೇಕೆಂದು ಆಶಿಸುತ್ತೀರೋ ಅದಕ್ಕಿಂತಲೂ ಹೆಚ್ಚೇ ಬರುತ್ತದೆ. ಹಾಗೂ ಕಕ್ಷಿಗಾರರಿಗೆ ಆ ಕ್ಷೇತ್ರದಲ್ಲಿ ಸರಿಯಾದ ನ್ಯಾಯದಾನವನ್ನು ಮಾಡಲು ತಮ್ಮಿಂದ ಸಾಧ್ಯವಾಗುವುದು.

ವಕೀಲರಾದವರಿಗೆ ಬರೀ ಕಾನೂನಿನ ಜ್ಞಾನವಷ್ಟೇ ಇದ್ದರೆ ಸಾಲದು, ದೈನಂದಿನ ಜೀವನಕ್ಕೆ ಬೇಕಾದ ಅನುಭವಗಳನ್ನು ಸಹ ಅವರು ಹೊಂದಿರಬೇಕಾಗುತ್ತದೆ. ಯುವ ವಕೀಲರಲ್ಲಿ ಹಿರಿಯ ವಕೀಲರಲ್ಲಿ ಇರುವಷ್ಟು ಅನುಭವದ ಕೊರತೆ ಇರುತ್ತದೆ. ಕಾರಣ ಅದನ್ನು ತುಂಬಿಕೊಳ್ಳಲು ಸಾಹಿತ್ಯದ ಗರ್ಭದಲ್ಲಿ ಅಡಗಿದ ಇಡೀ ಪ್ರಪಂಚದ ಅನುಭವಗಳನ್ನು ಬಗೆದು ಮುತ್ತು ರತ್ನಗಳನ್ನು ಆರಿಸಿ ತಮ್ಮ ಬೌದ್ಧಿಕತೆ ಅಥವಾ

ವೈಚಾರಿಕತೆಗಳನ್ನು ಬೆಳೆಯಿಸಿಕೊಳ್ಳುವುದು ಒಳ್ಳೆಯದು. ಉದಾಹರಣೆಗೆ ಉತ್ತರಕನ್ನಡ ಜಿಲ್ಲೆಯ ಅಂಕೋಲೆಯ ಸಾಹಿತಿಗಳಾದ ಶ್ರೀ ಶ್ಯಾಮ ಉದ್ದಾರ್ ಅವರು ತಮ್ಮ ತ್ರಿಪದಿ ಒಂದರಲ್ಲಿ ಹೀಗೆ ಬರೆಯುತ್ತಾರೆ -

''ಹಾಡುಹಗಲೇ ಕೊಲೆಯಾದದ್ದನ್ನು
ಏನಾಗಿದೆ ಎಂದು ಹಡ್ಡಿ ನೋಡಿದರೆ
ಸ್ಥಳದಲ್ಲಿ ನ್ಯಾಯವೇ ಸತ್ತಿತ್ತು...''

ಇಡೀ ನ್ಯಾಯಾಂಗದ ಕಣ್ಣು ತೆರೆಸುವಂತಹ ತ್ರಿಪದಿ ಇದಲ್ಲವೇ. ಒಬ್ಬ ಸಾಹಿತಿ ನ್ಯಾಯಾಂಗವನ್ನು ಎಷ್ಟು ಕೂಲಂಕಷವಾಗಿ ಗಮನಿಸಿ ಕಟುವಾಗಿ ಟೀಕಿಸುತ್ತಾನೆ ಎನ್ನುವುದಕ್ಕೆ ಇದು ಜೀವಂತ ನಿದರ್ಶನ. ಈ ಮಾತಿನಿಂದ ನ್ಯಾಯವಾದಿಗಳು ಎಚ್ಚೆತ್ತು ನ್ಯಾಯದಾನದ ಕೊಲೆಯಾಗದಂತೆ ನೋಡಿಕೊಳ್ಳುವ ಹೊಣೆಯ ಬಗ್ಗೆ ಚಿಂತನೆಗೆಡೆ ಮಾಡಿಕೊಡುವ ಉದಾತ್ತ ನುಡಿಯು ಇದು ಎಂದು ನಾನು ನಮ್ರವಾಗಿ ಭಾವಿಸಿದ್ದೇನೆ.

ಅದೇ ರೀತಿ ನ್ಯಾಯವಾದಿಗಳು ಪ್ರಾಚೀನ ನುಡಿಗಟ್ಟುಗಳನ್ನು, ಗಾದೆ ಮಾತುಗಳನ್ನು, ಕಾನೂನಿನ ತತ್ವಗಳನ್ನು ಮತ್ತು ನ್ಯಾಯದಾನದ ತತ್ವಗಳನ್ನು ಪ್ರಾಮಾಣಿಕವಾಗಿ ಅಭ್ಯಾಸ ಮಾಡಬೇಕು. ಅಷ್ಟೇ ಅಲ್ಲ ಅವುಗಳ ಬಗ್ಗೆ ಮನನ ಮಾಡಿಕೊಂಡಾಗ ಸರಿಯಾದ ನ್ಯಾಯದಾನ ಸಾಧ್ಯ.

(ಅವುಗಳನ್ನು ಈ ಪುಸ್ತಕದ ಕೊನೆಯಲ್ಲಿ ಕೊಡಲಾಗಿದೆ.)

★★★★

ನ್ಯಾಯಾದಾನ - ಒಂದು ಚಿಂತನೆ

''ನ್ಯಾಯದಾನ ನಿಜಕ್ಕೂ ಆಸಕ್ತಿ ಹುಟ್ಟಿಸುವ ವಿಷಯ. ಕಾನೂನಿನ ಅರಿವು - ನೆರವು ಒಂದು ಕಾರ್ಯಕ್ರಮದಲ್ಲಿ ಒಬ್ಬ ಸಾಮಾನ್ಯ ರೈತ - ''ದೇವನೊಬ್ಬ ನಾಮ ಹಲವು ಎಂದಾದರೆ ಕಾನೂನು ಒಂದಾದರೆ - ಒಂದೇ ವ್ಯಾಜ್ಯ ಬೇರೆಬೇರೆ ನ್ಯಾಯಾಧೀಶರಲ್ಲಿ ವಿಚಾರಣೆಯಾದರೆ ಬೇರೆಬೇರೆ ನಿರ್ಣಯಗಳು ಬರುವುದು ಯಾತಕ್ಕೆ ?'' ಎಂದು ಪ್ರಶ್ನಿಸಿದ. ಅಂದರೆ ನ್ಯಾಯದಾನದ ಬಗ್ಗೆ ರೈತರ ಚಿಂತನೆಯು ಸಹಾ ಅಷ್ಟು ಎತ್ತರಮಟ್ಟದ್ದು ಆಗಿತ್ತು ಎನ್ನುವುದು ಚಿಂತನೆ ಮಾಡುವಂತಹ ವಿಷಯ. ಒಬ್ಬ ರೈತ ವಿಷಯವನ್ನು ಅಷ್ಟರಮಟ್ಟಿಗೆ ಚಿಂತನೆಗೈದ ಮೇಲೆ ನಾವು ನೀವುಗಳು ನ್ಯಾಯದಾನದ ಬಗ್ಗೆ ಚಿಂತನೆಗೈಯುವುದು ಅನಿವಾರ್ಯವಲ್ಲವೆ ?

ಒಂದು ಕೃತ್ಯ ಅಥವಾ ತಪ್ಪು ಕ್ರಿಮಿನಲ್ ಮತ್ತು ಸಿವಿಲ್ ವ್ಯಾಜ್ಯಗಳಿಗೆ ಎಡೆ ಮಾಡಿಕೊಡುತ್ತದೆ. ಕ್ರಿಮಿನಲ್ ಇರಲಿ, ಸಿವಿಲ್ ಇರಲಿ ಆ ಕೃತ್ಯಗಳು ಜರುಗುವಾಗ ಕ್ರಿಮಿನಲ್ ವ್ಯಾಜ್ಯದಲ್ಲಿ (Right of private defence) ಸ್ವಸಂರಕ್ಷಣೆಯ ಹಕ್ಕಿನಂತೆ ಒಬ್ಬನು ತನ್ನನ್ನು ಕೊಲ್ಲಲು ಬಂದರೆ ಎದುರಾಗಿ ನಿಮ್ಮ ರಕ್ಷಣೆಯ ಕ್ರಿಯೆಯಲ್ಲಿ ತಾವು ಅವನನ್ನು ಗಾಯಗೊಳಿಸಿದರೂ ಅದು ಅಪರಾಧವಾಗುವುದಿಲ್ಲ. ಸಿವಿಲ್ ಕೃತ್ಯಗಳಲ್ಲಿ ಜರುಗುವಂತಹ ಅತಿಕ್ರಮಣ ಪೂರ್ತಿಯಾಗಿರದ ಪಕ್ಷದಲ್ಲಿ ಅಂದರೆ ಅತಿಕ್ರಮಣ ವಾಗುತ್ತಿರುವ ಹಂತದಲ್ಲಿ ಅದನ್ನು ಆಗದಂತೆ ತಡೆಯಲು ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ತಾವು ಹಕ್ಕುಳ್ಳವರು ಆಗಿರುತ್ತೀರಿ. ತಮಗೆ ಸದರಿ ಅತಿಕ್ರಮಣವನ್ನು ತಡೆಯಲು (ಸಮರ್ಥರು) ಆಗಿರದೇ ಇದ್ದರೆ ಅಥವಾ ಒಂದು ವೇಳೆ ಅತಿಕ್ರಮಣ ಪೂರ್ತಿಯಾದರೆ - ಆಗ ಮಾತ್ರ ತಾವು ನ್ಯಾಯಾಲಯಕ್ಕೆ ಬಂದು ತಮ್ಮ ಸ್ವತ್ತುಗಳನ್ನು ಮರಳಿ ಪಡೆಯಬೇಕಾಗುತ್ತದೆ. ಎಷ್ಟೋ ಮುಗ್ಧ ಜನ ತಮ್ಮ ಈ ಹಕ್ಕಿನ ಬಗ್ಗೆ ಸರಿಯಾಗಿ ತಿಳುವಳಿಕೆಯಿಲ್ಲದ ಕಾರಣ - ಅತಿಕ್ರಮಣವನ್ನು ತಾವೇ ಸ್ವತಃ ತಡೆಯದೆ ನ್ಯಾಯಾಲಯದ ಕಟ್ಟೆಯನ್ನು ಏರಿ ಬಿಡುತ್ತಾರೆ.

ಕ್ರಿಮಿನಲ್ ಕೇಸಿನಲ್ಲಿ ಆದ ಅಪರಾಧವನ್ನು ಸಮಾಜದ ವಿರುದ್ಧ ಕೃತ್ಯವೆಂದು ಭಾವಿಸಿ ಶಿಕ್ಷೆಗಳನ್ನು ವಿಧಿಸಲಾಗುತ್ತದೆ. ಆದರೆ ವಿಪರ್ಯಾಸದ ಸಂಗತಿ ಎಂದರೆ ನೂರು ಜನ ಇದ್ದ ಪಕ್ಷದಲ್ಲಿ ಹಾಗೂ ಅವರಲ್ಲಿ ಒಬ್ಬನ ಕೊಲೆಯಾಗಿದ್ದ ಪಕ್ಷದಲ್ಲಿ ೯೯ ಜನ ಉಳಿಯುವುದು ಸತ್ಯ. ಅದೇ ರೀತಿ ಕೊಲೆ ಮಾಡಿದವನು ಬಿಡುಗಡೆಯಾಗುವುದು

ಸಹ ಸತ್ಯ. ಇದು ಹೇಗೆ ? ಇಂತಹ ಸಂಗತಿಗಳು ಚಿಂತನೆಗೆ ಎಡೆಮಾಡಿಬಿಡುತ್ತವೆ. ಈಗಾಗಲೇ ಹೇಳಿದ ರೀತಿ ಕ್ರಿಮಿನಲ್ ಕೇಸುಗಳಲ್ಲಿ ನಿಸ್ಸಂದೇಹವಾಗಿ ಅಪರಾಧವನ್ನು ಸಿದ್ಧ ಮಾಡುವಲ್ಲಿ ಅಭಿಯೋಜನೆ ವಿಫಲವಾಗುವುದು ಒಂದು ಸಂಗತಿಯಾಗಿದ್ದರೆ, ನ್ಯಾಯಾಲಯಗಳು ಭಾರತ ಸಾಕ್ಷ್ಯ ಅಧಿನಿಯಮದ ಕಾನೂನಿನಡಿಯಲ್ಲಿ ಸುಸಂಗತ ಎಂದು ಘೋಷಿಸಿದ ಹಾಗೂ ಕಲಂ ೧೬೫ರ ಪ್ರಕಾರ ಕಾನೂನು ರೀತ್ಯಾ ಸಿದ್ಧವಾದ ಸಂಗತಿಗಳನ್ನು ಮಾತ್ರ ಆಧರಿಸಿ ನಿರ್ಣಯಗಳನ್ನು ಕೊಡಬೇಕಾಗುತ್ತದೆ. ನ್ಯಾಯಾಧೀಶರ ವೈಯಕ್ತಿಕ ಜ್ಞಾನವನ್ನು ಅಂತಹ ನಿರ್ಣಯಗಳಲ್ಲಿ ತರಲಾಗುವುದಿಲ್ಲ. ಈ ತತ್ವ ಸಿವಿಲ್ ವ್ಯಾಜ್ಯಗಳಿಗೂ ಸಹ ಅನ್ವಯಿಸುತ್ತದೆ. ಇನ್ನು ಸಿವಿಲ್ ವ್ಯಾಜ್ಯದಲ್ಲಿ ಪಕ್ಕದವರು ಅತಿಕ್ರಮಿಸಿ ತಮ್ಮ (ಸೈಟಿನಲ್ಲಿ) ಸ್ವತ್ತಿನಲ್ಲಿ ಕಟ್ಟಡವನ್ನು ಕಟ್ಟುವುದು ಸತ್ಯ - ಅದನ್ನು ನ್ಯಾಯಾಲಯಗಳು ಕೆಡವದೇ ಇರುವುದು ಸಹಾ ಸತ್ಯ. ಕಾರಣ ಮನೆ ಅಥವಾ ಕಟ್ಟಡದ ಕಾರ್ಯ ನಡೆಯುವಾಗ ತಾವು ತಕರಾರು ಮಾಡದೇ ಇರುವಂತಹ ತಮ್ಮ ನಡವಳಿಕೆಯೇ ನ್ಯಾಯದಾನದ ಪ್ರಕ್ರಿಯೆಯಲ್ಲಿ ತಮಗೇ ಮುಳುವಾಗಿ ಹಾಗೂ ಅಡೆ ತಡೆಯಾಗಿ ತಾವುಗಳು ನ್ಯಾಯವನ್ನು ದೊರಕಿಸಿಕೊಳ್ಳುವಲ್ಲಿ ಜಯವನ್ನು ಗಳಿಸದೇ ಇರುವಂತೆ ಮಾಡಿಬಿಡುತ್ತವೆ.

ಕ್ರಿಮಿನಲ್ ಕೇಸುಗಳಲ್ಲಿ ಸ್ವರಕ್ಷಣೆ ಮಾಡಿಕೊಳ್ಳಲು ಆಗದೇ ಇದ್ದರೂ ಹಾಗೂ ಸಿವಿಲ್ ವ್ಯಾಜ್ಯಗಳಲ್ಲಿ ಅತಿಕ್ರಮಣವನ್ನು ತಡೆಯಲು ಆಗದೇ ಇದ್ದರೂ ಸಹಾ, ಪರ್ಯಾಯವಾಗಿ ಅತಿಕ್ರಮವಾಗಿದ್ದ ಪಕ್ಷದಲ್ಲಿ ಪರಿಹಾರ ರೂಪದ ದಂಡ ಹಾಗೂ ಪರಿಹಾರವನ್ನು (ಹಣವನ್ನು) ಪಡೆಯಲು ತಾವುಗಳು ಹಕ್ಕುಳ್ಳವರು ಆಗಿರುತ್ತೀರಿ. (Justice desert or due is the latest concent in administration of justice). ಅಂದರೆ ತಮಗೆ ಬರಬೇಕಾದ ಅಥವಾ ಸೇರಲೇಬೇಕಾದ ಅಥವಾ ಕೊಡಲೇಬೇಕಾದದ್ದನ್ನು ಕೊಡಲೇ ಬೇಕು ಎಂಬುದೇ ಇದರ ಅರ್ಥ. ಇಂತಹ ಪರಿಹಾರಗಳನ್ನು ಕೊಡದೇ ಇದ್ದ ಪಕ್ಷದಲ್ಲಿ ನ್ಯಾಯದಾನದ ಶಬ್ದಕ್ಕೆ ಮತ್ತು ನ್ಯಾಯಾಲಯಗಳ ಅಸ್ತಿತ್ವಕ್ಕೆ ಯಾವ ಬೆಲೆಯೂ ಇರುವುದಿಲ್ಲ. ತಮಗೆ ಅಂತಹ ಪರಿಹಾರಗಳನ್ನು ದೊರಕಿಸುವ ಪ್ರಕ್ರಿಯೆಯಲ್ಲಿ ನ್ಯಾಯವಾದಿಗಳು ನ್ಯಾಯಾಲಯಗಳಿಗೆ ಸಹಾಯ ಮಾಡಬೇಕೇ ವಿನಃ ಅಡೆತಡೆಗಳನ್ನು ನಿರ್ಮಾಣ ಮಾಡುವುದೊಂದೇ ತಮ್ಮ ವೃತ್ತಿ ಎಂದು ತಿಳಿಯಬಾರದು. ಮಹಾತ್ಮಾ ಗಾಂಧೀಜಿಯವರು ಹೇಳಿದ ರೀತಿ ಸತ್ಯದ ಮಂಡನೆ ವಕೀಲರ ಪ್ರಥಮ ಕರ್ತವ್ಯ ಹಾಗೂ ಸಂಭಾವನೆಯ ಪ್ರಶ್ನೆ ಎರಡನೆಯದು ಎನ್ನುವುದನ್ನು ವಕೀಲ ಬಾಂಧವರು ಎಂದೂ ಮರೆಯಬಾರದು. ಅಂತಹ ಸತ್ಯದ ಪ್ರತಿಪಾದನೆ ವಕೀಲರಿಂದ ಸಾಧ್ಯವಾಗುವುದು, ಅವರುಗಳು ವಕೀಲಿ ವೃತ್ತಿಗೆ ಬೇಕಾದಂತಹ ಕಾನೂನು ಪದವಿಯನ್ನು ಪಡೆದ ಮೇಲೆ ಸನ್ನದನ್ನು ಸ್ವೀಕರಿಸುವಾಗ ಸ್ವೀಕರಿಸಿದ ಪ್ರಮಾಣವಚನವನ್ನು ಸದಾ ತಮ್ಮ ಕಣ್ಣೆದುರಿಗೆ ಕಾಣುವಂತೆ

ಇಟ್ಟುಕೊಂಡಾಗ ಹಾಗೂ ಆ ಪ್ರಮಾಣವಚನವನ್ನು ಪ್ರಮಾಣಪೂರ್ವಕವಾಗಿ ಆಚರಿಸಿದಾಗ ಮಾತ್ರ ಸಾಧ್ಯ. ಅಷ್ಟೇ ಅಲ್ಲ ವ್ಯಷ್ಟಿ-ಸಮಷ್ಟಿಗಳ ತತ್ವಗಳನ್ನು ಸಮನ್ವಯ ರೀತಿಯಲ್ಲಿ ನೋಡಿದಾಗ ಮಾತ್ರ ಸಾಧ್ಯ. ಬೇರೆ ಭಾಷೆಯಲ್ಲಿ ಹೇಳುವುದಾದರೆ ಉದಾತ್ತ ವೃತ್ತಿಯ ಉದಾತ್ತತೆಯನ್ನು ಉಳಿಸಿ ಬೆಳೆಸುವ ಮಹತ್ವದ ಹೊಣೆ ಸರ್ವೋಚ್ಚ ನ್ಯಾಯಾಲಯದಿಂದ, ನ್ಯಾಯಾಲಯದ ಅಧಿಕಾರಿಗಳು ಎನಿಸಿಕೊಂಡವರ ಮೇಲೆ ಇದೆ. ಅಂದರೆ ವಕೀಲರ ಮೇಲೆ.

ನ್ಯಾಯಾಲಯದಲ್ಲಿಯೂ ಸಹಾ ನ್ಯಾಯಾಂಗಕ್ಕೆ ಬಂದಂತಹ ಕಕ್ಷಿಗಾರರು ಮತ್ತು ಸಾಕ್ಷಿಗಳಿಗೆ ಸತ್ಯವನ್ನು ಹೇಳುವಂತೆ ಪ್ರೇರೇಪಿಸುವ ಶರಣರ, ಸಂತರ ನುಡಿಗಳನ್ನು ತೂಗು ಹಾಕುವುದು ಸೂಕ್ತವೆನಿಸುತ್ತದೆ. ಉದಾ. :

"ಕಳಬೇಡ ಕೊಲಬೇಡ

ಹುಸಿಯ ನುಡಿಯಲು ಬೇಡ...."

ನ್ಯಾಯದೇವತೆ ಕಣ್ಣಿಗೆ ಕಪ್ಪುಬಟ್ಟೆಯನ್ನು ಕಟ್ಟಿದ ಮಾತ್ರಕ್ಕೆ ಏನು ಎಲ್ಲ ಸುಳ್ಳುಗಳನ್ನು ಹೇಳಿದರೆ ನಡೆಯುತ್ತದೆ ಎಂದು ಸಾರ್ವಜನಿಕರು ಖಂಡಿತ ಭಾವಿಸಬಾರದು. ಸತ್ಯಾನ್ವೇಷಣೆಯ ಕಾಯಕದಲ್ಲಿ ನ್ಯಾಯಾಧೀಶರುಗಳು ಯಾರನ್ನೂ ನೋಡಬಾರದು (ಬಂಧು-ಬಳಗವನ್ನು ಹಾಗೂ ಹೆತ್ತ ಮಕ್ಕಳನ್ನೂ ಸಹ) ಎನ್ನುವ ತತ್ವದ ಸಂಕೇತವನ್ನಾಗಿ ಮಾತ್ರ ಅದನ್ನು ಅಲ್ಲಿ ಕಟ್ಟಲಾಗಿದೆ..

ನ್ಯಾಯಾಲಯದಲ್ಲಿ ವಿಳಂಬ :

ಇದು ಖಂಡಿತ ನ್ಯಾಯಾಧೀಶರುಗಳ ಅಥವಾ ನ್ಯಾಯಾಲಯದ ಸಿಬ್ಬಂದಿ ವರ್ಗದ ಲೋಪಗಳಿಂದ ಆಗುವುದಿಲ್ಲ. ಹೆಚ್ಚುತ್ತಿರುವ ಜನಸಂಖ್ಯೆಯ ಪರಿಣಾಮವಾಗಿ ಹೆಚ್ಚುಹೆಚ್ಚು ವ್ಯಾಜ್ಯಗಳು ಇತ್ತೀಚಿನ ದಿನಗಳಲ್ಲಿ ನ್ಯಾಯಾಲಯಗಳಿಗೆ ಬರುತ್ತಿವೆ. ಸದರಿ ವ್ಯಾಜ್ಯಗಳ ಅಂಕಿ-ಸಂಖ್ಯೆಗೆ ಅನುಗುಣವಾಗಿ ಕ್ರಿಮಿನಲ್ ಕೇಸುಗಳಲ್ಲಿ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಿದಂತೆ ಸಿವಿಲ್ ವ್ಯಾಜ್ಯಗಳನ್ನು ನಡೆಸಲು ಸಹಾ ಹೆಚ್ಚಿನ ಸಂಖ್ಯೆಯಲ್ಲಿ ನ್ಯಾಯಾಧೀಶರನ್ನು ನೇಮಕಾತಿ ಮಾಡಿಕೊಂಡಾಗ ಮಾತ್ರ ವಿಳಂಬವನ್ನು ತೊಡೆದು ಹಾಕಬಹುದು. ಆದರೆ ಈ ಕಾರ್ಯ ಘನಸರ್ಕಾರದಿಂದ ಆಗುವಂತಹುದು. ವ್ಯಾಜ್ಯಗಳ ತ್ವರಿತ ನಿರ್ಣಯಕ್ಕೆ ಪ್ರಾಮಾಣಿಕವಾಗಿ ವಕೀಲರುಗಳು ಸಹಕರಿಸಿದಾಗ ಮಾತ್ರ ವ್ಯಾಜ್ಯಗಳನ್ನು ಮುಗಿಸುವುದು ಸಾಧ್ಯ. ಕಾರಣವೆಂದರೆ ವಕೀಲರುಗಳು ಮಾಡಬೇಕಾದ ಕಾರ್ಯಗಳನ್ನು ಸಹಾ ನ್ಯಾಯಾಧೀಶರೇ ಮಾಡಲು ಬರುವಂತಿಲ್ಲ. ಆದ್ದರಿಂದ ವಕೀಲರುಗಳು ಸಹಕರಿಸುತ್ತೇವೆಂದು ಕೇವಲ ಬಾಯಿಮಾತಿನಲ್ಲಿ ಹೇಳಿದರೆ

ಸಾಲದು, ಅದು ಕೃತಿರೂಪದಲ್ಲಿ ಬರಬೇಕು. ಅಂದಾಗ ಮಾತ್ರ ತ್ವರಿತ ನಿರ್ಣಯಗಳನ್ನು ಸಾರ್ವಜನಿಕರು ಆಶಿಸಬಹುದು. ಒಂದು ವೇಳೆ ವಕೀಲರು ಭರವಸೆಯನ್ನು ಕೊಟ್ಟಂತೆ ನಿಜವಾಗಿಯೂ ಸಹಕರಿಸಿದರೆ ಇಷ್ಟು ವ್ಯಾಜ್ಯಗಳು ಯಾಕೆ ಉಳಿಯುತ್ತಿದ್ದವು ಎನ್ನುವುದು ಸಹಾ ಚಿಂತನೆಯ ವಿಷಯವಾಗುತ್ತದೆ. ಮತ್ತೊಂದು ಮೂಲಭೂತ ಪ್ರಶ್ನೆ ಎಂದರೆ ವ್ಯಾಜ್ಯಗಳು ಕೆಲವೇ ವಕೀಲರುಗಳ ಕಛೇರಿಗಳಿಗೆ ಸೀಮಿತವಾಗಿ ಬಿಟ್ಟಿರುತ್ತವೆ. ಅಂತಹ ವಕೀಲರುಗಳು ಒಂದೇ ವೇಳೆಗೆ ಎಲ್ಲ ನ್ಯಾಯಾಲಯಗಳಲ್ಲಿ ಶ್ರೀಕೃಷ್ಣ ಪರಮಾತ್ಮನಂತೆ ದರ್ಶನವಾಗಿ ವ್ಯಾಜ್ಯಗಳನ್ನು ವಾಸ್ತವವಾಗಿ ನಡೆಸಲು ಸಾಧ್ಯವಾಗುವುದಿಲ್ಲ.

ನ್ಯಾಯಾಲಯಗಳು ಅಥವಾ ನ್ಯಾಯಾಧೀಶರು ಮತ್ತು ನ್ಯಾಯವಾದಿಗಳು ಒಂದೇ ರಥದ ಎರಡು ಚಕ್ರಗಳು ಎಂದು ಹೇಳುವ ಪರಿಪಾಠ ಬಹಳ ದಿನಗಳಿಂದಲೂ ನಡೆದುಬಂದಿದೆ. ಆದರೆ ಇತ್ತೀಚಿನ ದಿನಗಳಲ್ಲಿ ನ್ಯಾಯಾಲಯದ ಪ್ರಕ್ರಿಯೆಗಳನ್ನು ನೋಡಿದಾಗ ಈ ನ್ಯಾಯಾಂಗದ ಪ್ರಕ್ರಿಯೆಗೆ ರಥದ ಎರಡು ಚಕ್ರಗಳಿಗೆ ಹೋಲಿಸುವ ಬದಲು ೩ ಕಾಲುಗಳುಳ್ಳ ಒಂದು ಪೀಠಕ್ಕೆ ಹೋಲಿಸಬಹುದು. ಅದರ ಒಂದು ಕಾಲು ನ್ಯಾಯಾಧೀಶರು, ಅದರ ಇನ್ನೊಂದು ಕಾಲು ವಕೀಲರುಗಳಾದರೆ ಮತ್ತೊಂದು ಕಾಲು ಕಕ್ಷಿಗಾರರು ಅಥವಾ ಸಾಕ್ಷಿಗಳು ಎಂದು ಹೇಳಬಹುದು. ಈ ಗುಂಪಿನಲ್ಲಿ ಬರುವ ಜನಸಮೂಹದ ಅನೇಕ ಜನರು ಇರಬಹುದು, ಪೊಲೀಸ್ ಅಧಿಕಾರಿಗಳು ಆಗಿರಬಹುದು, ವೈದ್ಯರು ಆಗಿರಬಹುದು ಅಥವಾ ಯಾವುದೇ ಕ್ಷೇತ್ರದಲ್ಲಿ ಪರಿಣತಿ ಹೊಂದಿದಂತಹ ವ್ಯಕ್ತಿಗಳು ಆಗಿರಬಹುದು. ಅವರುಗಳ ಹಾಜರಾತಿಯಲ್ಲಿ ವಿಳಂಬವಾಗುವುದರಿಂದ ನ್ಯಾಯಾಲಯದ ವ್ಯಾಜ್ಯಗಳಲ್ಲಿ ವಿಳಂಬವಾಗುವುದು ಸಹಜ.

ಕೃತ್ಯಕ್ಕೆ ಒಳಗಾದ ಬಲಿಪಶುವೇ ತಾನಾದರೂ ಸಹಾ ಎಷ್ಟೋ ಸಾರಿ ಅಂತಹವರು ನ್ಯಾಯಾಲಯದ ಮುಂದೆ ನಿರ್ಭಿಡೆಯಿಂದ ಪ್ರಮಾಣವಚನಗಳನ್ನು ಸ್ವೀಕರಿಸಿ ತಾವುಗಳು ಅಪರಾಧಿಗಳನ್ನು ನೋಡುತ್ತಿರುವುದು ಇಂದೇ ಪ್ರಥಮ ಅಥವಾ ಅಪರಾಧಿ ತಮ್ಮ ಮೇಲೆ ಯಾವುದೇ ಕೃತ್ಯವನ್ನು ಎಸಗಿಲ್ಲವೆಂದು ಹೇಳುವಂತಹ ಕಕ್ಷಿಗಾರರಿಗೆ ನಮ್ಮಲ್ಲಿ ಕೊರತೆ ಇಲ್ಲ. ಈ ನಿಟ್ಟಿನಲ್ಲಿ ಅಪಹರಣ ಮತ್ತು ಅತ್ಯಾಚಾರಕ್ಕೆ ಒಳಗಾದ ಸ್ತ್ರೀಯರು ಸಹಾ ತಾವುಗಳು ಅಪರಾಧಿಗಳನ್ನು ನೋಡಿಯೇ ಇಲ್ಲ ಮತ್ತು ಅವರುಗಳು ಏನನ್ನೂ ಮಾಡಿಯೇ ಇಲ್ಲವೆಂದು ಹೇಳುವಲ್ಲಿ ತಾವುಗಳು ಏನೂ ಕಡಿಮೆ ಇಲ್ಲವೆಂದು ಈಗಾಗಲೇ ತೋರಿಸಿಕೊಟ್ಟಿದ್ದಾರೆ. ಪುರುಷರಾಗಲೀ ಸ್ತ್ರೀಯರಾಗಲೀ ಒಂದು ವೇಳೆ ತಾವುಗಳು ಅಂತಹ ಮನೋಭಾವನೆಯನ್ನು ಹೊಂದಿದ್ದರೆ ವ್ಯಾಜ್ಯಗಳನ್ನು ದಾಖಲೆ ಮಾಡದೇ ಇದ್ದರೆ ಸರಕಾರದ ಅಮೂಲ್ಯವಾದ ತನಿಖೆಯ ವೇಳೆ ಮತ್ತು ಪೋಲು ಆಗುವ ಹಣ ಮತ್ತು ನ್ಯಾಯಾಲಯಗಳ ಅತ್ಯಮೂಲ್ಯ ವೇಳೆಯನ್ನು ಉಳಿಸಿ ಉಪಕಾರ

ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪೊಲೀಸ್ ಅಧಿಕಾರಿಗಳಿಗೆ ಒಂದು ವೇಳೆ ಪ್ರಾಮಾಣಿಕವಾಗಿ ತನಿಖೆಯನ್ನು ಮಾಡಿದಂತಹ ಅಧಿಕಾರಿಗಳಿಗೆ ಇಂತಹ ಕಕ್ಷಿಗಾರರ ನಡವಳಿಕೆಗಳಿಂದ ಭ್ರಮನಿರಸನವಾಗುವುದು ಖಂಡಿತ. ಇಂತಹ ನಡವಳಿಕೆಗಳಿಂದ ಬೇಸತ್ತ ಪೊಲೀಸ್ ಅಧಿಕಾರಿಗಳು ಮಹತ್ವದ ವ್ಯಾಜ್ಯಗಳಲ್ಲಿಯೂ ಸಹಾ ಅಷ್ಟಾಗಿ ಆಸಕ್ತಿಯನ್ನು ತೋರಿಸದೇ ಇರುವಂತಹ ಮನೋಭಾವಕ್ಕೆ ಎಡೆಮಾಡಿಕೊಡುತ್ತದೆ. ಇನ್ನು ಸಾಕ್ಷಿಗಳು ಸಹಾ ಮುಖ್ಯ ವಿಚಾರಣೆಯಲ್ಲಿ ಕೃತ್ಯವನ್ನು ನೋಡಿದ್ದೇವೆಂದು ಹೇಳಿ ಪಾಟೀಸವಾಲಿನ ವೇಳೆಯಲ್ಲಿ ಎದುರುದಾರ ವಕೀಲರು ನೀನು ಕೃತ್ಯವನ್ನು ನೋಡಿಲ್ಲವಲ್ಲವೇ ಎಂದು ಕೇಳಿದ ಪ್ರಶ್ನೆಗೆ ಹೌದು ಸ್ವಾಮಿ ನಾನು ನೋಡಿಲ್ಲವೆಂದು ಹೇಳುವಂತಹ ಸಾಕ್ಷಿಗಳು ಹೇರಳವಾಗಿಬಿಟ್ಟಿವೆ. ಇಂತಹ ಸುಳ್ಳುಸಾಕ್ಷಿಯನ್ನು ನುಡಿಯುವ ಸಾಕ್ಷಿಗಳಿಗೆ ಸುಳ್ಳುಸಾಕ್ಷ್ಯ ರುಜುವಾತಾದ ಪಕ್ಷದಲ್ಲಿ ಹೆಚ್ಚಿನ ದಂಡವನ್ನು ವಿಧಿಸುವಂತೆ ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ವಿ.ಎಸ್. ಮಳೀಮಠರವರು (Reforms of Criminal Justice System) ಕ್ರಿಮಿನಲ್ ವ್ಯಾಜ್ಯಗಳಲ್ಲಿ ನ್ಯಾಯದಾನ ಕೊಡುವಲ್ಲಿ ರಾಷ್ಟ್ರೀಯ ಸಮಿತಿಯ ಅಧ್ಯಕ್ಷರಾಗಿ ಅವರುಗಳು ತಮ್ಮ ವರದಿಯನ್ನು ಈಗಾಗಲೇ ಸಲ್ಲಿಸಿದ್ದಾರೆ. ಇದು ಅಲ್ಲದೇ ಇನ್ನೂ ಅನೇಕ ಒಳ್ಳೆಯ ವಿಚಾರಗಳನ್ನು ಅವರು ತಮ್ಮ ವರದಿಯಲ್ಲಿ ಮಂಡಿಸಿದ್ದಾರೆ. ಆದರೆ ಅವುಗಳು ಶಾಸನಗಳು ಆಗಿ ಜಾರಿಯಲ್ಲಿ ಬರುವುದನ್ನು ಇಡೀ ನಾಡಿನ ಜನತೆ ಚಾತಕಪಕ್ಷಿಯಂತೆ ಕಾದು ನೋಡುತ್ತಿದೆ. ಒಬ್ಬ ವ್ಯಕ್ತಿ ಎರಡನೆಯ ವಿವಾಹವಾದರೆ ಅವನಿಗೆ ಗಲ್ಲು ಶಿಕ್ಷೆಯಿಲ್ಲ, ಅಷ್ಟೇ ಅಲ್ಲ ಒಬ್ಬ ಪುರುಷ ಒಬ್ಬ ಮಹಿಳೆಯ ಅತ್ಯಾಚಾರವೆಸಗಿದ್ದರು ಸಹಾ ಅಂತಹವರಿಗೆ ಗಲ್ಲುಶಿಕ್ಷೆಯನ್ನು ಶಿಫಾರಸ್ಸು ಮಾಡಿಲ್ಲ, ಸದರಿ ವರದಿಯಲ್ಲಿ ಕಾರಣವಿಷ್ಟೇ, ಒಂದು ವೇಳೆ ಮೊದಲನೆಯ ಉದಾಹರಣೆಯಲ್ಲಿ ಗಲ್ಲುಶಿಕ್ಷೆಯಾದರೆ ಅಂತಹ ಗಂಡ ಇಬ್ಬರೂ ಹೆಂಡತಿಯರಿಗೆ ಇಲ್ಲವಾಗುತ್ತಾನೆ. ಅದು ಕಾನೂನಿನ ಉದ್ದೇಶವಲ್ಲ. ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪಿನಂತೆ ೨ನೇ ಹೆಂಡತಿ ಸಹಾ ಜೀವನಾಂಶವನ್ನು ಪಡೆಯಲು ಅರ್ಹಳು ಆಗಿದ್ದಾಳೆ. ಕಾನೂನು ಎಂದರೆ ನಿಂತ ನೀರು ಅಲ್ಲವೆನ್ನುವ ಮಾತಿಗೆ ಈ ನಿರ್ಣಯವೇ ಜೀವಂತ ನಿದರ್ಶನವಲ್ಲವೆ. ಇನ್ನು ಎರಡನೆಯ ಉದಾಹರಣೆಯಲ್ಲಿ ಅತ್ಯಾಚಾರವೆಸಗಿದ ವ್ಯಕ್ತಿ ಸರಿಯಾಗಿ ವಿಚಾರ ಮಾಡಿದ ಮೇಲೆ ಒಂದು ವೇಳೆ ಅತ್ಯಾಚಾರಕ್ಕೆ ಒಳಗಾದವಳನ್ನು ವಿವಾಹವು ಸಹಾ ಆಗುವ ಸಾಧ್ಯತೆಗಳು ಇರುತ್ತವೆ. ಒಂದು ವೇಳೆ ಅಂತಹ ವ್ಯಕ್ತಿಗೆ ಗಲ್ಲು ಶಿಕ್ಷೆಯನ್ನು ಕೊಡ ಮಾಡಿದರೆ ಅಂತಹವಳನ್ನು ಸಮಾಜದಲ್ಲಿ ಮುಂದೆ ವಿವಾಹವಾಗಲು ಯಾರೂ ಮುಂದೆ ಬರುವುದಿಲ್ಲ ಎನ್ನುವ ದೂರದೃಷ್ಟಿಯನ್ನು ಇಟ್ಟುಕೊಂಡು ಗಲ್ಲುಶಿಕ್ಷೆಗೆ ಶಿಫಾರಸ್ಸನ್ನು ಮಾಡಿಲ್ಲವೆನ್ನುವ ವಿಚಾರವನ್ನು ಮಹಿಳೆಯರ ಪರವಾಗಿ ಅವರ ಏಳಿಗೆಗೆ

ಟೊಂಕ ಕಟ್ಟಿ ನಿಂತುಕೊಂಡ ಸ್ತ್ರೀಶಕ್ತಿ ಹಾಗೂ ಸ್ವ ಸಹಾಯಗಳಂತಹ ಅನೇಕ ಸಂಘ ಸಂಸ್ಥೆಗಳು ತಿಳಿದುಕೊಳ್ಳಬೇಕಾದ ವಿಷಯವಾಗಿರುತ್ತದೆ.

ಇನ್ನು ವೈದ್ಯರ ವಿಷಯವನ್ನು ಚಿಂತನೆ ಮಾಡುವುದಾದರೆ ಮರಣೋತ್ತರ ಪರೀಕ್ಷೆಯಲ್ಲಿ ಅವರು ಶವದ ರಕ್ತವನ್ನು ತೆಗೆದು ಇಡುವುದನ್ನು ಬುದ್ಧ್ಯಾಪೂರ್ವಕವಾಗಿ ಕೈಬಿಟ್ಟು ಬಿಡುತ್ತಾರೆ. ಅಂತಹ ವೇಳೆಯಲ್ಲಿ ಕೃತ್ಯಕ್ಕೆ ಉಪಯೋಗಿಸಿದ ವಸ್ತುಗಳ ಮೇಲೆ ರಕ್ತದ ಕಲೆಗಳು ಇದ್ದರೂ ಸಹಾ ಅವುಗಳನ್ನು ಹೋಲಿಸಿ ನೋಡಲು ಅಥವಾ ರಕ್ತದ ಗುಂಪುಗಳನ್ನು ಹೋಲಿಕೆ ಮಾಡಿ ನೋಡಲು ರಕ್ತವೇ ಇರುವುದಿಲ್ಲ. ಕಾರಣ ಅದರ ದುರುಪಯೋಗವನ್ನು ಆರೋಪಿಗಳು ಪಡೆದುಕೊಂಡು ಅಂತಹ ರಕ್ತ ಬಹುಶಃ ಬೇರೆಯ ಪ್ರಾಣಿಯ ರಕ್ತವಾಗಿರಬಹುದು ಎಂದು ವಾದಿಸಿ ಬಿಡುಗಡೆ ಹೊಂದಿರುವಂತಹ ಸಂದರ್ಭಗಳೇ ಬಹಳ.

ವೈದ್ಯರ ಬಗ್ಗೆ ಇನ್ನೂ ಸ್ವಲ್ಪ ಹೇಳುವುದಾದರೆ ಸಾಮಾನ್ಯ ಸಾಕ್ಷಿಗಳಂತೆ ಅವರುಗಳು ಸಹಾ ಮುಖ್ಯ ಸವಾಲಿನಲ್ಲಿ ಅಭಿಯೋಜಕರು ಹೇಳಿದಂತೆ ಹೇಳುತ್ತಾರೆ ಹಾಗೂ ಪಾಟೀ ಸವಾಲಿನಲ್ಲಿ ಆರೋಪಿಯ ಪರವಾಗಿ ಸಾಕ್ಷಿ ನುಡಿಯಲು ಹಿಂದೆ ಮುಂದೆ ನೋಡುವುದಿಲ್ಲ. ಉದಾ : ಮುಖ್ಯ ಸವಾಲಿನಲ್ಲಿ ಇಂತಹ ಒಂದು ಕತ್ತಿಯಿಂದ ತಾವು ನಿರೂಪಿಸಿದಂತಹ ಗಾಯಗಳು ಆಗಬಹುದು ಎಂದು ಹೇಳಿದ ವೈದ್ಯರು ಪಾಟೀ ಸವಾಲಿನಲ್ಲಿ ಒಬ್ಬ ಮನುಷ್ಯ ನೆಲಕ್ಕೆ ಬಿದ್ದರೂ ಆಗುತ್ತದೆಯೇ ಎಂದು ಆರೋಪಿ ಪರ ವಕೀಲರು ಕೇಳಿದ ಪ್ರಶ್ನೆಗೆ ಆಗುತ್ತದೆ ಎಂದು ಹೇಳಿ ಹೋಗುತ್ತಿರುವುದು ದುರದೃಷ್ಟಕರ. ವಿಶೇಷವಾಗಿ ವೈದ್ಯರುಗಳು ಕೃತ್ಯಕ್ಕೆ ಉಪಯೋಗಿಸಿದ ವಸ್ತುಗಳನ್ನು ಅಂದರೆ ಕತ್ತಿ ಅಥವಾ ದೊಣ್ಣೆಗಳನ್ನು ನೋಡಿ ಬರವಣಿಗೆಯಲ್ಲಿ ಅಭಿಪ್ರಾಯ ಕೊಟ್ಟ ಮೇಲೂ ಸಹಾ ಇಂತಹ ಹೇಳಿಕೆಗಳನ್ನು ಯಾವ ಕಾರಣಕ್ಕಾಗಿ ಹೇಳುತ್ತಾರೆ ಎಂಬುದನ್ನು ಒಬ್ಬ ನ್ಯಾಯಾಧೀಶನಾಗಿ ನಾನು ತಮಗೆ ತಿಳಿಸಬೇಕಾಗಿಲ್ಲ. ಕಾರಣವೇನೆಂದರೆ ತಮಗೆಲ್ಲಾ ಅದು ತಿಳಿದ ವಿಷಯವೇ.

ಇನ್ನು ತಜ್ಞರ ಬಗ್ಗೆ ಚಿಂತನೆ ಮಾಡುವುದಾದರೆ ಕೃತ್ಯಕ್ಕೆ ಉಪಯೋಗಿಸಿದ ವಸ್ತುಗಳ ಮೇಲೆ ಇದ್ದಂತಹ ರಕ್ತ ಅನೇಕ ಸಾರಿ ಮನುಷ್ಯನದು ಅಥವಾ ಪ್ರಾಣಿಯದು ಎನ್ನುವುದನ್ನು ಬುದ್ಧ್ಯಾಪೂರ್ವಕವಾಗಿ ಬರೆಯುವುದನ್ನು ಬಿಟ್ಟುಬಿಡುತ್ತಾರೆ. ಬಹುಶಃ ಪೋಲೀಸ್ ಅಧಿಕಾರಗಳ ಮೇಲೆ ಇರುವ ಅನುಕಂಪದಿಂದಲೋ ಅಥವಾ ತಾವೇ ಪೋಲೀಸ್ ಇಲಾಖೆಗೆ ಒಳಪಟ್ಟಿರುವ ದಾಕ್ಷಿಣ್ಯದಿಂದಲೋ ಒಟ್ಟಿನಲ್ಲಿ ಕೃತ್ಯಕ್ಕೆ ಒಳಗಾದ ಬಲಿಪಶುವಿಗೆ ನ್ಯಾಯದಾನ ಸಿಕ್ಕದಂತೆ ನೋಡಿಕೊಳ್ಳುತ್ತಿದ್ದಾರೆ. ಇವರನ್ನು ದೇವರೇ ಶಿಕ್ಷಿಸಬೇಕು. ಯಾಕೆಂದರೆ ಅಂತಹವರ ಕರ್ತವ್ಯ ಲೋಪದೋಷಗಳನ್ನು ಅವರ ಮೇಲಧಿಕಾರಿಗಳು ಸಹಾ ಪ್ರಶ್ನಿಸದೇ ತಮ್ಮ ತಮ್ಮ ನೌಕರಿಗಳನ್ನು ಸರಳವಾಗಿ

ಮಾಡಿಕೊಂಡು ಕೈತುಂಬಾ ಹಣವನ್ನು ಗಳಿಸಿ ಸುಖವಾಗಿ ನಿವೃತ್ತಿ ಜೀವನವನ್ನು ಕಳೆಯುತ್ತಿರುವುದು ವಿಪರ್ಯಾಸದ ಸಂಗತಿ. ಯಾಕೆಂದರೆ ಸರ್ಕಾರಿ ನೌಕರಿಯಲ್ಲಿ ಸೇವೆ ಸಲ್ಲಿಸುವ ಪ್ರತಿಯೊಬ್ಬ ನೌಕರನ ಒಂದೊಂದು ಪೈಸೆ ಹಣವೂ ಸಹಾ ಸಾರ್ವಜನಿಕ ದುಡ್ಡು ಎನ್ನುವ ಪ್ರಜ್ಞೆಯೇ ಇಲ್ಲದಂತೆ ನಡೆದುಕೊಳ್ಳುತ್ತಿದ್ದಾರೆ. ಇಂತಹವರುಗಳ ನಡತೆಯಿಂದ ಜನರಿಗೆ ನ್ಯಾಯಾಲಯಗಳ ಮೇಲೆ ಗೌರವ ಕಡಿಮೆಯಾಗುತ್ತಿದೆ ಎನ್ನುವಂತಹ ಕಳವಳ ಅನೇಕರಲ್ಲಿ ಮೂಡುತ್ತಿರುವುದು ಸಹಜ.

ಇಂತಹವರ ನಡವಳಿಕೆಗಳನ್ನು ನೋಡಿದರೆ ಕೃತ್ಯಕ್ಕೆ ಒಳಗಾದವರು ಎಷ್ಟೋ ಸಾರಿ ತಮ್ಮ ತಮ್ಮ ಹಕ್ಕುಗಳ ಬಗ್ಗೆ ತಾವುಗಳೇ ಹೆಚ್ಚು ಎಚ್ಚರಿಕೆಯನ್ನು ವಹಿಸುವುದು ಸೂಕ್ತವೆನಿಸುತ್ತದೆ. ಉದಾಹರಣೆಗೆ ಅತ್ಯಾಚಾರಕ್ಕೆ ಒಳಗಾದ ಸ್ತ್ರೀ ತಾನು ಧರಿಸಿದ ಬಟ್ಟೆಗಳನ್ನು ವೈದ್ಯಕೀಯ ಪರೀಕ್ಷೆ ಅಥವಾ ಪೊಲೀಸರಿಗೆ ಕೊಡುವ ಮುನ್ನ ತೊಳೆಯಬಾರದು. ಒಂದು ವೇಳೆ ತೊಳೆದಿದ್ದೇ ಆದರೆ ಬಿಸಿಲಿನಲ್ಲಿ ಒಣಗಿಸಬಾರದು ಎನ್ನುವಂತಹ ವಿಶಿಷ್ಟ ಜ್ಞಾನ ಅವರಲ್ಲಿ ಇಲ್ಲದೇ ಇರುವುದರಿಂದಲೇ ಅನೇಕ ಸಾರಿ ತಮಗೆ ತಾವು ನ್ಯಾಯವನ್ನು ದೊರಕಿಸಿಕೊಳ್ಳಲು ಸಾಧ್ಯವಾಗದೇ ಹೋಗುತ್ತಾರೆ. ಈ ಬಗ್ಗೆ ವಿಧಿವಿಜ್ಞಾನ ಪ್ರಯೋಗಾಲಯದಿಂದ ಹೊರತಂದಿರುವ ಪುಸ್ತಕದ ಕನ್ನಡ ಅನುವಾದ ಮಾಡಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪುಕ್ಕಟೆಯಾಗಿ ಇಲ್ಲವೇ ಸುಲಭದ ಬೆಲೆಯಲ್ಲಿ ಅವುಗಳನ್ನು ಜನಸಾಮಾನ್ಯರಿಗೆ ತಲುಪುವಂತೆ ಮಾಡಿದಾಗ ಮಾತ್ರ ಸಾಮಾನ್ಯರಿಗೆ ನ್ಯಾಯ ದೊರಕುವಂತೆ ಆದೀತು ಎನ್ನುವಂತಹ ಆಶಯ ನನ್ನದು. ಈ ಕೆಲಸವನ್ನು ಪೊಲೀಸ್ ಇಲಾಖೆ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೈಗೂಡಿಸಿ ಮಾಡಿದರೆ ಕಷ್ಟದ ಕೆಲಸವೇನೂ ಅಲ್ಲ.

ಅನೇಕ ಸಾರಿ ಸಾಕ್ಷಿಯಾಗಿ ಬರಬೇಕಾದ ಪೊಲೀಸ್ ಅಧಿಕಾರಿಗಳು ತಾವು ಕರ್ತವ್ಯದ ಮೇಲೆ ಇರುವುದರಿಂದ ಸಾಧ್ಯವಾಗುತ್ತಿಲ್ಲವೆಂದು ವೈರ್‌ಲೆಸ್ ಮುಖಾಂತರ ತಿಳಿಸುವುದೇ ಒಂದು ಶೋಕಿಯಾಗಿಬಿಟ್ಟಿದೆ. ಅವರು ನಿಜವಾಗಲೂ ಆಯಾಯ ದಿನಗಳಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತ ಇದ್ದಾರೋ ಇಲ್ಲವೋ ಎನ್ನುವುದನ್ನು ನೋಡುವವರು ಯಾರು ಎನ್ನುವುದು ಮೂಲಭೂತ ಪ್ರಶ್ನೆ. ಅದು ಯಕ್ಷ ಪ್ರಶ್ನೆಯಾಗಿಯೇ ಉಳಿಯುತ್ತಾ ಇದೆ.

ಇನ್ನು ಸಿವಿಲ್ ವ್ಯಾಜ್ಯಗಳ ಬಗ್ಗೆ ಹೇಳುವುದಾದರೆ ಆಸ್ತಿಯ ವಿಭಾಗಕ್ಕೆ ಅನೇಕ ವರ್ಷಗಳನ್ನು ತೆಗೆದುಕೊಂಡ ಒಂದು ವ್ಯಾಜ್ಯ ದರಖಾಸ್ತು (ಕಾರ್ಯಾಚರಣೆಗೆ) ಅರ್ಜಿಯನ್ನು ಮಾಡಿದ ಮೇಲೂ ಸಹಾ ಸಂಬಂಧಪಟ್ಟ ಅಧಿಕಾರಿಗಳು ಅವುಗಳನ್ನು ಹಾಗೆಯೇ ನ್ಯಾಯಾಲಯದಿಂದ ಹೊರಡಿಸಿದ ನೋಟೀಸ್, ಸಮನ್ಸ್ ಮತ್ತು ವಾರಂಟ್‌ಗಳನ್ನು ಸಹಾ ಅನೇಕ ಬಾರಿ ಸಂಬಂಧಪಟ್ಟವರು ಜಾರಿ ಮಾಡದೇ ಮರಳಿ

ಕಳುಹಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡ ಕಾರಣ ತ್ವರಿತ ನ್ಯಾಯದಾನಕ್ಕೆ ಅದು ಸಹಾ ಅಡ್ಡಿಯಾಗುತ್ತದೆ. ಅಂತಹ ಸುಳ್ಳು ಹೇಳಿದವರ ವಿರುದ್ಧ ಯಾವುದೇ ಕ್ರಮಗಳನ್ನು ಕೈಗೊಳ್ಳದೇ ಇರುವುದು ಸಹಾ ವಿಚಿತ್ರ ಆದರೂ ಸತ್ಯವಾದ ಸಂಗತಿಯಾಗಿಬಿಟ್ಟಿದೆ. ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ತಮಗೆ ನೆನಪಿಸಬಹುದು. ಒಬ್ಬ ವ್ಯಕ್ತಿ ಒಬ್ಬಳನ್ನು ಪ್ರೀತಿಸಿ ಲಗ್ನವಾಗಿದ್ದ. ಕೂಲಿ ಕೆಲಸಕ್ಕೆಂದು ಹೋಗುವಾಗ ಬಸ್ ಅಪಘಾತವಾಗಿ ಅವಳು ಅವನ ಎದುರಿಗೆ ಅವನ ತೊಡೆಯ ಮೇಲೆ ಬಿಕ್ಕಿ ಬಿಕ್ಕಿ ಅತ್ತು ಸತ್ತು ಹೋದಳು. ಆಗ ಚಾಲಕನ ಮೇಲೆ ಪಿರ್ಯಾದಿಯನ್ನು ಕೊಟ್ಟಂತಹ ಮಹಾಶಯ ಕೇಸು ಸಾಕ್ಷಿಗೆ ಬಂದಾಗ ಅಪಘಾತದಿಂದ ತನ್ನ ಹೆಂಡತಿ ಸತ್ತಿದ್ದು ಸತ್ಯ, ಆದರೆ ಅಂದು ಗಾಡಿ ಚಲಾಯಿಸಿದ ಚಾಲಕ ಇವನೇ ಎಂದು ಹೇಳಲು ಆಗುವುದಿಲ್ಲ ಎಂದು ಧೈರ್ಯವಾಗಿ ಸುಳ್ಳನ್ನು ಹೇಳುತ್ತಾನೆ. ಯಾಕೆಂದರೆ ಒಂದು ವೇಳೆ ಅವನು ಅಂದು ಗಾಡಿ ಚಲಾಯಿಸಿದ ಚಾಲಕನು ಆಗಿರದಿದ್ದರೆ ಅವನ ಮೇಲೆ ಸುಳ್ಳು ದೂರನ್ನು ಯಾಕೆ ಕೊಟ್ಟ ಎನ್ನುವ ಪ್ರಶ್ನೆ ಉದ್ಭವಿಸುವುದು ಸಹಜ. ಅದಕ್ಕೆ ಅವನಲ್ಲಿ ಉತ್ತರವಿಲ್ಲ. ಆದರೂ ಅಂತಹ ಸುಳ್ಳನ್ನು ಆಡಿ ಹೋದರೂ ಮೋಟಾರು ಅಪಘಾತಗಳ ಟ್ರಿಬ್ಯೂನಲ್‌ಗಳಲ್ಲಿ (ನ್ಯಾಯಾಲಯಗಳಲ್ಲಿ) ಅವನ ಹೆಂಡತಿ ಸತ್ತಿದ್ದಕ್ಕೆ ಲಕ್ಷಗಟ್ಟಲೆ ಪರಿಹಾರ ಬರುವುದು ನಿಶ್ಚಿತ. ಅಂದರೆ ಎರಡು ನ್ಯಾಯಾಲಯಗಳಲ್ಲಿ ಸುಳ್ಳನ್ನು ಹೇಳುವವರಿಗೆ ಇಂತಹ ನ್ಯಾಯಾಂಗದ ಪ್ರಕ್ರಿಯೆಗಳು ಒಂದು ಕಡಿವಾಣವನ್ನು ಹಾಕದಿದ್ದರೆ ನ್ಯಾಯಾಂಗದ ಗೌರವವನ್ನು ಮುಂಬರುವ ದಿನಗಳಲ್ಲಿ ಕಾಪಾಡಿಕೊಂಡು ಹೋಗುವುದು ಕಷ್ಟಕರ. ಇಂತಹ ಸಂಗತಿಗಳನ್ನು ಗಮನಿಸಿಯೇ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಆಗಿದ್ದ ಗೌರವಾನ್ವಿತ ಶ್ರೀ ವಿ. ಆರ್. ಕೃಷ್ಣ ಅಯ್ಯರ್‌ರವರು ಈ ಮಾತನ್ನು ಹೇಳಿದ್ದಾರೆ. ಅದು ಏನೆಂದರೆ :

"Justice is available at two places that is,

if it is properly administered in courts

If not, in the street"

ಅಂದರೆ 'ನ್ಯಾಯದಾನವನ್ನು ಸರಿಯಾಗಿ ಕೊಡಮಾಡಿದರೆ ಮಾತ್ರ ಅದು ನ್ಯಾಯಾಲಯಗಳಲ್ಲಿ ಸಿಗುತ್ತದೆ ಇಲ್ಲವಾದರೆ ಅದು ಬೀದಿಗಳಲ್ಲಿ ಸಿಗುತ್ತದೆ' ಎಂದು ಆಗುತ್ತದೆ. ಅವರ ಮಾತು ಸತ್ಯ. ಎಷ್ಟು ಸತ್ಯವೋ ಅಷ್ಟೇ ಸತ್ಯವಾದುದು ಎಂದು ನಿಮಗೆ ಅನಿಸುವುದಿಲ್ಲವೇ ?

ಇದಕ್ಕೆ ಎಲ್ಲ ಕಾರಣ - **''ಸತ್ಯವೇ ನಮ್ಮ ತಾಯಿ ತಂದೆ**

ಸತ್ಯವೇ ನಮ್ಮ ಬಂಧು ಬಳಗ....''

ಎಂದು ಹಾಡಿದ ಆ ಗೋವಿನ ಹಾಡು. ಆ ಪ್ರಾಣಿಯಲ್ಲಿ ಇದ್ದಂತಹ ಸತ್ಯದ ನಿಷ್ಠೆ ಮಾನವರು ಎಂದು ಹೇಳಿಕೊಳ್ಳುವ ನಮ್ಮಲ್ಲಿ ಇಲ್ಲದೇ ಇರುವುದು - ಎಂದು ನೊಂದು ದಾಖಲಿಸುತ್ತಿದ್ದೇನೆ. ಆ ಗೋವಿನಲ್ಲಿ ಇರುವಂತಹ ಸತ್ಯದ ನಿಷ್ಠೆಯನ್ನು ನಾವುಗಳು ಬೆಳೆಸಿಕೊಂಡಾಗ ಮಾತ್ರ ಅದು ನಮ್ಮ ಮುಂದಿನ ಪೀಳಿಗೆಗೆ ಒಳ್ಳೆಯ ನಡತೆಯಾಗಿ ಪರಿಣಮಿಸುತ್ತದೆ. ಅಂತಹ ಒಳ್ಳೆಯ ಬಳುವಳಿಯನ್ನು ಮುಂಬರುವ ಪೀಳಿಗೆಗೆ ಬಿಟ್ಟು ಹೋಗುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಲ್ಲವೇ. ಇಂತಹ ಸತ್ಯದ ನಡತೆಯನ್ನು ಸಮಾಜದಲ್ಲಿ ಎಲ್ಲರೂ ರೂಢಿಸಿಕೊಂಡಾಗ ಮಾತ್ರ ಸರಿಯಾದ ನ್ಯಾಯದಾನ ಸಾಧ್ಯ.

****

ಪಂಚಾಯತಿ - ಲೋಕ ಅದಾಲತ್ - ಒಂದು ಚಿಂತನೆ

ಪಿತಾಮಹ - ಭೀಷ್ಮ

ತಾತ-ವ್ಯಾಸ

ತಂದೆ-ಧೃತರಾಷ್ಟ್ರ

ಗುರುಗಳು - ದ್ರೋಣ

ಹಿತೈಷಿ-ಶ್ರೀಕೃಷ್ಣ

ಯಾರುಯಾರು - ಏನು ಹೇಳಿದರೂ ಕೊನೆಗೆ ಏನಾಯಿತು ?

ಕೌರವರಿಗೆ - ರಾಜ್ಯ ಸಿಕ್ಕಲಿಲ್ಲ

ಪಾಂಡವರಿಗೆ - ರಾಜ್ಯ ಸಿಕ್ಕರೂ ಸುಖ ಸಿಗಲಿಲ್ಲ

- ಮಹಾಭಾರತ

ಕಾರಣ, ತಮ್ಮ ಪರಿಸ್ಥಿತಿಯೂ ಹೀಗೆ ಆಗಬಾರದೆಂದು ಕಾನೂನು ಸೇವೆಗಳ ಅಧಿನಿಯಮವನ್ನು ಜಾರಿಯಲ್ಲಿ ತಂದು ಅದರಡಿಯಲ್ಲಿ

''ಕಾನೂನಿನ ಅಜ್ಞಾನ ಅಕ್ಷಮ್ಯ''

ಇತ್ತೀಚಿನ ದಿನಗಳಲ್ಲಿ ಕಾನೂನು ನಮ್ಮ ಉಸಿರಾಟದಷ್ಟೇ ಮಹತ್ವ. ಕಾನೂನನ್ನು ಯಾಕೆ ತಿಳಿಯಬೇಕು ? ತಿಳಿದುಕೊಳ್ಳದಿದ್ದರೆ ನಡೆಯುವುದಿ ಲ್ಲವೇ ? ಎಂದು ನಮ್ಮಲ್ಲಿ ಒಂದೆರಡು ಪ್ರಶ್ನೆ.

ಸಮಾಜದಲ್ಲಿ ಎಲ್ಲರನ್ನು ಬಿಟ್ಟು 'ಗ್ರಾಮ ಪಂಚಾಯಿತಿ ಸದಸ್ಯರಿಗೆ' ಕಾನೂನಿನ ತಿಳುವಳಿಕೆ ಕೊಡುವಂತೆ ಸರ್ಕಾರ ಏಕೆ ನಿರ್ದೇಶಿಸಿದೆ ? ಇದು ಸಹ ವಿಚಾರ ಮಾಡುವಂತಹ ವಿಷಯ.

ತಮಗೆಲ್ಲಾ ಗೊತ್ತಿದ್ದಂತೆ -

ದೇವರಿಗೆ ೫ ಮುಖಗಳು - ೧. ಸದ್ಯೋಜಾತ

೨. ವಾಮದೇವ

೩. ಅಘೋರ

೪. ತತ್ಪುರುಷ ಮತ್ತು

೫. ಈಶಾನ

ಅದೇ ರೀತಿ ಪಂಚಮಹಾಭೂತಗಳಾದ ಪೃಥ್ವಿ, ಅಪ್ಪು, ತೇಜಸ್, ವಾಯು ಮತ್ತು ಆಕಾಶಗಳಿಂದ ಅಸ್ತಿತ್ವಕ್ಕೆ ಬಂದ - ಈ ಮಾನವರಿಗೆ ಭಗವಂತ ದಯಪಾಲಿಸಿದ ಈ ಪಂಚೇಂದ್ರಿಯಗಳಿಗೆ ವಶವಾದ ಮನುಷ್ಯ ಸಾತ್ವಿಕ ಗುಣವನ್ನು ಮರೆತು ತಮೋ ಗುಣದ ಪ್ರಭಾವದಿಂದ ಸಮಾಜದಲ್ಲಿ ಅನ್ಯಾಯಗಳನ್ನು ಎಸಗಿದಾಗ, ನ್ಯಾಯ ವನ್ನೊದಗಿಸಲು ಹಿಂದಿನ ಕಾಲದಿಂದಲೂ ಅಸ್ತಿತ್ವದಲ್ಲಿದ್ದ ಪದ್ಧತಿಯೇ 'ಪಂಚಾಯಿತಿ'.

ಪಂಚಾಯಿತಿ ಎಂದರೆ ನ್ಯಾಯ ನಿರ್ಣಯಕ್ಕೆ ರಚಿತವಾದ ೫ ಜನರ ಸಮಿತಿ ಎಂದರ್ಥ.

ಈ ಪಂಚಾಯಿತಿಯ ಇಂದಿರುವ ಕಲ್ಪನೆ - (Arbitration)

ಅಂದರೆ ಮಧ್ಯಸ್ಥಿಕೆ ಮೂಲಕ ವ್ಯಾಜ್ಯವನ್ನು ತೀರ್ಮಾನ ಮಾಡುವುದು (ಗ್ರಾಮ ಆಡಳಿತ ನಿರ್ವಹಿಸಲು ಆಯ್ಕೆಯಾದ ಸಮಿತಿ)

ಒಂದು ಅರ್ಥದಲ್ಲಿ ತಿಳಿದು ನೋಡಿದರೆ - ಪಂಚಾಯಿತಿಯ ಸದಸ್ಯರಾದ ತಮ್ಮಗಳ ಕರ್ತವ್ಯ ಕೂಡಾ ನ್ಯಾಯಾಧೀಶರಷ್ಟೇ ಪವಿತ್ರವಾದದ್ದು.

ಉಭಯ ಪಕ್ಷದವರ ಮನವೊಲಿಸುವಲ್ಲಿ ತಮ್ಮ ನುಡಿಗಿಂತ, ನಡೆಯನ್ನು ಅವಲಂಬಿಸಿರುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ.

ನ್ಯಾಯದಾನವನ್ನು ಮಾಡುವ ಮಹತ್ತರ ಹೊಣೆಯನ್ನು ಹೊತ್ತ ತಮಗೆ ಕಾನೂನನ್ನು ತಿಳಿಸುವುದು ಸೂಕ್ತ - ಎನ್ನುವ ನಿರ್ಣಯಕ್ಕೆ ಬಂದ ಸರ್ಕಾರ ತಮಗಾಗಿ ಕಾನೂನನ್ನು ತಿಳಿಸಲು ಕಾನೂನು ಸೇವಾ ಪ್ರಾಧಿಕಾರಗಳಿಗೆ ಹಾಗೂ ತಾಲ್ಲೂಕು ಮಟ್ಟದಲ್ಲಿರುವ ಕಾನೂನು ಸೇವಾಸಮಿತಿಗಳಿಗೆ ನಿರ್ದೇಶನಗಳನ್ನು ನೀಡಿದೆ.

ಕಾರಣ ಇಂದು ಈ ಕಾನೂನಿನ ಬಗ್ಗೆ ತಿಳಿಯಲು ಪ್ರಯತ್ನಿಸೋಣ.

ಈ ಪ್ರಪಂಚದಲ್ಲಿ ಪ್ರತಿಯೊಬ್ಬರ ಕಾರ್ಯಸಾಧನೆಗೆ ಮೂಲವಾದ ಪಂಚತಂತ್ರಗಳೆಂದರೆ -

೧. ಭೇದ

೨. ಪರೀಕ್ಷೆ

೩. ವಿಶ್ವಾಸ

೪. ವಂಚನೆ ಮತ್ತು

೫. ಮಿತ್ರಕಾರ್ಯ

ಈ ಐದು ಪಂಚತಂತ್ರಗಳಲ್ಲಿ ಇಂದು ಇತ್ತೀಚಿನ ದಿನಗಳಲ್ಲಿ -

೧. **ಪರೀಕ್ಷೆ** - ತನ್ನ ಸಾಮರ್ಥ್ಯವನ್ನು ಕಳೆದುಕೊಂಡಿದೆ.

೨. ಕಾರಣ **ಮಿತ್ರಕಾರ್ಯ** ಸಾಧ್ಯವಾಗುತ್ತಿಲ್ಲ.

೩. ಪ್ರತಿಯೊಂದು ಸಂದರ್ಭದಲ್ಲಿ **ಭೇದಮಾರ್ಗ**ವನ್ನು ಅನುಸರಿಸುತ್ತಿದ್ದಾರೆ.

೪. ಅಷ್ಟೇ ಅಲ್ಲ **ವಿಶ್ವಾಸ**ದಿಂದ ಕಾರ್ಯಸಾಧನೆಯ ಬದಲು ವಿಶ್ವಾಸಘಾತುಕತೆಗೆ ಬೆಲೆ ಬಂದು

೫. **ವಂಚನೆ** ಎಲ್ಲೆಡೆ ತಾಂಡವವಾಡುತ್ತಿದೆ.

ಇರಲಿ, ಕೆಸರಿನಲ್ಲಿ ಕಮಲ ಉದಯಿಸಿದಂತೆ -

''ಕೆಟ್ಟಕೃತ್ಯಗಳಿಂದ ಒಳ್ಳೆಯ ಕಾನೂನುಗಳು ಹುಟ್ಟಿಕೊಳ್ಳುತ್ತವೆ'' ಎಂದು ಕಾನೂನು ತಜ್ಞರೊಬ್ಬರು ಹೇಳಿದ್ದಾರೆ.

ಕಾನೂನಿಗೆ ನೂರಾರು ಅರ್ಥಗಳುಂಟು. ಆದರೆ ತಾವು ಈ ಸಂದರ್ಭದಲ್ಲಿ ತಿಳಿಯಬೇಕಾದದ್ದು ಇಷ್ಟೇ.

ಕಾನೂನು ಎಂದರೆ - ''ರಾಷ್ಟ್ರದ ಪ್ರಜೆಗಳೆಲ್ಲರೂ ಒಬ್ಬರಿಗೊಬ್ಬರು ನ್ಯಾಯವನ್ನು ಒದಗಿಸಲು ಮಾಡಿದ ಪ್ರತಿಜ್ಞೆ'' ಎಂದು ಅರ್ಥಕೊಡುತ್ತದೆ.

ಈ ಹಿನ್ನೆಲೆಯಲ್ಲಿ ಕಾನೂನು ಸೇವೆಗಳ ಅಧಿನಿಯಮ ೧೯೮೭ ಅಸ್ತಿತ್ವಕ್ಕೆ ಬಂದಿರುವುದು ಸಹ ನಿಜವಾಗಲೂ ಒಂದು ಒಳ್ಳೆಯ ಕಾನೂನೇ ಎಂದು ಹೇಳಬಹುದು.

ಏಕೆಂದರೆ -

ಭಾರತದ ಸಂವಿಧಾನದಲ್ಲಿ ಪ್ರತಿಯೊಬ್ಬ ಪ್ರಜೆಗೂ ಕೊಡಮಾಡಿದ ವಚನವೇನೆಂದರೆ,

''ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ಒದಗಿಸುವುದು. ಅರ್ಜಿದಾರನನ್ನು, ಪ್ರೀತಿಯನ್ನು ಮತ್ತು ಕ್ಯಾನ್ಸರ್ ರೋಗಿಯನ್ನು - ವಿಳಂಬ - ಹಂತ ಹಂತವಾಗಿ ಕೊಲ್ಲುತ್ತದೆ'' ಎಂದು ಕಾನೂನು ತಜ್ಞರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

ಕಾರಣ, ಈಗ ಅಸ್ತಿತ್ವದಲ್ಲಿರುವ ನ್ಯಾಯಾಲಯಗಳಿಂದ ಇದ್ದ ವ್ಯಾಜ್ಯಗಳಲ್ಲಿ ನ್ಯಾಯದಾನವನ್ನು ಮಾಡುವಲ್ಲಿ ವಿಳಂಬವಾದ ಕಾರಣ -

ಈಗ ಹೇಳಿದ ಸಂವಿಧಾನದ ವಚನವನ್ನು ಪೂರೈಸುವುದರ ಸಲುವಾಗಿ -

ಕಾನೂನು ತಜ್ಞರು ಹಾಗೂ ಶಾಸಕರು **'ಲೋಕ ಅದಾಲತ್'** ಎನ್ನುವ ಈ ಪರ್ಯಾಯ ವ್ಯವಸ್ಥೆಯನ್ನು ಜಾರಿಯಲ್ಲಿ ತಂದಿದ್ದಾರೆ.

ಈ ಕಾನೂನಿನಡಿಯಲ್ಲಿ ನ್ಯಾಯಾಲಯಗಳಲ್ಲಿರುವ ವ್ಯಾಜ್ಯಗಳನ್ನು

ಹಾಗೂ

ನ್ಯಾಯಾಲಯದಲ್ಲಿರದ ವ್ಯಾಜ್ಯಗಳನ್ನು ಸಹ ನಿರ್ಣಯಿಸಲಾಗುತ್ತದೆ.

ಎಲ್ಲಾ ತರದ ವ್ಯಾಜ್ಯಗಳನ್ನು ತಾವು ಲೋಕ ಅದಾಲತ್ - ಜನತೆಯ ನ್ಯಾಯಾಲಯದ ಮುಂದೆ ತರಬಹುದಾಗಿದೆ. ಅವುಗಳನ್ನು ತರುವ ವ್ಯಕ್ತಿಗೆ ಯಾವುದೇ ವರಮಾನದ ಅಥವಾ ಆದಾಯದ ಮಿತಿ ಇರುವುದಿಲ್ಲ, ಹಾಗೂ ನ್ಯಾಯಾಲಯಕ್ಕೆ ಕೊಡಬೇಕಾದ ಶುಲ್ಕವನ್ನು ಸಹ ಅವರು ತುಂಬಬೇಕಾಗಿಲ್ಲ.

ಉಭಯ ಪಕ್ಷಗಾರರು - ಎರಡೂ ಕಡೆಯ ಪಕ್ಷಗಾರರು ಕೂಡಿಕೊಂಡು ಲೋಕ ಅದಾಲತ್ ಮುಂದೆ ಬಂದರೆ ಬಹಳ ಒಳ್ಳೆಯದು.

ಒಂದು ವೇಳೆ ಈ ಎರಡೂ ಕಕ್ಷಿಗಾರರ ಬದಲು ಒಂದೇ ಕಡೆಯ ಕಕ್ಷಿಗಾರರು ಲೋಕ ಅದಾಲತ್ ಮುಂದೆ ಬಂದರೆ,

ಪ್ರತಿಪಕ್ಷದವರಿಗೆ ನೋಟಿಸನ್ನು ಕೊಟ್ಟು, ಕರೆಯಿಸಿ, ವಿಚಾರಣೆಯನ್ನು ನಡೆಸಿ, ತೀರ್ಪುಗಳನ್ನು ನೀಡಲಾಗುವುದು.

ಅಂಥ ನಿರ್ಣಯಗಳು ನ್ಯಾಯಾಲಯದ ನಿರ್ಣಯಗಳಿಗೆ ಯಾವುದೇ ದೃಷ್ಟಿಯಲ್ಲಿ ಕಡಿಮೆ ಇಲ್ಲ,

ಹಾಗೂ

ಅಂತಹ ನಿರ್ಣಯಗಳ ಮೇಲೆ ಮೇಲ್ಮನವಿಗಳಿಗೆ ಅವಕಾಶವಿಲ್ಲ,

ತಾವುಗಳು ಅಂತಹ ತೀರ್ಪುಗಳನ್ನು ಅಮಲ್‌ಬಜಾವಣೆ ಅಂದರೆ ಜಾರಿಗಾಗಿ (Execution Cases) ದರಖಾಸ್ತನ್ನು ದಾಖಲಿಸಿ - ಆದ ನಿರ್ಣಯದ ಫಲವನ್ನು ಬೇಗನೆ ಪಡೆಯಬಹುದು.

ಇಲ್ಲಿಯ ನಿರ್ಣಯಗಳು -

ನ್ಯಾಯಸಮ್ಮತವಾಗಿದ್ದರೆ ಮತ್ತು

ಸರ್ಕಾರದ ಧೋರಣೆಗೆ ವಿರೋಧವಾಗಿದ್ದರೆ ಮಾತ್ರ ಅಂತಹ ರಾಜಿಗಳನ್ನು ಮಾತ್ರ ಒಪ್ಪಲಾಗುತ್ತದೆ.

ಉದಾಹರಣೆಗೆ : ಉಭಯಪಕ್ಷಗಾರರು ಬಂದು ಅದರಲ್ಲಿ ಒಬ್ಬನು -

ವಿಧಾನಸೌಧವನ್ನು ನನ್ನ ಹೆಸರಿನಲ್ಲಿ ಅಚ್ಚಬೇಕು ಎಂದು ಕೇಳಿಕೊಂಡರೆ ಅದಕ್ಕೆ ಪ್ರತಿಪಕ್ಷದವರು ತಮ್ಮ ತಕರಾರು ಏನೂ ಇರುವುದಿಲ್ಲ ಎಂದು ಹೇಳಿದರೂ ಸಹ ಅಂತಹ ರಾಜಿಗಳನ್ನು ಒಪ್ಪಲಾಗುವುದಿಲ್ಲ.

ಇರಲಿ, ಈ ಕಾನೂನಿನಡಿ ತಾಂತ್ರಿಕ ತೊಂದರೆಗಳು ಇರುವುದಿಲ್ಲ.

ಉದಾಹರಣೆಗೆ : ಅ) ೧೦,೦೦೦-೦೦

(ಬ) ಅ ನ ದಾವೆಯ ಕಾನೂನಿನ ಪ್ರಕಾರ ಕಾಲಮಿತಿಯನ್ನು ಮಿಕ್ಕಿದ್ದರೂ (Barred by limitation) ಒಪ್ಪಲಾಗುತ್ತದೆ.

ಏಕೆಂದರೆ ಹಕ್ಕು ಸತ್ತಿರುವುದಿಲ್ಲ, ನಷ್ಟವಾಗಿರುವುದಿಲ್ಲ.

ಆದರೆ ಇಂಥಹುದೆ ದಾವೆಯನ್ನು ನ್ಯಾಯಾಲಯದ ಮುಂದೆ ಬಂದರೆ ಕಾಲಮಿತಿಯ ಕಾನೂನಿನ ಪ್ರಕಾರ ವಜಾ ಮಾಡಲಾಗುವುದು.

೨. ಉದಾ : ವಿವಾಹ ವಿಚ್ಛೇದನೆಗಾಗಿ ಇಬ್ಬರೂ ಒಪ್ಪಿದರೂ ಸಹ ನ್ಯಾಯಾಲಯದಲ್ಲಿ ಆದರೆ ದಂಪತಿಗಳಲ್ಲಿ ಪರಸ್ಪರ ಹೊಂದಾಣಿಕೆಯಾಗುವ ಸಾಧ್ಯತೆಯನ್ನು ನಿರೀಕ್ಷಿಸಲು ೬ ತಿಂಗಳುಗಳ ಕಾಲ ಕಾಯಬೇಕಾಗುತ್ತದೆ.

ಕಾರಣ, ಲೋಕ ಅದಾಲತ್‌ನ ಮುಂದೆ ಅಂದೇ ದಾಖಲಾದ ಅರ್ಜಿಯನ್ನು ಅಂದಂದೇ ನಿಕಾಲ್ ಮಾಡಲಾಗುತ್ತದೆ.

ಸಂಧಾನಕಾರರಾಗಿ ಒಬ್ಬ ನ್ಯಾಯಾಧೀಶರು ಹಾಗೂ ಒಬ್ಬ ವಕೀಲರು ಇರುತ್ತಾರೆ.

ಸಿವಿಲ್ ಕೋರ್ಟಿಗೆ ಇರುವಂತಹ ಎಲ್ಲಾ ಅಧಿಕಾರಗಳು ಈ ಲೋಕ ಅದಾಲತ್‌ಗೆ ಇರುತ್ತದೆ. ಅಂದರೆ ಸಾಕ್ಷಿಯನ್ನು ಕರೆಸುವುದು ಹಾಗೂ ಸಾಕ್ಷಿ ವಿಚಾರಣೆ ಮಾಡಲು ಅಧಿಕಾರವನ್ನು ಸಹ ಹೊಂದಿರುತ್ತಾರೆ.

ಅವಶ್ಯವೆನಿಸಿದರೆ ತಾಂತ್ರಿಕ ತಜ್ಞರ ಸಹಾಯವನ್ನು ಸಹ ಪಡೆಯಬಹುದಾಗಿದೆ.

ನ್ಯಾಯದಾನದ ದೃಷ್ಟಿಯಿಂದ ಜಗಳದ ಸ್ಥಳವೀಕ್ಷಣೆಯನ್ನು ಸಹ ಮಾಡಬಹುದು.

ನ್ಯಾಯಾಲಯದಲ್ಲಿ ನ್ಯಾಯಾಧೀಶರ ಪಾತ್ರ - ಕ್ರೀಡಾ ನ್ಯಾಯದರ್ಶಿಯಂತೆ ಇರುತ್ತದೆ - ಕಬಡ್ಡಿ.

ಆದರೆ ಲೋಕ ಅದಾಲತ್‌ನಲ್ಲಿ ''ಸಮನ್ಯಾಯಕ್ಕೆ'' ಹೆಚ್ಚಿನ ಪ್ರಾಶಸ್ತ್ಯ.

ಉದಾ :

ಅಣ್ಣ	ತಮ್ಮಂದಿರು ಮೂರು (೩)
ಸಾಲ	ನ್ಯಾಯಾಧೀಶರು ಭಾಗವಹಿಸಿರುತ್ತೇವೆ ಹಾಗೂ ಅಣ್ಣನ ಮೇಲೆ ಸಾಲ ಹೊರಿಸಿ
ಸಾಕ್ಷಿ ಆಧಾರಗಳಿರುವುದಿಲ್ಲ	ಅದನ್ನು ಕೊಡದೇ ಆಸ್ತಿಯನ್ನು ಉಪಭೋಗ ಮಾಡುವುದು

ನ್ಯಾಯಾಲಯಗಳಲ್ಲಿ ರುಜುವಾತು ಪಡಿಸುವುದು ಕಷ್ಟ

ಧರ್ಮ-ನ್ಯಾಯ-ಸಮ್ಮತವಲ್ಲ ಎಂದು ತಮ್ಮಂದಿರಿಗೆ ತಿಳಿ ಹೇಳಿ ಅವರ ಮನವೊಲಿಸಿ ಎಷ್ಟೋ ವ್ಯಾಜ್ಯಗಳಲ್ಲಿ ಯಶಸ್ಸನ್ನು ಸಾಧಿಸಿದ್ದೇವೆ.

ಕಾರಣ ತಾವುಗಳು ಈ ಕಾನೂನಿನಡಿಯಲ್ಲಿ ಕೊಡಮಾಡಿದ ಇಂತಹ ಅಮೂಲ್ಯವಾದ ವ್ಯವಸ್ಥೆಯ ಸದುಪಯೋಗವನ್ನು ಮಾಡಿಕೊಳ್ಳಬೇಕು ಹಾಗೂ ನಿರಕ್ಷರ ಕಕ್ಷಿಗಾರರಿಗೆ ಹಳ್ಳಿಗಳಲ್ಲಿ - ಗ್ರಾಮಗಳಲ್ಲಿ ಈ ಬಗ್ಗೆ ತಿಳಿ ಹೇಳಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಆ ಮಾತು ಬೇರೆ, ''ಆದರ್ಶ ಕಕ್ಷಿಗಾರನು'' ಯಾರೆಂದರೆ-

'ಬಹಳ ತೊಂದರೆಯಲ್ಲಿರುವ ಬಹಳ ಸಂಪತ್ತುಳ್ಳ ವ್ಯಕ್ತಿ' ಎಂದಾಗುತ್ತದೆ. ಆದರೆ ನಮ್ಮಲ್ಲಿ ಅಂತಹ ಮನೋಭಾವನೆ ಇರುವುದಿಲ್ಲ. ಕಾರಣ ನಮ್ಮ ದೇಶದಲ್ಲಿ ತೊಂದರೆ ಯಲ್ಲಿರುವ ಸಾವಿರಾರು ಜನರು ಇದ್ದಾರೆ. ಆದರೆ ಸಂಪತ್ತುಳ್ಳವರು ಬಹಳ ವಿರಳ, ಕಾರಣ-

ಅಂಥವರ ಬಡವರ ಹಾಗೂ ಆರ್ಥಿಕವಾಗಿ ಹಿಂದುಳಿದ ಜನರ ಕಣ್ಣೀರು ಒರೆಸುವ ಕೆಲಸ ತಮ್ಮಂತಹ ಪ್ರಜ್ಞಾವಂತರಿಂದ ಹಾಗೂ ಗ್ರಾಮ ಪಂಚಾಯಿತಿ ಸದಸ್ಯರಿಂದ - ಇಂದು ಆಗಬೇಕಾಗಿದೆ.

ಇಂಥ ಕೆಲಸ ಪ್ರಾಮಾಣಿಕವಾಗಿ ಆದಾಗ ಮಾತ್ರ - ರಾಷ್ಟ್ರಪಿತ ಮಹಾತ್ಮಾ ಗಾಂಧಿ ಯವರ ''ರಾಮರಾಜ್ಯ''ದ ಕನಸು ನನಸಾಗಲು ಸಾಧ್ಯ.

ಸೂರ್ಯ ಇಡೀ ಜಗತ್ತನ್ನೇ ಬೆಳಗುವವನೆಂದು ಒಂದು ಚಿಕ್ಕ ದೀಪ ತನ್ನ ಸುತ್ತಲೂ ಬೆಳಕನ್ನು ಬೀರುವ ಕೆಲಸವನ್ನು ಕೈ ಬಿಡುವುದಿಲ್ಲ.

ಅದೇ ರೀತಿ ಈ ನಾಡಿನ ಪ್ರತಿಯೊಬ್ಬರಲ್ಲೂ ''ನ್ಯಾಯದಾನ''ದ ಚಿಂತನೆಯ ಬಗ್ಗೆ ಇನ್ನೂ ಹೆಚ್ಚಿನ ಶ್ರೇಷ್ಠ ಚಿಂತನೆಗಳು ದಶದಿಕ್ಕುಗಳಿಂದ ತಮ್ಮತ್ತ ಹರಿದುಬರಲಿ. ಈ ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿನ ''ನ್ಯಾಯದಾನ'' ಒಂದು ಚಿಂತನೆ - ರಾಷ್ಟ್ರದಾದ್ಯಂತ ಬೆಳಗಲಿ ಎಂದು ಹಾರೈಸಿ ಕೊನೆಯಲ್ಲಿ ಈ ಮಂಗಳಕರ ನುಡಿಯನ್ನು ನೆನೆಯ ಬಯಸುವೆ -

ಸಹನಾಭವತು, ಸಹನೌ ಭುನಕ್ತು
ಸಹವೀರ್ಯಂ ಕರವಾವಹೈ
ತೇಜಸ್ವಿನಾ ವಧೀತಮಸ್ತು
ಮಾವಿದ್ವಿಷಾವಹೈ
ಓಂ ಶಾಂತಿ ಶಾಂತಿ ಶಾಂತಿಃ

ದೇವರು ನಮ್ಮನ್ನು ಜೊತೆ ಜೊತೆಯಲ್ಲಿಯೇ ರಕ್ಷಿಸಲಿ
ನಾವೆಲ್ಲರೂ ಆಹಾರವನ್ನು ಹಾಕಿಸಿಕೊಂಡು (ತಿನ್ನೋಣ)
ಸೇವಿಸೋಣ
ನಾವೆಲ್ಲರೂ ಒಗ್ಗಟ್ಟಿನಿಂದ ದುಡಿಯೋಣ
ನಮ್ಮ ಅಧ್ಯಯನ ತೇಜಸ್ವಿಯಾಗಲಿ
ನಾವು ಯಾರನ್ನೂ ದ್ವೇಷಿಸುವುದು ಬೇಡ
ಎಲ್ಲೆಲ್ಲಿಯೂ ಯಾವಾಗಲೂ
ಶಾಂತಿ ಇರಲಿ, ಶಾಂತಿ ಇರಲಿ, ಶಾಂತಿ ಇರಲಿ.

★★★★

ಅನುಬಂಧ - Appendix

ನ್ಯಾಯದಾನಕ್ಕೆ ಸಂಬಂಧಿಸಿದ ಕೆಲವು ನುಡಿಗಟ್ಟುಗಳು

Some Phrases

೧. ಅಟ್ಟವನ್ನು ಬೆಟ್ಟ ಮಾಡು

To make a mountain out of a mole hill.

೨. ಅಡುಗೂಲಜ್ಜಿ ಕಥೆ (ಕಾಗಕ್ಕ ಗುಬ್ಬಕ್ಕ ಕಥೆ)

A cock and bull story

೩. ಅಹನ್ಯಹನಿ ಕಾಲಕ್ಷೇಪ

A hand to mouth existence

೪. ಉಗುರಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಳ್ಳು

Cracking a nut with a sledge hammer

೫. ಉಭಯ ಸಂಕಟ

Between horns of a dilemma

೬. ಉರಿಯುವ ಗಾಯಕ್ಕೆ ಉಪ್ಪು ಹಾಕಿದ ಹಾಗೆ

To add insult to injury

೭. ಕಣ್ಣಿಗೆ ಮಣ್ಣೆರಚು

To throw dust in the eyes

೮. ಕೊನೆ ಇಲ್ಲದೆ

Add infinitum

೯. ಗಾಳಿ ಗೋಪುರ ಕಟ್ಟು

To build castles in the air

೧೦. ಗಾಳಿಗೆ ತೂರು

To throw to the winds

೧೧. ಗುಬ್ಬಿ ಮೇಲೆ ಬ್ರಹ್ಮಾಸ್ತ್ರ

Breaking a butterfly on a wheel

೧೨. ಗೋರ್ಕಲ್ಲ ಮೇಲೆ ಮಳೆ ಸುರಿದ ಹಾಗೆ

Like plughing the sand

೧೩. ಗೋಮುಖ ವ್ಯಾಘ್ರ

Wolf in sheep's clothing

೧೪. ತಲೆಗೊಂದು ಕೋಡು

A feather in one's cap

೧೫. ತಲೆಬುಡ ತಿಳಿಯುವುದಿಲ್ಲ

Not to make head or tail of something

೧೬. ನಗೆಪಾಟಲು

The laughing stock

೧೭. ನಡು ನೀರಿನಲ್ಲಿ ಕೈಬಿಡು

To leave in the lurch

೧೮. ಮನಸ್ಸಿನಲ್ಲಿ ಮಂಡಿಗೆ ಮಾಡಿಕೊ

To build castles in the air

೧೯. ಮೀಸೆ ತಿರುವು

To show a bold front

೨೦. ಮುಯ್ಯಿಗೆ ಮುಯ್ಯಿ ತೀರಿಸು

To pay in one's own coin

೨೧. ಲಂಗಿಲ್ಲ ಲಗಾಮಿಲ್ಲ

Ad libitum

೨೨. ಲೆಕ್ಕಕ್ಕಿಲ್ಲ ಜಮಕ್ಕಿಲ್ಲ

Small fry

೨೩. ಸಾಧಕ ಬಾಧಕಗಳು

Pross and cons

೨೪. ಸಿಂಹ ಪಾಲು

The lion's share

೨೫. ಹಣವನ್ನು ನೀರಿನಂತೆ ಖರ್ಚು ಮಾಡು

To make the money fly

೨೬. ಹನುಮಂತನ ಬಾಲ

Penelope's web

೨೭. ಹಾಗೂ ಸರಿ ಹೀಗೂ ಸರಿ

Betwirt and between

೨೮. ಹಿತಶತ್ರು

A snake in the grass

೨೯.ನೆಂಟರಿಷ್ಟರು

Kith and kin

೩೦. ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡಿರು

Have one's heart in one's mouth

೩೧. ಬಾಣಲೆಯಿಂದ ಒಲೆಗೆ ಬಿದ್ದ ಹಾಗೆ

From the frying pan to the fire

೩೨. ಬಾಲ ಕತ್ತರಿಸು

To clip one's wings

೩೩. ಬೆಂದ ಮನೆಗೆ ಹಿರಿದದ್ದೇ ಲಾಭ

To fish in the troubled waters

೩೪. ಬೆಲೆ ಅನುಸಾರವಾಗಿ

Ad valorom

೩೫. ಭಗೀರಥ ಪ್ರಯತ್ನ

To move earth and heaven

೩೬. ಮಂಗಳ ಹಾಡು

To ring down the curtain

To drop the curtain

★★★★

ಕೆಲವು ಗಾದೆಗಳು - Some Proverbs

೧. ಆಪತ್ಕಾಲೇ ನಾಸ್ತಿ ಮರ್ಯಾದಾ

Necessity knows no law

೨. ಆಡುವುದು ಮಾಡುವುದು ನಮ್ಮ ಇಚ್ಛೆ. ಆಗುವುದು ಬಿಡುವುದು ದೇವರಿಚ್ಛೆ

(ತಾನೊಂದು ಬಗೆದರೆ ದೈವ ಒಂದು ಬಗೆಯಿತು)

Man proposes God disposes

೩. ಉಂಡ ಮನೆಗೆ ಎರಡು ಬಗೆಯಬೇಡ

Cast no dirt into the well that gives you water

೪. ಎರಡು ಕೈ ಸೇರಿದರೆ ಚಪ್ಪಾಳೆ

It takes two to make a quarrell

೫. ಒಂದು ಮಸಿ ಒಂದು ಚಿತ್ತಾರವನ್ನೇ ಕೆಡಿಸಿತು

A small leak will sink a great ship

೬. ಒಡೆದು ಹೋದ ಹಾಲಿಗೆ ಅತ್ತೇನು ಪ್ರಯೋಜನ ?

It is no use crying over spilt milk

೭. ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು

Faults are thick where love is thin

೮. ಕನ್ನಡಿಯೊಳಗಿನ ಗಂಟಿಗಿಂತ ಕೈಯಲ್ಲಿರುವ ದಂಟೇ ಲೇಸು

A bird in the hand is worth two in the bush

೯. ಕುಣಿಯಲು ಬಾರದವಳು ನೆಲ ಡೊಂಕು ಅಂದಳು

A bad workman blames the tools

೧೦. ಕೆಟ್ಟ ಮೇಲೆ ಬುದ್ಧಿ ಬಂತು ಅಟ್ಟ ಮೇಲೆ ಒಲೆ ಉರಿಯಿತು

Growing wise after the event

೧೧. ಕೈಗೆ ಬಂದ ತುತ್ತು ಬಾಯಿಗಿಲ್ಲ

There is many a slip between the cup and lip

೧೨. ಗಳಿಸುವವನೊಬ್ಬ ಬಳಸುವವನೊಬ್ಬ

One beats the bush, another takes the bird

೧೩. ದಿಕ್ಕಿಲ್ಲದವನು ದೆವ್ವ ತಬ್ಬಿಕೊಂಡ

A drowning man will clutch at a straw

೧೪. ನನ್ನ ಮೂಗು ಹೋದರೂ ಚಿಂತಿಲ್ಲ, ಪಕ್ಕದ ಮನೆಯವರಿಗೆ ಅಪಶಕುನ ಆಗಬೇಕು

To cut off the nose to spite the face

೧೫. ಪಾಲಿಗೆ ಬಂದದ್ದು ಪಂಚಾಮೃತ

Make the best of a bad bargain

೧೬. ಬರಿ ಕೈಗಿಂತ ಹಿತ್ತಾಳೆಯ ಕಡಗ ಲೇಸು

Half a loaf is better than no bread

****

ಕಾನೂನಿನ ಉದ್ಧರಣಗಳು

೧. The law aims at perfection

ಕಾನೂನಿನ ಗುರಿ ಪರಿಪೂರ್ಣತೆ (ಕುಂದು ಇಲ್ಲದಿರುವಿಕೆ)

೨. The law effects injustice to no one ; and does injury to no one

ಕಾನೂನು ಯಾರಿಗೂ ಅನ್ಯಾಯವನ್ನು ಮಾಡುವುದಿಲ್ಲ ಮತ್ತು ಯಾರಿಗೂ ಹಾನಿಯನ್ನು ಸಹಾ ಮಾಡುವುದಿಲ್ಲ

೩. Every law has a loophole

ಪ್ರತಿಯೊಂದು ಕಾನೂನುಗಳಲ್ಲಿಯೂ ದೋಷಗಳು ಇರುತ್ತವೆ.

೪. Laws catch flies but let hornets go free

ಕಾನೂನು ಸಣ್ಣ ನೊಣಗಳನ್ನು ಹಿಡಿಯುತ್ತದೆ. ಆದರೆ ಮುಳ್ಳುಗಳುಳ್ಳವು ದೊಡ್ಡ ಹುಳುಗಳನ್ನು ಹಾರಲು ಬಿಡುತ್ತದೆ.

೫. New laws, new frauds

ಹೊಸ ಕಾನೂನುಗಳು ಹೊಸ ಮೋಸಗಳು

೬. The law is not the same at morning and at night

ಕಾನೂನು ಬೆಳಿಗ್ಗೆ ಮತ್ತು ರಾತ್ರಿ ಒಂದೇ ತರಹನಾಗಿರುವುದಿಲ್ಲ

೭. The more laws, the more offenders

ಹೆಚ್ಚು ಹೆಚ್ಚು ಕಾನೂನುಗಳಾದಷ್ಟು ಹೆಚ್ಚು ಹೆಚ್ಚು ಅಪರಾಧಿಗಳು ಹುಟ್ಟುತ್ತಾರೆ.

೮. A penny-weight of love is worth a pound of law

೧೬ ಆಣೆಯಷ್ಟು ಕಾನೂನುಗಳು ಒಂದಾಣೆಯಷ್ಟು ಪ್ರೀತಿಗೆ ಸಮ.

೯. ....the letter killeth, but the spirit giveth life

ಅಕ್ಷರಗಳು ಕೊಂದರೆ-ಕಾನೂನಿನ ಇಂಗಿತಗಳು ಜೀವದಾನವನ್ನು ಮಾಡುತ್ತವೆ.

೧೦. Every law is the invention and gift of the gods

ಪ್ರತಿಯೊಂದು ಕಾನೂನುಗಳು ಭಗವಂತನ ಕಲ್ಪನಾಶಕ್ತಿ ಮತ್ತು ಕೊಡುಗೆಗಳು.

೧೧. Even when laws have been written down, they ought not always to remain unaltered

ಕಾನೂನುಗಳನ್ನು ಬರೆದಿಟ್ಟಿದ್ದರು ಸಹಾ ಅವುಗಳು ಬದಲಾಗದೇ ಇರಲೇಬಾರದು.

೧೨. The law is reason free from passion

ಕಾನೂನು ಎಂದರೆ ಭಾವೋದ್ರೇಕವಿರದ ಅಂತಃಪ್ರಜ್ಞೆ.

೧೩. People can be strong where the laws are strong

ಕಾನೂನುಗಳು ಗಟ್ಟಿಯಾಗಿದ್ದರೆ ಪ್ರಜೆಗಳು ಗಟ್ಟಿಯಾಗಿರಲು ಸಾಧ್ಯ.

೧೪. Law is the highest reason, implanted in Nature, which commands what ought to be done and forbids the opposite

ಕಾನೂನು ಎಂದರೆ ಪ್ರಕೃತಿಯಲ್ಲಿ ಆಳವಾಗಿ ಬೇರೂರಿದ ಬಹು ಎತ್ತರದ ಮಾಡಲೇ ಬೇಕಾದದ್ದನ್ನು ಮಾಡುವಂತೆ ನಿರ್ದೇಶಿಸುವ ಹಾಗೂ ಮಾಡಬಾರದ್ದನ್ನು ನಿರ್ಬಂಧಿಸುವ ಅಂತಃಪ್ರಜ್ಞೆ.

೧೫. The laws put the safety of all above the safety of one

ಕಾನೂನು ಎಂದರೆ ಎಲ್ಲರ ರಕ್ಷಣೆಯನ್ನು ಒಬ್ಬರ ರಕ್ಷಣೆಗಿಂತಲೂ ಎತ್ತರದಲ್ಲಿ ಇಡುವಂತಹುದು.

೧೬. How harshly we sanction a law unfair to ourselves

ನಾವೆಷ್ಟು ದುಡುಕಿನಿಂದ ಶಾಸನಗಳನ್ನು ರಚಿಸುತ್ತೇವೆಯೋ ನಮ್ಮಷ್ಟಕ್ಕೆ ನಾವು ಅಷ್ಟೇ ಅನ್ಯಾಯವನ್ನು ಮಾಡಿಕೊಂಡಂತೆ.

೧೭. No law perfectly suits the convenience of every member of the community ; the only consideration is, whether upon the whole it be profitable to the greater part.

ಕಾನೂನು ಎಂದರೆ ಒಂದು ಸಮುದಾಯದಲ್ಲಿ ಎಲ್ಲರಿಗೂ ಅನುಕೂಲಿಸಲು ಆಗದಂತಹ, ಸಾಮಾನ್ಯವಾಗಿ ಎಲ್ಲರಿಗೂ ಅನ್ವಯವಾಗುವ ರೀತಿಯಲ್ಲಿ ಲಾಭದಾಯಕವಾಗುವಂತೆ ಮಾಡುವುದು.

೧೮. The prince is not above the laws, but the laws above the prince

ರಾಜನು ಸಹಾ ಕಾನೂನಿಗಿಂತ ಎತ್ತರದಲ್ಲಿರಲು ಸಾಧ್ಯವಿಲ್ಲ; ಆದರೆ ಕಾನೂನು ಅವನಿಗಿಂತಲೂ ಎತ್ತರದಲ್ಲಿರುತ್ತದೆ.

೧೯. As physicians are the preservers of the sick, so are the laws of the injured.

ವೈದ್ಯರು ರೋಗಿಗಳನ್ನು ರಕ್ಷಿಸಿದಂತೆ ಕಾನೂನುಗಳು ಅನ್ಯಾಯಕ್ಕೆ ಒಳಗಾದವರನ್ನು ರಕ್ಷಿಸುತ್ತದೆ.

೨೦. Good men need no laws, and bad men are not made better by them

ಒಳ್ಳೆಯ ಮನುಷ್ಯರಿಗೆ ಕಾನೂನುಗಳೇ ಬೇಕಿಲ್ಲ ಮತ್ತು ಅವು ಕೆಟ್ಟವರನ್ನು ಒಳ್ಳೆಯವರನ್ನಾಗಿ ಮಾಡಲಾರವು.

೨೧. Laws are spiders' webs, which stand firm when any light and yielding object falls upon them, while a larger thing breaks through them and escapes.

ಕಾನೂನುಗಳು ಎಂದರೆ ಜೇಡನ ಬಲೆಯ ಹಾಗೆ. ಹಗುರವಾದ ವಸ್ತು ಅದರ ಮೇಲೆ ಬಿದ್ದರೆ ಅಥವಾ ಅದರ ಬಲೆಗೆ ಬೀಳುವ ಹುಳುಗಳನ್ನು ತನ್ನೊಳಗೆ ಇರಿಸಿಕೊಂಡು ಹೇಗೆ ಗಟ್ಟಿಯಾಗಿರುತ್ತದೆಯೋ ಹಾಗೆ ಅದರ ಭಾರವಾದ ವಸ್ತು ಅದನ್ನು ಹರಿದು ಪಾರಾಗಿಬಿಡುತ್ತದೆ.

೨೨. The law is blind and speaks in general terms

ಕಾನೂನು ಕುರುಡು ಆದ ಕಾರಣ - ಎಲ್ಲರಿಗೂ ಅನ್ವಯವಾಗುವ ರೀತಿಯಲ್ಲಿ ಮಾತನಾಡುತ್ತದೆ.

೨೩. Law (is) licensed breaking of the peace

ಕಾನೂನು ಎಂದರೆ ಶಾಂತತೆಯನ್ನು ಭಂಗ ಮಾಡುವ ಅನುಮತಿ.

೨೪. ...three things are always favoured in law - life, liberty and dower

ಕಾನೂನು ಯಾವಾಗಲೂ ಜೀವ, ಸ್ವತಂತ್ರ್ಯ ಮತ್ತು ಆಸ್ತಿ (ಸ್ವತ್ತು) ಈ ಮೂರನ್ನು ರಕ್ಷಿಸಲು ಸಹಾಯ ಮಾಡುತ್ತದೆ.

೨೫. It is best to make the law our friend

ಕಾನೂನನ್ನು ನಾವು ಯಾವಾಗಲೂ ನಮ್ಮ ಗೆಳೆಯನಂತೆ ಭಾವಿಸಬೇಕು.

೨೬. Are laws to be enforced simply because they were made?

ಕಾನೂನುಗಳನ್ನು ಮಾಡಿದ್ದಾರೆಂದ ಮಾತ್ರಕ್ಕೆ ಸುಮ್ಮನೆ ಆಚರಣೆಯಲ್ಲಿ ತರಲೇ ಬೇಕೆ ? (ಎಂದು ಚಿಂತಿಸಬೇಕು, ಚಿಂತನೆ ಮಾಡಬೇಕು)

೨೭. Law is not a science, but is essentially empirical

ಕಾನೂನು ವಿಜ್ಞಾನವಲ್ಲ, ಆದರೆ ಖಂಡಿತ ವಾಸ್ತವತೆ.

೨೮. When I am sick, then I believe in law

ನನಗೆ ಕಷ್ಟ ಬಂದಾಗ ಮಾತ್ರ ಕಾನೂನನ್ನು ನಂಬುತ್ತೇನೆ.

೨೯. One with the law is a majority

ಕಾನೂನಿನೊಂದಿಗಿದ್ದವನಿಗೆ ಬಹುಮತ ಇರುತ್ತದೆ.

೩೦. When there is such a degree of probability as to lead to a reasonable assurance that a given conclusion ought to be and will be reduced to a judgement, we speak of that conclusion as the law.

ಯಾವಾಗ ಸಾಧ್ಯತೆಗಳು ಹೆಚ್ಚಾಗಿ ಸಾಮಾನ್ಯ ಮನುಷ್ಯನ ನಿರ್ಣಯಕ್ಕೆ ಬರುವಂತೆ ಆಶ್ವಾಸನೆ ಮತ್ತು ಆ ನಿರ್ಣಯಕ್ಕೆ ಬಂದೇ ತೀರಬೇಕೆಂದು ಅನಿಸುತ್ತದೆಯೋ ಅದಕ್ಕೆ ಅಂತಹ ನಿರ್ಣಯಕ್ಕೆ ಕಾನೂನು ಎಂದು ಕರೆಯುತ್ತೇವೆ.

೩೧. It would be a narrow conception of jurisprudence to confine the notion of "laws" to what is found written on the statute books

ಕಾನೂನು ಪುಸ್ತಕಗಳಲ್ಲಿ ಬರೆದಿದ್ದು ಮಾತ್ರ ಎಂದು ತಿಳಿಯುವುದು ನ್ಯಾಯಶಾಸ್ತ್ರದ ಸಂಕುಚಿತ ಅರ್ಥೈಸುವಿಕೆ ಆಗುತ್ತದೆ.

೩೨. A law is something which must have a moral basis, so that there is an inner compelling force for every citizen to obey.

ಕಾನೂನಿನ ತಳಹದಿ ನೈತಿಕತೆಯಾದಾಗ ಮಾತ್ರ ಅದರಲ್ಲಿಯ ಒಳಶಕ್ತಿ - ಎಲ್ಲರನ್ನು ಅದಕ್ಕೆ ವಿಧೇಯನಾಗಿರುವಂತೆ ಪ್ರೇರೇಪಿಸಬಲ್ಲದು.

೩೩. Law offers a guiding thread to us.... one of purpose - infinitely worthwhile, for in the long view it is more

important that human beings should learn to get on with each other then that they should be more comfortable materially and safer physically

ಕಾನೂನಿನ ಅಪರಿಮಿತ ಮತ್ತು ದೂರ ದೃಷ್ಟಿಯುಳ್ಳ ಉದ್ದೇಶವೆಂದು ನಾವುಗಳು ಈ ಲೌಕಿಕ ಪ್ರಪಂಚದಲ್ಲಿ ಸುಖವಾಗಿರಬೇಕು ಎನ್ನುವುದಕ್ಕಿಂತಲೂ ಒಬ್ಬರಿಗೆ ಒಬ್ಬರು ಹೊಂದಿಕೊಂಡು ಬಾಳ್ವೆಯನ್ನು ಮಾಡಿಕೊಂಡು ಹೋಗಬೇಕು ಎನ್ನುವುದನ್ನು ಕಲಿಯುವುದೇ ಆಗಿದೆ.

೩೪. Law is experience developed by reason and applied continually to further experience

ಕಾನೂನು ಎಂದರೆ ಅಂತಃಪ್ರಜ್ಞೆಯನ್ನು ಧರಿಸಿದ ಅನುಭವ ಮತ್ತು ನಿರಂತರ ಮುಂದಿನ ಅನುಭವಗಳಿಗೆ ಅನ್ವಯಿಸುವಿಕೆ.

೩೫. Law is the backbone which keeps man erect

ಕಾನೂನು ಮಾನವನ ಬೆನ್ನು ಮೂಳೆ - ಆದ್ದರಿಂದ ಅವನು ನೇರವಾಗಿ ನಿಲ್ಲಲು ಸಾಧ್ಯ.

೩೬. You have to respect for the law. But you can't respect the law when the law is not respectable

ಕಾನೂನನ್ನು ನೀವು ಗೌರವಿಸಬೇಕು. ಆದರೆ ಕಾನೂನೇ ಅಗೌರವಯುತವಾಗಿದ್ದರೆ ನೀವು ಅದನ್ನು ಗೌರವಿಸುವುದಿಲ್ಲ.

೩೭. The law is above the law, you know.

ಕಾನೂನು ಎಂದರೆ ನೀವು ತಿಳಿದಿರುವ ಕಾನೂನಿಗಿಂತಲೂ ಎತ್ತರವಾದದ್ದು.

೩೮. Laws that are not enforced....are bad laws

ಆಚರಣೆಯಲ್ಲಿ ತರಲಾರದ ಕಾನೂನುಗಳು ಒಳ್ಳೆಯ ಕಾನೂನುಗಳೇ ಅಲ್ಲ.

೩೯. Nobody has a more sacred obligation so obey the law than those who make the law

ಕಾನೂನನ್ನು ಪಾಲಿಸುವ ಪವಿತ್ರಹೊಣೆ ಕಾನೂನನ್ನು ರಚಿಸಿದವನಿಗಿಂತಲೂ ಬೇರೆಯವರ ಮೇಲೆ ಹೆಚ್ಚು ಇರಲಾರದು.

೪೦. If human society cannot be carried on without lawsuits, it cannot be carried on without penalties

ಮಾನವನ ಸಮಾಜವನ್ನು ವ್ಯಾಜ್ಯಗಳು ಇಲ್ಲದೇ ಮುಂದುವರಿಸಲಾಗದೇ ಇದ್ದರೆ ದಂಡಗಳನ್ನು ವಿಧಿಸದೇ ಮುಂದುವರಿಸಲು ಆಗುವುದಿಲ್ಲವೆಂದು ಅರ್ಥ.

೪೧. The attrocity of the laws prevents their execution

ಕಾನೂನಿನ ಉಲ್ಲಂಘನೆ - ಕಾನೂನಿನ ಕಾರ್ಯಾಚರಣೆಯನ್ನು ಅಡ್ಡಿ ಪಡಿಸುತ್ತದೆ.

೪೨. A lidless watcher of the public weal

ಸಾರ್ವಜನಿಕರ ರಕ್ಷಣೆ (ಏಳಿಗೆ) ಯನ್ನು ಕಣ್ಣರೆಪ್ಪೆಗಳನ್ನು ಮುಚ್ಚದೇ ಸದಾಕಾಲ ಬಯಸುವುದೇ ಕಾನೂನು.

೪೩. He did not know the right people. That's all a police record means

ಸರಿಯಾದ ಜನರ ಬಗ್ಗೆ ಗೊತ್ತಿರದೇ ಇರುವುದೇ ಪೊಲೀಸ್ ದಾಖಲಾತಿಗಳು.

೪೪. In the age of modern advanced technology, when the criminal can avail himself of every new invention, law-enforcement officers are denied even the simplest of electronic devices, even though they will be under the supervision of the Courts

ಕಾನೂನನ್ನು ಕಾರ್ಯಾಚರಣೆ ಮಾಡುವವರಿಗೆ ಅಪರಾಧಿಗಳಲ್ಲಿರುವಷ್ಟು ಅತ್ಯಾಧುನಿಕ ಉಪಕರಣಗಳು ಇಲ್ಲದೇ ಇರುವುದು, ಮುಷ್ಟಿ ಕಲಹದ ಜಟ್ಟಿಯನ್ನು ಅರಣ್ಯದ ಕಾನೂನೇ ತನ್ನ ಕಾನೂನು ಎಂದು ತಿಳಿದಿರುವ ಗೊರಿಲ್ಲಾ ಜೊತೆ ಯುದ್ಧ ಮಾಡಲು ಹೇಳಿದಂತೆ.

೪೫. Who will protect the public when the police violate the law ?

ಒಂದು ವೇಳೆ ಪೊಲೀಸರೇ ಕಾನೂನುಗಳನ್ನು ಮುರಿದರೆ ಸಾರ್ವಜನಿಕರನ್ನು ರಕ್ಷಿಸುವವರು ಯಾರು ?

೪೬. Laws not enforced cease to be laws, and rights not defended may wither away

ಕಾನೂನುಗಳನ್ನು ಆಚರಣೆಯಲ್ಲಿ ತರದೇ ಇದ್ದರೆ ಅವುಗಳು ಕೊನೆ

ಗೊಂಡಂತೆ ಮತ್ತು ಹಕ್ಕುಗಳನ್ನು ರಕ್ಷಿಸದೇ ಇದ್ದರೆ ಅವುಗಳು ಗಾಳಿಗೆ ಹೋದಂತೆ.

೪೭. If police efficiency were an end in itself, the police would be free to put an accused on the rack. Police efficiency must yield to constitutional rights

ಪೋಲೀಸರ ದಕ್ಷತೆಯೇ ಗುರಿಯಾದರೆ ಅವರು ಅಪರಾಧಿಗಳಿಗೆ ಚಿತ್ರಹಿಂಸೆಯನ್ನು ಕೊಡಲು ಸ್ವತಂತ್ರರು ಆಗಿ ಬಿಡುತ್ತಾರೆ. ಕಾರಣ ಸಂವಿಧಾನಾತ್ಮಕ ಹಕ್ಕುಗಳೇ ಗುರಿಯಾಗಿ - ಪೋಲೀಸರ ದಕ್ಷತೆಯೇ ಆ ಗುರಿಯನ್ನು ತಲುಪುವ ಸಾಧನವಾಗಬೇಕು.

ಟಿಪ್ಪಣಿ : ಇನ್ನೂ ಹೆಚ್ಚಿನ ಉದ್ಧರಣಗಳನ್ನು ತಿಳಿಯಲಿಚ್ಛಿಸುವವರು ಇದೇ ಲೇಖಕರ ''ನ್ಯಾಯಾಂಗದ ನುಡಿಮುತ್ತುಗಳು'' ಪುಸ್ತಕವನ್ನು ನೋಡಿ.

★★★★

ನ್ಯಾಯದಾನ - ಉದ್ಧರಣಗಳು

೧. A just balance preserves justice

ಸರಿಯಾದ ತಕ್ಕಡಿಯ ತೂಕ, ಸರಿಯಾದ ನ್ಯಾಯದಾನವನ್ನು ಮಾಡಬಲ್ಲದು.

೨. There is no wrong without a remedy

ಪರಿಹಾರವಿಲ್ಲದ ತಪ್ಪು ಯಾವುದೂ ಇಲ್ಲ.

೩. Much law, but little justice

ಹೆಚ್ಚು ಕಾನೂನುಗಳು ಕಡಿಮೆ ನ್ಯಾಯದಾನ.

೪. Where the fault springs, there let justice fall

ಎಲ್ಲಿ ದೋಷ ಉದ್ಭವಿಸುತ್ತದೆಯೋ ಅಲ್ಲಿ ನ್ಯಾಯದಾನ ಅದನ್ನು ಸರಿಪಡಿಸಬೇಕು.

೫. The love of justice is simply, in the majority of men, the fear of suffering injustice

ಸುಮ್ಮನೆ ಹೆಚ್ಚು ಜನರಲ್ಲಿ ನ್ಯಾಯದಾನದ ಬಗ್ಗೆ ಪ್ರೀತಿ ಇರುವುದು ಅನ್ಯಾಯದ ಭಯದಿಂದ.

೬. Justice is what is established ; and thus all our established laws will be regarded as just, without being examined, since they are established

ನ್ಯಾಯದಾನವೆಂದರೆ ಸ್ಥಾಪಿತವಾದದ್ದು, ಆ ಕಾರಣಕ್ಕಾಗಿ ಸ್ಥಾಪಿತ ಕಾನೂನುಗಳನ್ನು ನ್ಯಾಯವಾಗಿವೆಯೆಂದು ಹಿಡಿಯಲಾಗುತ್ತದೆ, ಅವುಗಳ ಸ್ಥಾಪನೆಯನ್ನು ಪರೀಕ್ಷಿಸದೇ.

೭. Hard is the task of justice where distress excites our mercy, yet, demands redress

ಮಾನಸಿಕ ಅಥವಾ ದೈಹಿಕ ಸಂಕಟದಲ್ಲಿ ನ್ಯಾಯದಾನ ಬಹು ಕಠಿಣ. ನಮ್ಮ ಅನುಕಂಪವನ್ನು ಅದು ಉದ್ರೇಕಿಸುತ್ತದೆ, ಅಷ್ಟೇ ಅಲ್ಲ ಪರಿಹಾರವನ್ನು ಸಹಾ ಕೇಳುತ್ತದೆ.

೮. Let justice be done though the heavens fall

ಸ್ವರ್ಗ ಕಳಚಿ ಬಿದ್ದರೂ ನ್ಯಾಯದಾನವನ್ನು ಮಾಡಬೇಕು.

೯. It costs us nothing to be just

ಸರಿಯಾದ ಮಾರ್ಗದಲ್ಲಿ ನಡೆಯಲು ಏನೂ ಖರ್ಚು ಆಗುವುದಿಲ್ಲ.

೧೦. Of relative justice law may know something; of expediency it knows much; with absolute justice it does not concern itself

ಸಂಬಂಧ ಸೂಚಕ ನ್ಯಾಯದಾನ ಕಾನೂನು ಸ್ವಲ್ಪ ಮಾತ್ರವೇ ತಿಳಿದಿರುತ್ತದೆ. ಯುಕ್ತಾಯುಕ್ತತೆಗೆ ಹೆಚ್ಚು ತಿಳಿಯುತ್ತದೆ. ಆದರೆ ಕೇವಲ ಅಥವಾ ನಿರಂಕುಶ ನ್ಯಾಯಕ್ಕೆ ಯಾವುದೇ ಸಂಬಂಧವಿರುವುದಿಲ್ಲ.

೧೧. Injustice is relatively easy to bear; what stings is justice

ಸಂಬಂಧ ಸೂಚಕ ಅನ್ಯಾಯವನ್ನು ಸಹಿಸುವುದು ಸುಲಭ. ಕೆಲವೊಂದು ಸಾರಿ ನ್ಯಾಯದಾನವು ಸಹಾ ತೀವ್ರ ತರಹದ ಯಾತನೆಯನ್ನು ಉಂಟು ಮಾಡುತ್ತದೆ.

೧೨. Justice is not a prize tendered to the good-natured, nor is it to be withheld from the ill-bred

ನ್ಯಾಯದಾನ ಒಳ್ಳೆಯ ಸ್ವಭಾವದವನಿಗೆ ಕೊಡುವ ಬಹುಮಾನವೂ ಅಲ್ಲ ಅಥವಾ ಕೆಟ್ಟ ವಂಶಸ್ಥನಿಗೆ (ಸ್ವಭಾವದವನಿಗೆ) ತಡೆ ಹಿಡಿಯುವುದು ಅಲ್ಲ.

೧೩. Justice has been described as a lady who has been subject to so many miscarriages as to cast serious reflections upon her virtue

ನ್ಯಾಯದಾನದ ಪ್ರಕ್ರಿಯೆಯನ್ನು ಅನೇಕ ಸಲ ಗರ್ಭಪಾತಕ್ಕೆ ಒಳಗಾದ ಹೆಣ್ಣಿನಂತೆ ಜನ ಅನುಮಾನದಿಂದ ನೋಡುತ್ತಾರೆ.

೧೪. Fairness is what justice really is

ನಿಷ್ಪಕ್ಷಪಾತವಾದ ವಿಚಾರವೇ ನಿಜವಾದ ನ್ಯಾಯದಾನ.

೧೫. Justice delayed is not only justice denied-it is also justice circuvented, justice mocked and the system of justice undermined

ತಡವಾದ ನ್ಯಾಯದಾನ ನ್ಯಾಯದಾನವೇ ಅಲ್ಲ. ಅಷ್ಟೇ ಅಲ್ಲ ಉಪಾಯದಿಂದ ಹಳ್ಳಕ್ಕೆ ಕೆಡವಿದ ನ್ಯಾಯ, ಅಪಹಾಸ್ಯ, ಅವಹೇಳನ ನ್ಯಾಯ ಮತ್ತು ದುರ್ಬಲಗೊಳಿಸಿದ ಅಥವಾ ಹಾಳು ಮಾಡಿದ ನ್ಯಾಯದಾನ ವ್ಯವಸ್ಥೆ ಎಂದು ಜನ ತಿಳಿಯುತ್ತಾರೆ.

ಟಿಪ್ಪಣಿ : ಇನ್ನು ಹೆಚ್ಚಿನ ಉದ್ಧರಣಗಳನ್ನು ತಿಳಿಯಲಿಚ್ಛಿಸುವವರು ಇದೇ ಲೇಖಕರ ''ನ್ಯಾಯಾಂಗದ ನುಡಿಮುತ್ತುಗಳು'' ಪುಸ್ತಕವನ್ನು ನೋಡಿ.

****

ಕಾನೂನು ಮತ್ತು ನ್ಯಾಯದಾನದ ಮೂಲ ಲ್ಯಾಟಿನ್ ತತ್ವಗಳು :

Few legal maxims are hereby given to give basic idea about the law and justice

೧. ತ್ವರಿತ ನ್ಯಾಯವು ದುರಾದೃಷ್ಟದ ಮಲತಾಯಿ.

ಆದರೆ ವಿಳಂಬ ನೀತಿಯ ಬಗ್ಗೆ ಕಾನೂನು ಅಸಹ್ಯ ಪಡುತ್ತದೆ. ವಿಳಂಬ ಧೋರಣೆಯನ್ನು ಕಾನೂನು ಸಹಿಸುವುದಿಲ್ಲ.

Lex dilationes semper exhorret

೨. ಅದೇನೇ ಇರಲಿ ಅಧಿಕಾರವು ಕಾನೂನನ್ನು ಹಿಂಬಾಲಿಸಬೇಕು, ಕಾನೂನಿನ ಮುಂದೆ ಹೋಗಬಾರದು. Sequi debet potentia justitiam

ನ್ಯಾಯ ನಿರ್ಣಯವನ್ನು ಮಾಡುವ ನ್ಯಾಯಾಧೀಶರಿಗೆ ವಿವೇಕ ಮತ್ತು ಪ್ರಜ್ಞೆ ಇರಬೇಕಾದ ಪ್ರಮುಖ ಲಕ್ಷಣಗಳಾಗಿವೆ. Judex haber debet dous sales

೩. **ವಿವೇಕ** : ಇದರ ಅರ್ಥ ಯುಕ್ತಾಯುಕ್ತ ವಿಚಾರ : ವಿವೇಚನೆ (discrimination, sapience, discernment; judgement, reason) ನಿಶ್ಚಿತವಾದ ತಿಳುವಳಿಕೆ ; ಸ್ಪಷ್ಟವಾದ ಅರಿವು (true knowledge; clarity of understanding ; perspicacity)

ಪ್ರಜ್ಞೆ : ಇದರ ಅರ್ಥ ಎಚ್ಚರ ; ಜಾಗರೂಕತೆ (Awareness, consciousness, alertness, caution, care)

ತಿಳಿವಳಿಕೆ : ಅರಿವು (knowledge) ಬುದ್ಧಿ (the intellect) ಎಂದಾಗುತ್ತದೆ.

(Actus curiae neminem gravabit)

ನ್ಯಾಯಾಲಯದ ಕ್ರಮವು ಯಾರ ಬಗ್ಗೆಯೂ ಪೂರ್ವಾಗ್ರಹಪೀಡಿತವಾಗಿರದೇ ನಿಷ್ಪಕ್ಷಪಾತವಾಗಿರಬೇಕೆಂಬುದು ಈ ನೀತಿ ವ್ಯಾಖ್ಯೆಯ ಅರ್ಥವಾಗಿದೆ.

The basic principle of criminal jurisprudence is accused is presumed to be innocent until contrary is proved. Like that basic principle of civil jurisprudence is -

omnia praesumunter rite ease acta

ಪ್ರತಿಯೊಂದು ಕಾರ್ಯವನ್ನು ಸರಿಯಾಗಿ ಮಾಡಲಾಗಿದೆ ಎಂದು ಊಹಿಸಲಾಗುತ್ತದೆ ಎನ್ನುವುದೇ ಇದರ ತಾತ್ಪರ್ಯವಾಗಿದೆ.

(De minimis non cural lex)

ಕ್ಷುಲ್ಲಕ ವಿಷಯಗಳನ್ನು ಕಾನೂನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಇದು ಸಿವಿಲ್ ವ್ಯಾಜ್ಯಗಳಿಗೆ ಅನ್ವಯವಾಗುವ ಮೂಲ ತತ್ವವಾಗಿದೆ.

The prosecution must prove the guilt of the accused beyond reasonable doubt is another basic principle of criminal jurisprudence.

In ciniminalibus probationes debents esse iuce calriores

ಅಪರಾಧ ಪ್ರಕರಣಗಳಲ್ಲಿ ಸಾಕ್ಷಿ ಪುರಾವೆಗಳು ಬೆಳಕಿಗಿಂತಲೂ ಸುಸ್ಪಷ್ಟವಾಗಿರಬೇಕು ಎನ್ನುವ ಮಾತನ್ನು ಸೂಚಿಸುತ್ತದೆ.

(plus valet unus oculatus testis quam auriti decem)

ಹತ್ತು ಜನ ಕೇಳಿಕೆಯ ಸಾಕ್ಷಿದಾರರಿಗಿಂತ ಒಬ್ಬ ಪ್ರತ್ಯಕ್ಷ ಸಾಕ್ಷಿ ಉತ್ತಮ. (Justia est duplex) ಅಪರಾಧಿಯನ್ನು ಶಿಕ್ಷಿಸುವುದು ಹಾಗೂ ಅಮಾಯಕರನ್ನು ರಕ್ಷಿಸುವುದು ನ್ಯಾಯದ ಲಕ್ಷಣವಾಗಿದೆ. ಆದರೆ ಶಿಕ್ಷೆಯು ಅಪರಾಧಕ್ಕೆ ಪೂರಕವಾಗಿರಬೇಕು ಹಾಗೂ ಶಿಕ್ಷೆಯು ಅಪರಾಧಕ್ಕೆ ತಕ್ಕಂತೆ ಇರಬೇಕು ಎನ್ನುವ ಮಾತನ್ನು (Culpae paena par esto) ಸೂಚಿಸುತ್ತದೆ. ಅಪರಾಧದ ಹಿನ್ನೆಲೆಯನ್ನು ತಿಳಿದು ಶಿಕ್ಷಿಸಬೇಕು ಎನ್ನುವುದು ಮತ್ತೊಂದು ಮಹತ್ವದ ತತ್ವವಾಗಿದೆ. ಹಾಗಾಗಿ ಹಿನ್ನೆಲೆಯನ್ನು ಪರಿಶೀಲಿಸುವಾಗ (Necessotas non habit legem) ಅವಶ್ಯಕತೆಗಳಿಗೆ ಕಾನೂನೆಂಬುದಿಲ್ಲ ಎನ್ನುವ ತತ್ವವನ್ನು ಸಹ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

(Impotentia excusat legem) ಕಾನೂನಿನ ದೃಷ್ಟಿಯಲ್ಲಿ ಅಸಾಮರ್ಥ್ಯವು ಕ್ಷಮಾರ್ಹವಾಗಿದೆ ಎನ್ನುವುದನ್ನು ಸಹ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.


(Non est regula quin fallit)

ಪ್ರತಿಯೊಂದು ಕಾನೂನಿನಲ್ಲಿಯೂ ಅಲ್ಪ ಪ್ರಮಾಣ ವಿನಾಯ್ತಿ ಅಥವಾ ರಿಯಾಯ್ತಿ ಅಥವಾ ಸಡಿಲಿಕೆ ಅವಕಾಶವಿದ್ದೇ ಇರುತ್ತದೆ. ಪ್ರಕರಣದ ಹಿನ್ನೆಲೆ, ಸಂದರ್ಭಗಳನ್ನು ಪರಿಗಣಿಸಿ ಅಗತ್ಯ ಪರಿಸ್ಥಿತಿಯಲ್ಲಿ ಮಾತ್ರ ಇಂತಹ ಸಡಿಲಿಕೆ ಅಥವಾ ರಿಯಾಯ್ತಿಯನ್ನು ನೀಡಲಾಗುತ್ತದೆ.

(Ex facto jus oritur)

ಕಾಯ್ದೆಯು ಸತ್ಯ-ವಸ್ತುಸ್ಥಿತಿಯಿಂದ ಹುಟ್ಟಿಕೊಳ್ಳುತ್ತದೆ.

ನ್ಯಾಯದಾನದ ಉದ್ದೇಶ ಆಚರಣೆಯಲ್ಲಿ ಸತ್ಯವನ್ನು ಕಂಡುಹಿಡಿಯುವುದಾಗಿದೆ. ಯಾಕೆಂದರೆ (vertas est Justitiae matar) ಸತ್ಯವು ನ್ಯಾಯದ ತಾಯಿ.



★★★★

ಸತ್ಯದ ಉದ್ಧರಣಗಳು

Truth - Quotable Quotes

೧. Truth sits upon the lips of a dying man.

ಸತ್ಯ ಸಾಯುವವನ ತುಟಿಗಳ ಮೇಲೆ ನೃತ್ಯಗೈಯುತ್ತಿರುತ್ತದೆ.

೨. Truth are times when truth hardly seems probable.

ಸತ್ಯ ಅನೇಕ ವೇಳೆ ಸತ್ಯವಾಗಿ ತೋರುವುದಿಲ್ಲ.

೩. Truth will out, even if buried in a golden coffin.

ಸತ್ಯ ಬಂಗಾರದ ಶವಪೆಟ್ಟಿಗೆಯಲ್ಲಿ ಮುಚ್ಚಿಟ್ಟರೂ ಹೊರಬರುತ್ತದೆ.

೪. Truth exists, only falsehood has to be invented.

ಸತ್ಯ ಜೀವಂತವಾಗಿರುತ್ತದೆ, ಆದರೆ ಸುಳ್ಳನ್ನು ಮಾತ್ರ ಕಂಡುಹಿಡಿಯ ಬೇಕಾಗುತ್ತದೆ.

೫. When you have eliminated the impossible, whatever remains, however improbable must be the truth.

ಯಾವುದು ಅಸಾಧ್ಯವೋ ಅದನ್ನು ತೆಗೆದು ಹಾಕಿದ ಮೇಲೆ, ಏನು ಉಳಿಯುತ್ತದೆಯೋ ಅದು ಎಷ್ಟೇ ಅಸಂಭವ ಎನಿಸಿದರೂ ಸತ್ಯವಾಗಿರುತ್ತದೆ.

೬. A thousand probabilities do not make one truth.

ಒಂದು ಸಾವಿರ ಸಂಭವನೀಯತೆಗಳು ಒಂದು ಸತ್ಯವನ್ನುನಿರ್ಮಿಸಲಾರವು.

೭. Truth can stand by itself.

ಸತ್ಯಕ್ಕೆ ತನ್ನಷ್ಟಕ್ಕೆ ತಾನೇ ನಿಲ್ಲುವ ಶಕ್ತಿ ಇರುತ್ತದೆ.

೮. Truth is its own witness.

ಸತ್ಯವೇ ಸತ್ಯದ ಸಾಕ್ಷಿ.

೯. By itself truth always wins. A lie needs an accomplice.

ಸತ್ಯ ತನ್ನಷ್ಟಕ್ಕೆ ತಾನೇ ಜಯಗಳಿಸುತ್ತದೆ, ಆದರೆ ಸುಳ್ಳಿಗೆ ಸಹಾಯಗಳು ಬೇಕು.

೧೦. A poor man, though he speaks the truth, is not believed.

ಒಬ್ಬ ಬಡ ಮನುಷ್ಯ ಸತ್ಯವನ್ನಾಡಿದರೂ ನಂಬುವುದಿಲ್ಲ.

೧೧. Truth needs not many words.

ಸತ್ಯಕ್ಕೆ ಬಹಳ ಶಬ್ದಗಳ ಅವಶ್ಯಕತೆ ಇಲ್ಲ.

೧೨. A hair perhaps divides the false and true.

ಸತ್ಯ ಮತ್ತು ಸುಳ್ಳುಗಳ ನಡುವಿನ ಅಂತರ ಬಹುಶಃ ಒಂದು ಕೂದಲು ಮಾತ್ರ.

೧೩. An error does not become truth by reason of multiplied propagation, nor does truth become error because nobody will see it.

ಒಂದು ತಪ್ಪನ್ನು ಅನೇಕರು ಹೊಗಳಿದರು (ಸರಿ) ಸತ್ಯವಾಗಲಾರದು ಅಥವಾ (ಸರಿ) ಸತ್ಯವನ್ನು ಯಾರೂ ನೋಡಿರದಿದ್ದರೂ ಅದು ತಪ್ಪಾಗಲಾರದು.

೧೪. Everything possible to be believed is an image of truth.

ಯಾವುದೆಲ್ಲವನ್ನು ಸಾಧ್ಯವೆಂದು ನಾವು ನಂಬುತ್ತೇವೆಯೋ ಅದೆಲ್ಲವೂ ಸತ್ಯದ ಪ್ರತೀಕ.

೧೫. What is true is possible.

ಯಾವುದು ಸತ್ಯವೋ ಅದು ಸಾಧ್ಯವಾದುದು.

೧೬. Truth does not always seem truthful.

ಸತ್ಯ ಯಾವಾಗಲೂ ಸತ್ಯವೆಂದು ತೋರುವುದಿಲ್ಲ.

೧೭. Truth is only faslehood well disguised.

ಕೆಲವೊಮ್ಮೆ ಸುಳ್ಳು ವೇಷ ಹಾಕಿಕೊಂಡುದೇ ಸತ್ಯವೆಂದು ತೋರುತ್ತದೆ.

೧೮. That a lie which is all a lie may be met and fought with outright, but a lie which is part of truth harder matter to fight.

ಒಂದು ಅಥವಾ ಅನೇಕ ಸುಳ್ಳುಗಳನ್ನು ನೇರ ಮಾರ್ಗದಿಂದ ಗೆಲ್ಲಬಹುದು ಅಥವಾ ಸೆಣೆಸಬಹುದು. ಆದರೆ ಸತ್ಯದ ಭಾಗವಾಗಿರುವ ಸುಳ್ಳಿನೊಂದಿಗೆ ಸೆಣಸುವುದು ಕಠಿಣ.

೧೯. When in doubt, tell the truth.

ಏನನ್ನು ಹೇಳಬೇಕೆಂದು ಸಂಶಯ ಬಂದಾಗ ಸತ್ಯವನ್ನೇ ಹೇಳು.

೨೦. Beware of telling an improbable truth.

ಅಸಂಭವನೀಯ ಸತ್ಯವನ್ನು ಹೇಳುವವರ ಬಗ್ಗೆ ಎಚ್ಚರಿಕೆಯಿಂದಿರು.

೨೧. He who has the truth is in the majority, even though he be one.

ಸತ್ಯ ಯಾರ ಕಡೆ ಇರುತ್ತದೆಯೋ ಅವನು ಒಬ್ಬನೇ ಇದ್ದರೂ ಅವನೆಡೆ ಬಹುಮತವಿರುತ್ತದೆ.

೨೨. Truth's cloak is often lined with lies.

ಸತ್ಯದ ಮೇಲಂಗಿ ಅನೇಕ ವೇಳೆ ಸುಳ್ಳುಗಳಿಂದ ಹೆಣೆಯಲ್ಪಟ್ಟಿರುತ್ತದೆ.

೨೩. Truth is tough.

ಸತ್ಯ ಕಠಿಣವಾಗಿರುತ್ತದೆ.

೨೪. Truth shines in the dark.

ಸತ್ಯ ಕತ್ತಲಲ್ಲೂ ಹೊಳೆಯುತ್ತದೆ.

೨೫. Plain truth needs no flowers of speech.

ಸ್ಪಷ್ಟ (ಸರಳ) ಸತ್ಯಕ್ಕೆ ಭಾಷೆಯ ಹೂಗಳ ಅವಶ್ಯಕತೆಯಿರುವುದಿಲ್ಲ.

★★★★

ವಿರುದ್ಧಾರ್ಥಕಗಳು

Agree	X	Disagree	ಒಪ್ಪಿಗೆ ಕೊಡು	X	ಒಪ್ಪಿಗೆ ಕೊಡದಿರು
Affirm	X	Deny	ಒಪ್ಪು	X	ತಿರಸ್ಕರಿಸು
All	X	None	ಎಲ್ಲವೂ	X	ಯಾವುದೂ ಇಲ್ಲ
Assertive	X	Negative	ಸಕಾರಾತ್ಮಕ	X	ನಕಾರಾತ್ಮಕ
Accept	X	Reject	ಸ್ವೀಕರಿಸು	X	ತಿರಸ್ಕರಿಸು
Able	X	Unable	ಸಮರ್ಥ	X	ಅಸಮರ್ಥ
Active	X	Inactive	ಸಕ್ರಿಯ	X	ನಿಷ್ಕ್ರಿಯ
Barbarous	X	Civlized	ಅನಾಗರಿಕ	X	ನಾಗರಿಕ
Barren	X	Fertile	ಬಂಜರಾದ	X	ಫಲವತ್ತಾದ
Before	X	After	ಮೊದಲು	X	ನಂತರ
Beginning	X	End	ಆರಂಭ	X	ಅಂತ್ಯ
Bogus	X	Genius	ನಕಲಿ	X	ಅಸಲಿ
Cloudy	X	Clear	ಮಸುಕಾದ	X	ಸ್ಪಷ್ಟವಾದ
Command	X	Obey	ಆಜ್ಞಾಪಿಸು	X	ಪಾಲಿಸು
Calm	X	Disturb	ಶಾಂತ	X	ಅಶಾಂತ
Cheerful	X	Sorrowful	ಸಂತೋಷದಾಯಕ	X	ದುಃಖದಾಯಕ
Clean	X	Dirty	ಸ್ವಚ್ಛ	X	ಹೊಲಸು
Capture	X	Release	ಸೆರೆಹಿಡಿ	X	ಬಿಡುಗಡೆ ಮಾಡು
Construct	X	Destruct	ನಿರ್ಮಾಣ ಮಾಡು	X	ನಿರ್ನಾಮ ಮಾಡು
Capable	X	Incapable	ಸಮರ್ಥ	X	ಅಸಮರ್ಥ
Careful	X	Careless	ಕಾಳಜಿ	X	ನಿಷ್ಕಾಳಜಿ
Danger	X	Safety	ಅಪಾಯ	X	ಸುರಕ್ಷ

Doubt	X	Certainity	ಅನಿಶ್ಚಿತತೆ	X	ನಿಶ್ಚಿತತೆ
Deep	X	Shallow	ಆಳವಾದ	X	ಸಮತಟ್ಟಾದ
Different	X	Indifferent	ವಿಭಿನ್ನ	X	ವಿಭಿನ್ನವಲ್ಲದ
Dry	X	Wet	ಶುಷ್ಕ	X	ತೇವ
Encourage	X	Discourage	ಧೈರ್ಯಕೊಡು	X	ಧೈರ್ಯಗೆಡಿಸು
Fraud	X	Honest	ವಂಚಕ	X	ಪ್ರಾಮಾಣಿಕ
Fit	X	Unfit	ಯೋಗ್ಯ	X	ಅಯೋಗ್ಯ
Generous	X	Miser	ಉದಾರ	X	ಜಿಪುಣ
Harmony	X	Dicord	ಸಾಮರಸ್ಯ	X	ವೈಷಮ್ಯ
Include	X	Exclude	ಒಳಗೊಂಡ	X	ಹೊರತುಪಡಿಸಿ
Idle	X	Active	ಅರಿತ	X	ಅರಿಯದ
Known	X	Unknown	ನಿಷ್ಕ್ರಿಯ	X	ಸಕ್ರಿಯ
Kind	X	Cruel	ಕರುಣೆಯುಳ್ಳ	X	ಕ್ರೂರಿ
Loyalty	X	Treason	ವಿಧೇಯತೆ	X	ಅವಿಧೇಯತೆ
Like	X	Dislike	ಇಷ್ಟಪಡು	X	ತಿರಸ್ಕರಿಸು
Matched	X	Unmatched	ಅನುರೂಪ	X	ಅನುರೂಪವಲ್ಲದ
Natural	X	Unnatural	ಸ್ವಾಭಾವಿಕ	X	ಅಸ್ವಾಭಾವಿಕ
Open	X	Hidden	ಬಹಿರಂಗವಾದ	X	ಬಚ್ಚಿಡಲಾದ
Ofend	X	Defend	ದೂಷಣೆ	X	ಸಮರ್ಥನೆ
Patient	X	Impatient	ತಾಳ್ಮೆಯ	X	ತಾಳ್ಮೆಯಿಲ್ಲದ
Perfect	X	Imperfect	ಪರಿಪೂರ್ಣ	X	ಅಪೂರ್ಣ
Pure	X	Impure	ಶುದ್ಧ	X	ಅಶುದ್ಧ
Relevant	X	Irrelevant	ಪ್ರಸ್ತುತ	X	ಅಪ್ರಸ್ತುತ
Religious	X	Nonreligious	ಧಾರ್ಮಿಕ	X	ಅಧಾರ್ಮಿಕ
Sick	X	Healthy	ರೋಗಿಷ್ಠ	X	ಆರೋಗ್ಯವಂತ

Sharp	X	Blunt	ಹರಿತವಾದ	X	ಮೊಂಡಾದ
Successful	X	Unsuccessful	ಸಫಲ	X	ವಿಫಲ
True	X	False	ನಿಜವಾದ	X	ಹುಸಿಯಾದ
Useful	X	Useless	ಪ್ರಯೋಜಕ	X	ನಿಷ್ಪ್ರಯೋಜಕ

ಇದುವರೆಗೆ ಕನ್ನಡ ಸಾಹಿತ್ಯದಲ್ಲಿ ಇಂಗ್ಲಿಷ್ ಭಾಷೆಯಲ್ಲಿರುವಂತೆ ವಿರುದ್ಧ ಶಬ್ದ ಪದಕೋಶ ಬಂದಿಲ್ಲ. ಇದು ನ್ಯಾಯಾಂಗ ಕ್ಷೇತ್ರಕ್ಕೆ ಅತ್ಯವಶ್ಯ. ಏಕೆಂದರೆ ನೀನು ಶ್ರೇಷ್ಠ ಎನ್ನುವುದನ್ನು ಹೇಳಲು ಬಾರದವ ನೀನು ಚಲೋ ಅದೆಯಿ - ಬಹಳ ಚೇಷ್ಟೆ ಅದೇಯಿ-ಎಂದರೆ ನಡೆಯುತ್ತದೆ. ಕಾರಣವೇನೆಂದರೆ ಅಲ್ಲಿ ಸ್ನೇಹದ ಕೊಂಡಿ ಕಳಚಿರುವುದಿಲ್ಲ. ಆದರೆ ನ್ಯಾಯಾಲಯದ ವ್ಯಾಜ್ಯಗಳಲ್ಲಿ ಸ್ನೇಹದ ಕೊಂಡಿ ಕಳಚಿರುತ್ತದೆ. ಕಾರಣ - ಒಂದು ಶಬ್ದಕ್ಕೆ ಅಷ್ಟೇ ಪ್ರಭಾವಯುತವಾದ ವಿರುದ್ಧ ಶಬ್ದಪದಕೋಶ ಅತ್ಯವಶ್ಯ. ಇಲ್ಲದಿದ್ದರೆ ಬಲಪ್ರಯೋಗ ಕಡಿಮೆಯಾಗಿ ವ್ಯಾಜ್ಯಗಳಲ್ಲಿ ಅಪಜಯವಾಗುವ ಸಾಧ್ಯತೆಗಳು ಬಹಳ. ಕಾರಣ ಕನ್ನಡ ಅಭಿವೃದ್ಧಿ ಪ್ರಾಧಿಕಾರದವರು ಇದನ್ನು ಹೊರತರುವರೆಂದು ಆಶಿಸೋಣ. ಇಲ್ಲಿ ಕೆಲವು ವಿರುದ್ಧ ಶಬ್ದಗಳನ್ನು ಮಾತ್ರ ಉದಾಹರಣೆಯಾಗಿ ಕೊಡಲಾಗಿದೆ.

★★★★

ಕೃತಿಕಾರರ ಪರಿಚಯ



ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ ಜನಿಸಿದ ಇವರು, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು ಪಡೆದು, ಧಾರವಾಡದ ಶರಣ ಶ್ರೀ ಹುರಕಡ್ಲಿ ಅಜ್ಜ ಇವರ ಲಾ ಕಾಲೇಜಿನಲ್ಲಿ ಹೆಸರಾಂತ ಉಪನ್ಯಾಸಕರೆಂದು ಪ್ರಸಿದ್ಧಿ ಹೊಂದಿದರು.

ಇವರು ರಾಜ್ಯಕ್ಕೆ ನಾಲ್ಕನೇ ರ್‍ಯಾಂಕ್ ಪಡೆದು ನ್ಯಾಯಾಧೀಶರ ವೃತ್ತಿಯನ್ನು ಸ್ವೀಕರಿಸಿದ ಇವರು, ಈಗ ಚಿಕ್ಕಮಗಳೂರಿನಲ್ಲಿ ಜಿಲ್ಲಾ ನ್ಯಾಯಾಧೀಶರೆಂದು ಕೆಲಸ ಮಾಡುತ್ತಿದ್ದಾರೆ. ಇವರಿಗೆ ಶ್ರೀ ಮುರುಘ ರಾಜೇಂದ್ರ ಬೃಹನ್ಮಠ ಚಿತ್ರದುರ್ಗ ಇವರಿಂದ ೨೦೦೧ನೇ ಸಾಲಿನ "ಬಸವ ಭೂಷಣ" ಪ್ರಶಸ್ತಿ ಲಭಿಸಿದೆ. ಈಗಾಗಲೇ ಕಾನೂನು ಕ್ಷೇತ್ರದಲ್ಲಿ ಮೂರು ಪುಸ್ತಕಗಳನ್ನು ಬರೆದು ಖ್ಯಾತ ಲೇಖಕರೆನಿಸಿಕೊಂಡ ಇವರು "ದೇವರನ್ನು ಕಾಣುವ ಮಾರ್ಗ-ಭಕ್ತಿಯೋಗ" ಮತ್ತು "ನ್ಯಾಯಾಂಗದ ನುಡಿಮುತ್ತುಗಳು" ಕೃತಿಗಳನ್ನು ಸಹ ರಚಿಸಿದ್ದಾರೆ. ಇವರ ಲೇಖನಿಯಿಂದ ಹೊರ ಬರುತ್ತಿರುವ ಆರನೆಯ ಕುಸುಮ ಈ ಪುಸ್ತಕ. ಕರ್ನಾಟಕ ರಾಜ್ಯದ ಜನ ಸಾಮಾನ್ಯರ ಕೈಸೇರಿ ಕಾನೂನಿನ ಬಗ್ಗೆ ಸರಿಯಾದ ತಿಳುವಳಿಕೆ ಮೂಡುವಂತಾಗಲಿ.

ವಿಳಾಸ: ಶ್ರೀ ಟಿ. ನಾಗಪ್ಪ
ಜಿಲ್ಲಾ ನ್ಯಾಯಾಧೀಶರು
ಜಿಲ್ಲಾ ನ್ಯಾಯಾಲಯ
ಚಿಕ್ಕಮಗಳೂರು.

ದೂರವಾಣಿ: ೦೮೨೬೨-೨೩೨೦೭೮, ೨೩೪೬೮೦

ಕನ್ನಡ ಸಂಸ್ಕೃತಿಯ ವಿಕಾಸ ಪ್ರಕ್ರಿಯೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ತೊಂಬತ್ತು ವರ್ಷಗಳಿಂದ ತೊಡಗಿ ಕೊಂಡಿರುವ ರೀತಿ ಅನನ್ಯ. ಹತ್ತು ಹಲವಾರು ದಿಕ್ಕುಗಳಲ್ಲಿ ಹರಡಿರುವ ಪರಿಷತ್ತಿನ ಒಂದು ಮುಖ್ಯ ಕ್ರಿಯಾ ಯೋಜನೆ : ಪುಸ್ತಕ ಪ್ರಕಟನೆ.

ಪರಿಷತ್ತು ಹಮ್ಮಿಕೊಳ್ಳುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ಕನ್ನಡ ಕುಲಕೋಟಿಯ ಪಾಲಿಗೆ ಒಂದು ಸಾಂಸ್ಕೃತಿಕ ಹಬ್ಬವೇ. ವರ್ಷದುದ್ದಕ್ಕೂ ನಾವೆಲ್ಲ ಮೆಲುಕು ಹಾಕುವ ಸಂದರ್ಭವಿದು.

ಬೀದರಿನಲ್ಲಿ ನಡೆಯಲಿರುವ ಅಖಿಲ ಭಾರತ ೭೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗೆಂದು ಪರಿಷತ್ತು ಹೊರತಂದಿರುವ ೭೧ ಪುಸ್ತಕಗಳು, ಮುಖ್ಯವಾಗಿ ಸೃಜನೇತರ ವಲಯದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿದ್ದು, ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯ ಸೇರ್ಪಡೆಗಳಾಗಿವೆ.



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮